ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಎರಡು ಭಾಗಗಳಲ್ಲಿ ಬರುತ್ತಾನೆ 'ರಾಕ್ಷಸ' - ಚಿತ್ರದ ನಾಯಕ ನಟ ಪ್ರಜ್ವಲ್ ದೇವರಾಜ್ ಸಂದರ್ಶನ

ಆಳ-ಅಗಲ
ಮುಳುವು ಆಗದಿರಲಿ ಮೊಬೈಲ್

29 ಭಾರತೀಯರಿಗೆ ಗಲ್ಲು ಶಿಕ್ಷೆ 7

ಕೆಪಿಎಸ್‌ಸಿಗೆ ಕಾಯಕಲ್ಪ: ಆಗ್ರಹ 2B

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
74,340	22,544	₹90,270 (ಬೆಂಗಳೂರು)	₹1.02 ಲಕ್ಷ (ಬೆಂಗಳೂರು)	87.12

ಹೊಟ್ಟೆನೋವು, ಗ್ಯಾಸ್ ಟ್ರಬಲ್, ಆ್ಯಸಿಡಿಟಿಗೆ ಕೇರಳದ ಆಯುರ್ವೇದ ಔಷಧ 'ಅಮೃತ ಬಿಂದು'

ಹೊಟ್ಟೆನೋವು, ಗ್ಯಾಸ್ ಟ್ರಬಲ್, ಅಸಿಡಿಟಿ, ಅಜೀರ್ಣ, ವಾಂತಿ, ಎದೆ ಉರಿ, ಹುಳಿತೇಗು, ಹಸಿವಿಲ್ಲದಿರುವುದು, ನಿದ್ರಾಹೀನತೆ, ಬೆನ್ನುನೋವು, ಕೆಲಸದಲ್ಲಿ ನಿರಾಸಕ್ತಿ ಎಲ್ಲ ತರಹದ ಉದರ ವ್ಯಾದಿ ಸಮಸ್ಯೆಗಳಿಗೆ ಕೇರಳದ ಶಂಕರ ಫಾರ್ಮೆಸಿಯವರಿಂದ ತಯಾರಿಸಲ್ಪಟ್ಟ 150 ವರ್ಷಗಳ ಆಯುರ್ವೇದ ಸಂಪ್ರದಾಯಸ್ಥ ಕುಟುಂಬದ ಪರಿಣಾಮಕಾರಿ ದಿವ್ಯ ಔಷಧ ಅಮೃತ ಬಿಂದು. ಅಮೃತ ಬಿಂದುವಿನಿಂದ ಗರಿಷ್ಠ ಪೈಲೋರಿಯನ್ನು ಪರಿಣಾಮಕಾರಿಯಾಗಿ ಹತೋಟಿಗೆ ತರಬಹುದೆಂದು ಸಂಶೋಧನೆಯಿಂದ ಸಾಬೀತಾಗಿದೆ.

ಅಮೃತ ಬಿಂದು ಎಲ್ಲಾ ರೀತಿಯ ಹೊಟ್ಟೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ಮೊಟ್ಟ ಮೊದಲು ಪ್ರಾಯೋಗಿಕವಾಗಿ ಸಾಬೀತಾಗಿರುವ ಆಯುರ್ವೇದ ಔಷಧ.

'ಅಮೃತಬಿಂದು' ಇದೀಗ ಟ್ಯಾಬ್ಲೆಟ್ ರೂಪದಲ್ಲೂ ಲಭ್ಯ

ಅಮೃತ ಬಿಂದು ಸಿರಪ್

ಎ&ಜೆ ಹೆಲ್ತ್ ಕೇರ್, ಬೆಂಗಳೂರು. Ph : 9243112373 | Also available at : amazon Flipkart

ಸಕ್ಕರೆ ಕಾಯಿಲೆಯಿಂದ ನರಳುತ್ತಿರುವ ಸಮಸ್ತ ಭಾರತೀಯರಿಗೆ ಒಂದು ಸಂತಸದ ಕ್ಷಣ!

ವೈದ್ಯಕಲಾನಿಧಿ ದಿ. ಡಾ.ಕೆ.ಎಸ್.ಗಂಗಾಧರನ್ ಸಂಸ್ಥಾಪಕರು

ಇಂದಿನಿಂದ ನಿಮ್ಮ ಜೀವನ ನಿರಾಳವಾಗಲಿ. 2 ನಿಮಿಷ ನಿಧಾನವಾಗಿ ಒಮ್ಮೆ ಓದಿರಿ

ಸಕ್ಕರೆ ಕಾಯಿಲೆ ನಿಯಂತ್ರಿಸಲು ನೀವು ಸೇವಿಸುತ್ತಿರುವ ಯಾವುದೇ ಇಂಗ್ಲೀಷ್ ಮದ್ದು ಅಥವಾ ಇನ್ಸುಲಿನ್ ಜತೆಗೆ ಆಯುರ್ವೇದವನ್ನು ಬಳಸಿ ಆರೋಗ್ಯದಲ್ಲಿ ಸಕರಾತ್ಮಕ ಪರಿಣಾಮಗಳನ್ನು ಕಾಣಬಹುದು.

ಮಧುಮೇಹ-ಎನ್ ಮಾತ್ರೆಗಳು

ಡಯಾಬಿಟೀಸ್‌ನಲ್ಲಿ ನಿಶ್ಶಕ್ತಿಯಾದ ಪ್ಯಾನ್‌ಕ್ರಿಯಾಸ್ ಜೊತೆಗೆ ನಿಷ್ಕ್ರಿಯವಾಗುವ ಹೃದಯ, ಕಣ್ಣು, ಕಿಡ್ನಿ, ನರಮಂಡಲಗಳನ್ನು ಗಿಡಮೂಲಿಕೆಗಳು ಪುನ:ಶ್ಚೇತನಗೊಳಿಸುತ್ತವೆ.

ಸಕ್ಕರೆ ಕಾಯಿಲೆಯಿಂದಾಗುವ ಅತಿಮೂತ್ರ, ಸುಸ್ತು, ಕಾಲ್ಸೆಳೆತ, ತಲೆಸುತ್ತುವಿಕೆ ಇವುಗಳನ್ನು ತಡೆಗಟ್ಟಬಹುದು ಮತ್ತು ಮಿತವ್ಯಯವಾಗಿರುವುದರಿಂದ ಮದ್ದಿಗಾಗಿ ದುಂದುವೆಚ್ಚವನ್ನು ತಡೆಯಬಹುದು.

ಲಂಡನ್‌ನಲ್ಲಿ ನಾಳೆ ಇಳೆಯರಾಜ 'ಸಿಂಫನಿ'

ಚೆನ್ನೈ: ಸ್ವರ ಮಾಂತ್ರಿಕ ಇಳೆಯರಾಜ ಅವರು ಮಾರ್ಚ್ 8ರಂದು ಲಂಡನ್‌ನಲ್ಲಿ ನಡೆಯುವ 'ಸಿಂಫನಿ'ಯನ್ನು (ವಾದ್ಯಮೇಳ) ಮುನ್ನಡೆಸಲಿದ್ದಾರೆ. ಈ ಕುರಿತು ಪ್ರತಿಕ್ರಿಯಿಸಿರುವ ಇಳೆಯರಾಜ, 'ಇದು ನನಗೆ ಮಾತ್ರ ಹೆಮ್ಮೆಯ ವಿಷಯವಲ್ಲ; ಇಂತಹ ಗೌರವ ಸಿಕ್ಕಿರುವುದು ಭಾರತದ ಪಾಲಿಗೂ ಹೆಮ್ಮೆಯ ವಿಚಾರ' ಎಂದಿದ್ದಾರೆ. 11

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಕೇಂದ್ರ ಸರ್ಕಾರದ ನಡೆಗೆ ರಾಜ್ಯದ ತಕರಾರು • ಸದನದಲ್ಲಿ ನಿರ್ಣಯಕ್ಕೆ ಸಿದ್ಧತೆ

ವಕ್ಫ್ ಮಸೂದೆಗೆ ವಿರೋಧ

• ರಾಜೇಶ್ ರೈ ಚಟ್ಲ

ಬೆಂಗಳೂರು: ವಕ್ಫ್ ಮಸೂದೆಗೆ ತಿದ್ದುಪಡಿ ತರಲು ಮುಂದಾಗಿರುವ ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಸಡ್ಡು ಹೊಡೆಯಲು ಮುಂದಾಗಿರುವ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ, ಮಸೂದೆ ಹಿಂಪಡೆಯುವಂತೆ ವಿಧಾನ ಮಂಡಲದ ಉಭಯ ಸದನಗಳಲ್ಲಿ ನಿರ್ಣಯ ಮಂಡಿಸಲು ನಿರ್ಧರಿಸಿದೆ.

ಸಂಸತ್ತಿನ ಜಂಟಿ ಸಮಿತಿಯು (ಜೆಪಿಸಿ) 1995ರ ವಕ್ಫ್ ಕಾಯ್ದೆಯನ್ನು ತಿದ್ದುಪಡಿ ಮಾಡುವ ಮಸೂದೆಗೆ (1995ರ ಕೇಂದ್ರ ಕಾಯ್ದೆ ಸಂಖ್ಯೆ 43) 14 ತಿದ್ದುಪಡಿಗಳನ್ನು ಪ್ರಸ್ತಾಪಿಸಿರುವ ವರದಿಯನ್ನು ಲೋಕಸಭೆಯಲ್ಲಿ ಈಗಾಗಲೇ ಮಂಡಿಸಿದೆ.

ವಕ್ಫ್ ತಿದ್ದುಪಡಿ ಮಸೂದೆಯನ್ನು ಹಿಂಪಡೆಯುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ಕೇರಳ ಮತ್ತು ಪಶ್ಚಿಮ ಬಂಗಾಳ ಸರ್ಕಾರ ಈಗಾಗಲೇ ನಿರ್ಣಯ ಅಂಗೀಕರಿಸಿವೆ. ಕೇರಳದ ಆಡಳಿತಾರೂಢ ಎಲ್‌ಡಿಎಫ್ ಮತ್ತು ವಿರೋಧ ಪಕ್ಷ ಯುಡಿಎಫ್ ರಂಗಗಳು ವಿಧಾನಸಭೆಯಲ್ಲಿ ಅವಿರೋಧವಾಗಿ ನಿರ್ಣಯ ಅಂಗೀಕರಿಸಿದರೆ, ಪಶ್ಚಿಮ ಬಂಗಾಳ ವಿಧಾನಸಭೆಯಲ್ಲಿ ಬಿಜೆಪಿ ಸದಸ್ಯರ ವಿರೋಧದ ನಡುವೆ ಅಲ್ಲಿನ ಟಿಎಂಸಿ ಸರ್ಕಾರ ಧ್ವನಿಮತದಿಂದ ನಿರ್ಣಯ ತೆಗೆದುಕೊಂಡಿದೆ.

ರಾಜ್ಯದ ಸರ್ಕಾರದ ನಿರ್ಣಯವೇನು?: 1995ರ ವಕ್ಫ್ ಕಾಯ್ದೆಗೆ 2013ರಲ್ಲಿ ತಂದ ತಿದ್ದುಪಡಿಯೂ ಸೇರಿದಂತೆ ಈವರೆಗೆ ಮಾಡಿರುವ ತಿದ್ದುಪಡಿಗಳ ಪ್ರಕಾರ ಧಾರ್ಮಿಕ ಅಥವಾ ದತ್ತಿ ಉದ್ದೇಶಗಳಿಗಾಗಿ ಚರ ಅಥವಾ ಸ್ಥಿರ ಆಸ್ತಿ ಮತ್ತು ವಸ್ತುಗಳ ಪಾಲಕರಾಗಿ ರಾಜ್ಯ ವಕ್ಫ್ ಮಂಡಳಿಗಳು ಕಾರ್ಯನಿರ್ವಹಿಸುತ್ತಿವೆ.

ಕಾಯ್ದೆಯ ನಮೂದು 28ರ ಅಂಶವು (ದತ್ತಿ ಸಂಸ್ಥೆಗಳು, ದತ್ತಿ ಮತ್ತು ಧಾರ್ಮಿಕ ದತ್ತಿ ಸಂಸ್ಥೆಗಳು ಮತ್ತು ಧಾರ್ಮಿಕ ಸಂಸ್ಥೆಗಳು) ಸಮವರ್ತಿ ಪಟ್ಟಿಯಲ್ಲಿದೆ.

ವಕ್ಫ್ ಎನ್ನುವುದು ಒಂದು ವಿಶೇಷ ಪರಿಕಲ್ಪನೆ. ಅದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಮಾತ್ರ ಒಳಪಡುವ ವಿಷಯವಲ್ಲ. ಹೀಗಾಗಿ ಕಾಯ್ದೆಗೆ ತಿದ್ದುಪಡಿ ತರುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇಲ್ಲ. ಉದ್ದೇಶಿತ ವಕ್ಫ್ ಕಾಯ್ದೆಯ ತಿದ್ದುಪಡಿಯು ರಾಜ್ಯ ಸರ್ಕಾರದ ಅಧಿಕಾರ ವ್ಯಾಪ್ತಿಯನ್ನು ಮೊಟಕುಗೊಳಿಸುತ್ತದೆ ಎಂಬುದು ರಾಜ್ಯದ ಸರ್ಕಾರದ ಪ್ರತಿಪಾದನೆಯಾಗಿದೆ.

ಸಂವಿಧಾನದ 26ನೇ ವಿಧಿಯು ವಕ್ಫ್ ದತ್ತಿಗಳು ಮತ್ತು ವಕ್ಫ್ ಸಂಸ್ಥೆಗಳ ಹಕ್ಕುಗಳನ್ನು ರಕ್ಷಿಸಲು ಮತ್ತು ಆಯಾ ಧಾರ್ಮಿಕ ಸಮುದಾಯಗಳಿಗೆ ಅದರ ಸ್ವಾತಂತ್ರ್ಯವನ್ನು ಖಚಿತಪಡಿಸಿಕೊಳ್ಳುವ ಹಕ್ಕನ್ನು ನೀಡಿದೆ.

ಅಸ್ತಿತ್ವದಲ್ಲಿರುವ ವಕ್ಫ್ ಕಾಯ್ದೆಯು 1954ರಲ್ಲಿ ಭಾರತೀಯ ಸಂಸತ್ತು ಅಂಗೀಕರಿಸಿದ ಬಲವಾದ ಕಾನೂನು ಆಗಿದೆ. ನಂತರ 1995ರಲ್ಲಿ ಈ ಕಾಯ್ದೆಗೆ ಸಮಗ್ರವಾಗಿ ತಿದ್ದುಪಡಿ ಮಾಡಲಾಗಿತ್ತು.

7ನೇ ಪುಟ ನೋಡಿ

'ಅಧಿಕಾರ ಕಸಿದುಕೊಳ್ಳಲು ತಿದ್ದುಪಡಿ'

'ಉದ್ದೇಶಿತ ತಿದ್ದುಪಡಿ ಮಸೂದೆಯಲ್ಲಿ ಮಂಡಿಸಲಾದ ನಿಬಂಧನೆಗಳು ವಕ್ಫ್‌ಗೆ ಸಂಬಂಧಿಸಿದ ವಿಷಯಗಳಲ್ಲಿ ರಾಜ್ಯ ಸರ್ಕಾರಗಳಿಂದ ಅನೇಕ ಅಧಿಕಾರವನ್ನು ಕಸಿದುಕೊಳ್ಳುವ ಯತ್ನದ ಭಾಗವಾಗಿದೆ' ಎಂದು ರಾಜ್ಯ ಸರ್ಕಾರ ಪ್ರತಿಪಾದಿಸಿದೆ.

'ಸಂವಿಧಾನದ ಒಕ್ಕೂಟ ತತ್ವಗಳು ಮತ್ತು ವಕ್ಫ್‌ನ ಮೇಲ್ವಿಚಾರಣೆಯ ಹೊಣೆ ಹೊಂದಿರುವ ಮಂಡಳಿಗಳಿಗೆ ವಿರುದ್ಧವಾಗಿದೆ. ವಕ್ಫ್ ಮತ್ತು ವಕ್ಫ್ ನ್ಯಾಯಮಂಡಳಿಯ ಮೇಲ್ವಿಚಾರಣೆಗೆ ಜವಾಬ್ದಾರರಾಗಿರುವ ಮಂಡಳಿಗಳ ಕಾರ್ಯಗಳು ಮತ್ತು ಅಧಿಕಾರಗಳನ್ನು ದುರ್ಬಲಗೊಳಿಸುತ್ತದೆ ಅಥವಾ ರದ್ದುಗೊಳಿಸುತ್ತದೆ. ಜೊತೆಗೆ, ಸಂವಿಧಾನದಲ್ಲಿ ಪ್ರತಿಪಾದಿಸಲಾದ ಜಾತ್ಯತೀತ ದೃಷ್ಟಿಕೋನಗಳನ್ನು ಉಲ್ಲಂಘಿಸುತ್ತದೆ' ಎಂದು ಪ್ರತಿಪಾದಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ರಾಜ್ಯ ಸರ್ಕಾರದ ವಾದವೇನು?

- ವಕ್ಫ್ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಮಾತ್ರ ಒಳಪಡುವ ವಿಷಯ ಅಲ್ಲ
- ಉದ್ದೇಶಿತ ತಿದ್ದುಪಡಿಯು ರಾಜ್ಯ ಸರ್ಕಾರದ ಅಧಿಕಾರವನ್ನು ಮೊಟಕುಗೊಳಿಸುತ್ತದೆ
- ಈ ತಿದ್ದುಪಡಿ 'ಸಮಾನತೆಯ ತತ್ವ'ಗಳಿಗೆ ವಿರುದ್ಧವಾಗಿದೆ
- ಪ್ರಜಾಪ್ರಭುತ್ವ ವ್ಯವಸ್ಥೆಗೆ ವಿರುದ್ಧವಾಗಿದೆ. ಸಂವಿಧಾನಬಾಹಿರವಾಗಿದೆ

ಸಿ.ಎಂ ದಾಖಲೆ ಬಜೆಟ್ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಜೆಟ್ ಮಂಡನೆಯಲ್ಲಿ ತಮ್ಮ ದಾಖಲೆಯನ್ನು ತಾವೇ ಮುರಿಯಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ 16ನೇ ಬಜೆಟ್ ಅನ್ನು ಶುಕ್ರವಾರ (ಮಾ. 7) ಮಂಡಿಸಲಿದ್ದಾರೆ.

ಕಳೆದ ಬಾರಿ ಅವರು ₹3.71 ಲಕ್ಷ ಕೋಟಿ ಗಾತ್ರದ ಬಜೆಟ್ ಮಂಡಿಸಿದ್ದರು. ಈ ಬಾರಿ ಬಜೆಟ್ ಗಾತ್ರ ₹4 ಲಕ್ಷ ಕೋಟಿ ದಾಟಬಹುದೆಂದು ಅಂದಾಜಿಸಲಾಗಿದೆ.

ಘೋಷಿಸಿದಂತೆ ಐದು 'ಗ್ಯಾರಂಟಿ'ಗಳನ್ನು ಅನುಷ್ಠಾನಗೊಳಿಸಿರುವ ಸರ್ಕಾರ, ಇವುಗಳಿಗೆ ಪ್ರಸಕ್ತ ಸಾಲಿನಲ್ಲೂ ಬಹುಪಾಲು ತೆಗೆದಿಡಲೇಬೇಕಾದ ಅನಿವಾರ್ಯಕ್ಕೆ ಸಿಲುಕಿದೆ. ಅದರ ಜತೆಗೆ ಯಾವ ಹೊಸ ಯೋಜನೆಗಳನ್ನು ಘೋಷಿಸಲಿದೆ, ಅಭಿವೃದ್ಧಿ ಪೂರಕ ಕಾರ್ಯಕ್ರಮಗಳನ್ನು ರೂಪಿಸಲಿದೆ ಎಂಬ ಕುತೂಹಲವೂ ಮನೆ ಮಾಡಿದೆ.

12ನೇ ಪುಟ ನೋಡಿ

ಬಜೆಟ್ ಎಂಬುದು ಬರಿ ಹಾಳೆಗಳ ಮೇಲಿನ ಲೆಕ್ಕವಲ್ಲ, ರಾಜ್ಯದ ಏಳು ಕೋಟಿ ಕನ್ನಡಿಗರ ಭವಿಷ್ಯ ರೂಪಿಸುವ ಕೈಪಿಡಿ ಎನ್ನುವುದು ನನ್ನ ನಂಬಿಕೆ. ನಾಡಿನ ಪ್ರತಿಯೊಬ್ಬ ಪ್ರಜೆಯನ್ನು ಸರ್ಕಾರದ ಯಾವುದಾದರೊಂದು ಯೋಜನೆಯ ಫಲಾನುಭವಿಯನ್ನಾಗಿಸುವ ಪ್ರಾಮಾಣಿಕ ಪ್ರಯತ್ನವನ್ನು ಬಜೆಟ್ ಮೂಲಕ ಮಾಡಿದ್ದೇನೆ ಎನ್ನುವ ಭರವಸೆ ನನಗಿದೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಬೆಳಿಗ್ಗೆ 10.30ಕ್ಕೆ ರಾಹುಕಾಲ ಆರಂಭವಾಗಲಿದ್ದು, ಅದಕ್ಕೆ ಮೊದಲೇ ಅಂದರೆ 10.15ಕ್ಕೆ ಬಜೆಟ್ ಮಂಡನೆಯನ್ನು ಸಿದ್ದರಾಮಯ್ಯ ಶುರುಮಾಡಲಿದ್ದಾರೆ.

ಕ್ಷಣಕ್ಷಣದ ಮಾಹಿತಿಗೆ prajavani.net ನೋಡಿ

'ಹೋಳಿಗೆ: ಪ್ಲಾಸ್ಟಿಕ್ ಹಾಳೆಗೆ ಕಡಿವಾಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೋಳಿಗೆ ಸೇರಿ ವಿವಿಧ ಆಹಾರಗಳ ತಯಾರಿಕೆಯಲ್ಲಿ ಪ್ಲಾಸ್ಟಿಕ್ ಹಾಳೆ ಬಳಕೆಗೆ ಕಡಿವಾಣ ಹಾಕಲಾಗುವುದು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

ಈ ಬಗ್ಗೆ 'ಎಕ್ಸ್' ಮಾಡಿರುವ ಅವರು, 'ನಮ್ಮ ನೆಚ್ಚಿನ ತಿನಿಸುಗಳಾದ ಹೋಳಿಗೆ, ಇಡ್ಲಿ ಮೊದಲಾದವುಗಳನ್ನು ಕೆಲವೆಡೆ ಪ್ಲಾಸ್ಟಿಕ್ ಹಾಳೆ ಬಳಸಿ ತಯಾರಿಸಲಾಗುತ್ತಿದೆ. ಬಿಸಿ ತಿನಿಸುಗಳ ಮೇಲೆ ಪ್ಲಾಸ್ಟಿಕ್ ಹಾಳೆ ಬಳಸುವುದರಿಂದ ಹಾನಿಕಾರಕ ರಾಸಾಯನಿಕಗಳು ಬಿಡುಗಡೆಯಾಗುವ ಅಪಾಯವಿದೆ. ಇದು ನಮ್ಮ ಆರೋಗ್ಯದ ಮೇಲೆ ನಕಾರಾತ್ಮಕ ಪರಿಣಾಮ ಬೀರಲಿದೆ' ಎಂದಿದ್ದಾರೆ.

'ಆರೋಗ್ಯಕರ ನಾಳೆಗಾಗಿ, ಪ್ಲಾಸ್ಟಿಕ್ ಮುಕ್ತ ಆಹಾರ ತಯಾರಿಕೆಗೆ ಆದ್ಯತೆ ನೀಡಬೇಕು. ಪ್ಲಾಸ್ಟಿಕ್ ಬಳಕೆಗೆ ಕಡಿವಾಣ ಹಾಕಲು ನಮ್ಮ ಸರ್ಕಾರ ಕ್ರಮ ವಹಿಸಲಿದೆ. ಸಾರ್ವಜನಿಕರು ಈ ಬಗ್ಗೆ ಜಾಗೃತಿ ವಹಿಸಬೇಕು' ಎಂದು ಅವರು ಹೇಳಿದ್ದಾರೆ.

ಕಡಿಮೆ ಖರ್ಚಿನಲ್ಲಿ, ಹೆಚ್ಚು ನೋಡಿರಿ

ಹೆಚ್ಚು ಪ್ರಯಾಣಿಸಿ, ಹೆಚ್ಚು ಅನ್ವೇಷಿಸಿ, ಬಹಳಷ್ಟು ಉಳಿಸಿ ಟ್ರಾವೆಲ್ ಮಾರ್ಟ್ ಇದನ್ನು ಸಾಧ್ಯವಾಗಿಸುತ್ತದೆ!

ಅತ್ಯಂತ ಕೈಗೆಟುಕುವ ಬೆಲೆಗಳು

ಸಂಪೂರ್ಣ ಪ್ಯಾಕೇಜ್, ಪ್ರೊಫೆಷನಲ್ ಟೂರ್ ಮ್ಯಾನೇಜರ್, ಮತ್ತು ಅದ್ಭುತ ಸೈಟ್‌ಸೀಯಿಂಗ್,
ಮೂರು ಲಕ್ಷಕ್ಕೂ ಹೆಚ್ಚು ಖುಷಿಯ ಗ್ರಾಹಕರು! "ಟ್ರಾವೆಲ್ ಮಾರ್ಟ್ ನಿಮ್ಮ ವಿಶ್ವಾಸಾರ್ಹ ಪಾರ್ಟ್ನರ್"

ಶ್ರೀ ಕೆ ಮೋಹನ್ ಸುಂದರ್
sundar@trawelmart.com

ಶ್ರೀ ಮೇದಾ ಎಸ್ ಕಿರಣ್ ಶೆಟ್ಟಿ
kiran@trawelmart.com

ನಿಮ್ಮ ಕನಸಿನ ವಿಶ್ವಪ್ರವಾಸವನ್ನು ಟ್ರಾವೆಲ್ ಮಾರ್ಟ್ ಜೊತೆಗೆ ಅನುಭವಿಸಿ!
ನಮ್ಮ ಗುರಿಯು ವಿಶ್ವದ ಅತ್ಯುತ್ತಮ ಪ್ರವಾಸ ಅನುಭವಗಳನ್ನು ಸುಲಭವಾಗಿ ಮತ್ತು ಸುಗಮವಾಗಿ ಪ್ರತಿ ಪ್ರಯಾಣಿಕನಿಗೂ ಒದಗಿಸುವುದಾಗಿದೆ. ಪ್ರತಿಯೊಬ್ಬ ಪ್ರಯಾಣಿಕನ ಕನಸು ಸಾಕಾರಗೊಳ್ಳುವಂತೆ, ಅವರ ಬಜೆಟ್ ಮತ್ತು ಆಸಕ್ತಿಗಳಿಗೆ ಅನುಗುಣವಾಗಿ ನಿಮ್ಮ ಟ್ರಾವೆಲ್ ಮಾರ್ಟ್ ಅತ್ಯುತ್ತಮ ಪ್ಯಾಕೇಜ್‌ಗಳನ್ನು ವಿನ್ಯಾಸಗೊಳಿಸಿ, ಸುರಕ್ಷಿತ, ಮತ್ತು ಆನಂದಕರ ಅನುಭವವನ್ನು ನೀಡಲು ನಾವು ಬದ್ಧರಾಗಿದ್ದೇವೆ.

ಟ್ರಾವೆಲ್ ಮಾರ್ಟ್ ವರ್ಲ್ಡ್ ಟೂರ್ಸ್ ಪ್ರೈ. ಲಿ.

080 4642 7999 enquiry@trawelmart.com

ಗ್ರೂಪ್ ಪ್ಯಾಕೇಜ್‌ಗಳಲ್ಲಿ ವಿಮಾನ ಟಿಕೆಟ್, ವೀಸಾ ಶುಲ್ಕ, ಲಕ್ಸುರಿ ಹೋಟೆಲ್‌ಗಳು, ಊಟ, ಪ್ರವಾಸದ ಗೈಡ್ ಹಾಗೂ ಸೈಟ್‌ಸೀಯಿಂಗ್ ಒಳಗೊಂಡಿರುತ್ತದೆ.

ಶ್ರೀಲಂಕಾ (7ದಿ) ₹ 78,000/-	ಬಾಲಿ (6ದಿ) ₹ 88,000/-	ದುಬೈ (6ದಿ) ₹ 95,000/-	ಅಜೆರ್‌ಬೈಜಾನ್ (5ದಿ) ₹ 1,05,000/-	ಸಿಂಗಾಪುರ್ ಮಲೇಷಿಯಾ (7ದಿ) ₹ 1,09,000/-	ವಿಯೆಟ್ನಾಂ (8ದಿ) ₹ 1,22,000/-	ಜಾರ್ಜಿಯಾ (6ದಿ) ₹ 1,25,000/-	ಸಿಂಗಾಪುರ್ ಮಲೇಷಿಯಾ ಥೈಲ್ಯಾಂಡ್ (11ದಿ) ₹ 1,39,000/-	ವಿಯೆಟ್ನಾಂ ಮತ್ತು ಕಂಬೋಡಿಯಾ (11ದಿ) ₹ 1,65,000/-	ಈಜಿಪ್ಟ್ (9ದಿ) ₹ 1,85,000/-	ಟರ್ಕಿ (8ದಿ) ₹ 1,85,000/-	ಕೀನ್ಯಾ (7ದಿ) ₹ 1,98,000/-
ಸೌತ್ ಆಫ್ರಿಕಾ (10ದಿ) ₹ 2,25,000/-	ಬೆಸ್ಟ್ ಆಫ್ ಯುರೋಪ್ (12ದಿ) 2,75,000/-	ಈಸ್ಟರ್ನ್ ಯುರೋಪ್ (11ದಿ) ₹ 2,80,000/-	ಸ್ಪೇನ್ ಮತ್ತು ಪೋರ್ಚುಗಲ್ (12ದಿ) ₹ 2,90,000/-	ಜಪಾನ್ (8ದಿ) ₹ 2,90,000/-	ಗ್ರೇಟ್ ಬ್ರಿಟನ್ (11ದಿ) ₹ 3,20,000/-	ಸ್ಕ್ಯಾಂಡಿನೇವಿಯಾ (10ದಿ) ₹ 3,35,000/-	ಡಿಲೈಟ್‌ಫುಲ್ ಯುರೋಪ್ (14ದಿ) ₹ 3,40,000/-	ಆಸ್ಟ್ರೇಲಿಯಾ (10ದಿ) ₹ 3,50,000/-	ಜಪಾನ್ ಮತು ಸೌತ್ ಕೊರಿಯಾ (11ದಿ) ₹ 3,50,000/-	ಗೋಲ್ಡನ್ ಯುರೋಪ್ (17ದಿ) ₹ 3,90,000/-	ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ಸ್ (19ದಿ) ₹ 5,95,000/-

ಕಸ್ಟಮೈಸ್ ಪ್ಯಾಕೇಜ್‌ಗಳಲ್ಲಿ, ವಿಮಾನ ಟಿಕೆಟ್, ಸ್ಟ್ಯಾಂಡರ್ಡ್ ಹೋಟೆಲ್‌ಗಳು ಮತ್ತು ಸೈಟ್‌ಸೀಯಿಂಗ್ ಒಳಗೊಂಡಿದೆ., ವೀಸಾ, ಮತ್ತು ಊಟದ ವೆಚ್ಚ ಹೆಚ್ಚುವರಿ.

ಏಷ್ಯಾ

- ಥೈಲ್ಯಾಂಡ್ (5ದಿ) ₹ 47,000/- ಬ್ಯಾಂಕಾಕ್ ಮತ್ತು ಪಟ್ಟಾಯ
- ಶ್ರೀಲಂಕಾ (5ದಿ) ₹ 53,000/-
- ಥೈಲ್ಯಾಂಡ್ (7ದಿ) ₹ 69,000/- ಫುಕೆಟ್, ಬ್ಯಾಂಕಾಕ್ ಮತ್ತು ಪಟ್ಟಾಯ
- ಸಿಂಗಾಪುರ್ (5ದಿ) ₹ 79,000/-
- ಬಾಲಿ (7ದಿ) ₹ 89,000/-
- ಹಾಂಗ್ ಕಾಂಗ್ ಮತ್ತು ಮಕಾವು (5ದಿ) ₹ 1,05,000/-
- ವಿಯೆಟ್ನಾಂ (9ದಿ) ₹ 1,15,000/-
- ಚೀನಾ (7ದಿ) ₹ 1,50,000/-
- ಚೀನಾ (11ದಿ) ₹ 1,95,000/-

ಆಫ್ರಿಕಾ

- ಈಜಿಪ್ಟ್ (7ದಿ) ₹ 1,30,000/-
- ಈಜಿಪ್ಟ್ (9ದಿ) ₹ 1,40,000/-
- ಕೀನ್ಯಾ (6ದಿ) ₹ 1,75,000/-
- ಸೌತ್ ಆಫ್ರಿಕಾ (9ದಿ) ₹ 1,90,000/-
- ಮೊರಾಕೊ (8ದಿ) ₹ 1,90,000/-
- ಕೀನ್ಯಾ (7ದಿ) ₹ 1,99,000/-
- ಕೀನ್ಯಾ (9ದಿ) ₹ 2,30,000/-
- ತಾಂಜಾನಿಯಾ (7ದಿ) ₹ 2,40,000/-
- ಸೌತ್ ಆಫ್ರಿಕಾ (11ದಿ) ₹ 2,52,000/-
- ತಾಂಜಾನಿಯಾ (9ದಿ) ₹ 2,70,000/-

ಆಸ್ಟ್ರೇಲಿಯಾ ನ್ಯೂಜಿಲೆಂಡ್

- ಆಸ್ಟ್ರೇಲಿಯಾ (9ದಿ) ₹ 2,60,000/-
- ನ್ಯೂಜಿಲ್ಯಾಂಡ್ (8ದಿ) ₹ 2,80,000/-
- ನ್ಯೂಜಿಲ್ಯಾಂಡ್ (9ದಿ) ₹ 2,88,000/-
- ಆಸ್ಟ್ರೇಲಿಯಾ (10ದಿ) ₹ 2,90,000/-
- ಆಸ್ಟ್ರೇಲಿಯಾ (11ದಿ) ₹ 3,10,000/-
- ನ್ಯೂಜಿಲ್ಯಾಂಡ್ಸ್ (12ದಿ) ₹ 3,30,000/-
- ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್ (15ದಿ) ₹ 4,90,000/-
- ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್ (20ದಿ) ₹ 5,80,000/-

ಮಿಡಲ್ ಈಸ್ಟ್

- ದುಬೈ (6ದಿ) ₹ 75,000/-
- ಬಾಕು (6ದಿ) ₹ 75,000/-
- ಬಾಕು (7ದಿ) ₹ 80,000/-
- ಉಜ್ಬೇಕಿಸ್ಥಾನ್ (5ದಿ) ₹ 80,000/-
- ಜಾರ್ಜಿಯಾ (6ದಿ) ₹ 85,000/-
- ಕಜಖಸ್ತಾನ್ (6ದಿ) ₹ 88,000/-
- ದುಬೈ (9ದಿ) ₹ 95,000/-
- ಬಾಕು ಮತು ಜಾರ್ಜಿಯಾ (7ದಿ) ₹ 1,30,000/-
- ಟರ್ಕಿ (10ದಿ) ₹ 1,80,000/-
- ಟರ್ಕಿ (12ದಿ) ₹ 2,00,000/-

ಯುರೋಪ್

- ಸ್ವಿಡ್ಜರ್‌ಲ್ಯಾಂಡ್ (8ದಿ) ₹ 2,05,000/-
- ಬಾಲ್ಟಿಕ್ ದೇಶಗಳು (10ದಿ) ₹ 2,10,000/-
- ನಾರ್ವೆ (8ದಿ) ₹ 2,30,000/-
- ಸ್ಪೇನ್ ಮತ್ತು ಪೋರ್ಚುಗಲ್ (9ದಿ) ₹ 2,35,000/-
- ಲಂಡನ್ ಮತ್ತು ಎಡಿನ್‌ಬರ್ಗ್ (7ದಿ) ₹ 2,35,000/-
- ಗ್ರೀಸ್ (9ದಿ) ₹ 2,40,000/-
- ಸ್ವಿಡ್ಜರ್‌ಲ್ಯಾಂಡ್ ಮತ್ತು ಪ್ಯಾರಿಸ್ (9ದಿ) ₹ 2,40,000/-
- ಐಸ್‌ಲ್ಯಾಂಡ್ (9ದಿ) ₹ 2,40,000/-
- ಕ್ರೊಯೆಶಿಯ (9ದಿ) ₹ 2,40,000/-
- ಸ್ವಿಟ್ಜಲ್ಯಾರ್ಂಡ್ ಪ್ಯಾರಿಸ್ ಮತ್ತು ಇಟಲಿ (11ದಿ) ₹ 2,85,000/-

ಭಾರತ

- ಹಿಮಾಚಲ ಪ್ರದೇಶ (6ದಿ) ₹ 45,000/-
- ಕಾಶ್ಮೀರ (6ದಿ) ₹ 51,000/-
- ಅಂಡಮಾನ್ (6ದಿ) ₹ 51,000/-
- ಸಿಕ್ಕಿಂ ಮತ್ತು ಡಾರ್ಜಲಿಂಗ್ (6ದಿ) ₹ 51,000/-
- ವಾರಣಾಸಿ ಅಯೋಧ್ಯೆ ಮತ್ತು ಪ್ರಯಾಗರಾಜ್ (6ದಿ) ₹ 52,000/-
- ನೇಪಾಳ (6ದಿ) ₹ 58,000/-
- ಭೂತಾನ್ (6ದಿ) ₹ 58,000/-
- ರಾಜಸ್ಥಾನ (8ದಿ) ₹ 60,000/-
- ಲೇಹ್ ಲಡಾಖ್ (7ದಿ) ₹ 68,000/-
- ಅಸ್ಸಾಂ ಮತ್ತು ಮೇಘಾಲಯ (8ದಿ) ₹ 69,000/-

ಫ್ಯಾಮಿಲಿ ಪ್ಯಾಕೇಜ್

ನಿಮ್ಮ ಪ್ರೀತಿಪಾತ್ರರೊಂದಿಗೆ ಖುಷಿಯ ನೆನಪುಗಳನ್ನು ರೂಪಿಸಿ. ಮಕ್ಕಳಿಗೆ ಮನರಂಜನೆ, ದೊಡ್ಡವರಿಗೆ ಆರಾಮ – ಎಲ್ಲರಿಗೂ ಸೂಕ್ತವಾದ ಪ್ರವಾಸ, ಪ್ರತಿಯೊಂದು ಕ್ಷಣವನ್ನೂ ಖುಷಿಯಿಂದ ಕಳೆಯಿರಿ.

ಕಾರ್ಪೊರೇಟ್ ಪ್ಯಾಕೇಜ್

ನಿಮ್ಮ ಸಂಸ್ಥೆಯ ಉದ್ಯೋಗಿಗಳ ಬಾಂಧವ್ಯ ಬಲಪಡಿಸಲು, ಮೋಟಿವೇಶನ್ ಹೆಚ್ಚಿಸಲು, ಮತ್ತು ಉತ್ಸಾಹ ತುಂಬಲು ವಿಶೇಷ ಕಾರ್ಪೊರೇಟ್ ಪ್ಯಾಕೇಜ್!

ಹನಿಮೂನ್ ಪ್ಯಾಕೇಜ್

ನಿಮ್ಮ ಹನಿಮೂನ್ ಪಯಣವನ್ನು ಮರೆಯಲಾಗದ ಪ್ರೀತಿಯ ನೆನಪಾಗಿ ಮಾಡಿಕೊಳ್ಳಲು ನಮ್ಮ ಪ್ಯಾಕೇಜ್ ನಿಮಗೆ ಸರಿಯಾದ ಆಯ್ಕೆ, ನಿಮ್ಮ ಪ್ರೀತಿಯ ಕ್ಷಣಗಳನ್ನು ಸುಂದರ ತಾಣಗಳಲ್ಲಿ ಅನುಭವಿಸಿ!

ಸೀನಿಯರ್ ಸಿಟಿಜನ್ಸ್ ಪ್ಯಾಕೇಜ್

ಹಿರಿಯ ನಾಗರಿಕರಿಗಾಗಿ, ನಾವು ಅನುಕೂಲಕರ, ಆರಾಮದಾಯಕ ಮತ್ತು ಸುರಕ್ಷಿತ ಪ್ರವಾಸ ಪ್ಯಾಕೇಜ್‌ಗಳನ್ನು ನೀಡುತ್ತೇವೆ, ನಿಮ್ಮ ಪ್ರಯಾಣದ ಪ್ರತಿಯೊಂದು ಹಂತವನ್ನು ನಮ್ಮೊಂದಿಗೆ ಆತ್ಮವಿಶ್ವಾಸದಿಂದ ಅನುಭವಿಸಿ!

www.trawelmart.com www.trawelmart.com www.trawelmart.com www.trawelmart.com www.trawelmart.com www.trawelmart.com www.trawelmart.com www.trawelmart.com

ಬೆಂಗಳೂರು ಜಯನಗರ ನಂ. 357, ಟ್ರಾವೆಲ್ ಮಾರ್ಟ್ ಗೃಹ, 10ನೇ ಬಿ ಮುಖ್ಯ ರಸ್ತೆ, ಜಯನಗರ 3ನೇ ಬಡಾವಣೆ, ಬೆಂಗಳೂರು-560011

ಬೆಂಗಳೂರು ಮಲ್ಲೇಶ್ವರಂ ನಂ.20, 1ನೇ ಮಹಡಿ, 1ನೇ ಟೆಂಪಲ್ ಸ್ಟ್ರೀಟ್, 10ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರತಿಭಟನೆ
ಕೆಮಿಸ್ಟ್ ಕೆಮಿಕಲ್ ಸೂಪರ್‌ವೈಸರ್ ಹುದ್ದೆಗಳ ನೇಮಕಾತಿಯಲ್ಲಿನ ಕಾನೂನು ತೊಡಕು ನಿವಾರಿಸುವಂತೆ ಎಐಎಸ್‌ಎಸ್‌ಎ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಗುರುವಾರ ಪ್ರತಿಭಟನೆ ನಡೆಯಿತು

ಉಪವಾಸ ಇರದ ಶಮಿ ಕ್ಷಮೆ ಕೇಳಲು ಮೌಲ್ವಿ ಆಗ್ರಹ 11
ಕೆಪಿಎಸ್‌ಸಿಗೆ ತೀವ್ರ ತರಾಟೆ 7
‘ಭ್ರಷ್ಟಾಚಾರವೇ ಬಹುದೊಡ್ಡ ಅಪಾಯ’ 11
ಸಚಿವ ಜೈಶಂಕರ್ ಬೆಂಗಾವಲು ವಾಹನದತ್ತ ನುಗ್ಗಿದ ಉಗ್ರ 12

ಲೋಕಾಯುಕ್ತ ದಾಳಿ: ಪಿಸ್ತೂಲು, ವಿದೇಶಿ ಕರೆನ್ಸಿ, ರದ್ದಾದ ನೋಟು, ಕೊಳೆತ ಆಹಾರ ಪತ್ತೆ

₹36.53 ಕೋಟಿ ಅಕ್ರಮ ಆಸ್ತಿ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಎಂಟು ಅಧಿಕಾರಿಗಳ ಮನೆ, ಕಚೇರಿ ಸೇರಿ 40 ಕಡೆ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು ₹36.53 ಕೋಟಿ ಮೌಲ್ಯದ ಅಕ್ರಮ ಆಸ್ತಿ ಪತ್ತೆ ಮಾಡಿದ್ದಾರೆ.

ಲೋಕಾಯುಕ್ತ ಪೊಲೀಸ್‌ನ ನೂರಕ್ಕೂ ಹೆಚ್ಚು ಸಿಬ್ಬಂದಿ ನಡೆಸಿದ ದಾಳಿಯ ವೇಳೆ ಅಪಾರ ಪ್ರಮಾಣದ ಅಕ್ರಮ ಆಸ್ತಿ ಪತ್ತೆಯಾಗಿರುವುದರ ಜತೆಗೆ ವಿದೇಶಿ ಕರೆನ್ಸಿ, ರದ್ದಾದ ನೋಟುಗಳು, ಪಿಸ್ತೂಲು, ಕೊಳೆತ ಆಹಾರ ಪೊಟ್ಟಣಗಳು ಸಿಕ್ಕಿವೆ.

ಪಂಚಾಯತ್ ರಾಜ್ ಇಲಾಖೆ ಎಂಜಿನಿಯರಿಂಗ್ ವಿಭಾಗದ ಮುಖ್ಯ ಎಂಜಿನಿಯರ್ ಟಿ.ಡಿ.ನಂಜುಂಡಪ್ಪ ಅವರ ಮನೆಗಳು, ಕಚೇರಿ, ಹುಟ್ಟೂರಿನ ಮನೆಗಳಲ್ಲಿ ಶೋಧ ನಡೆಸಿದ ವೇಳೆ ಒಟ್ಟು ₹8.46 ಕೋಟಿ ಮೌಲ್ಯದ ಆಸ್ತಿ ಪತ್ತೆಯಾಗಿದೆ. ಆರೋಪಿ ಅಧಿಕಾರಿಯ ಮನೆಯಲ್ಲಿ ₹60,000 ಮೌಲ್ಯದ ವಿದೇಶಿ ಕರೆನ್ಸಿಗಳೂ ಪತ್ತೆಯಾಗಿವೆ.

ವಿಜಯಪುರದ ಗೃಹಮಂಡಳಿಯ ಪ್ರಥಮ ದರ್ಜೆ ಸಹಾಯಕ ಶಿವಾನಂದ ಶಿವಶಂಕರ ಕೆಂಬಾವಿ ಅವರ ಬಳಿ ₹3.64 ಕೋಟಿ ಮೌಲ್ಯದ ಆಸ್ತಿ ಇರುವುದಲ್ಲದೆ, ಆರೋಪಿ ಅಧಿಕಾರಿಯ ಮನೆಯಲ್ಲಿ ಪಿಸ್ತೂಲು ಸಹ ಪತ್ತೆಯಾಗಿದೆ.

ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯ ದಾವಣಗೆರೆ ಜಿಲ್ಲಾ ಅಂಕಿತ ಅಧಿಕಾರಿ ಮನೆಯಲ್ಲಿ 1.57 ಕೆ.ಜಿಯಷ್ಟು ಚಿನ್ನಾಭರಣ ಪತ್ತೆಯಾಗಿದೆ. ಕಚೇರಿಯ ರೆಫ್ರಿಜರೇಟರ್‌ಗಳಲ್ಲಿ ಕೊಳೆತು ನಾರುತ್ತಿರುವ ಆಹಾರದ ಪೊಟ್ಟಣಗಳು ಇವೆ. ತಪಾಸಣೆಗೆಂದು ವಶಕ್ಕೆ ಪಡೆದ ಆಹಾರದ ಮಾದರಿಗಳನ್ನು ಪ್ರಯೋಗಾಲಯಕ್ಕೆ ಕಳುಹಿಸದೆ, ಕಚೇರಿಯಲ್ಲಿ ಕೊಳೆಯುವಂತೆ ಮಾಡಿರುವುದು ಗೊತ್ತಾಗಿದೆ.

ಬೆಸ್ಕಾಂನ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ನಾಗರಾಜ್ ಜಿ. ಅವರ ಮನೆಯಲ್ಲಿ ತಪಾಸಣೆ ನಡೆಸಿದ ವೇಳೆ ₹1.98 ಲಕ್ಷ ಮೌಲ್ಯದ 500 ಮುಖಬೆಲೆಯ ಹಳೆಯ-ರದ್ದಾದ ನೋಟುಗಳು ಪತ್ತೆಯಾಗಿವೆ.

ಎಲ್ಲ ಅಧಿಕಾರಿಗಳಿಗೆ ಸಂಬಂಧಿಸಿದ ಮನೆ-ಖಾಸಗಿ ಕಚೇರಿಗಳಲ್ಲಿ ಶೋಧ ಕಾರ್ಯ ಮುಂದುವರಿದಿದ್ದು, ಕೆಲ ಅಧಿಕಾರಿಗಳ ಲಾಕರ್‌ಗಳ ಪರಿಶೀಲನೆ ಇನ್ನಷ್ಟೇ ನಡೆಯಬೇಕಿದೆ ಎಂದು ಲೋಕಾಯುಕ್ತವು ಮಾಹಿತಿ ನೀಡಿದೆ.

ಇನ್ನೊಂದು ಸುದ್ದಿ 7

ಪಂಚಾಯತ್ ರಾಜ್ ಎಂಜಿನಿಯರಿಂಗ್ ವಿಭಾಗದ ಮುಖ್ಯ ಎಂಜಿನಿಯರ್ ಟಿ.ಡಿ. ನಂಜುಂಡಪ್ಪ ಅವರ ಮನೆಯಲ್ಲಿ ಪತ್ತೆಯಾದ ಅಪಾರ ನಗದು, 850 ಗ್ರಾಂನ ಚಿನ್ನಾಭರಣಗಳು

ಆಸ್ತಿ ಮೌಲ್ಯ

₹26.47 ಕೋಟಿ	ಸ್ಥಿರಾಸ್ತಿಗಳು
₹3.70 ಕೋಟಿ	ಚಿನ್ನ ಮತ್ತು ಬೆಳ್ಳಿಯ ಆಭರಣಗಳು
₹3 ಕೋಟಿ	ಮೌಲ್ಯದ ವಾಹನಗಳು
₹64.78 ಲಕ್ಷ	ನಗದು
₹2.58 ಕೋಟಿ	ಠೇವಣಿಗಳು, ಷೇರು, ಗೃಹೋಪಯೋಗಿ ವಸ್ತುಗಳು

ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ತಪಾಸಣೆ

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳ ಒಟ್ಟು 25 ಉಪ ನೋಂದಣಾಧಿಕಾರಿಗಳ ಕಚೇರಿಗಳಿಗೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್, ಉಪ ಲೋಕಾಯುಕ್ತರಾದ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಮತ್ತು ನ್ಯಾಯಮೂರ್ತಿ ಬಿ.ವೀರಪ್ಪ ಅವರು ದಿಢೀರ್ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ.

7ನೇ ಪುಟ ನೋಡಿ

ಸಿನಿಮಾಗೆ ಏಕ ದರದ ಟಿಕೆಟ್?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಟಿಪ್ಲೆಕ್ಸ್‌ಗಳು ಸಿನಿಮಾ ಟಿಕೆಟ್‌ಗೆ ದುಬಾರಿ ದರ ನಿಗದಿ ಮಾಡಿ ದರೋಡೆ ಮಾಡುತ್ತಿವೆ. ಅದನ್ನು ನಿಯಂತ್ರಿಸಲು ರಾಜ್ಯದಾದ್ಯಂತ ಏಕರೂಪದ ಟಿಕೆಟ್ ದರ ನಿಗದಿ ಮಾಡುವ ಬಗ್ಗೆ ಪರಿಶೀಲನೆ ನಡೆಸಲಾಗುತ್ತದೆ’ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ವಿಧಾನ ಪರಿಷತ್ತಿನಲ್ಲಿ ಗುರುವಾರ ಜೆಡಿಎಸ್‌ನ ಗೋವಿಂದರಾಜು ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ‘ರಾಜ್ಯದಲ್ಲಿ ಟಿಕೆಟ್ ದರಗಳನ್ನು ನಿಗದಿ ಮಾಡುವ ಅಧಿಕಾರವನ್ನು ಚಿತ್ರಮಂದಿರಗಳ ಮಾಲೀಕರಿಗೇ ನೀಡಲಾಗಿದೆ. ದರವನ್ನು ನಿಗದಿ ಮಾಡುವ ಅಧಿಕಾರ ಸರ್ಕಾರಕ್ಕೂ ಇದ್ದು, ಅಗತ್ಯವೆನಿಸಿದರೆ ಅದನ್ನು ಬಳಸಬಹುದು’ ಎಂದರು.

‘2018ರ ಬಜೆಟ್‌ನಲ್ಲಿ ಏಕರೂಪ ದರ ಜಾರಿ ಮಾಡುವುದಾಗಿ ಮುಖ್ಯಮಂತ್ರಿ ಘೋಷಿಸಿದ್ದರು. ಅದರಂತೆ 2018ರ ಮೇನಲ್ಲಿ ಅಧಿಸೂಚನೆಯೂ ಹೊರಬಂದಿತ್ತು. ರಾಜ್ಯದಾದ್ಯಂತ ₹200 ದರ ನಿಗದಿ ಮಾಡಲಾಗಿತ್ತು. ಆದರೆ ಚಿತ್ರಮಂದಿರಗಳ ಮಾಲೀಕರು ನ್ಯಾಯಾಲಯಕ್ಕೆ ಹೋಗಿ, ತಡೆ ತಂದರು. ನಂತರ ಬಂದ ಸರ್ಕಾರ, ಆದೇಶವನ್ನು ವಾಪಸ್ ಪಡೆಯಿತು. ಈಗ ಮತ್ತೆ ಅಂತಹ ಕ್ರಮ ತೆಗೆದುಕೊಳ್ಳುವ ಅಗತ್ಯವಿದೆ’ ಎಂದರು.

‘ಮಲ್ಟಿಪ್ಲೆಕ್ಸ್‌ಗಳು ಟಿಕೆಟ್ ಮಾತ್ರವಲ್ಲದೆ, ನೀರು ಮತ್ತು ತಿನಿಸುಗಳಿಗೂ ವಿಪರೀತ ದರ ನಿಗದಿ ಮಾಡುತ್ತಿವೆ. ಇದನ್ನೂ ನಿಯಂತ್ರಿಸುವ ಅವಶ್ಯ ಇದೆ. ಈ ಬಗ್ಗೆ ಪರಿಶೀಲನೆ ನಡೆಸಲಾಗುವುದು’ ಎಂದರು.

ಅಂಕಿ ಅಂಶಗಳು

650	ರಾಜ್ಯದಾದ್ಯಂತ ಇರುವ ಚಿತ್ರಮಂದಿರಗಳು
100	ಸ್ಥಗಿತವಾಗಿರುವ ಚಿತ್ರಮಂದಿರ
150	ಮುಚ್ಚುವ ಸ್ಥಿತಿಯಲ್ಲಿರುವ ಚಿತ್ರಮಂದಿರ

ಗ್ರಾ.ಪಂ.ನಲ್ಲೂ ‘ಬಿ’ ಖಾತೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿರುವ ಅನಧಿಕೃತ ಬಡಾವಣೆಗಳಿಗೂ ‘ಬಿ’ ಖಾತೆ ನೀಡುವ ಸಂಬಂಧ ಪಂಚಾಯತ್‌ರಾಜ್ ಕಾಯ್ದೆಗೆ ತಿದ್ದುಪಡಿ ತರಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಈ ಉದ್ದೇಶದಿಂದ ಕಾಯ್ದೆ ತಿದ್ದುಪಡಿಗೆ ಕರಡು ಮಸೂದೆ ಸಿದ್ಧವಾಗಿದ್ದು ಪರಿಶೀಲನೆಯಲ್ಲಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ನಗರ-ಪಟ್ಟಣ, ಸ್ಥಳೀಯ ಸಂಸ್ಥೆ ವ್ಯಾಪ್ತಿಯಲ್ಲಿರುವ ಅನಧಿಕೃತ ನಿವೇಶನಗಳಿಗೆ, ಮನೆಗಳಿಗೆ ಒಂದು ಬಾರಿ ‘ಬಿ’ ಖಾತೆ ಮಾಡಿಕೊಡಲು ಸರ್ಕಾರ ಈಗಾಗಲೇ ನಿರ್ಧರಿಸಿದೆ.



72198 21111 BAJAJ SECURE AMC • ROAD SIDE ASSISTANCE BAJAJ CREDIT
*Terms and conditions apply. *Offer available on Pulsar 125 Carbon Fibre and Pulsar 150 models. #Ex Showroom price for N160 Twin Disc variant. *Down payment for Pulsar 125 Carbon Fibre. Bajaj Auto reserves the right to withdraw any or all offers without prior notice. Stunts have been performed by experts, under professional supervision, in a controlled and enclosed environment, in isolation from general public or public roads. Do not attempt to replicate these stunts and always follow traffic and safety rules. AMC available on specific models and in specific states. Check with Bajaj dealer for more details. Roadside Assistance is provided by third parties and is subject to their terms and conditions.

Authorized Dealers for Bajaj Auto Ltd.: Bangalore • Bommanahalli AMBA BAJAJ: 9535411100 • HSR Layout AMBA BAJAJ: 8884333732 • Sarjapur AMBA BAJAJ: 7406688884• BTM Layout AMBA BAJAJ: 9513926221• Madiwala AMBA BAJAJ: 9945000048• Electronic City AMBA BAJAJ: 8971711118• Nayandahalli RV BAJAJ: 6360308373 • Moodalapalya RV BAJAJ: 9740444545 • Kengeri RV BAJAJ: 7353763305 • Giri Nagar RV BAJAJ: 7353763302• Vijaynagar RV BAJAJ: 7353763307• Banashankari POPULAR BAJAJ: 9945111874 • Rajajinagar POPULAR BAJAJ : 6366554001 • Koramangala POPULAR BAJAJ: 9845589079 • Konankunte POPULAR BAJAJ: 7760967834 • Ramnagara POPULAR BAJAJ: 7760967832 • Kanakpura POPULAR BAJAJ: 9972533890 • POPULAR BAJAJ Channapatna 9901947666 • POPULAR BAJAJ Uttarahalli 9972095890 • POPULAR BAJAJ Gottigere 7760996891 • Yelahanka KALYANI BAJAJ: 9449849618 • Mekhri circle KALYANI BAJAJ 8884413593 Mathikere KALYANI BAJAJ: 8884430126 • Chikkaballapura KALYANI BAJAJ: 8884413594 • Devanahalli KALYANI BAJAJ: 9449849624 • Marathahalli KHIVRAJ BAJAJ: 9036091986 • Kasturba Rd KHIVRAJ BAJAJ: 9035060140 • Indiranagar KHIVRAJ BAJAJ: 9035060139 • Hennur KHIVRAJ BAJAJ: 9742155225 • Banaswadi KHIVRAJ BAJAJ: 9035060147 • Yeshwanthpur : KHIVRAJ BAJAJ: - 9148752305 • Hesargatta KHIVRAJ BAJAJ: 9035060148 • Whitefield KHIVRAJ BAJAJ: 8618840097 • Hoskote KHIVRAJ BAJAJ: 9035005075 • Magadi Rd ANANT BAJAJ: 9980009166 • Laggere ANANT BAJAJ: 9900072690 • Hubli CHANNAMMA BAJAJ: 9620614106 • Arvind Nagar branch 8884771881 Gadag CHANNAMMA BAJAJ: 7090665850 • Sirsi CHANNAMMA BAJAJ: 8884645609 • Haveri CHANNAMMA BAJAJ: 8151884422 • Belgaum JAGASHREE BAJAJ: 988690116, JAGASHREE BAJAJ: 9448634872. • Chikodi JAGASHREE BAJAJ: 7349773953 • Gokak JAGASHREE BAJAJ: 7349773965 • Bellary AADI BAJAJ: 9606050246• Raichur SHREE BALAJI AUTOMOBILES: 9880235539• Koppal I A BAJAJ: 9632512938• Hospet AADI BAJAJ:9731361414 • Hagaribommanahalli AADI BAJAJ: 9900363010• SIRUGUPPA AADI BAJAJ: 9110217558 • Bijapur BIJJARGI BAJAJ (BLDE Road): 6362877793 •(Bus Stand Road) 8884000970 • Bagalkot BIJJARGI BIKES: 9148448324 • Sindagi BIJJARGI BAJAJ 8861946802• Bidar SINDOL BAJAJ 9513226555 • Chitradurga BTV BAJAJ: Ph: 8310553554 • Hiriyur BTV BAJAJ: Ph: 8310553554 • Challakere BTV BAJAJ 8310553554 • Davangere JAIN BAJAJ: Ph: 9343636805 • Harihara JAIN BAJAJ: Ph: 9632300444 • Gulbarga VKG BAJAJ: 9632018700 • Yadgir VKG BAJAJ: 8867776567 • Humnabad VKG BAJAJ 8050889160 • Shimoga SUPREME BAJAJ: 8105000999 • Sagar SUPREME BAJAJ: 9008339799 • Bhadravathi SUPREME BAJAJ: 9008352799 • Chikkamagalur SUPREME BAJAJ: 9008379799 • Tarikere SUPREME BAJAJ: 9008569799 • Hosanagar SUPREME BAJAJ 9731767799 • Anandpura SUPREME BAJAJ 9663501499 • Hassan ARPITA BAJAJ: 9902439255, Arsikere ARPITA BAJAJ: 9964094535 • Kolar KHIVRAJ 9611768292 • KGF KHIVRAJ BAJAJ: 7349507477• Tumkur AKSHAYA BAJAJ: 7259040212• Tiptur AKSHAYA BAJAJ: 7259040226 • Sira AKSHAYA BAJAJ: 7259040328 • Kunigal AKSHAYA BAJAJ: 7338662706 • Madhugiri AKSHAYA BAJAJ: 7259040340 • BH Road: 7338662687 • Mysore Saraswathipuram POPULAR BAJAJ: 9148101113 • Chamarajapuram POPULAR BAJAJ: 7259786271 • Vontikoppal STAR BAJAJ: 9886959722 • Mandya POPULAR BAJAJ: 7760967900 • Chamarajanagara PATEL BAJAJ: 9480494888 • Hunsur STAR BAJAJ: 8884374777 • Kushalnagar POPULAR BAJAJ: 7259786276 • Nanjangud STAR BAJAJ: 9742100252 • NR Mohalla STAR BAJAJ: 8095777706 • Balmatta SUPREME BAJAJ: 9606973192 • Kuloor SUPREME BAJAJ: 9606237547 • Surathkal SUPREME BAJAJ: 9606973193 • Thokottu 9606702429 • B C Road 7618715273 • Bidar SINDOL BAJAJ 9513226555 • UDUPI SAANVI BAJAJ 8861135225.

‘ವಿ.ವಿ ಮುಚ್ಚುವುದಿಲ್ಲ, ವಿಲೀನ ಮಾಡ್ತೇವೆ’

ವಿಧಾನಸಭೆಯಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿಕೆ • ವಿವಿಗಳ ಭವಿಷ್ಯ ಆತಂಕ ಬೇಡ– ಸಚಿವ ಸುಧಾಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾವು ಯಾವುದೇ ವಿಶ್ವವಿದ್ಯಾಲಯಗಳನ್ನು ಮುಚ್ಚುವುದಿಲ್ಲ, ಅವುಗಳನ್ನು ದೊಡ್ಡ ವಿಶ್ವವಿದ್ಯಾಲಯಗಳೊಂದಿಗೆ ವಿಲೀನ ಮಾಡುತ್ತೇವೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೇಳಿದರು.

ವಿರೋಧಪಕ್ಷದ ನಾಯಕ ಆರ್. ಅಶೋಕ ಅವರು ವಿಧಾನಸಭೆಯಲ್ಲಿ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಮಾತನಾಡುವಾಗ ಮಧ್ಯ ಪ್ರವೇಶಿಸಿದ ಅವರು ಈ ವಿಷಯ ತಿಳಿಸಿದರು.

‘ಮೈಸೂರು ಮತ್ತು ಬೆಂಗಳೂರು ವಿಶ್ವವಿದ್ಯಾಲಯಗಳಿಗೆ ವಿಶ್ವವ್ಯಾಪಿ ಮಾನ್ಯತೆ ಇದೆ. ಸಣ್ಣ ಪುಟ್ಟ ಹೊಸ ವಿಶ್ವವಿದ್ಯಾಲಯಗಳಿಗೆ ಅಷ್ಟು ಮಾನ್ಯತೆ ಸಿಗುವುದಿಲ್ಲ. ಇದರಿಂದ ವಿದ್ಯಾರ್ಥಿಗಳಿಗೂ ಸಮಸ್ಯೆ ಆಗುತ್ತದೆ. ಅಲ್ಲದೇ, ಮಂಡ್ಯ, ಚಾಮರಾಜ ವಿಶ್ವವಿದ್ಯಾಲಯಗಳಿಗೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೂ ಹೋಗುವುದಿಲ್ಲ. ಹೀಗಾಗಿ ನಾವು ಹೊಸ ವಿಶ್ವವಿದ್ಯಾಲಯಗಳನ್ನು ಮುಚ್ಚುವುದಿಲ್ಲ. ಅವುಗಳನ್ನು ವಿಲೀನಗೊಳಿಸುತ್ತೇವೆ. ನೀವು ವಿಘಟನೆ ಮಾಡುವವರು ನಾವು ಒಂದು ಗೂಡಿಸುವವರು’ ಎಂದು ಶಿವಕುಮಾರ್ ಕುಟುಕಿದರು.

‘ಈ ವಿಶ್ವವಿದ್ಯಾಲಯಗಳು ನಮ್ಮ ಪ್ರಯೋಗ ಅಲ್ಲ. ಇದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಆಪ್ತ ಸ್ಯಾಮ್ ಪಿತ್ರೋಡ ಅವರ ಪರಿಕಲ್ಪನೆಯ ಕೂಸು. 2013 ರಲ್ಲಿ ಒಡಮೂಡಿದ ಈ ವಿಶ್ವವಿದ್ಯಾಲಯಗಳ ಸ್ಥಾಪನೆಯ ಒಪ್ಪಂದಕ್ಕೆ 2015ರಲ್ಲಿ ಕಾಂಗ್ರೆಸ್ ಸರ್ಕಾರವೇ ಸಹಿ ಮಾಡಿತ್ತು’ ಎಂದು ಅಶೋಕ ಹೇಳಿದರು.

ವಿಧಾನಸಭೆಯಲ್ಲಿ ಡಿ.ಕೆ.ಶಿವಕುಮಾರ್ ಮಾತನಾಡಿದರು – ಪ್ರಜಾವಾಣಿ ಚಿತ್ರ

ಇನ್ನೂ ನಿರ್ಧಾರ ಆಗಿಲ್ಲ: ಇದಕ್ಕೂ ಮುನ್ನ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಜಗದೀಶ್ ಗುಡಗಂಟಿ ಅವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, ‘2022–23ರಲ್ಲಿ ಆರಂಭವಾದ ಏಳು ಹೊಸ ವಿಶ್ವವಿದ್ಯಾಲಯಗಳ ವಿಷಯದಲ್ಲಿ ಯಾವ ರೀತಿಯ ಕ್ರಮ ಕೈಗೊಳ್ಳಬೇಕು ಎಂಬುದು ಇನ್ನೂ ನಿರ್ಧಾರವಾಗಿಲ್ಲ. ಈ ವಿಶ್ವವಿದ್ಯಾಲಯಗಳ ಭವಿಷ್ಯದ ಬಗ್ಗೆ ಸದ್ಯ ಆತಂಕ ಬೇಡ’ ಎಂದರು.

‘ಹಳೆಯ ವಿಶ್ವವಿದ್ಯಾಲಯಗಳಲ್ಲಿ ನೌಕರರಿಗೆ ಪಿಂಚಣಿ ನೀಡುವುದಕ್ಕೂ ಹಣವಿಲ್ಲ. ಆದರೂ, ಹಿಂದಿನ ಸರ್ಕಾರ ಏಳು ಹೊಸ ವಿಶ್ವವಿದ್ಯಾಲಯಗಳನ್ನು ಆರಂಭಿಸಿತ್ತು. ಅವುಗಳಿಗೆ ತಲಾ ₹2 ಕೋಟಿ ಅನುದಾನವನ್ನು ಮಾತ್ರ ಒದಗಿಸಲಾಗಿತ್ತು. ಈ ಹೊಸ ವಿಶ್ವವಿದ್ಯಾಲಯಗಳ ಭವಿಷ್ಯದ ವಿಚಾರದಲ್ಲಿ ಇನ್ನೂ ಅಂತಿಮ ತೀರ್ಮಾನ ಆಗಿಲ್ಲ’ ಎಂದರು.

ಉತ್ತರಕ್ಕೆ ಆಕ್ಷೇಪಿಸಿದ ಬಿಜೆಪಿಯ ಡಾ.ಸಿ.ಎನ್. ಅಶ್ವತ್ಥನಾರಾಯಣ, ‘ಸಚಿವರಿಗೆ ಮರೆವು ಬಂದಿದೆ. ಹೊಸ ವಿಶ್ವವಿದ್ಯಾಲಯಗಳನ್ನು ಮುಚ್ಚುವುದಾಗಿ ಸಂದರ್ಶನದಲ್ಲಿ ಹೇಳಿದ್ದಾರೆ. ರಾಜ್ಯಪಾಲರ ಅಧಿಕಾರ ಕಿತ್ತುಕೊಂಡಿದ್ದೀರಿ. ವಿಶ್ವವಿದ್ಯಾಲಯಗಳ ಪ್ರಗತಿ ಪರಿಶೀಲನೆಗೆ ರಾಜ್ಯಪಾಲರಿಗೆ ಮಾತ್ರ ಅಧಿಕಾರ ಇದೆ. ಕಾಯ್ದೆಯನ್ನು ಓದಿದ್ದೀರಾ’ ಎಂದು ಪ್ರಶ್ನಿಸಿದರು.

ಇಬ್ಬರ ಮಧ್ಯೆ ಕೆಲಕಾಲ ಮಾತಿನ ಸಮರ ನಡೆಯಿತು. ‘ಮನಸೋಇಚ್ಛೆ ವಿಶ್ವವಿದ್ಯಾಲಯಗಳನ್ನು ಆರಂಭಿಸಿ, ಖಾಸಗಿ ವಿಶ್ವವಿದ್ಯಾಲಯಗಳಿಗೆ ಅವಕಾಶ ನೀಡಿ ಉನ್ನತ ಶಿಕ್ಷಣ ಕ್ಷೇತ್ರವನ್ನು ಹಾಳು ಮಾಡಿದವರು ನೀವು’ ಎಂದು ಸುಧಾಕರ್ ತಿರುಗೇಟು ಕೊಟ್ಟರು.

‘ಸಾವಿರ ಕೆಪಿಎಸ್ ಆರಂಭಕ್ಕೆ ಸಿದ್ಧತೆ’

‘ಒಂದು ಸಾವಿರ ಕರ್ನಾಟಕ ಪಬ್ಲಿಕ್ ಶಾಲೆಗಳ (ಕೆಪಿಎಸ್) ಆರಂಭಕ್ಕೆ ಸಿದ್ಧತೆ ನಡೆದಿದೆ. ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿ ನೆರವಿನಲ್ಲಿ 500 ಮತ್ತು ಏಷ್ಯಾ ಅಭಿವೃದ್ಧಿ ಬ್ಯಾಂಕ್ ನಿಧಿಯ ನೆರವಿನಲ್ಲಿ 500 ಶಾಲೆಗಳನ್ನು ಆರಂಭಿಸಲಾಗುವುದು’ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಕಾಂಗ್ರೆಸ್‌ನ ಜಿ.ಎಚ್. ಶ್ರೀನಿವಾಸ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ‘ಒಟ್ಟು 2,000 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಆರಂಭಿಸುವ ಗುರಿ ಇದೆ. ಮೊದಲ ಹಂತದಲ್ಲಿ ಸಾವಿರ ಶಾಲೆಗಳನ್ನು ತೆರೆಯಲಾಗುವುದು. ಈ ಶಾಲೆಗಳ ವಿದ್ಯಾರ್ಥಿಗಳಿಗೆ ಐದು ಕಿ.ಮೀ. ವ್ಯಾಪ್ತಿಯಲ್ಲಿ ಸರ್ಕಾರದಿಂದಲೇ ಸಾರಿಗೆ ಸೌಲಭ್ಯ ಒದಗಿಸುವ ಚಿಂತನೆಯೂ ಇದೆ’ ಎಂದರು.

ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮಂಜೂರಾಗಿದ್ದ ಕೆಪಿಎಸ್ ಒಂದರ ಅನುದಾನ ಹಿಂಪಡೆದಿರುವುದಕ್ಕೆ ಬಿಜೆಪಿಯ ಸುರೇಶ್ ಗೌಡ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಅವರನ್ನು ಸಮಾಧಾನಪಡಿಸಿದ ಸಚಿವರು, ‘ಆರ್ಥಿಕ ಇಲಾಖೆಯ ಅನುಮತಿ ಪಡೆದು ಶೀಘ್ರದಲ್ಲಿ ಮರು ಮಂಜೂರಾತಿ ಆದೇಶ ಹೊರಡಿಸುತ್ತೇವೆ’ ಎಂದು ಭರವಸೆ ನೀಡಿದರು.

ಆಯುಷ್ಮಾನ್: ವೆಚ್ಚ ಪರಿಷ್ಕರಣೆಗೆ ಪತ್ರ

‘ಆಯುಷ್ಮಾನ್ ಭಾರತ್ ಯೋಜನೆಯಡಿ ವೈದ್ಯಕೀಯ ಚಿಕಿತ್ಸೆಗಳ ವೆಚ್ಚ ಪರಿಷ್ಕರಿಸುವಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಕೇಂದ್ರದಿಂದ ಈವರೆಗೂ ಪ್ರತಿಕ್ರಿಯೆ ಬಂದಿಲ್ಲ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಬಿಜೆಪಿಯ ವೇದವ್ಯಾಸ್ ಕಾಮತ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಕೇಂದ್ರದ ನೀತಿಯ ಪ್ರಕಾರ, ಆಯುಷ್ಮಾನ್ ಭಾರತ್– ಆರೋಗ್ಯ ಕರ್ನಾಟಕ ಯೋಜನೆಯಡಿ ಚಿಕಿತ್ಸಾ ವೆಚ್ಚಕ್ಕೆ ಕೇಂದ್ರ ಶೇಕಡ 60ರಷ್ಟು ಮತ್ತು ರಾಜ್ಯ ಸರ್ಕಾರ ಶೇ 40ರಷ್ಟು ಭರಿಸಬೇಕು. ಈಗ ರಾಜ್ಯ ಸರ್ಕಾರ ಶೇ 75ರಷ್ಟು ಭರಿಸುತ್ತಿದೆ’ ಎಂದರು.

ವಯೋ ವಂದನ ಯೋಜನೆಯಡಿ ಹಿರಿಯ ನಾಗರಿಕರಿಗೆ ಉಚಿತ ಚಿಕಿತ್ಸೆ ನೀಡುವ ಯೋಜನೆಯ ಪ್ಯಾಕೇಜ್‌ಗಳ ದರ ಹಂಚಿಕೆ ಬಗ್ಗೆಯೂ ಪತ್ರ ಬರೆಯಲಾಗಿದೆ. ಈವರೆಗೆ ಕೇಂದ್ರ ಸರ್ಕಾರ ಪ್ರತಿಕ್ರಿಯಿಸಿಲ್ಲ. ರಾಜ್ಯದಲ್ಲಿ ಈ ಯೋಜನೆಯಡಿ 1.12 ಕೋಟಿ ಜನರು ಬರಲಿದ್ದು, 68 ಲಕ್ಷ ಜನರಿಗೆ ಮಾತ್ರ ಸೌಲಭ್ಯ ಕಲ್ಪಿಸುವ ಮಿತಿಯನ್ನು ಕೇಂದ್ರ ಸರ್ಕಾರ ನಿಗದಿಪಡಿಸಿದೆ ಎಂದು ಹೇಳಿದರು.

‘ಮುಂದಿನ ವರ್ಷ ಕೆಎಫ್‌ಡಿ ಲಸಿಕೆ ಲಭ್ಯ’

‘ಕ್ಯಾಸನೂರು ಅರಣ್ಯ ಕಾಯಿಲೆಗೆ (ಕೆಎಫ್‌ಡಿ) ಹೊಸ ಲಸಿಕೆ ಅಭಿವೃದ್ಧಿಪಡಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಮುಂದಿನ ವರ್ಷ ಲಸಿಕೆ ಬಳಕೆಗೆ ಲಭ್ಯವಾಗಲಿದೆ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಬಿಜೆಪಿಯ ಆರಗ ಜ್ಞಾನೇಂದ್ರ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಕೆಎಫ್‌ಡಿ ನಿಯಂತ್ರಣಕ್ಕೆ ಹಿಂದೆ ಬಳಸುತ್ತಿದ್ದ ಲಸಿಕೆ ಕ್ಷಮತೆಯನ್ನು ಕಳೆದುಕೊಂಡಿತ್ತು. ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ನೇತೃತ್ವದಲ್ಲಿ ಸಂಸ್ಥೆಯೊಂದು ಹೊಸ ಲಸಿಕೆ ಅಭಿವೃದ್ಧಿಪಡಿಸುತ್ತಿದೆ. ಕಾರ್ಪೋರೇಟ್ ಕಂಪನಿಗಳ ನೆರವಿನಲ್ಲಿ ಸರ್ಕಾರ ಹಣ ಒದಗಿಸಿದೆ’ ಎಂದರು.

ಪ್ರಸಕ್ತ ವರ್ಷ ಈವರೆಗೆ 52 ಮಂದಿಗೆ ಮಂಗನ ಕಾಯಿಲೆ ಹರಡಿದ್ದು, ಒಬ್ಬ ಮಹಿಳೆ ಮೃತಪಟ್ಟಿದ್ದಾರೆ. ಅವರಲ್ಲಿ ಇತರ ಗಂಭೀರ ಸ್ವರೂಪದ ಅನಾರೋಗ್ಯದ ಸಮಸ್ಯೆಗಳಿದ್ದವು ಎಂಬುದು ‘ಮರಣ ಆಡಿಟ್’ನಲ್ಲಿ ಕಂಡುಬಂದಿದೆ ಎಂದು ವಿವರ ನೀಡಿದರು.

‘ದಲಿತರಿಗೆ ಅನ್ಯಾಯ ಮಾಡಿದ್ದಕ್ಕೆ ಕುಂಟುತ್ತಿದ್ದೀರಿ’

ಪ್ರಜಾವಾಣಿ ವಾರ್ತೆ

ದಲಿತರಿಗೆ ಬಿಜೆಪಿ ಮೀಸಲಾತಿ ನೀಡುವುದಿಲ್ಲ, ಸಂವಿಧಾನ ಬದಲಾಯಿಸಲಿದೆ ಎಂದು ಕಾಂಗ್ರೆಸ್ ಅಪಪ್ರಚಾರ ಮಾಡುತ್ತಿದೆ. ಈ ಮಾತುಗಳನ್ನು ಯಾರೂ ನಂಬಬೇಡಿ
ಛಲವಾದಿ ನಾರಾಯಣಸ್ವಾಮಿ ವಿರೋಧ ಪಕ್ಷದ ನಾಯಕ, ವಿಧಾನ ಪರಿಷತ್

ಬೆಂಗಳೂರು: ‘ದಲಿತ ಸಮುದಾಯದ ಅಭಿವೃದ್ಧಿಗೆ ಮೀಸಲಿಟ್ಟಿದ್ದ ₹25 ಸಾವಿರ ಕೋಟಿ ಹಣ ಲೂಟಿ ಮಾಡಲಾಗಿದೆ. ಬಡವರಿಗೆ ಅನ್ಯಾಯ ಮಾಡಿದ್ದಕ್ಕೆ ಮುಖ್ಯಮಂತ್ರಿ ಕುಂಟುತ್ತಿದ್ದು, ವ್ಹೀಲ್ ಚೇರ್‌ನಲ್ಲಿ ಓಡಾಡುವಂತಾಗಿದೆ’ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಟೀಕಿಸಿದರು.

ಪರಿಶಿಷ್ಟರ ಹಣ ದುರ್ಬಳಕೆ ವಿರೋಧಿ ಹೋರಾಟ ಸಮಿತಿಯು ರಾಜ್ಯ ಸರ್ಕಾರದ ವಿರುದ್ಧ ಗುರುವಾರ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಮಾತನಾಡಿದ ಅವರು, ‘ದಲಿತರ ಹಣ ನುಂಗಿದ್ದಕ್ಕೆ ಅದು ನಿಮ್ಮ (ಮುಖ್ಯಮಂತ್ರಿ) ಗಂಟಲಿನಲ್ಲಿ ಸಿಕ್ಕಿಹಾಕಿಕೊಂಡಿದೆ. ನಮ್ಮ ಸಮುದಾಯಕ್ಕೆ ಮೋಸ ಮಾಡಿದರೆ ವ್ಹೀಲ್ ಚೇರ್ ಹೋಗಿ ಮುಂದೆ ಬೇರೆ ಚೇರ್ ಬರಲಿದೆ’ ಎಂದು ಎಚ್ಚರಿಸಿದರು.

‘ಪರಿಶಿಷ್ಟ ಸಮುದಾಯದವರು ಉಚಿತ ಬಸ್‌ನಲ್ಲಿ ಓಡಾಡುವುದಿಲ್ಲ. ಮೋಜು, ಮಸ್ತಿ ಮಾಡುವುದಿಲ್ಲ. ಆದರೆ, ವಿಶೇಷ ಯೋಜನೆಯ ಹಣವನ್ನು ತೆಗೆದು ಸಿ.ಎಂ. ಖಾತೆಗೆ ಹಾಕಿಕೊಳ್ಳಲಾಗಿದೆ. ಇದು ಸಮುದಾಯಕ್ಕೆ ಮಾಡಿದ ಮೋಸ ಅಲ್ಲವೇ’ ಎಂದು ಪ್ರಶ್ನಿಸಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮಾತನಾಡಿ, ‘ದಲಿತ ಸಮುದಾಯದ ಅಭಿವೃದ್ಧಿಗೆ ಹಣ ಬಳಕೆಯಲ್ಲಿ ಕರ್ನಾಟಕ ರಾಜ್ಯ 10ನೇ ಸ್ಥಾನದಲ್ಲಿದೆ. ಮುಂದಿನ ದಿನಗಳಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಾಗ ದೇಶದಲ್ಲಿ ದಲಿತರಿಗೆ ಹಣ ಖರ್ಚು ಮಾಡುವ ನಿಟ್ಟಿನಲ್ಲಿ ರಾಜ್ಯ ಮೊದಲ ಸ್ಥಾನದಲ್ಲಿ ಇರಲಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

‘ಸಿದ್ದರಾಮಯ್ಯ ಅವರ ದಲಿತ ಪರ ಕಾಳಜಿ ಎಲ್ಲಿ ಹೋಗಿದೆ? ವಿರೋಧ ಪಕ್ಷದಲ್ಲಿದ್ದಾಗ ಇದ್ದ ದಲಿತ ಪರ ಕಾಳಜಿ ಅಧಿಕಾರಕ್ಕೆ ಬಂದ ಬಳಿಕ ಮರೆತುಹೋಯಿತೇ? ಮುಖ್ಯಮಂತ್ರಿ ಅಸಹಾಯಕರಾಗಿದ್ದಾರಾ? ಅಥವಾ ದಲಿತರ ಮೇಲಿನ ಕಾಳಜಿ ಮರೆತುಹೋಗಿದೆಯೇ ಎಂದು ಪ್ರಶ್ನಿಸಿದರು.

‘ಯಾವುದೇ ಕಾರಣಕ್ಕೂ ಎಸ್‌ಸಿಎಸ್‌ಪಿ, ಟಿಎಸ್‌ಪಿ ಹಣವನ್ನು ದುರ್ಬಳಕೆ ಮಾಡುವ ದುಸ್ಸಾಹಸಕ್ಕೆ ಕೈ ಹಾಕದಿರಿ. ದಲಿತರ ಕಣ್ಣಲ್ಲಿ ನೀರು ಬಂದರೆ, ಆ ಶಾಪ ಸರ್ಕಾರಕ್ಕೆ ತಟ್ಟದೆ ಬಿಡುವುದಿಲ್ಲ’ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ರಿಪಬ್ಲಿಕ್ ಪಾರ್ಟಿಯ ಎಂ.ವೆಂಕಟಸ್ವಾಮಿ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್. ಮಹೇಶ್, ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್, ಮಾಜಿ ಶಾಸಕ ಸಂಪಂಗಿ, ಮುಖಂಡರಾದ ಹರಿರಾಮ್, ಜಗನ್ನಾಥ್, ಚಿ.ನಾ.ರಾಮು, ಮುನಿಕೃಷ್ಣ, ಸತೀಶ್, ಪಿ.ಮೂರ್ತಿ, ಮುನಿರಾಜು, ರಮೇಶ್, ಮಹೇಶ್ ಭಾಗವಹಿಸಿದ್ದರು.

‘ಹೊಗಳಿದ್ದು ಸಿ.ಎಂ ಸಿಬ್ಬಂದಿ’

ಆಕ್ಸ್‌ಫರ್ಡ್ ವಿ.ವಿ ಶ್ಲಾಘಿಸಿದೆ ಎಂಬುದು ನಾಚಿಕೆಗೇಡು: ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯವೇ ಶ್ಲಾಘಿಸಿದೆ ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿಸಲಾಗಿತ್ತು. ವಾಸ್ತವದಲ್ಲಿ ಅದನ್ನು ಬರೆದ ವ್ಯಕ್ತಿ ಮುಖ್ಯಮಂತ್ರಿ ಸಚಿವಾಲಯದಲ್ಲೇ ನೌಕರರಾಗಿದ್ದರು’ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ವಿಧಾನಸಭೆಯಲ್ಲಿ ಗುರುವಾರ ಆರೋಪಿಸಿದರು.

ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಅವರು ‘ಕರ್ನಾಟಕದ ಮಾದರಿಯನ್ನು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಮಾನವ ಹಕ್ಕುಗಳಿಗೆ ಸಂಬಂಧಿಸಿದ ಬ್ಲಾಗ್‌ನಲ್ಲಿ ಹೊಗಳಿದ್ದಾರೆ ಎಂದು ರಾಜ್ಯಪಾಲರ ಮೂಲಕ ಹೇಳಿಸಲಾಗಿದೆ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಕುಲಪತಿಯೋ, ವಿಭಾಗ ಮುಖ್ಯಸ್ಥರೋ ಅಥವಾ ಪ್ರಾಧ್ಯಾಪಕರೋ ಹೊಗಳಿರಬಹುದು ಎಂದು ಮಾಹಿತಿ ಹುಡುಕಾಡಿದೆ. ಆದರೆ, ಸಿಕ್ಕಿದ್ದು ಮುಖ್ಯಮಂತ್ರಿಯವರ ಮುಖ್ಯ ಸಲಹೆಗಾರರ ಕಚೇರಿಯಲ್ಲಿ ಕೆಲಸ ಮಾಡುತ್ತಿರುವ ವ್ಯಕ್ತಿಯ ಲೇಖನ’ ಎಂದರು.

ವಿಧಾನಸಭೆಯಲ್ಲಿ ಆರ್. ಅಶೋಕ ಮಾತನಾಡಿದರು

‘ಲೇಖನ ಪ್ರಕಟವಾಗಿರುವುದು ಮುಕ್ತ ಬ್ಲಾಗ್‌ನಲ್ಲಿ. ವಕೀಲರು, ಸಮಾಜ ಸುಧಾರಕರು, ಆರೋಗ್ಯ ತಜ್ಞರಿಗೆ ಅಲ್ಲಿ ಬರೆಯಲು ಅವಕಾಶವಿದೆ. 2024ರ ಮಾರ್ಚ್ 27ರಂದು ಗ್ಯಾರಂಟಿ ಯೋಜನೆಗಳನ್ನು ಹೊಗಳುವ ಲೇಖನ ಪ್ರಕಟಿಸಲಾಗಿದೆ. ಆ ದಿನ ಲೇಖಕರು ಮುಖ್ಯಮಂತ್ರಿಯವರ ಮುಖ್ಯ ಸಲಹೆಗಾರರ ಕಚೇರಿಯಲ್ಲೇ ಕೆಲಸ ಮಾಡುತ್ತಿದ್ದರು. 2019ರಲ್ಲಿ ಪ್ರಿಯಾಂಕ್ ಖರ್ಗೆ ಅವರು ಸಮಾಜ ಕಲ್ಯಾಣ ಸಚಿವರಾಗಿದ್ದ ಅವಧಿಯಲ್ಲಿ ಇದೇ ವ್ಯಕ್ತಿ ಅವರ ಕಚೇರಿಯಲ್ಲೂ ಕೆಲಸ ಮಾಡಿದ್ದರು. ಕಾಂಗ್ರೆಸ್ ಮುಖಂಡ ರಾಜೀವ್ ಗೌಡ ಅವರ ಜೊತೆಗೂ ಕೆಲಸ ಮಾಡಿದ್ದರು’ ಎಂದು ದಾಖಲೆಗಳನ್ನು ಪ್ರದರ್ಶಿಸಿದರು.

ಅವರಿಗೆ ದನಿಗೂಡಿಸಿದ ವಿರೋಧ ಪಕ್ಷದ ಉಪ ನಾಯಕ ಅರವಿಂದ ಬೆಲ್ಲದ ಅವರು, ‘ಲೇಖನ ಬರೆದ ವ್ಯಕ್ತಿ ಜಿಯೋಶ್ ಪಾಲ್’ ಎಂದ ಅವರು, ಪಾಲ್ ಭಾವಚಿತ್ರ ಪ್ರದರ್ಶಿಸಿದರು.

‘ಈ ಸರ್ಕಾರದಿಂದ ಸಂಬಳ ಪಡೆಯುವ ವ್ಯಕ್ತಿ ಋಣ ಸಂದಾಯಕ್ಕಾಗಿ ಲೇಖನ ಬರೆದು ಹೊಗಳಿದ್ದಾರೆ. ಅದೇ ಲೇಖನವನ್ನು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ್ದು ಎಂಬಂತೆ ಬಿಂಬಿಸಿಕೊಂಡಿದ್ದಾರೆ. ಇದು ನಾಚಿಕೆಗೇಡಿನ ಸಂಗತಿ’ ಎಂದು ಅಶೋಕ ವಾಗ್ದಾಳಿ ನಡೆಸಿದರು.

‘ಇದು ಹೇಸಿಗೆ ಕೆಲಸ. ಈ ಸರ್ಕಾರಕ್ಕೆ ಕನಿಷ್ಠ ನಾಚಿಕೆಯೂ ಇಲ್ಲವೆ’ ಎಂದು ಬಿಜೆಪಿಯ ಆರಗ ಜ್ಞಾನೇಂದ್ರ ಕೇಳಿದರು.

‘ಸ್ಕ್ರೈಬ್’ ಬಳಕೆ ಪರಿಹಾರವಲ್ಲ: ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ

ಕಲಿಕಾ ಸಾಮರ್ಥ್ಯ ವೃದ್ಧಿಗೆ ತಜ್ಞರ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಧಾನಗತಿಯ ಕಲಿಕಾ ಸಾಮರ್ಥ್ಯ ಹೊಂದಿರುವ ಮಕ್ಕಳ ಜ್ಞಾನದ ಅರಿವಿನ ವಿಸ್ತಾರ ಹಾಗೂ ಪರೀಕ್ಷೆ ಬರೆಯುವ ಸಾಮರ್ಥ್ಯ ಉನ್ನತೀಕರಿಸಲು ತಜ್ಞರ ಜತೆ ಸಮಾಲೋಚಿಸಿ, ಇನ್ನಷ್ಟು ಸುಧಾರಣಾ ಕ್ರಮ ಕೈಗೊಳ್ಳಲಾಗುವುದು ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

‘ನಿಧಾನಗತಿಯ ಕಲಿಕಾ ಸಾಮರ್ಥ್ಯದ ಮಕ್ಕಳು ಇತರ ಮಕ್ಕಳಂತೆ ನಿಗದಿತ ಸಮಯದ ಒಳಗೆ ಪರೀಕ್ಷೆ ಬರೆಯಲು ಸಾಧ್ಯವಾಗದೆ ಅನುತ್ತೀರ್ಣರಾಗುತ್ತಿದ್ದಾರೆ. ಹಾಗಾಗಿ, ಅವರಿಗೆ ಪರೀಕ್ಷೆ ಬರೆಯಲು ಸಹಾಯಕರನ್ನು (ಸ್ಕ್ರೈಬ್) ಬಳಸಿಕೊಳ್ಳುವ ಅವಕಾಶ ನೀಡಬೇಕು’ ಎಂಬ ಬಿಜೆಪಿಯ ಡಾ.ಧನಂಜಯ ಸರ್ಜಿ ಅವರ ಪ್ರಶ್ನೆಗೆ ವಿಧಾನಪರಿಷತ್‌ನಲ್ಲಿ ಉತ್ತರ ನೀಡಿದ ಅವರು, ಅಂತಹ ಮಕ್ಕಳಿಗೆ ಸ್ಕ್ರೈಬ್ ಪರಿಹಾರವಲ್ಲ, ಈ ಕುರಿತು ಹೆಚ್ಚಿನ ಚರ್ಚೆಯ ಅಗತ್ಯವಿದೆ ಎಂದರು.

ವಿಧಾನಸಭೆಯಲ್ಲಿ ಮಧು ಬಂಗಾರಪ್ಪ ಮಾತನಾಡಿದರು

ಮಕ್ಕಳ ಕಲಿಕಾ ಸಾಮರ್ಥ್ಯ ವೃದ್ಧಿಗೆ, ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ ಉನ್ನತೀಕರಣಕ್ಕೆ ಇಲಾಖೆ ಈಗಾಗಲೇ ಸಾಕಷ್ಟು ಕ್ರಮಗಳನ್ನು ಕೈಗೊಂಡಿದೆ. ಕಂಪ್ಯೂಟರ್ ಸೌಲಭ್ಯ ಹೊಂದಿರುವ 5 ಸಾವಿರ ಶಾಲೆಗಳಲ್ಲಿನ ಮಕ್ಕಳಿಗೆ ಕೃತಕ ಬುದ್ಧಿಮತ್ತೆ, ತಂತ್ರಜ್ಞಾನ ಬಳಸಿಕೊಂಡು ಗಣಿತ ಮತ್ತು ವಿಜ್ಞಾನ ವಿಷಯಗಳನ್ನು ಪರಿಣಾಮಕಾರಿಯಾಗಿ ಕಲಿಸಲಾಗುತ್ತಿದೆ. ಅದಕ್ಕಾಗಿ ಶಿಕ್ಷಕರಿಗೆ ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗಿದೆ. ಓದು ಕರ್ನಾಟಕ ಕಾರ್ಯಕ್ರಮದ ಅಡಿ 42 ಸಾವಿರ ಶಿಕ್ಷಕರಿಗೆ ತರಬೇತಿ ನೀಡಲಾಗಿದೆ ಎಂದು ತಿಳಿಸಿದರು.

‘ಕೆಲ ಜಿಲ್ಲೆಗಳಲ್ಲಿ 2024ರಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದ ಶೇ 25ಕ್ಕಿಂತ ಹೆಚ್ಚು ಮಕ್ಕಳು ಅನುತ್ತೀರ್ಣರಾಗಿದ್ದಾರೆ. ಅವರಲ್ಲಿ ಶೇ 5ರಿಂದ 15ರಷ್ಟು ಮಕ್ಕಳು ನಿಧಾನ ಕಲಿಕೆ ಸಾಮರ್ಥ್ಯ ಉಳ್ಳವರು ಎನ್ನುವುದು ಸಮೀಕ್ಷೆಗಳಿಂದ ದೃಢಪಟ್ಟಿದೆ. ಈ ಕುರಿತು ಸಮೀಕ್ಷೆ ನಡೆಸಬೇಕು. ನ್ಯೂನತೆ ಇರುವ ಮಕ್ಕಳ ಕಲಿಕೆ ಮೌಲ್ಯಮಾಪನ ಆಗಬೇಕು. ಅಂಥವರ ಪ್ರತ್ಯೇಕಿಸಿ, ಕಲಿಕೆಗೆ ಒತ್ತು ನೀಡಬೇಕು’ ಎಂದು ಧನಂಜಯ ಸರ್ಜಿ ಸಲಹೆ ನೀಡಿದರು.

‘ವೆನ್‌ಲಾಕ್’ ಇನ್ನು ವಿಭಾಗೀಯ ಆಸ್ಪತ್ರೆ

ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿ, ವಿಭಾಗೀಯ ಆಸ್ಪತ್ರೆಯ ಸ್ಥಾನ ನೀಡಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಕಾಂಗ್ರೆಸ್‌ನ ಐವನ್ ಡಿಸೋಜ ಪ್ರಶ್ನೆಗೆ ಉತ್ತರ ನೀಡಿದ ಅವರು, ಹಲವು ಜಿಲ್ಲೆಗಳಿಂದ ಜನರು ಆಸ್ಪತ್ರೆಗೆ ಬರುತ್ತಾರೆ. ಮೂಲಸೌಕರ್ಯಗಳನ್ನು ವಿಸ್ತರಿಸಲಾಗುವುದು. ಎಂಟು ಜಿಲ್ಲೆಗಳ ಕೇಂದ್ರ ಆಸ್ಪತ್ರೆಯಾಗಿ ಅಭಿವೃದ್ಧಿಪಡಿಸಲಾಗುವುದು ಎಂದರು.

ಪ್ರತಿಮೆ ಸ್ಥಾಪಿಸಿ, ಇಲ್ಲ ರಾಜೀನಾಮೆ

ವಿಧಾನಸೌಧದ ಆವರಣದಲ್ಲಿ ನಿಜಶರಣ ಅಂಬಿಗರ ಚೌಡಯ್ಯ ಪ್ರತಿಮೆ ಸ್ಥಾಪಿಸಬೇಕು. ಸ್ಥಾಪಿಸಲು ಆಗದಿದ್ದರೆ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಅವರು ರಾಜೀನಾಮೆ ನೀಡಬೇಕು ಎಂದು ಕಾಂಗ್ರೆಸ್‌ನ ತಿಪ್ಪಣ್ಣಪ್ಪ ಕಮಕನೂರ ಒತ್ತಾಯಿಸಿದರು.

ಪ್ರತಿಮೆ ಸ್ಥಾಪನೆಗೆ ಹಲವು ಬಾರಿ ಮನವಿ ಮಾಡಿದ್ದೆ. ಸ್ಥಾಪಿಸುವುದಾಗಿ ಸಚಿವರು ಭರವಸೆ ನೀಡಿದ್ದರು. ಈಗ ಹಿಂದೇಟು ಹಾಕುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಅಕ್ಕಮಹಾದೇವಿ ಸೇರಿದಂತೆ ಇತರೆ ಶರಣರ ಪ್ರತಿಮೆಗಳನ್ನೂ ಸ್ಥಾಪಿಸುವಂತೆ ಬಿಜೆಪಿಯ ಎನ್. ರವಿಕುಮಾರ್, ಭಾರತಿ ಶೆಟ್ಟಿ ಸಲಹೆ ನೀಡಿದರು.

ಕೆಪಿಎಸ್‌ಸಿಗೆ ಕಾಯಕಲ್ಪ: ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಆಮೂಲಾಗ್ರ ಸುಧಾರಣೆ ತರಬೇಕು. 384 ಗೆಜೆಟೆಡ್ ಪ್ರೊಬೇಷನರ್ ಹುದ್ದೆಗಳ ನೇಮಕಾತಿಗೆ ನಡೆದ ಪೂರ್ವಭಾವಿ ಮರು ಪರೀಕ್ಷೆಯನ್ನೂ ರದ್ದು ಮಾಡಿ, ಮತ್ತೆ ಪರೀಕ್ಷೆ ನಡೆಸಬೇಕು ಎಂದು ಬಿಜೆಪಿ-ಜೆಡಿಎಸ್ ಸದಸ್ಯರು ಒತ್ತಾಯಿಸಿದರು.

ವಿಧಾನಪರಿಷತ್‌ನಲ್ಲಿ ವಿಷಯ ಪ್ರಸ್ತಾಪಿಸಿದ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಮೊದಲ ಹಾಗೂ ಮರು ಪರೀಕ್ಷೆಯಲ್ಲೂ ಕನ್ನಡ ಭಾಷಾಂತರದಲ್ಲಿ ಹಲವು ತಪ್ಪು ಉಳಿದುಕೊಂಡಿದ್ದವು. ಮೊದಲ ಬಾರಿ 72 ತಪ್ಪುಗಳಾದರೆ, ಎರಡನೇ ಬಾರಿ 59 ಭಾಷಾಂತರ ದೋಷಗಳಾಗಿವೆ. ಇದರಿಂದ ಕನ್ನಡದ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ. ಸರ್ಕಾರದ ಹಣ ಹಾಗೂ ವಿದ್ಯಾರ್ಥಿಗಳ ಸಮಯ ವ್ಯರ್ಥವಾಗಿದೆ. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಕೆಪಿಎಸ್‌ಸಿ ವ್ಯಾಪಾರದ ಅಂಗಡಿಯಾಗಿದೆ. ಹೆಚ್ಚು ಹಣ ಕೊಟ್ಟವರಿಗೆ ಹುದ್ದೆ ಸಿಗುತ್ತವೆ ಎನ್ನುವುದು ಮನೆಮಾತಾಗಿದೆ. ಪ್ರತಿಭಾವಂತರಿಗೆ ಅನ್ಯಾಯವಾಗಿದೆ ಎಂದು ಆರೋಪಿಸಿದರು.

ಒಎಂಆರ್ ಶೀಟ್ ವಿತರಣೆಯಲ್ಲೂ ಲೋಪವಾಗಿದೆ. ಪರೀಕ್ಷಾ ಅಕ್ರಮ ಕುರಿತು ದೂರುಗಳು ಬಂದರೂ, ಕ್ರಮ ಜರುಗಿಸಿಲ್ಲ. ಕನ್ನಡ ಭಾಷಾಂತರದ ಆಕ್ಷೇಪಣೆ ಪರಿಗಣಿಸಿಲ್ಲ
ಎನ್. ರವಿಕುಮಾರ್, ವಿರೋಧ ಪಕ್ಷದ ಮುಖ್ಯ ಸಚೇತಕ

ಕೆಪಿಎಸ್‌ಸಿಯಲ್ಲಿ ತಾಳಿಭಾಗ್ಯ ಸ್ಕೀಂ, ಒಎಂಆರ್ ಶೀಟ್ ಡೀಲಿಂಗ್, ಸಂದರ್ಶನಕ್ಕೆ ಪ್ಯಾಕೇಜ್ ನಿಗದಿಯಾಗುತ್ತದೆ. ಹುದ್ದೆಗಳು ಕೋಟಿ ರೂಪಾಯಿ ಲೆಕ್ಕದಲ್ಲಿ ಮಾರಾಟವಾಗುತ್ತಿವೆ
ಸಿ.ಟಿ. ರವಿ, ಬಿಜೆಪಿ ಸದಸ್ಯ

ಭಾಷಾಂತರ ದೋಷದಿಂದಾಗಿ ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆ ಅನ್ಯಾಯವಾಗಿದೆ. ಇಂಗ್ಲಿಷ್ ಮಾಧ್ಯಮದವರೇ ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗಿದ್ದಾರೆ
ಟಿ.ಎ. ಶರವಣ, ಜೆಡಿಎಸ್ ಸದಸ್ಯ

ಪರಿಷತ್ತಿನಲ್ಲಿ ಸಚಿವ ಜಮೀರ್ ಅಹ್ಮದ್ ಖಾನ್, ಬಿಜೆಪಿಯ ಸಿ. ಟಿ. ರವಿ, ಎಂಟಿಬಿ ನಾಗರಾಜ್ ಲೋಕಾಭಿರಾಮವಾಗಿ ಚರ್ಚಿಸಿದರು –ಪ್ರಜಾವಾಣಿ ಚಿತ್ರ

ಮೈಕ್ರೊ ಫೈನಾನ್ಸ್ ಕಂಪನಿಗಳ ನಿಯಂತ್ರಣ ಮಸೂದೆ ಮಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಕ್ರೊ ಫೈನಾನ್ಸ್ ಕಂಪನಿಗಳ ಚಟುವಟಿಕೆಗಳನ್ನು ನಿಯಂತ್ರಿಸುವುದಕ್ಕಾಗಿ ರೂಪಿಸಿರುವ ‘ಕರ್ನಾಟಕ ಕಿರು (ಮೈಕ್ರೊ) ಸಾಲ ಮತ್ತು ಸಣ್ಣ ಸಾಲ (ಬಲವಂತದ ಕ್ರಮಗಳ ಪ್ರತಿಬಂಧಕ) ಮಸೂದೆ- 2025’ ಅನ್ನು ವಿಧಾನಸಭೆಯಲ್ಲಿ ಗುರುವಾರ ಮಂಡಿಸಲಾಯಿತು.

ಮೈಕ್ರೊ ಫೈನಾನ್ಸ್ ಕಂಪನಿಗಳು ಸಾಲ ವಸೂಲಿಯಲ್ಲಿ ದೌರ್ಜನ್ಯ ನಡೆಸುವುದು, ಗೂಂಡಾಗಳನ್ನು ಬಳಸುವುದನ್ನು ನಿಯಂತ್ರಿಸುವ ಉದ್ದೇಶದಿಂದ ರೂಪಿಸಿರುವ ಮಸೂದೆಯನ್ನು ಸುಗ್ರೀವಾಜ್ಞೆ ರೂಪದಲ್ಲಿ ಫೆಬ್ರುವರಿ 12ರಂದು ಜಾರಿಗೊಳಿಸಲಾಗಿತ್ತು.

ದ್ವೇಷದಿಂದ ಈ ಮಸೂದೆ: ಬಿಜೆಪಿ–ಜೆಡಿಎಸ್ ಸದಸ್ಯರ ವಿರೋಧ, ಸಭಾತ್ಯಾಗ

ಅರಮನೆ ಮೈದಾನ ಸ್ವಾಧೀನ ಮಸೂದೆ ಅಂಗೀಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅರಮನೆ ಮೈದಾನ ಪ್ರದೇಶದ ಬಳಕೆ ಮತ್ತು ನಿಯಂತ್ರಣ ಅಧಿಕಾರವನ್ನು ರಾಜ್ಯ ಸರ್ಕಾರದ ಬಳಿಯೇ ಇಟ್ಟುಕೊಳ್ಳುವ ಉದ್ದೇಶದ ‘ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) ಮಸೂದೆ 2025’ ಕ್ಕೆ ಪ್ರತಿಪಕ್ಷಗಳ ವಿರೋಧ ಮತ್ತು ಸಭಾತ್ಯಾಗದ ಮಧ್ಯೆ ವಿಧಾನಸಭೆಯಲ್ಲಿ ಅಂಗೀಕಾರ ಪಡೆಯಿತು.

ಸುಗ್ರೀವಾಜ್ಞೆ ರೂಪದಲ್ಲಿದ್ದ ಮಸೂದೆಗೆ ಕೆಲ ಸಣ್ಣ ತಿದ್ದುಪಡಿಗಳೊಂದಿಗೆ ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ವಿಧಾನಸಭೆಯಲ್ಲಿ ಮಂಡಿಸಿದರು.

ಬೆಂಗಳೂರು ಅರಮನೆಯ ಪ್ರದೇಶಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಯಾವುದೇ ಆದೇಶ ಅಥವಾ ತೀರ್ಪಿಗೆ ಅನುಸಾರ ಈಗಾಗಲೇ ನಷ್ಟ ಪರಿಹಾರ ಪಾವತಿಸಿದ್ದರೆ, ಸರ್ಕಾರದ ಕ್ರಮ ರಕ್ಷಿತವಾಗುವುದು. ಅಂದರೆ, 1996ರಲ್ಲಿ ಅರಮನೆ ಮೈದಾನವನ್ನು ಸ್ವಾದೀನಕ್ಕೆ ತೆಗೆದುಕೊಂಡಾಗ ಪರಿಹಾರವಾಗಿ ಸರ್ಕಾರ ರಾಜಮನೆತನಕ್ಕೆ ₹11 ಕೋಟಿ ನೀಡಿತ್ತು. ಆ ಕ್ರಮವನ್ನು ರಕ್ಷಿಸುವುದು ತಿದ್ದುಪಡಿಯ ಉದ್ದೇಶ ಎಂದು ಪಾಟೀಲ ವಿವರಿಸಿದರು.

ಅರಮನೆ ಮೈದಾನದ ಸಂಗ್ರಹ ಚಿತ್ರ

ಅಲ್ಲದೇ, ಈ ಅಧಿನಿಯಮವು ಜಾರಿಗೆ ಬರುವುದಕ್ಕೆ ಮೊದಲು ಮತ್ತು ನ್ಯಾಯಾಲಯದ ತೀರ್ಪು ಅಥವಾ ಆದೇಶಕ್ಕೆ ಅನುಗುಣವಾಗಿ ಸರ್ಕಾರದ ತೀರ್ಮಾನದ ಪ್ರಕಾರ ನಷ್ಟ ಪರಿಹಾರ ಪಾವತಿಸಿದ್ದರೆ, ಮತ್ತೊಮ್ಮೆ ನಷ್ಟ ಪರಿಹಾರ ಪಾವತಿಸುವ ಅಗತ್ಯವಿಲ್ಲ. ಅಂದರೆ, ಈಗಾಗಲೇ ₹11 ಕೋಟಿ ಪರಿಹಾರ ಎಂದು ನಿಗದಿ ಮಾಡಿದ್ದರಿಂದ ಮತ್ತೆ ಪರಿಹಾರ ಮೊತ್ತ ಪರಿಷ್ಕರಣೆ ಮಾಡುವುದರಿಂದ ರಕ್ಷಣೆ ಪಡೆಯಲು ಈ ತಿದ್ದುಪಡಿ ಎಂದರು.

ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ಮಾತನಾಡಿ, ‘ರಾಜಮನೆತದವರು ಬಿಜೆಪಿ ಸಂಸದರಾದರು ಎಂಬ ಕಾರಣಕ್ಕೆ ದ್ವೇಷದಿಂದ ಈ ಮಸೂದೆ ತರಲಾಗಿದೆ. ಮೈಸೂರು ರಾಜಮನೆತನ ಕರ್ನಾಟಕಕ್ಕೆ ನೀಡಿದ ಕೊಡುಗೆಯನ್ನೂ ಯಾರೂ ಮರೆಯುವಂತಿಲ್ಲ. ನಿಮಗೇಕೆ ಬೆಂಗಳೂರು ಅರಮನೆ ಮೇಲೆ ಕಣ್ಣು’ ಎಂದು ಪ್ರಶ್ನಿಸಿದರು.

ಡಾ.ಸಿ.ಎನ್.ಅಶ್ವತ್ಥನಾರಾಯಣ ಮಾತನಾಡಿ, ಅರಮನೆ ಮಾಲೀಕತ್ವದ ವಿಷಯ ಇತ್ಯರ್ಥವಾಗದೇ ಈ ಮಸೂದೆ ಮಂಡಿಸುವುದರಲ್ಲಿ ಅರ್ಥವಿಲ್ಲ. ಸುಪ್ರೀಂಕೋರ್ಟ್ ತೀರ್ಪಿನಂತೆ ಟಿಡಿಆರ್ ಪಾವತಿ ಮಾಡಿ ಎಂದು ಹೇಳಿದರು.

ಇದಕ್ಕೆ ಬಿಜೆಪಿಯ ಬಿ.ವೈ. ವಿಜಯೇಂದ್ರ, ಬೈರತಿ ಬಸವರಾಜ, ಆರಗಜ್ಞಾನೇಂದ್ರ ಧ್ವನಿಗೂಡಿಸಿದರು. ಮಸೂದೆಯನ್ನು ಮತಕ್ಕೆ ಹಾಕುವುದಾಗಿ ಸಭಾಧ್ಯಕ್ಷ ಯು.ಟಿ.ಖಾದರ್ ಹೇಳಿದಾಗ, ಸರ್ಕಾರ ಮಸೂದೆ ಹಿಂಪಡೆಯಬೇಕು ಎಂದು ಒತ್ತಾಯಿಸಿ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಸಭಾತ್ಯಾಗ ಮಾಡಿದರು.

‘ಎಂಎಸ್‌ಐಎಲ್ ಪರವಾನಗಿ ಹರಾಜು ಇಲ್ಲ’

ರಾಜ್ಯದಲ್ಲಿ 136 ಸಿಎಲ್–2, 105 ಸಿಎಲ್–9, 56 ಸಿಎಲ್–11(ಸಿ) ಪರವಾನಗಿಗಳು ಸ್ಥಗಿತವಾಗಿದ್ದು, 244 ಪರವಾನಗಿಗಳಿಗೆ ಮಂಜೂರಾತಿ ನೀಡುವುದು ಬಾಕಿ ಇರುತ್ತದೆ. ಆದರೆ ಅವುಗಳನ್ನು ಹರಾಜು ಹಾಕುವಂತಹ ಯಾವುದೇ ಪ್ರಸ್ತಾವನೆ ರಾಜ್ಯ ಸರ್ಕಾರದ ಮುಂದೆ ಇಲ್ಲ. ಸ್ಥಗಿತಗೊಂಡಿರುವ ಪರವಾನಗಿಗಳನ್ನು ಬಳಸಿಕೊಳ್ಳುವ ಸಂಬಂಧ ಪರ್ಯಾಯ ಮಾರ್ಗಗಳನ್ನು ಪರಿಶೀಲಿಸಲಾಗುತ್ತಿದೆ.

ಬಿಜೆಪಿಯ ಸುನೀಲ್ ವಲ್ಯಾಪುರೆ ಪ್ರಶ್ನೆಗೆ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಉತ್ತರ

ಎರಡು ಕ್ಷೇತ್ರಕ್ಕಷ್ಟೇ ‘ಪ್ರಸಾದ್’ ಅನುದಾನ

ಕೇಂದ್ರ ಪ್ರವಾಸೋದ್ಯಮ ಸಚಿವಾಲಯದ ‘ಪ್ರಸಾದ್’ ಯೋಜನೆ ಅಡಿಯಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಏಳು ಧಾರ್ಮಿಕ ಕ್ಷೇತ್ರಗಳ ಅಭಿವೃದ್ಧಿಗೆ ಸಲ್ಲಿಸಿದ ಪ್ರಸ್ತಾವನೆಗಳಿಗೆ ಕೇಂದ್ರವು ಅನುಮೋದನೆ ನೀಡಿಲ್ಲ. ರಾಜ್ಯದ ಇತರ ಜಿಲ್ಲೆಗಳಲ್ಲಿನ ಧಾರ್ಮಿಕ ಕ್ಷೇತ್ರಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಲ್ಲಿಸಿದ್ದ 16 ಪ್ರಸ್ತಾವನೆಗಳಲ್ಲಿ ಸವದತ್ತಿ ಎಲ್ಲಮ್ಮ ದೇವಸ್ಥಾನದ ಅಭಿವೃದ್ಧಿಗೆ ₹18.37 ಕೋಟಿ ಮತ್ತು ಬೀದರ್‌ನ ಪಾಪನಾಶ ದೇವಾಲಯದ ಅಭಿವೃದ್ಧಿಗೆ ₹22.41 ಕೋಟಿಯ ಅನುಮೋದನೆ ದೊರೆತಿದೆ.

ಬಿಜೆಪಿಯ ಕಿಶೋರ್ ಕುಮಾರ್ ಪ್ರಶ್ನೆಗೆ ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ ಉತ್ತರ

ಪರಿಷತ್ತಿನ ಪ್ರಶ್ನೋತ್ತರ

ವ್ಹೀಲಿಂಗ್ ವಿರುದ್ಧ ಕ್ರಮ

ವರ್ಷ	ಬೆಂಗಳೂರು		ರಾಜ್ಯದ ಇತರೆಡೆ	
ವಿವರ	ಪ್ರಕರಣ	ಬಂಧಿತರು	ಪ್ರಕರಣ	ಬಂಧಿತರು
2023	242	207	136	128
2024	532	479	266	179
2025 (ಫೆ.28)	114	102	47	30

ಜೆಡಿಎಸ್‌ನ ಬೋಜೇಗೌಡ ಪ್ರಶ್ನೆಗೆ ಗೃಹ ಸಚಿವ ಜಿ.ಪರಮೇಶ್ವರ ನೀಡಿದ ಮಾಹಿತಿ

ನುಗ್ಗೆಮರ ಹತ್ತಿಸಬೇಡಿ- ಪರಮೇಶ್ವರ

ಜೆಡಿಎಸ್‌ನ ಬೋಜೇಗೌಡ ವಿಧಾನ ಪರಿಷತ್ತಿನಲ್ಲಿ ಪ್ರಶ್ನೋತ್ತರದ ವೇಳೆ, ‘ಮುಂದೆ ಮುಖ್ಯಮಂತ್ರಿ ಆಗಲಿರುವ ನಮ್ಮ ಇಂದಿನ ಗೃಹ ಸಚಿವರು ವಿವರವಾದ ಉತ್ತರ ನೀಡಿದ್ದಾರೆ’ ಎಂದು ಕಾಲೆಳೆದರು.

ತಕ್ಷಣವೇ ಎದ್ದು ನಿಂತ ಜಿ.ಪರಮೇಶ್ವರ, ‘ನಮ್ಮ ಕಡೆ ನುಗ್ಗೆಮರ ಹತ್ತಿಸುವುದು ಎಂಬ ನಾಣ್ನುಡಿ ಇದೆ. ನೀವು ಹೇಳಿದ್ದು ಹಾಗೇ ಇದೆ. ನನ್ನನ್ನು ನುಗ್ಗೆಮರ ಹತ್ತಿಸಬೇಡಿ’ ಎಂದರು.

ಬೋಜೇಗೌಡ, ‘ನಿಮಗೆ ಆ ಸಾಮರ್ಥ್ಯವಿದೆ. ನಾವು ನಿಮ್ಮನ್ನು ನುಗ್ಗೆ ಮರಕ್ಕೆ ಹತ್ತಿಸುವುದಿಲ್ಲ, ಗಟ್ಟಿಯಾದ ಬೇರೆ ಮರ ಹತ್ತಿಸುತ್ತೇನೆ’ ಎಂದರು.

ಬಿಜೆಪಿ ಮತ್ತು ಕಾಂಗ್ರೆಸ್ ಸದಸ್ಯರ ಮಧ್ಯೆ ಭಾರಿ ವಾಗ್ವಾದ

ಗದ್ದಲಕ್ಕೆ ಕಾರಣವಾದ ‘ನಟ್ಟು –ಬೋಲ್ಟು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಲನಚಿತ್ರ ಕಲಾವಿದರ ನಟ್ಟು- ಬೋಲ್ಟು ಟೈಟ್ ಮಾಡಬೇಕು ಎಂಬ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಹೇಳಿಕೆ ವಿಧಾನಸಭೆಯಲ್ಲಿ ಗುರುವಾರ ಬಿಜೆಪಿ ಮತ್ತು ಕಾಂಗ್ರೆಸ್ ಸದಸ್ಯರ ಮಧ್ಯೆ ಭಾರಿ ವಾಗ್ವಾದಕ್ಕೆ ಕಾರಣವಾಯಿತು.

ವಿರೋಧಪಕ್ಷದ ನಾಯಕ ಆರ್. ಅಶೋಕ ಅವರು ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಮಾತನಾಡುವಾಗ, ‘ಡಿ.ಕೆ.ಶಿವಕುಮಾರ್ ಅವರು ಕಲಾವಿದರಿಗೆ ಬೆದರಿಕೆ ಹಾಕುವುದನ್ನು ಬಿಡಬೇಕು. ಮೊದಲಿಗೆ ಸರ್ಕಾರದ ನಟ್ಟು ಬೋಲ್ಟ್ ಟೈಟ್ ಮಾಡಲಿ’ ಎಂದು ಹೇಳಿದರು

‘ಬಿಜೆಪಿ ಸರ್ಕಾರದ ಅವಧಿಯಲ್ಲಿ ಚಲನಚಿತ್ರೋತ್ಸವ ಮಾಡಿದಾಗಲೂ ಕಲಾವಿದರು ಬಂದಿರಲಿಲ್ಲ. ಈ ಬಾರಿ ಹಲವು ಕಲಾವಿದರಿಗೆ ಆಹ್ವಾನ ಪತ್ರಿಕೆಯನ್ನೇ ನೀಡಿಲ್ಲ. ಕಾಂಗ್ರೆಸ್ ಪಕ್ಷದ ಬಾವುಟ, ಚಿಹ್ನೆ ಇಟ್ಟುಕೊಂಡು ಮೇಕೆದಾಟು ಪಾದಯಾತ್ರೆ ಮಾಡಲಾಗಿತ್ತು. ಇದರಲ್ಲಿ ರಾಜಕೀಯ ಉದ್ದೇಶ ಇದ್ದ ಕಾರಣ ಕಲಾವಿದರು ಭಾಗವಹಿಸಿರಲಿಲ್ಲ. ನಿಮ್ಮ ಹೃದಯ ಒಳ್ಳೆಯದಿರಬಹುದು. ಆದರೆ ಇಂತಹ ಭಾಷೆ ಬಳಸುವುದು ಸರಿಯಲ್ಲ’ ಎಂದು ಹೇಳಿದರು.

ಇದಕ್ಕೆ ಕಾಂಗ್ರೆಸ್‌ನ ರವಿಕುಮಾರ್ ಗಣಿಗ ಆಕ್ಷೇಪ ವ್ಯಕ್ತಪಡಿಸಿ, ‘ಶಿವಕುಮಾರ್ ಹೇಳಿದ್ದು ಸರಿಯಾಗಿದೆ ಇದೆ. ಚಲನಚಿತ್ರ ಕಲಾವಿದರು ಕನ್ನಡದ ಕಾರ್ಯಕ್ರಮಗಳು, ನೆಲ–ಜಲದ ವಿಚಾರದ ಹೋರಾಟಗಳಲ್ಲಿ ಭಾಗವಹಿಸುವುದಿಲ್ಲ. ಅಂತಹವರಿಗೆ ನಟ್ಟು ಬೋಲ್ಟು ಟೈಟ್ ಮಾಡಿದರೆ ತಪ್ಪೇನು’ ಎಂದು ಪ್ರಶ್ನಿಸಿದರು.

ಬಿಜೆಪಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಮಧ್ಯಪ್ರವೇಶಿಸಿ, ‘ಹೆದರಿಕೆ– ಬೆದರಿಕೆ ಹಾಕುವುದು ಈ ಸರ್ಕಾರದ ನಡವಳಿಕೆ ಎಂಬುದು ಇದರಿಂದ ಗೊತ್ತಾಗುತ್ತದೆ. ಯಾವುದೇ ನಟ ಒಂದು ಕರೆ ಕೊಟ್ಟರೆ ಸಾವಿರಾರು ಜನ ಬೀದಿಗೆ ಬರುತ್ತಾರೆ, ಕಲಾವಿದರನ್ನು ಕೆಣಕಲು ಹೋಗಬೇಡಿ. ನಿಮ್ಮ ಅಣತಿಗೆ ತಕ್ಕಂತೆ ಕುಣಿಯಬೇಕು ಎಂಬ ನಿರೀಕ್ಷೆ ಸರಿಯಲ್ಲ’ ಎಂದು ಕಿಡಿಕಾರಿದರು

ಆಗ ಕಾಂಗ್ರೆಸ್‌ನ ನರೇಂದ್ರಸ್ವಾಮಿ, ‘ಬಿಜೆಪಿಯವರು ಕನ್ನಡ ವಿರೋಧಿಗಳು’ ಎಂದರು. ಆಗ ಉಳಿದ ಕಾಂಗ್ರೆಸ್‌ನ ಸದಸ್ಯರು ಧ್ವನಿಗೂಡಿಸಿ, ‘ಕನ್ನಡಿಗರ ವಿರೋಧಿ ಬಿಜೆಪಿಗೆ ಧಿಕ್ಕಾರ’ ಎಂದು ಘೋಷಣೆ ಕೂಗಿದರು.

ಈ ವಾಗ್ವಾದ ಆಲಿಸಿದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಒಂದು ಹಂತದಲ್ಲಿ ಅಶ್ವತ್ಥನಾರಾಯಣ ವಿರುದ್ಧ, ‘ನೀನು ರಾಮನಗರದಲ್ಲಿ ನನ್ನ ಬಗ್ಗೆ ಏನು ಹೇಳಿದ್ದೆ ಎಂದು ನೆನಪಿದೆಯಾ? ಎಂದು ಗರಂ ಆಗಿ ಪ್ರಶ್ನಿಸಿದರು.

‘ಏನು ಹೇಳಿದ್ದೆ? ದಮ್ಮು–ತಾಕತ್ತು ಇದ್ರೆ ರಾಮನಗರ ಜಿಲ್ಲೆ ಅಭಿವೃದ್ಧಿ ಮಾಡಿ ತೋರಿಸಿ ಎಂದು ಹೇಳಿದ್ದೆ. ನಿಮಗಿಂತ ಹೆಚ್ಚು ಅಭಿವೃದ್ಧಿ ಮಾಡಿ ತೋರಿಸಿದ್ದೇನೆ’ ಎಂದು ಅಶ್ವತ್ಥನಾರಾಯಣ ತಿರುಗೇಟು ನೀಡಿದರು.

ಸಮಾನ ವೇತನಕ್ಕೆ ಸಾರಿಗೆ ನೌಕರರ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ನೌಕರರಿಗೆ ನೀಡುವ ಸರಿಸಮಾನ ವೇತನವನ್ನು ಸಾರಿಗೆ ನೌಕರರಿಗೂ ನೀಡಬೇಕು ಎಂಬುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆಯ ನಾಲ್ಕು ನಿಗಮಗಳ ಸಂಘಟನೆಗಳ ಒಕ್ಕೂಟ ಆಗ್ರಹಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟದ ರಾಜ್ಯ ಘಟಕದ ಅಧ್ಯಕ್ಷ ಆರ್. ಚಂದ್ರಶೇಖರ್, 'ರಾಜ್ಯ ಸರ್ಕಾರಿ ನೌಕರರಿಗೆ ನೀಡುತ್ತಿರುವ ವೇತನ ಆಯೋಗದ ಮಾದರಿಯಲ್ಲೇ 2024ರ ಜನವರಿ 1ರಿಂದ ಅನ್ವಯವಾಗುವಂತೆ ಸಾರಿಗೆ ನೌಕರರಿಗೆ ವೇತನ ನೀಡಬೇಕು' ಎಂದು ಆಗ್ರಹಿಸಿದರು.

'ಸಾರಿಗೆ ನೌಕರರಿಗೆ 2020ರ ಜನವರಿ 1ರಿಂದ ಅನ್ವಯವಾಗುವಂತೆ ವೇತನ ಪರಿಷ್ಕರಣೆ ಮಾಡಲಾಗಿದ್ದು, ಇದರ ಅನ್ವಯ 38 ತಿಂಗಳ ಹಿಂಬಾಕಿಯನ್ನು ಕೂಡಲೇ ಪಾವತಿಸಬೇಕು' ಎಂದು ಒತ್ತಾಯಿಸಿದರು.

'ಸಾರಿಗೆ ನೌಕರರ ಸಂಘ–ಸಂಸ್ಥೆಗಳ ಚುನಾವಣೆ ನಡೆಸಬೇಕು. 2021ರ ಸಾರಿಗೆ ಮುಷ್ಕರದ ವೇಳೆ ನೌಕರರನ್ನು ವಜಾ ಮಾಡಿರುವುದನ್ನು ರದ್ದುಗೊಳಿಸಿ, ಅವರನ್ನು ಸೌಹಾರ್ದದಿಂದ ನಡೆಸಿಕೊಳ್ಳಬೇಕು. ಕಾಂಗ್ರೆಸ್ ಪಕ್ಷದ ಚುನಾವಣೆ ಪ್ರಣಾಳಿಕೆಯಲ್ಲಿ ಸರ್ಕಾರಿ ನೌಕರರಿಗೆ ನೀಡುವ ವೇತನ ಸೌಲಭ್ಯಗಳನ್ನು ಸಾರಿಗೆ ನೌಕರರಿಗೆ ಕೊಡುವುದಾಗಿ ನೀಡಿದ್ದ ಭರವಸೆ ಈಡೇರಿಸಬೇಕು' ಎಂದರು.

'ಬಜೆಟ್ ಅಧಿವೇಶನ ಮುಗಿಯುವುದರೊಳಗೆ ನಮ್ಮ ಬೇಡಿಕೆಗಳನ್ನು ಈಡೇರಿಸಬೇಕು. ಇಲ್ಲದಿದ್ದರೆ ಮಾರ್ಚ್ 25ರಂದು ಒಕ್ಕೂಟದ ನೇತೃತ್ವದಲ್ಲಿ ನಡೆಯುವ ಸಭೆಯಲ್ಲಿ ಮುಂದಿನ ಹೋರಾಟದ ಕುರಿತು ಚರ್ಚಿಸಿ, ನಿರ್ಧರಿಸಲಾಗುತ್ತದೆ' ಎಂದು ತಿಳಿಸಿದರು.

'ಸುರಂಗ ರಸ್ತೆ': ಸಾರ್ವಜನಿಕರೊಂದಿಗೆ ಸಮಾಲೋಚನೆ ನಡೆಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಬಿಎಂಪಿ ನಿರ್ಮಿಸಲು ಉದ್ದೇಶಿಸಿರುವ 'ಸುರಂಗ ರಸ್ತೆ' ಯೋಜನೆಯ ವಿಸ್ತೃತ ಯೋಜನಾ ವರದಿ (ಡಿಪಿಆರ್) ಅನ್ನು ನಾಗರಿಕರ ಮುಂದಿಟ್ಟು, ಸಮಾಲೋಚನೆ ನಡೆಸಬೇಕು' ಎಂದು ಬೆಂಗಳೂರು ನಾಗರಿಕರ ವೇದಿಕೆ ಆಗ್ರಹಿಸಿದೆ.

ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಪತ್ರ ಬರೆದಿರುವ ವೇದಿಕೆಯವರು, 'ಕೇಂದ್ರ ಹಣಕಾಸು ಸಚಿವರಿಗೆ ಬರೆದಿರುವ ಪತ್ರದಲ್ಲಿ ಉಪಮುಖ್ಯಮಂತ್ರಿಯವರು ಕರಡು ಡಿಪಿಆರ್ ಅನ್ನು ನಾಗರಿಕರ ಮುಂದಿಟ್ಟು ಸಮಾಲೋಚಿಸಲಾಗುವುದು ಎಂದಿದ್ದಾರೆ. ಇಂತಹ ದೊಡ್ಡ ಯೋಜನೆಯನ್ನು ರಾಜ್ಯ ಸರ್ಕಾರ ಅಥವಾ ಬಿಬಿಎಂಪಿ ಯೋಜಿಸುವಂತಿಲ್ಲ. ಸಂವಿಧಾನದ 74ನೇ ತಿದ್ದುಪಡಿ ಪ್ರಕಾರ, ಯೋಜನಾ ಪ್ರಾಧಿಕಾರದಿಂದ ಯೋಜನೆಯ ರೂಪುರೇಷೆ ನಿರ್ಧರಿಸಬೇಕಿದೆ' ಎಂದಿದ್ದಾರೆ.

'ಅಂತಿಮ ಕಾರ್ಯಸಾಧ್ಯತಾ ವರದಿ ಮತ್ತು ಅಂತಿಮ ಡಿಪಿಆರ್ ಅನ್ನು ಬಿಬಿಎಂಪಿ ಪರಿಗಣಿಸುವ ಮುನ್ನ, ಇವೆಲ್ಲ ಸಾರ್ವಜನಿಕವಾಗಿ 15 ದಿನಕ್ಕೂ ಮೊದಲೇ ಲಭ್ಯವಾಗುವಂತೆ ಮಾಡಬೇಕು' ಎಂದು ಆಗ್ರಹಿಸಿದ್ದಾರೆ.

ಸಿಟಿಜನ್ಸ್ ಆಕ್ಷನ್ ಫೋರಂ, ಝುಟಕಾ.ಒಆರ್‌ಜಿ, ಸಿವಿಕ್–ಬೆಂಗಳೂರು, ನಮ್ಮ ಬೆಂಗಳೂರು ಪ್ರತಿಷ್ಠಾನ, ಬೆಂಗಳೂರು ನವ ನಿರ್ಮಾಣ ಪಾರ್ಟಿ, ಸಿಟಿಜನ್ಸ್ ಫಾರ್ ಸಿಟಿಜನ್ಸ್, ಐ ಚೇಂಜ್ ಇಂದಿರಾನಗರ, ಬಿಯೊಮಿ ಎನ್ವಿರಾನ್‌ಮೆಂಟಲ್ ಟ್ರಸ್ಟ್, ಬೆಂಗಳೂರು ಎನ್ವಿರಾನ್‌ಮೆಂಟ್ ಟ್ರಸ್ಟ್, ಬೆಂಗಳೂರು ಅಪಾರ್ಟ್‌ಮೆಂಟ್ಸ್ ಫೆಡರೇಷನ್‌ನ ಪ್ರತಿನಿಧಿಗಳು ಪತ್ರಕ್ಕೆ ಸಹಿ ಹಾಕಿದ್ದಾರೆ.

'ಗ್ಲಾಕೋಮಾ ಸೈಟ್ ಸೇವರ್ ರನ್' 9ಕ್ಕೆ

ಬೆಂಗಳೂರು: ನಾರಾಯಣ ನೇತ್ರಾಲಯದದಿಂದ ಮಾರ್ಚ್ 9ರಂದು ಗ್ಲಾಕೋಮಾ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ರಾಮಗೊಂಡನಹಳ್ಳಿಯ ಜಾರಕಬಂಡೆ ಮೀಸಲು ಅರಣ್ಯದಲ್ಲಿ 'ಗ್ಲಾಕೋಮಾ ಸೈಟ್ ಸೇವರ್ ರನ್' ಆಯೋಜಿಸಲಾಗಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನಾರಾಯಣ ನೇತ್ರಾಲಯದ ಉಪಾಧ್ಯಕ್ಷ ಡಾ. ನರೇನ್ ಶೆಟ್ಟಿ, 'ಸೈಟ್ ಸೇವರ್ ರನ್ ಮೂಲಕ ಆರಂಭಿಕ ಗ್ಲಾಕೋಮಾ ಪತ್ತೆ, ನಿಯಮಿತ ಕಣ್ಣಿನ ಸಂಪೂರ್ಣ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲಾಗುತ್ತದೆ. 5 ಕಿ.ಮೀ ಹಾಗೂ 10 ಕಿ.ಮೀ ಓಟದಲ್ಲಿ ಆಸಕ್ತರು ಪಾಲ್ಗೊಳ್ಳಬಹುದು. ನಾರಾಯಣ ನೇತ್ರಾಲಯದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಕ್ಯಾಪ್ಟನ್ ಎಸ್.ಕೆ. ಮಿತ್ತಲ್ ಹಾಗೂ ಅಂತರರಾಷ್ಟ್ರೀಯ ಓಟಗಾರ ಅರ್ಜುನ್ ದೇವಯ್ಯ ಅವರು ಓಟಕ್ಕೆ ಚಾಲನೆ ನೀಡಲಿದ್ದಾರೆ ಎಂದು ತಿಳಿಸಿದರು.

ಗ್ಲಾಕೋಮಾ ವಿಭಾಗದ ಮುಖ್ಯಸ್ಥರಾದ ಡಾ. ಸತಿದೇವಿ ಮಾತನಾಡಿ, 'ಈ ವರ್ಷ 'ಭವಿಷ್ಯವನ್ನು ಸ್ಪಷ್ಟವಾಗಿ ನೋಡಿ' ಶೀರ್ಷಿಕೆ ಅಡಿಯಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಗ್ಲಾಕೋಮಾ ತಡೆಯಲು ಅಥವಾ ಸಂಪೂರ್ಣ ಗುಣಪಡಿಸಲು ಸಾಧ್ಯವಿಲ್ಲ. ಆದರೆ ಮುಂಜಾಗ್ರತೆಯಿಂದ ದೃಷ್ಟಿ ಹಾನಿ ತಪ್ಪಿಸಬಹುದು' ಎಂದರು.

+ನಿಯಮ ಮತ್ತು ಷರತ್ತುಗಳು ಅನ್ವಯಿಸುತ್ತವೆ. #Honda ಟೂ ವೀಲರ್ ವಾಹನದ ಯಾವುದೇ ಮಾದರಿಯ ಖರೀದಿಗೆ ಕ್ಯಾಶ್‌ಬ್ಯಾಕ್ ಆಫರ್‌ನಲ್ಲಿ HDFC ಬ್ಯಾಂಕ್ ಕ್ರೆಡಿಟ್ ಕಾರ್ಡ್ ಮತ್ತು IDFC FIRST ಬ್ಯಾಂಕ್ ಕ್ರೆಡಿಟ್ ಕಾರ್ಡ್ ಬಳಸಿ ಪೈನ್ ಲ್ಯಾಬ್ಸ್ ಯಂತ್ರಗಳ ಮೂಲಕ ಮಾತ್ರ EMI ವಹಿವಾಟುಗಳ ಮೇಲೆ ಗರಿಷ್ಠ ₹5000 ವರೆಗಿನ 5% ಕ್ಯಾಶ್‌ಬ್ಯಾಕ್ ಸೇರಿದೆ. #ಈ ಯೋಜನೆ ಆಯ್ದ ಮಳಿಗೆಗಳಲ್ಲಿ ಮಾತ್ರ ಲಭ್ಯವಿದೆ. #ಕ್ಯಾಶ್‌ಬ್ಯಾಕ್ ಆಫರ್ ಮಾರ್ಚ್ 31, 2025 ರವರೆಗೆ ಮಾತ್ರ ಮಾನ್ಯವಾಗಿರುತ್ತದೆ. **ಹಣಕಾಸು ಯೋಜನೆಯು ಹಣಕಾಸುದಾರರ ನಿಯಮ ಮತ್ತು ಷರತ್ತುಗಳಿಗೆ ಒಳಪಟ್ಟು ಏಕಪಕ್ಷೀಯ ವಿವೇಚನೆಗೆ ಒಳಪಟ್ಟಿರುತ್ತದೆ. **ಪೂರ್ವ ಸೂಚನೆ ಇಲ್ಲದೆ ಆಫರ್‌ಗಳನ್ನು ಬದಲಾಯಿಸಬಹುದು ಅಥವಾ ಹಿಂಪಡೆಯಬಹುದು. *ಸಾಲದ ಅನುಮೋದನೆಯು ಹಣಕಾಸುದಾರರ ಏಕಪಕ್ಷೀಯ ವಿವೇಚನೆಗೆ ಒಳಪಟ್ಟಿರುತ್ತದೆ ಮತ್ತು ಹೆಚ್ಚುವರಿ ದಾಖಲೆಗಳು ಬೇಕಾಗಬಹುದು. *ಬಡ್ಡಿ ದರಗಳು, ಡೌನ್ ಪೇಮೆಂಟ್‌ಗಳು ಮತ್ತು ಅವಧಿಯು ಅರ್ಜಿದಾರರ ಕ್ರೆಡಿಟ್ ಪ್ರೊಫೈಲ್ ಅನ್ನು ಅವಲಂಬಿಸಿರುತ್ತದೆ. *ಗ್ರಾಹಕರು ಕಡಿಮೆ ಬಡ್ಡಿ ದರವನ್ನು ಅಥವಾ 0 ಪ್ರಕ್ರಿಯೆ/ಕಾಗದಪತ್ರ ಶುಲ್ಕಗಳನ್ನು ಆಯ್ಕೆ ಮಾಡಬಹುದು. *ಈ ಯೋಜನೆಯನ್ನು ಅಧಿಕೃತ ಮುಖ್ಯ ಡೀಲರ್‌ಗಳು ಮತ್ತು ಸಹಾಯಕ ಡೀಲರ್‌ಗಳು ಒದಗಿಸುತ್ತಿದ್ದಾರೆ ಮತ್ತು ಅಧಿಕೃತ ಮುಖ್ಯ ಡೀಲರ್‌ಗಳು ಮತ್ತು ಅಧಿಕೃತ ಡೀಲರ್‌ಗಳಿಂದ ಆಕ್ಟಿವಾ 110cc ಮತ್ತು ಆಕ್ಟಿವಾ 125cc ಖರೀದಿಯ ಮೇಲೆ ಪಡೆಯಬಹುದು. *ಈ ಆಫರ್‌ಗಳು ತಮಿಳುನಾಡು, ತೆಲಂಗಾಣ, ಕರ್ನಾಟಕ, ಕೇರಳ, ಆಂಧ್ರಪ್ರದೇಶದಲ್ಲಿ ಮಾತ್ರ ಅನ್ವಯಿಸುತ್ತವೆ. *ಪೂರ್ವ ಸೂಚನೆ ಇಲ್ಲದೆ ಆಫರ್‌ಗಳನ್ನು ಬದಲಾಯಿಸಬಹುದು ಅಥವಾ ಹಿಂಪಡೆಯಬಹುದು. **ನಿಯಮ ಮತ್ತು ಷರತ್ತುಗಳು ಅನ್ವಯಿಸುತ್ತವೆ. ಚಿತ್ರದಲ್ಲಿ ತೋರಿಸಿರುವ ಉತ್ಪನ್ನವು ಮಾರುಕಟ್ಟೆಯಲ್ಲಿ ಲಭ್ಯವಿರುವ ನಿಜವಾದ ಉತ್ಪನ್ನಕ್ಕಿಂತ ಭಿನ್ನವಾಗಿರಬಹುದು. ಚಿತ್ರದಲ್ಲಿ ತೋರಿಸಿರುವ ಬಿಡಿಭಾಗಗಳು ಪ್ರಮಾಣಿತ ಉಪಕರಣಗಳ ಭಾಗವಾಗಿರುವುದಿಲ್ಲ.

Honda Motorcycle & Scooter India Pvt. Ltd., Registered Office: Plot No. 1 , Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda.hmsi.in

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; Haiku Honda - **DOMLUR:** 49656565, 9342432156; **INDIRANAGAR:** 9342432157; Dhruvdesh Honda - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; **MALLESHWARAM:** 8971887792; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; VFM Honda - **KR PURAM:** 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9606567111; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; Namma Honda - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; **SIDLAGHATTA:** 9611596113; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com

‘ಹಸಿರು ಬೆಂಗಳೂರು’ ಪರಿಕಲ್ಪನೆಯಡಿ 2 ಲಕ್ಷ ಸಸಿ ನೆಡುವ ಯೋಜನೆಗೆ ಚಾಲನೆ ಸಿಕ್ಕಿಲ್ಲ

ರಸ್ತೆ ಗುಂಡಿ ದುರಸ್ತಿಯತ್ತ ಇಲ್ಲ ಚಿತ್ತ

• ಆರ್. ಮಂಜುನಾಥ್

ಬೆಂಗಳೂರು: ರಸ್ತೆಗಳ ಗುಂಡಿಗಳನ್ನು ದುರಸ್ತಿ ಮಾಡಲೆಂದೇ ಬಜೆಟ್‌ನಲ್ಲಿ 225 ವಾರ್ಡ್‌ಗಳಿಗೆ ₹450 ಕೋಟಿ ಮೀಸಲಿಟ್ಟಿದ್ದರೂ, ಬಿಬಿಎಂಪಿಯ ವಾರ್ಡ್ ರಸ್ತೆಗಳಲ್ಲಿ ಗುಂಡಿಗಳು ಹೆಚ್ಚಾಗುತ್ತಲೇ ಇವೆ.

‘ಬ್ರ್ಯಾಂಡ್ ಬೆಂಗಳೂರು’ ಪರಿಕಲ್ಪನೆಯಲ್ಲಿ ನಗರದ ರಸ್ತೆಗಳನ್ನು ಸುಸ್ಥಿತಿಯಲ್ಲಿಡುವ ಕಾಮಗಾರಿಗಳನ್ನೂ ‘ಸುಗಮ ಸಂಚಾರ ಬೆಂಗಳೂರು’ ಯೋಜನೆಯಡಿ ಬಜೆಟ್‌ನಲ್ಲಿ ಪ್ರಕಟಿಸಲಾಗಿತ್ತು. ಮುಖ್ಯ ಮತ್ತು ಉಪ ಮುಖ್ಯ ರಸ್ತೆಗಳಲ್ಲದೆ, ವಾರ್ಡ್ ರಸ್ತೆಗಳ ಅಭಿವೃದ್ಧಿಗಾಗಿಯೇ ಅನುದಾನ ಮೀಸಲಿಡಲಾಗಿತ್ತು. ಆದರೆ, ರಸ್ತೆ ಗುಂಡಿಗಳು ಉಳಿದುಕೊಂಡೇ ಇವೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಳೆದ ಸೆಪ್ಟೆಂಬರ್‌ನಲ್ಲಿ ವಿದೇಶ ಪ್ರವಾಸಕ್ಕೆ ತೆರಳುವ ಮುನ್ನ ರಸ್ತೆ ಗುಂಡಿಗಳ ದುರಸ್ತಿಗೆ 15 ದಿನಗಳ ಗಡುವು ನೀಡಿದ್ದರು. ಈ ಸಂದರ್ಭದಲ್ಲಿ ಮುಖ್ಯ ಆಯುಕ್ತರೂ ಸೇರಿದಂತೆ ವಲಯ ಆಯುಕ್ತರು, ಜಂಟಿ ಆಯುಕ್ತರು, ಪ್ರಧಾನ ಎಂಜಿನಿಯರ್‌ಗಳು ಕೆಲವೊಮ್ಮೆ ರಾತ್ರಿ ರಸ್ತೆಗಿಳಿದು, ಗುಂಡಿಗಳನ್ನು ದುರಸ್ತಿ ಮಾಡುವ ಮೇಲ್ವಿಚಾರಣೆ ನಡೆಸಿದರು. 14 ಸಾವಿರ ಗುಂಡಿಗಳನ್ನು ಮುಚ್ಚಲಾಗಿದೆ ಎಂದೂ ಶಿವಕುಮಾರ್ ಅವರಿಗೆ ವರದಿ ಸಲ್ಲಿಸಿದ್ದರು.

ಪ್ರಮುಖ ರಸ್ತೆಗಳು ಅಲ್ಪ ಸ್ವಲ್ಪವಾದರೂ ಸರಿ ಇದ್ದರೂ, ವಾರ್ಡ್ ರಸ್ತೆಗಳು ತೀರಾ ಹದಗೆಟ್ಟಿವೆ. ‘ಟೆಂಡರ್ ಕರೆಯಲಾಗಿದ್ದು, ದುರಸ್ತಿ ಕೆಲಸ ಆಗುತ್ತದೆ’ ಎಂದು ಅಧಿಕಾರಿಗಳು ಹೇಳುತ್ತಲೇ ಇದ್ದಾರೆ. ರಸ್ತೆ ಗುಂಡಿಗಳ ದುರಸ್ತಿಯತ್ತ ಹೆಚ್ಚು ಕಾಳಜಿ ವಹಿಸುತ್ತಿಲ್ಲ. ಟೆಂಡರ್ ಪ್ರಕ್ರಿಯೆಗಳು ಮುಗಿದು, ಕಾರ್ಯಾದೇಶವಾದರೆ ಮಾತ್ರ ದುರಸ್ತಿ ಕಾರ್ಯ ನಡೆಯುತ್ತವೆ.

‘ಹಸಿರಾಗದ ಬೆಂಗಳೂರು’: ‘ಹಸಿರು ಬೆಂಗಳೂರು’ ಯೋಜನೆಯಡಿ ನಗರದಲ್ಲಿ ಎರಡು ಲಕ್ಷ ಸಸಿಗಳನ್ನು ನೆಟ್ಟು ನಗರವನ್ನು ಹಸಿರೀಕರಣ ಮಾಡಲು ಉದ್ದೇಶಿಸಲಾಗಿತ್ತು. ಜೂನ್‌ನಲ್ಲಿ ಪರಿಸರ ದಿನಾಚರಣೆ ಸಂದರ್ಭದಲ್ಲಿ ಮಕ್ಕಳಿಗೆ ಸಸಿ ನಿರ್ವಹಣೆ ಜವಾಬ್ದಾರಿ ನೀಡುವ ಯೋಜನೆ ಆರಂಭಿಸಲಾಯಿತು. ನಂತರ, ಅದೂ ವಿಫಲವಾಗಿ, ಗಿಡಗಳೆಲ್ಲ ಒಣಗಿಹೋದವು. ಆರ್ಥಿಕ ವರ್ಷದ ಕೊನೆಯಲ್ಲಿ ಸಸಿಗಳನ್ನು ನೆಡಲು, ನಿರ್ವಹಣೆ ಮಾಡಲು ಟೆಂಡರ್ ಕರೆಯಲಾಗಿದೆ. ಪ್ರತಿ ಗಿಡಕ್ಕೆ ₹3 ಸಾವಿರಕ್ಕೂ ಹೆಚ್ಚು ವೆಚ್ಚ ಮಾಡಲು ಅರಣ್ಯ ವಿಭಾಗ ಮುಂದಾಗಿದೆ.

ಎಂಜಿನಿಯರ್‌ಗಳನ್ನು ನಂಬಲ್ಲ ಎಂದಿದ್ದ ಡಿಸಿಎಂ

ಡಿ.ಕೆ. ಶಿವಕುಮಾರ್

‘ಎಂಜಿನಿಯರ್‌ಗಳು ನೀಡಿರುವ ವರದಿ ನಾನು ನಂಬಲ್ಲ. ನನ್ನ ಕಾಲೇಜು ಕಾಲದ ಬೈಕ್ ಅನ್ನು ರಿಪೇರಿ ಮಾಡಿಸಿದ್ದು, ಬೈಕ್‌ನಲ್ಲೇ ರಸ್ತೆಗಳನ್ನು ತಪಾಸಣೆ ಮಾಡುತ್ತೇನೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪ್ರಮುಖ ರಸ್ತೆಗಳಲ್ಲಿ ಗುಂಡಿ ದುರಸ್ತಿ ಕಾರ್ಯವನ್ನು ಒಂದೆರಡು ಗಂಟೆ ಪರಿಶೀಲಿಸಿದ ಸಂದರ್ಭದಲ್ಲಿ (2024ರ ಸೆಪ್ಟೆಂಬರ್) ಹೇಳಿದ್ದರು.

ನಂತರ ಅವರು ತಪಾಸಣೆಗೆ ಬರಲಿಲ್ಲ. ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ‘ಪ್ರತಿ ದಿನ ಒಂದು ಸಾವಿರಕ್ಕೂ ಹೆಚ್ಚು ರಸ್ತೆ ಗುಂಡಿಗಳಾಗುತ್ತಿವೆ. ದುರಸ್ತಿ ನಿರಂತರ ಪ್ರಕ್ರಿಯೆ. ಗುಂಡಿರಹಿತ ರಸ್ತೆ ಅಸಾಧ್ಯ’ ಎಂದಿದ್ದರು. ಆನಂತರ, ರಸ್ತೆ ಗುಂಡಿ ದುರಸ್ತಿ ನನೆಗುದಿಗೆ ಬಿದ್ದಿದೆ.

ಬಿಬಿಎಂಪಿ ಬಜೆಟ್ ಜಾರಿ ಎಷ್ಟು?

ರಸ್ತೆ ಗುಂಡಿ

2024–25ರ ಬಜೆಟ್‌ನಲ್ಲಿ ಮೀಸಲಿಟ್ಟ ಹಣ

225 ವಾರ್ಡ್‌ಗಳಿಗೆ ₹450 ಕೋಟಿ	
ಚರಂಡಿ ಹೂಳೆತ್ತುವುದು, ನಿರ್ವಹಣೆಗೆ ತಲಾ	₹30 ಲಕ್ಷ
ರಸ್ತೆ ಗುಂಡಿ ಮುಚ್ಚಲು ತಲಾ	₹15 ಲಕ್ಷ
ಪಾದಚಾರಿ ಮಾರ್ಗ ನಿರ್ವಹಣೆಗೆ ತಲಾ	₹25 ಲಕ್ಷ
ಮಳೆಗಾಲದ ಕಂಟ್ರೋಲ್ ರೂಮ್ ನಿರ್ವಹಣೆಗೆ ತಲಾ	₹5 ಲಕ್ಷ
ಅಭಿವೃದ್ಧಿ ಕಾಮಗಾರಿಗಳಿಗಾಗಿ ಪ್ರತಿ ವಾರ್ಡ್‌ಗೆ ತಲಾ	₹1.25 ಕೋಟಿ

₹50 ಕೋಟಿ– ಶಿಕ್ಷಣ ಬೆಂಗಳೂರು
(ಶೈಕ್ಷಣಿಕ ಪ್ರಗತಿ ಕಾರ್ಯಕ್ರಮಗಳು, ಉನ್ನತ ಗುಣಮಟ್ಟದ ಶಿಕ್ಷಣ, ಸಮವಸ್ತ್ರ, ಮೂಲಸೌಕರ್ಯ ಅಭಿವೃದ್ಧಿ)



ವಿಜ್ಞಾನ ಪ್ರಯೋಗಾಲಯದಲ್ಲಿ ‘ಪ್ರದರ್ಶನ’

‘ಶಿಕ್ಷಣ ಬೆಂಗಳೂರು’ ಪರಿಕಲ್ಪನೆಯಲ್ಲಿ ಬಿಬಿಎಂಪಿಯ ಶಾಲೆಗಳಿಗೆ ಹೈಟೆಕ್ ವ್ಯವಸ್ಥೆ ಕಲ್ಪಿಸಲು ₹45 ಕೋಟಿಯನ್ನು ಬಜೆಟ್‌ನಲ್ಲಿ ಮೀಸಲಿಡಲಾಗಿತ್ತು. ಕಂಪ್ಯೂಟರ್ ಲ್ಯಾಬ್, ಮಾಹಿತಿ– ವಿಜ್ಞಾನ ಪ್ರಯೋಗಾಲಯ, ಇ-ಗ್ರಂಥಾಲಯಗಳನ್ನು ಸ್ಥಾಪಿಸುವ ಉದ್ದೇಶವಿತ್ತು. ಕೆಲವು ‘ಶಾಲೆಗಳಲ್ಲಿ ಕಂಪ್ಯೂಟರ್‌ಗಳು ಬಂದಿದ್ದರೂ ಅವುಗಳ ಜೊತೆಗೆ ಬೇಕಿರುವ ಪರಿಕರಗಳು ಬಂದಿಲ್ಲ. ಸ್ಮಾರ್ಟ್ ಬೋರ್ಡ್ ಅಳವಡಿಸಲಾಗಿದ್ದರೂ ಅದನ್ನು ಉಪಯೋಗಿಸುವ ಸಿಬ್ಬಂದಿ ಇಲ್ಲ’ ಎಂದು ಶಾಲೆಯ ಸಿಬ್ಬಂದಿ ಹೇಳುತ್ತಿದ್ದಾರೆ.

ವಿಜ್ಞಾನ ಪ್ರಯೋಗಾಲಯಕ್ಕೆ ಅಗತ್ಯವಾದ ಸಾಮಗ್ರಿಗಳು ಕೆಲವು ಶಾಲೆಗಳಿಗೆ ತಲುಪಿವೆ. ಆದರೆ ಅವುಗಳ ಬಳಕೆಗೆ ಹಿರಿಯ ಅಧಿಕಾರಿಗಳ ಸಮ್ಮತಿ ದೊರೆತಿಲ್ಲ. ಹೀಗಾಗಿ, ಅವುಗಳನ್ನು ‘ಪ್ರದರ್ಶನದ ಗೊಂಬೆ’ಗಳಂತೆ ಜೋಡಿಸಿಡಲಾಗಿದೆ. ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ‘ಶಾಲೆ ತೋಟ’ ಮಾಡುವ ಯೋಜನೆಗೆ ಇನ್ನೂ ಚಾಲನೆ ಸಿಕ್ಕಿಲ್ಲ.



ಬಿಬಿಎಂಪಿ ಶಾಲೆಯೊಂದರ ‘ವಿಜ್ಞಾನ ಪ್ರಯೋಗಾಲಯ’ದಲ್ಲಿ ಜೋಡಿಸಿಟ್ಟಿರುವ ಸಾಮಗ್ರಿಗಳು

ಜನರಿಗೆ ತಲುಪದ ಬಜೆಟ್: ಬಸವರಾಜು

‘ಬಿಬಿಎಂಪಿಯಲ್ಲಿ ಕಾರ್ಪೊರೇಟರ್‌ಗಳು ಇಲ್ಲದ್ದರಿಂದ ಅಧಿಕಾರಿಗಳಿಗೆ ಬೇಕಾದ ಬಜೆಟ್ ಮಂಡಿಸಲಾಗಿದೆ. ಅದು ಜನಸಾಮಾನ್ಯರನ್ನು ತಲುಪಿಯೇ ಇಲ್ಲ. ಸಾವಿರಾರು ಕೋಟಿ ರೂಪಾಯಿಯನ್ನು ರಸ್ತೆ ಕಾಮಗಾರಿಗಿಡಲಾಗಿದೆ ಎಂದು ಹೇಳಲಾಗಿದ್ದರೂ, ರಸ್ತೆ ಗುಂಡಿಯನ್ನು ಮುಚ್ಚಲು ಇವರಿಗೆ ಸಾಧ್ಯವಾಗಿಲ್ಲ. ಜನರಿಗೆ ಬೇಕಾದ ಮೂಲಸೌಲಭ್ಯಗಳನ್ನೇ ಇವರು ನೀಡುತ್ತಿಲ್ಲ’ ಎಂದು ಬಿಬಿಎಂಪಿ ಮಾಜಿ ಆಡಳಿತ ಪಕ್ಷದ ನಾಯಕ ಎ.ಎಚ್. ಬಸವರಾಜು ದೂರಿದರು.

ನಗರಸಭಾ ಕಾರ್ಯಾಲಯ, ಹೊಸಕೋಟೆ
ಬೆಂಗಳೂರು ಗ್ರಾಮಾಂತರ ಜಿಲ್ಲೆ–562114,
ದೂರವಾಣಿ:–27931221, ಸಹಾಯವಾಣಿ: 27931759
Email:-itstaff.ulb.hosakote@yahoo.com Website: www.hosakotecity.mrc.gov.in

ನಂ.ನಸಹೊ/ತಾಂತ್ರಿಕ ಶಾಖೆ/ಟೆಂಡರ್/ಸಿಆರ್/19/2024–25 ದಿನಾಂಕ: 06.03.2025

“ಟೆಂಡರ್ ಪ್ರಕಟಣೆ” (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಪೌರಾಯುಕ್ತರು ನಗರಸಭೆ ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಂದ 2024–25ನೇ ಸಾಲಿನ ನಗರಸಭಾ ನಿಧಿ ಯೋಜನೆಯಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ 01 ಮತ್ತು 02ರ ಪ್ರಕಾರ ಟೆಂಡರ್‌ನ್ನು ಏಕ/ದ್ವಿ–ಲಕೋಟೆ ಪದ್ಧತಿಯಡಿ ಅರ್ಹ ದರ್ಜೆಯ ನೋಂದಾಯಿತ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಕರೆಯಲಾಗಿರುತ್ತದೆ.

ಕ್ರ. ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ. ರೂ.ಗಳಲ್ಲಿ
01	DMA/2024-25/EL/WORK_INDENT36877	49.99	85,000/–
02	DMA/2024-25/EL/WORK_INDENT36878	10.00	21,500/–
03	DMA/2024-25/OW/WORK_INDENT36921	16.52	35,000/–
04	DMA/2024-25/SE4723	45.78	92,000/–
05	DMA/2024-25/SE4830	18.40	41,200/–
06	DMA/2024-25/SE4836	10.00	21,500/–
07	DMA/2024-25/SE4837	10.00	21,500/–
08	DMA/2024-25/SE4833	24.30	41,200/–
09	DMA/2024-25/SE4826	12.33	31,000/–

1) ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **21.03.2025 ರ ಸಂಜೆ 5:30 ಗಂಟೆಯವರೆಗೆ** ಹಾಗೂ ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ **24.03.2025 ರ ಬೆಳಿಗ್ಗೆ 11:00 ಗಂಟೆಗೆ** ಹಾಗೂ ಕಂಡಿಕೆ 01, 04 ಮತ್ತು 08 ಕ್ಕೆ ಸಂಬಂಧಿಸಿದಂತೆ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ **27.03.2025 ರ ಬೆಳಗ್ಗೆ 11:00 ಗಂಟೆಗೆ** ನಿಗದಿಪಡಿಸಲಾಗಿರುತ್ತದೆ.
2) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in/#/portal/portal-home** ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು.

ಸಹಿ/–
ಪೌರಾಯುಕ್ತರು
ನಗರಸಭೆ, ಹೊಸಕೋಟೆ.

ವಾಸಾಸಂಇ/ವಾ.ಪ್ರ/5491/ಶಿರಡಿ ಸಾಯಿ/2024–25

ಬಿಬಿಎಂಪಿ ವಿಶೇಷ ಆಯುಕ್ತ ಸುರಳ್ಕರ್ ಸಭೆ

ಹಕ್ಕಿಜ್ವರ ನಿಯಂತ್ರಣಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಹಕ್ಕಿಜ್ವರ ನಿಯಂತ್ರಣಕ್ಕಾಗಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಅವರು ಆರೋಗ್ಯ ಅಧಿಕಾರಿಗಳಿಗೆ ಸೂಚಿಸಿದರು.

ಹಕ್ಕಿ ಜ್ವರಕ್ಕೆ ಸಂಬಂಧಿಸಿದಂತೆ ಗುರುವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ‘ಇತ್ತೀಚಿನ ದಿನಗಳಲ್ಲಿ ಬೇರೆ-ಬೇರೆ ಜಿಲ್ಲೆಗಳಲ್ಲಿ ಹಕ್ಕಿಜ್ವರದ ಪ್ರಕರಣ ವರದಿಯಾಗುತ್ತಿವೆ. ಪಾಲಿಕೆ ವ್ಯಾಪ್ತಿಯಲ್ಲಿ ಹಕ್ಕಿ ಜ್ವರ ನಿಯಂತ್ರಿಸಲು ಎಲ್ಲಾ ವಲಯಗಳಲ್ಲಿ ಅಗತ್ಯ ಕ್ರಮ ಕೈಗೊಳ್ಳಬೇಕು’ ಎಂದರು.

ಶಂಕಿತ ಹಕ್ಕಿಜ್ವರ ಪೀಡಿತ ಹಕ್ಕಿಗಳು ಸಂಪರ್ಕಕ್ಕೆ ಬಾರದಂತೆ ಎಚ್ಚರ ವಹಿಸಬೇಕು. ಸೋಂಕಿತ ಪ್ರದೇಶಗಳಿಗೆ ಭೇಟಿ ನೀಡಿ ಯಾವುದೇ ವಸ್ತುಗಳನ್ನು ಮುಟ್ಟಿದ್ದಲ್ಲಿ ಸಾಬೂನಿನಿಂದ ಕೈಕಾಲು, ಮುಖ ತೊಳೆದು ಬಟ್ಟೆ ಬದಲಿಸಬೇಕು. ನಾಲ್ಕು ದಿನ ದೇಹದಲ್ಲಿ ಆಗುವ ಬದಲಾವಣೆಗಳನ್ನು ಗಮನಿಸಿ ಜ್ವರ ಕಂಡುಬಂದರೆ ಕೂಡಲೇ ವೈದ್ಯರನ್ನು ಸಂಪರ್ಕಿಸಲು ಅರಿವು ಮೂಡಿಸಿ ಎಂದರು.

ಪಾಲಿಕೆಯ ಪಶುಸಂಗೋಪನಾ ಅಧಿಕಾರಿಗಳು, ಪ್ರಾಥಮಿಕ ಆರೋಗ್ಯ ಸುರಕ್ಷಣಾ ಅಧಿಕಾರಿಗಳು, ಆಶಾ ಕಾರ್ಯಕರ್ತೆಯರು, ನಮ್ಮ ಕ್ಲಿನಿಕ್ ವೈದ್ಯರ ತಂಡ ಹಾಗೂ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿ ಮತ್ತು ಸಿಬ್ಬಂದಿ ತಂಡ ರಚಿಸಿಕೊಂಡು ಹಕ್ಕಿಜ್ವರ ಪ್ರಕರಣಗಳ ಪತ್ತೆ ಹಚ್ಚುವ ಸಮೀಕ್ಷೆ ನಡೆಸಬೇಕು ಎಂದು ಸೂಚಿಸಿದರು.

ಮುಖ್ಯ ಆರೋಗ್ಯಾಧಿಕಾರಿ ಡಾ. ಸೈಯದ್ ಸಿರಾಜುದ್ದೀನ್ ಮದನಿ, ಪಶುಸಂಗೋಪನಾ ವಿಭಾಗದ ಜಂಟಿ ನಿರ್ದೇಶಕ ಡಾ.ಚಂದ್ರಯ್ಯ ಉಪಸ್ಥಿತರಿದ್ದರು.

ಮುನಿರತ್ನ ಗಡಿಪಾರು ಮಾಡಲು ಆಗ್ರಹ

ರಾಜರಾಜೇಶ್ವರಿನಗರ: ‘ನಟ ರಾಜಕುಮಾರ್ ಅವರ ಹೆಸರನ್ನು ಬಳಸಿ ಭ್ರಷ್ಟರಿಗೆ ಹೋಲಿಕೆ ಮಾಡಿರುವ ಬಿಜೆಪಿ ಶಾಸಕ ಮುನಿರತ್ನ ಅವರನ್ನು ಗಡಿಪಾರು ಮಾಡಬೇಕು’ ಎಂದು ಆಗ್ರಹಿಸಿ ಕಾಂಗ್ರೆಸ್ ಕಾರ್ಯಕರ್ತರು ನಾಗರಭಾವಿ ಬಿಡಿಎ ಕಾಂಪ್ಲೆಕ್ಸ್ ಬಳಿ ಪ್ರತಿಭಟನೆ ನಡೆಸಿದರು.

'ಶಾಸಕ ಮುನಿರತ್ನ ಒಬ್ಬ ಭ್ರಷ್ಟಾಚಾರಿ, ಬೇನಾಮಿ ಹೆಸರಲ್ಲಿ ಗುತ್ತಿಗೆ ನಡೆಸಿ ನೂರಾರು ಕೋಟಿ ಲೂಟಿ ಮಾಡಿದ್ದಾರೆ. ಒಕ್ಕಲಿಗ, ದಲಿತರ ಹೆಣ್ಣುಮಕ್ಕಳ ಬಗ್ಗೆ ಕೀಳಾಗಿ ಮಾತನಾಡಿ ಜಾತಿನಿಂದನೆ ಮಾಡಿದವರು. ವಿಕಾಸಸೌಧದಲ್ಲಿ ಅತ್ಯಾಚಾರ ಮಾಡಿದವರು ರಾಜಕುಮಾರ್ ಅವರ ಹೆಸರನ್ನು ಬಳಸಿಕೊಂಡಿರುವುದು ಅವರ ಹೆಸರಿಗೆ ಮಸಿ ಬಳಿಯುವ ಕೆಲಸ ಎಂದು ಆರೋಪಿಸಿದರು.

ಕೆಪಿಸಿಸಿ ಸದಸ್ಯರಾದ ಬೆಟ್ಟಸ್ವಾಮಿಗೌಡ, ಜೈಕುಮಾರ್ ಪಾಲಿಕೆ ಮಾಜಿ ಸದಸ್ಯ ಜಿ. ಮೋಹನ್ ಕುಮಾರ್, ಮುಖಂಡರಾದ ಶೇಖರ್, ಎಚ್.ತುಕಾರಾಂ, ರಾಂಪುರ ನಾಗೇಶ್, ಜೆ.ಮಂಜುನಾಥ್, ನವೀನ್ ಭಾಗವಹಿಸಿದ್ದರು.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ
ನಂ. 333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್,
ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110

ಸಂ:ಬಿಐಎಎಪಿಎ/ಟಿಪಿ/ಭೂಉನಿ/21/2024–25/3212 ದಿನಾಂಕ:04.03.2025

ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 ರ ತಿದ್ದುಪಡಿ ಕಾಯ್ದೆಯಂತೆ)

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ : ನಅಇ 157 ಬಿಎಂಆರ್ 2005 ದಿನಾಂಕ : 27–01–2009 ಮತ್ತು ತಿದ್ದುಪಡಿ ಆದೇಶ ದಿನಾಂಕ : 29–01–2009 ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2) ರಂತೆ ಭೂಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (4) ರನ್ವಯ ಈ ಕೆಳಕಂಡಂತೆ ವಸತಿ ಭೂಉಪಯೋಗ ನಿಗಧಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(3) ರ ಅಡಿಯಲ್ಲಿ ಈ ಕೆಳಕಂಡಂತೆ ಭೂಉಪಯೋಗ ನಿಗಧಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸ.ನಂ.	ವಿಸ್ತೀರ್ಣ ಎ–ಗುಂ	ಮಹಾಯೋಜನೆಯ ಪ್ರಕಾರ ಭೂ ಉಪಯೋಗ	ಭೂ ಉಪಯೋಗ ನಿಗಧಿಪಡಿಸಲು ಕೋರಿರುವ ಉದ್ದೇಶ
1	ಶ್ರೀಮತಿ ಜಿ. ಎಸ್.ಯಶೋಧ ಕೋಂ ಲೇ॥ ಗಂಗಪ್ಪ ಪಿ	ದೇವನಹಳ್ಳಿ	ಕಸಬಾ	ಗುಟ್ಟಹಳ್ಳಿ	25/2	2–01	ಸಾರ್ವಜನಿಕ / ಅರೆಸಾರ್ವಜನಿಕ	ವಸತಿ

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ

ವಾಸಸಂಇ/ಸಿಪಿ/ಎಎಎ/5501/2024–25

प्रधानमंत्री भारतीय जन औषधि परियोजना
Government of India
ಪ್ರಧಾನಮಂತ್ರಿ ಜನೌಷಧಿ ಕೇಂದ್ರದ ಮೂಲಕ
ಕೈಗೆಟುಕುವ ಬೆಲೆಯಲ್ಲಿ ಗುಣಮಟ್ಟದ ಜೆನೆರಿಕ್ ಔಷಧಗಳು
ಆಗ
₹5000.00
ಈಗ
ಜನೌಷಧಿ ಕೇಂದ್ರ
PAID
₹1000.00
ಕಳೆದ 6 ವರ್ಷಗಳಲ್ಲಿ ಬಡವರು ಮತ್ತು ಅಗತ್ಯವಿರುವವರು
ರೂ. 30 ಸಾವಿರ ಕೋಟಿ ಉಳಿಸಿದ್ದಾರೆ
ದೇಶಾದ್ಯಂತ 15,000+ ಜನೌಷಧಿ ಕೇಂದ್ರಗಳು
ಔಷಧಿಗಳು 50%-90%ರಷ್ಟು ಅಗ್ಗವಾಗಿವೆ.
2000ಕ್ಕೂ ಹೆಚ್ಚು ಜೆನೆರಿಕ್ ಔಷಧಗಳು
ಕೈಗೆಟುಕುವ ಬೆಲೆಯಲ್ಲಿ ಕ್ಯಾನ್ಸರ್ ಔಷಧಗಳು
ಕೇವಲ ರೂ. 1 ಕ್ಕೆ ಸ್ಯಾನಿಟರಿ ಪ್ಯಾಡ್‌ಗಳು
ಉತ್ತಮ ಗುಣಮಟ್ಟದ WHO ಮತ್ತು NABL- ಪ್ರಮಾಣೀಕೃತ ಔಷಧಗಳು
2027ರ ವೇಳೆಗೆ ದೇಶದಲ್ಲಿ 25,000 ಜನೌಷಧಿ ಕೇಂದ್ರಗಳು
7ನೇ ಜನವರಿ ಔಷಧಿ ದಿನದ
ಶುಭಾಶಯಗಳು
ಹತ್ತಿರದ ಜನೌಷಧಿ ಕೇಂದ್ರವನ್ನು ಪತ್ತೆ ಮಾಡಲು, ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ
cbc 02107/13/0006/2425

ಕಸಾಪ ದತ್ತಿ ಪ್ರಶಸ್ತಿಗೆ ಪುಸ್ತಕ ಆಹ್ವಾನ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ಡಾ.ಎಚ್. ವಿಶ್ವನಾಥ್ ಮತ್ತು ಇಂದಿರಾ ದತ್ತಿ ಪ್ರಶಸ್ತಿ'ಗೆ ಪುಸ್ತಕಗಳನ್ನು ಆಹ್ವಾನಿಸಲಾಗಿದೆ. ಇದು ಅಂಧ ಲೇಖಕರಿಗೆ ಮೀಸಲಾದ ಪ್ರಶಸ್ತಿ. ₹ 10 ಸಾವಿರ ನಗದು ಒಳಗೊಂಡಿದೆ. ಕೃತಿ ಮತ್ತು ಸ್ವವಿವರವನ್ನು ಇದೇ 31ರೊಳಗೆ, ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018 ಈ ವಿಳಾಸಕ್ಕೆ ಕಳಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

BGS Global Hospital Vijayanagar & BGS Global Hospital Ramanagara

Destruction of old IP & OP files of BGS Global Hospital Kengeri

As per our hospital policy, we are supposed to hold IP files only for a period of 5 years and OP files only for a period of 3 years.

As on date, we at Gelneagles BGS Hospital Kengeri Bangalore are holding IP & OP files of last Ten years i.e., IP & OP files from 2014 to till date are being stored with us.

Hence we need to destroy after shredding the IP & OP files from 2014 to 2018 belonging to BGS Global Hospital Kengeri Bangalore.

With regards to BGS Global Hospital Ramanagar and BGS Global Hospital Vijayanagar we shall be destroying, after shredding the IP files from 2015 to 2019. And we shall be holding IP & OP files belonging to BGS Global Hospital Kengeri Bangalore with respect to year 2019 to 2024 till date.

I seek your approval to destroy as per our Hospital Policy.

NOTE: All MLC and DEATH files shall be retained as per policy i.e., irrespective of time period.

Stalin Christopher
Medical Records In-Charge

ಹೊಸದುರ್ಗದ ಹೆಚ್ಚುವರಿ ಸಿವಿಲ್ ಜಡ್ಜ್ ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ
ಅಸಲು ದಾವೆ ಸಂಖ್ಯೆ.86/2024

ವಾದಿಯರು: ಜಯಮ್ಮ ಕೋಂ ಲೇಟ್ ಈಶ್ವರಪ್ಪ ಮತ್ತು ಇತರರು ಸುಮಾರು 80 ವರ್ಷ, ವ್ಯವಸಾಯ, ಚಿಕ್ಕಯಗಟೆ ಗ್ರಾಮ, ಕಸಬಾ ಹೋಬಳಿ ಹೊಸದುರ್ಗ ತಾಲ್ಲೂಕು ವಿರುದ್ಧ

ಪ್ರತಿವಾದಿಯರು :- 1) ಚನ್ನಬಸಪ್ಪ ಬಿನ್ ಈರಪ್ಪ, ಸುಮಾರು 84 ವರ್ಷ, ವ್ಯವಸಾಯ. ಖಾಯಂ ವಾಸ; ಚಿಕ್ಕಯಗಟೆ ಗ್ರಾಮ, ಕಸಬಾ ಹೋಬಳಿ, ಹೊಸದುರ್ಗ ತಾ|| ಹಾಲಿ ವಾಸ: ಜೆಕೆಪಿ ಆಪ್ಟಿಕಲ್, ಸೆಕ್ಟರ್ ಎಡಿಪಿ ನಿಗ್ಡಿ, ಪಿಐಎಂಪಿಆರ್-ಚಿಂಚವಾಡ್, ಮಹಾರಾಷ್ಟ್ರ-411044. ಮೊಬೈಲ್ ನಂ. 07020972114. 3) ದಿವ್ಯ ತಂದೆ ತಿಮ್ಮಪ್ಪ, ಸುಮಾರು 45 ವರ್ಷ, ವ್ಯವಸಾಯ 4) ದರ್ಶನ್ ಬಿನ್ ತಿಮ್ಮಪ್ಪ, ಸುಮಾರು 43 ವರ್ಷ, ವ್ಯವಸಾಯ ಪ್ರತಿವಾದಿ ನಂ.3 ಮತ್ತು 4 ರವರು. ಹಾಲಿ ವಾಸ: 2ನೇ ರಸ್ತೆ, ರಾಯಲ್ ಬಡಾವಣೆ, ಕೃಷಿನಗರ, ಶಿವಮೊಗ್ಗ. 5) ದೃಷ್ಟಿ ತಂದೆ ತಿಮ್ಮಪ್ಪ ಸುಮಾರು 40 ವರ್ಷ, ವ್ಯವಸಾಯ. 3 ರಿಂದ 5ರವರ ಖಾಯಂವಾಸ: ಮನೆ ನಂ 132 ಸೋನಿಶ ಮಲೋಡಿ ಬಳಗೆರೆ ಕಾಲೋನಿ, ಬೆಂಗಳೂರು-560087

-: ಸಾರ್ವಜನಿಕ ಪ್ರಕಟಣೆ :-

ವಾದಿಯರಾದ ಜಯಮ್ಮ ಕೋಂ ಲೇಟ್ ಈಶ್ವರಪ್ಪ ಮತ್ತು ಇತರರು, ಇವರು ಪ್ರತಿವಾದಿಯರ ವಿರುದ್ಧ ದಾವ ಅನುಸೂಚಿ ಸ್ವತ್ತುಗಳನ್ನು ವಿಭಾಗ ಮಾಡಿಕೊಡಲು ಮತ್ತು ಇತರೆ ಪರಿಹಾರಗಳನ್ನು ಕೇಳಿ ಈ ಕೆಳಕಂಡ ಸ್ವತ್ತಿನ ಮೇಲೆ ದಾವೆ ಸಲ್ಲಿಸಿದ್ದು ಸದರಿ ದಾವೆಯಲ್ಲಿ ಮೇಲೆ ಸೂಚಿಸಿರುವ 1ನೇ ಪ್ರತಿವಾದಿ ಚನ್ನಬಸಪ್ಪ ಬಿನ್ ಈರಪ್ಪ 3ನೇ ಪ್ರತಿವಾದಿ ದಿವ್ಯ ತಂದೆ ಲೇಟ್ ತಿಮ್ಮಪ್ಪ 4ನೇ ಪ್ರತಿವಾದಿ ದರ್ಶನ್ ತಂದೆ ಲೇಟ್ ತಿಮ್ಮಪ್ಪ 5ನೇ ಪ್ರತಿವಾದಿ ದೃಷ್ಟಿ ತಂದೆ ಲೇಟ್ ತಿಮ್ಮಪ್ಪ ಆದ ನಿಮಗೆ ನ್ಯಾಯಲಯದಿಂದ ಸಮನ್ಸ್‌ನ್ನು ಅಲವಾರು ಬಾರಿ ಹೊರಡಿಸಿದ್ದರು ಸಹ ನಿಮಗೆ ಜಾರಿಯಾಗದೇ ಇದ್ದ ಕಾರಣ ನ್ಯಾಯಲಯವು ಪತ್ರಿಕಾ ಪ್ರಕಟಣೆಯನ್ನು ತೆಗೆದುಕೊಳ್ಳಲು ಆದೇಶಿಸಿರುತ್ತದೆ, ದಿನಾಂಕ:-23-04-2025 ರಂದು ಮುದ್ದತ್ತು ಇರುವುದರಿಂದ ಖುದ್ದು ಆಗಲಿ ಅಥವಾ ವಕೀಲರ ಮೂಲಕವಾಗಲಿ, ಹೆಚ್ಚುವರಿ ಸಿವಿಲ್ ನ್ಯಾಯಾಲಯ, ಹೊಸದುರ್ಗ ಇವರ ಮುಂದೆ ಪೂರ್ವಹ್ನ 11 ಗಂಟೆಗೆ ಹಾಜರಾಗಿ ನಿಮ್ಮ ತಕರಾರನ್ನು ಸಲ್ಲಿಸತಕ್ಕದ್ದು ಹಾಗೂ ಒಂದು ವೇಳೆ ನೀವುಗಳು ಹಾಜರಾಗದಿದ್ದ ಪಕ್ಷದಲ್ಲಿ ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ ಎಂದು ತಿಳಿಯತಕ್ಕದ್ದು.

ಷೆಡ್ಯೂಲ್

1) ಹೊಸದುರ್ಗ ತಾಲ್ಲೂಕು, ಕಸಬಾ ಹೋಬಳಿ, ಚಿಕ್ಕಯಗಟ್ಟ ಗ್ರಾಮದ ರಿ.ಸರ್ವೆ ನಂ. 18/*ರ ಒಟ್ಟು ವಿಸ್ತೀರ್ಣ ಎಕರೆ 7-11 ಗುಂಟೆ ಜಮೀನು ಇದ್ದು, ಇದರಲ್ಲಿ ರಿ.ಸರ್ವೆ ನಂ. 18/1ರ ವಿಸ್ತೀರ್ಣ 2 ಎಕರೆ-26 ಗುಂಟೆ.

2) ಹೊಸದುರ್ಗ ತಾಲ್ಲೂಕು ಕಸಬಾ ಹೋಬಳಿ, ಚಿಕ್ಕಯಗಟೆ ಗ್ರಾಮದ ರಿ.ಸರ್ವೆ ನಂ. 18/*ರ ಒಟ್ಟು ವಿಸ್ತೀರ್ಣ 7-11 ಗುಂಟೆ ಜಮೀನು ಇದ್ದು, ಇದರಲ್ಲಿ ರಿ.ಸರ್ವೆ ನಂ. 18/2ರ ವಿಸ್ತೀರ್ಣ 4 ಎಕರೆ -25 ಗುಂಟೆ ಇದಕ್ಕೆ ಚಕ್ಕುಬಂದಿ: ಕಾಮನ್ ಬೌಂಡರಿ. ಪೂರ್ವಕ್ಕೆ- ಜಯಪ್ಪ ಮತ್ತು ಮಹೇಶ್ವರಪ್ಪ ಜಮೀನು. ಪಶ್ಚಿಮಕ್ಕೆ- ಈಶಣ್ಣ ಮತ್ತು ಬಸಪ್ಪ ಜಮೀನು ಮತ್ತು ರಸ್ತೆ. ಉತ್ತರಕ್ಕೆ- ನಂಜುಂಡಪ್ಪನ ಜಮೀನು. ದಕ್ಷಿಣಕ್ಕೆ- ರಸ್ತೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರ, ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಸದುರ್ಗ.

ಅರ್ಜಿದಾರರ ಪರ ವಕೀಲರು: ಶ್ರೀ ಎ.ಎಲ್.ಬೊಮ್ಮಣ್ಣ, ವಕೀಲರು, ಹೊಸದುರ್ಗ

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: Prov_NDV_Addl Loopline_Rd1 ದಿನಾಂಕ: 27.02.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ನೈಋತ್ಯ ರೈಲ್ವೆ, ಬೆಂಗಳೂರು	ರೂ. 3,59,96,461.63

ವಿಭಾಗ: ಬೆಂಗಳೂರು ವಿಭಾಗದ ನಿಡವಂಡ (ಎನ್‌ಡಿವಿ) ಸ್ಟೇಷನ್‌ನಲ್ಲಿ ರೋಡ್-1ರ ಪಾರ್ಶ್ವದಲ್ಲಿ 01 ಹೆಚ್ಚುವರಿ ಲೂಪ್ ಲೈನ್‌ನ ವ್ಯವಸ್ಥೆ.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 21.03.2025, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್/ ಬೆಂಗಳೂರು
PUB/819/AAMO/PRB/SWR/2024-25

South Western Railway - SWR | SWRRLY | SWRRLY

ಕೆನರಾ ಬ್ಯಾಂಕ್ केनरा बैंक Canara Bank
सिंडिकेट Syndicate — Together We Can

ಆಸ್ತಿ ಮತ್ತು ಭವನ ವಿಭಾಗ, ಜಿ ಎ ವಿಂಗ್, ಪ್ರಧಾನ ಕಚೇರಿ, ನಂ. 112, ಜೆ ಸಿ ರಸ್ತೆ, ಬೆಂಗಳೂರು - 560002

ಹೊಸ ಲಿಫ್ಟ್ ಪೂರೈಕೆ ಮತ್ತು ಸ್ಥಾಪನೆಗಾಗಿ ಸೂಚನೆ

ನೂತನ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ:
1. ಪ್ರಧಾನ ಕಚೇರಿ, ಜೆ.ಸಿ. ರಸ್ತೆ, ಬೆಂಗಳೂರು 560002, ಇಲ್ಲಿ 6 ಪ್ರಯಾಣಿಕರ ಲಿಫ್ಟ್‌ಗಳ ಪೂರೈಕೆ ಮತ್ತು ಸ್ಥಾಪನೆ.
ಹೆಚ್ಚಿನ ವಿವರಗಳು ಮತ್ತು ಇತರ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ಬ್ಯಾಂಕಿನ ವೆಬ್‌ಸೈಟ್ https://canarabank.com/tenders.aspx.ಗೆ ಭೇಟಿ ನೀಡಿ. ಯಾವುದೇ ಸ್ಪಷ್ಟೀಕರಣಗಳಿಗಾಗಿ 080-22238819/22297695 ಎಕ್ಸ್‌ಟೆನ್ಷನ್ 219/214 ಅನ್ನು ಸಂಪರ್ಕಿಸಿ. ಟೆಂಡರ್ ಫಾರ್ಮ್ ಸಲ್ಲಿಸಲು ಕೊನೆಯ ದಿನಾಂಕ 28.03.2025, ಮಧ್ಯಾಹ್ನ 3:00 ಗಂಟೆಯ ವರೆಗೆ.
ಇದಲ್ಲದೆ, ಯಾವುದೇ ಮಾರ್ಪಾಡುಗಳು ಇದ್ದಲ್ಲಿ, ಎಲ್ಲಾ ಅನುಬಂಧ/ತಿದ್ದುಪಡಿಗಳನ್ನು ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸ್ಥಳ: ಬೆಂಗಳೂರು
ದಿನಾಂಕ: 7.03.2025

ಸಹಿ/-
ಸಹಾಯಕ ಪ್ರಧಾನ ವ್ಯವಸ್ಥಾಪಕರು

ಬೆಸ್ಕಾಂ ವ್ಯಾಪ್ತಿಯ ಎಂಟು ಜಿಲ್ಲೆಗಳಲ್ಲಿ ಅಳವಡಿಸಲು ಆದೇಶ

ಹೊಸ ಸಂಪರ್ಕಕ್ಕೆ ಸ್ಮಾರ್ಟ್ ಮೀಟರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ತನ್ನ ವ್ಯಾಪ್ತಿಯ ಎಂಟೂ ಜಿಲ್ಲೆಗಳಲ್ಲಿ ಫೆಬ್ರುವರಿ 15ರಿಂದ ಹೊಸ ವಿದ್ಯುತ್ ಸಂಪರ್ಕ ಪಡೆಯುವವರು ಸ್ಮಾರ್ಟ್ ಮೀಟರ್ ಅಳವಡಿಸಿಕೊಳ್ಳುವಂತೆ ಆದೇಶ ಹೊರಡಿಸಿದೆ.

ಸ್ಮಾರ್ಟ್‌ಮೀಟರ್ ಅಳವಡಿಸಿಕೊಳ್ಳುವ ಗ್ರಾಹಕರಿಗೆ ಪ್ರಿಪೇಯ್ಡ್ ಅಥವಾ ಪೋಸ್ಟ್‌ಪೇಯ್ಡ್ ಪಾವತಿ ವ್ಯವಸ್ಥೆಯನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಿದೆ. ಈಗಾಗಲೇ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆಯುವವರಿಗೆ ಸ್ಮಾರ್ಟ್ ಮೀಟರ್ ಜೊತೆಗೆ ಪ್ರಿಪೇಯ್ಡ್ ಪಾವತಿಯನ್ನು ಅಳವಡಿಸಿಕೊಳ್ಳಲು ಬೆಸ್ಕಾಂ ಆದೇಶಿಸಿದೆ.

ಕೇಂದ್ರ ಸರ್ಕಾರ 2021ರಿಂದ 2026ರವರೆಗೆ ದೇಶದಾದ್ಯಂತ ಸ್ಮಾರ್ಟ್‌ಮೀಟರ್ ಅಳವಡಿಸುವ ಯೋಜನೆಯನ್ನು ಜಾರಿಗೊಳಿಸಿದೆ. ದೇಶದ ಕೆಲವು ರಾಜ್ಯಗಳಲ್ಲಿ ಇದು ಅನುಷ್ಠಾನಗೊಂಡಿದೆ. ರಾಜ್ಯ ಸರ್ಕಾರ ಈಗ ತನ್ನದೇ ಆದ ಯೋಜನೆಯನ್ನು ರೂಪಿಸಿದೆ. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ಇದಕ್ಕಾಗಿ ಪ್ರತ್ಯೇಕ ನಿಯಮಗಳನ್ನು ರೂಪಿಸಿದೆ. 2024ರ ಏಪ್ರಿಲ್‌ನಲ್ಲಿ ಸ್ಮಾರ್ಟ್ ಮೀಟರ್ ಅಳಡಿಸುವುದನ್ನು ಜಾರಿಗೊಳಿಸಲು ಕೆಇಆರ್‌ಸಿ ಎಲ್ಲ ಎಸ್ಕಾಂಗಳಿಗೆ ಸೂಚಿಸಿತ್ತು. ಇದನ್ನು ಆಧರಿಸಿ ಬೆಸ್ಕಾಂ ಸ್ಮಾರ್ಟ್‌ಮೀಟರ್ ಅಳವಡಿಕೆಗೆ ಆದೇಶ ನೀಡಿ, ನಿರ್ವಹಣೆಗೆ ಮಾರ್ಗಸೂಚಿಯನ್ನೂ ಹೊರಡಿಸಿದೆ.

ಸ್ಮಾರ್ಟ್ ಮೀಟರ್ ನಿರ್ವಹಣೆ: ಸ್ಮಾರ್ಟ್‌ಮೀಟರ್‌ನಲ್ಲಿ ಮೊಬೈಲ್ ಕರೆನ್ಸಿ ರೀಚಾರ್ಜ್ ವ್ಯವಸ್ಥೆ ಇದ್ದಂತೆ, ಪ್ರಿಪೇಯ್ಡ್ ಮತ್ತು ಪೋಸ್ಟ್ ಪೇಯ್ಡ್ ಪಾವತಿ ವ್ಯವಸ್ಥೆ ಇರುತ್ತದೆ. ಪ್ರಿಪೇಯ್ಡ್ ಪಾವತಿ ವ್ಯವಸ್ಥೆ ಅಳವಡಿಸಿಕೊಳ್ಳುವವರು ಮೊದಲು ಸ್ಮಾರ್ಟ್ ಮೀಟರ್‌ಗೆ ಕರೆನ್ಸಿ ಹಾಕಿಸಿ ರೀಚಾರ್ಜ್ ಮಾಡಿಸಬೇಕು.

ಕನಿಷ್ಠ ₹100 ಅಥವಾ ಒಂದು ವಾರದ ಸರಾಸರಿ ವಿದ್ಯುತ್ ಬಳಕೆಗೆ ಸಮಾನವಾದ ಮೊತ್ತವನ್ನು ರೀಚಾರ್ಜ್ ಮಾಡಿಸಬೇಕು. ಗರಿಷ್ಠ ರೀಚಾರ್ಜ್‌ಗೆ ಯಾವುದೇ ಮಿತಿ ಇಲ್ಲ. ವಿದ್ಯುತ್ ಬಳಕೆ ಮಾಡಿದಂತೆ ಹಣ ಕಡಿತಗೊಳ್ಳುತ್ತದೆ. ಇನ್ನೂ ₹50 ಬಾಕಿ ಇರುವಂತೆ ಶುಲ್ಕ ಶೂನ್ಯವಾಗುವ ಸೂಚನೆ ಗ್ರಾಹಕರಿಗೆ ತಲುಪುತ್ತದೆ. ಸೂಚನೆ ನಂತರ ರೀಚಾರ್ಜ್ ಮಾಡಿಕೊಳ್ಳದಿದ್ದರೆ, ವಿದ್ಯುತ್ ಸಂಪರ್ಕ ಕಡಿತವಾಗುತ್ತದೆ. ಬೆಳಿಗ್ಗೆ 10ರಿಂದ ಮಧ್ಯಾಹ್ನ 1 ಗಂಟೆ ನಡುವೆ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗುತ್ತದೆ. ಪೋಸ್ಟ್ ಪೇಯ್ಡ್ ಪಾವತಿಯಲ್ಲಿ, ಬಳಕೆ ಮಾಡಿದಷ್ಟು ವಿದ್ಯುತ್ ಬಿಲ್ ಅನ್ನು ಪಾವತಿಸಬಹುದು ಎಂದು ಮಾರ್ಗಸೂಚಿಯಲ್ಲಿ ವಿವರಿಸಲಾಗಿದೆ.

ಸ್ಮಾರ್ಟ್ ಮೀಟರ್‌ಗಳಲ್ಲಿ ಅಡ್ವಾನ್ಸ್ ಮೀಟರಿಂಗ್ ಇನ್‌ಫ್ರಾಸ್ಟ್ರಕ್ಚರ್ (ಎಎಂಐ) ತಂತ್ರಾಂಶವನ್ನು ಅಳವಡಿಸಲಾಗಿದೆ. ಶುಲ್ಕ ಪಾವತಿಸದಿದ್ದಾಗ, ಇದೇ ತಂತ್ರಾಂಶದ ಮೂಲಕವೇ ವಿದ್ಯುತ್ ಕಡಿತಗೊಳಿಸಲಾಗುತ್ತದೆ. ತಂತ್ರಾಂಶದ ನಿರ್ವಹಣಾ ವೆಚ್ಚವನ್ನು ಬೆಸ್ಕಾಂ ಭರಿಸುತ್ತದೆ ಎಂದು ಬೆಸ್ಕಾಂ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಈಗಾಗಲೇ ವಿದ್ಯುತ್ ಸಂಪರ್ಕ ಪಡೆದಿರುವವರು ಸ್ಮಾರ್ಟ್ ಮೀಟರ್ ಅಳವಡಿಸಿ ಕೊಳ್ಳಬೇಕೆಂದರೆ, ಅವರಿಂದ ಹಳೆಯ ಮೀಟರ್ ವಾಪಸ್ ಪಡೆಯಬೇಕು. ಗ್ರಾಹಕರು ಇಟ್ಟಿರುವ ಎರಡು ತಿಂಗಳ ಮುಂಗಡ ಠೇವಣಿ ಹಣವನ್ನು ಎಸ್ಕಾಂ ಹಿಂತಿರುಗಿಸಬೇಕು.

ಐದು ಪಟ್ಟು ದುಬಾರಿ

ಸಾಮಾನ್ಯ ಮೀಟರ್‌ಗಿಂತ ಸ್ಮಾರ್ಟ್ ಮೀಟರ್ ಬೆಲೆ ತುಸು ದುಬಾರಿ. 3 ಕಿ.ವ್ಯಾಟ್‌ವರೆಗೆ ವಿದ್ಯುತ್ ಸಂಪರ್ಕ ಪಡೆಯುವ ಎಲ್‌ಟಿ ಸಿಂಗಲ್‌ಫೇಸ್ ಮೀಟರ್ ಬೆಲೆ ₹980 ಇದ್ದರೆ, ಸ್ಮಾರ್ಟ್ ಮೀಟರ್ ಬೆಲೆ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸೇರಿ ₹4,998 ಆಗುತ್ತದೆ. ಎಲ್‌ಟಿ 3 ಫೇಸ್(5ಕಿ.ವ್ಯಾ ಮೇಲ್ಪಟ್ಟು) ಹೋಲ್ ಕರೆಂಟ್ ಮೀಟರ್ ಬೆಲೆ ₹2,430 ಇದ್ದರೆ, ಸ್ಮಾರ್ಟ್ ಮೀಟರ್ ಬೆಲೆ ಜಿಎಸ್‌ಟಿ ಸೇರಿ ₹8,500 ಆಗುತ್ತದೆ. ಎಲ್‌ಟಿ 3ಫೇಸ್ ಸಿಟಿ ಮೀಟರ್(25 ಕಿ.ವ್ಯಾ ಮೇಲ್ಪಟ್ಟು) ಬೆಲೆ ₹3,450 ಇದ್ದರೆ, ಸ್ಮಾರ್ಟ್‌ಮೀಟರ್ ಬೆಲೆ ₹10,900 ಇದೆ.

ಜಗತ್ತಿಗೆ ಟ್ರಂಪ್ ಮತ್ತೊಂದು ವಿಕೋಪ!

ರಾಜಕೀಯ ಆರ್ಥಿಕತೆ, ಬದಲಾಗುತ್ತಿರುವ ವಿಶ್ವದ ಬಗ್ಗೆ ನಯ್ಯರ್ ಉಪನ್ಯಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತೆಗೆದುಕೊಳ್ಳುತ್ತಿರುವ ಅನಿಶ್ಚಿತ ನಿರ್ಧಾರಗಳನ್ನು ನೋಡಿದರೆ ಅವರೇ ಜಾಗತಿಕ ವಿಕೋಪವಾಗಿ ಪರಿಣಮಿಸುವ ಸಾಧ್ಯತೆ ಇದೆ' ಎಂದು ಜವಾಹರಲಾಲ್ ನೆಹರೂ ವಿಶ್ವ ವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕ ದೀಪಕ್ ನಯ್ಯರ್ ತಿಳಿಸಿದರು.

ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಗುರುವಾರ ಅವರು 'ರಾಜಕೀಯ ಆರ್ಥಿಕತೆ ಮತ್ತು ಬದಲಾಗುತ್ತಿರುವ ವಿಶ್ವ' ಕುರಿತು ಉಪನ್ಯಾಸ ನೀಡಿದರು.

'ವಿಶ್ವಸಂಸ್ಥೆಯು ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿದೆ. ವಿಶ್ವ ವ್ಯಾಪಾರ ಸಂಘಟನೆ (ವರ್ಲ್ಡ್ ಟ್ರೇಡ್ ಆರ್ಗನೈಸೇಸನ್) ಕೊನೆಗೊಳ್ಳುವ ಹಂತಕ್ಕೆ ತಲುಪಿದೆ. ಜಾಗತೀಕರಣ ಅಪಾಯದಲ್ಲಿದೆ. ದೇಶಗಳ ನಡುವಿನ ರಾಜಕೀಯ ಸಂಬಂಧವು ಹದಗೆಡುತ್ತಿದೆ. ಭೌಗೋಳಿಕ ಗಡಿ ವಿವಾದಗಳು ತೀಕ್ಷ್ಣವಾಗಿವೆ. ಅಂತರರಾಷ್ಟ್ರೀಯ ಸಂಬಂಧಗಳು ಹದಗೆಟ್ಟಿವೆ. ಇಂಥ ಸಂದರ್ಭದಲ್ಲಿ ಅಮೆರಿಕದ ಹಿತಾಸಕ್ತಿಗಾಗಿ ಯಾವುದೇ ಅನಾಹುತದ ನಿರ್ಧಾರಗಳನ್ನು ಕೈಗೊಳ್ಳಲು ಹಿಂದೆ ಮುಂದೆ ನೋಡದ ಟ್ರಂಪ್ ಅಮೆರಿಕದ ಅಧ್ಯಕ್ಷರಾಗಿದ್ದಾರೆ' ಎಂದು ವಿಶ್ಲೇಷಿಸಿದರು.

ದೀಪಕ್ ನಯ್ಯರ್

'ವಿಶ್ವ ಆರ್ಥಿಕತೆಗೆ ಕೊಡುಗೆಯಲ್ಲಿ 1990ರಲ್ಲಿ ಭಾರತ, ಬ್ರೆಜಿಲ್‌ಗೆ ಸರಿಸಮಾನಾಗಿ ಚೀನಾ ಇತ್ತು. 2005ರಲ್ಲಿ ಶೇ 5ರಷ್ಟು ಕೊಡುಗೆ ನೀಡಿತ್ತು. 2022ರಲ್ಲಿ ವಿಶ್ವ ಜಿಡಿಪಿಗೆ ಚೀನಾ ಕೊಡುಗೆ ಶೇ 18. ಮುಂದುವರಿಯುತ್ತಿರುವ ಎಲ್ಲ ದೇಶಗಳ ಒಟ್ಟು ಕೊಡುಗೆ ಶೇ 14. ಇದು ಚೀನಾದ ಬೆಳವಣಿಗೆಯ ದೊಡ್ಡ ಪ್ರಮಾಣವನ್ನು ಸೂಚಿಸುತ್ತಿದೆ. ಜೊತೆಗೆ ಅಮೆರಿಕದ ಪ್ರಾಬಲ್ಯವನ್ನು ಕಡಿಮೆ ಮಾಡಿದೆ' ಎಂದು ವಿವರಿಸಿದರು.

'ರಾಷ್ಟ್ರೀಯವಾದ ಮುನ್ನೆಲೆಗೆ ಬಂದಿದೆ. ರಷ್ಯಾ-ಉಕ್ರೇನ್ ಯುದ್ಧ ಮತ್ತು ಇಸ್ರೇಲ್-ಹಮಾಸ್ ಸಂಘರ್ಷ ಸೇರಿದಂತೆ ಪ್ರಸ್ತುತದ ಭೌಗೋಳಿಕ ರಾಜಕೀಯ ಬಿಕ್ಕಟ್ಟುಗಳು ಸರಕುಗಳ ಜಾಗತಿಕ ಚಲನೆಗೆ ಅಡ್ಡಿಪಡಿಸಿವೆ. ಬಡವರು, ಅಂಚಿನಲ್ಲಿರುವವರು ಇದರ ಪರಿಣಾಮವನ್ನು ಎದುರಿಸುವಂತಾಗಿದೆ' ಎಂದರು.

'ಪಶ್ಚಿಮ ಯುರೋಪ್, ಜಪಾನ್ ಸಹಿತ ಪ್ರಮುಖ ದೇಶಗಳು ಆರ್ಥಿಕವಾಗಿ ಹಿಮ್ಮುಖವಾಗಿ ಚಲಿಸುತ್ತಿವೆ. ಇಸ್ಲಾಂ ದೇಶಗಳ ಜಾಗತೀಕರಣವು ಕೂಡ ಪಾಶ್ಚಿಮಾತ್ಯ ದೇಶಗಳ ಆರ್ಥಿಕತೆಗೆ ಸವಾಲು ಒಡ್ಡಿವೆ' ಎಂದು ಹೇಳಿದರು.

'ಸದೃಢ ಆರ್ಥಿಕತೆ, ಉತ್ತಮ ರಾಜಕೀಯದ ಹೊಸವಿಶ್ವವನ್ನು ಕಟ್ಟುವ ಒಂದೇ ಒಂದು ದೇಶ ಕಾಣುತ್ತಿಲ್ಲ. ಮುಂದಿನ 25 ವರ್ಷ ವಿಶ್ವದಲ್ಲಿ ಇದೇ ರೀತಿಯ ಅಸ್ಥಿರತೆ ಮುಂದುವರಿಯಲಿದೆ' ಎಂದು ಭವಿಷ್ಯ ನುಡಿದರು.

ತಕ್ಷಶಿಲಾ ಫೌಂಡೇಶನ್ ಸಹ ಸಂಸ್ಥಾಪಕ ನಿತಿನ್ ಪೈ ಸಂವಾದ ನಡೆಸಿಕೊಟ್ಟರು.

ಬಜಾಜ್‌ನಿಂದ ಇ-ಆಟೊ 'ಗೋಗೋ' ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಹನ ತಯಾರಿಕಾ ಕಂಪನಿ ಬಜಾಜ್ ಆಟೊ, ತನ್ನ ಹೊಸ ವಿದ್ಯುತ್‌ಚಾಲಿತ ಆಟೊವಾದ 'ಬಜಾಜ್ ಗೋಗೋ' ಅನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಬಜಾಜ್ ಗೋಗೋ ಮೂರು ವೇರಿಯಂಟ್‌ಗಳಾದ ಪಿ5009, ಪಿ5012 ಮತ್ತು ಪಿ7012 ಅನ್ನು ಪರಿಚಯಿಸಿದೆ. 'ಪಿ' ಎಂಬುದು ಪ್ರಯಾಣಿಕ ಎಂದರ್ಥ. 50 ಮತ್ತು 70 ಗಾತ್ರವನ್ನು ಸೂಚಿಸಿದರೆ, 09 ಮತ್ತು 12 ಬ್ಯಾಟರಿ ಸಾಮರ್ಥ್ಯದ ಸೂಚಕವಾಗಿದೆ. ಇದು 9 ಕೆಡಬ್ಲ್ಯುಎಚ್ ಮತ್ತು 12 ಕೆಡಬ್ಲ್ಯುಎಚ್ ಸಾಮರ್ಥ್ಯದ ಬ್ಯಾಟರಿ ಹೊಂದಿದೆ. ಈ ಬ್ಯಾಟರಿಗೆ 5 ವರ್ಷದ ಗ್ಯಾರಂಟಿ ಇದೆ.

ಒಂದು ಬಾರಿ ಚಾರ್ಜ್ ಮಾಡಿದರೆ 251 ಕಿ.ಮೀ.ವರೆಗೆ ಪ್ರಯಾಣಿಸಬಹುದಾಗಿದೆ. ಆಟೊ ಹಝಾರ್ಡ್ ಮತ್ತು ಆ್ಯಂಟಿ ರೋಲ್ ಡಿಟೆಕ್ಷನ್, ಹೆಚ್ಚು ಸಾಮರ್ಥ್ಯದ ಎಲ್‌ಇಡಿ ಲೈಟ್‌ಗಳು ಮತ್ತು ಹಿಲ್ ಹೋಲ್ಡ್ ಅಸಿಸ್ಟ್‌ನಂತಹ ಉತ್ತಮ ತಂತ್ರಜ್ಞಾನ ವೈಶಿಷ್ಟ್ಯ ಹೊಂದಿದೆ ಎಂದು ಕಂಪನಿ ತಿಳಿಸಿದೆ.

ಪ್ರಸ್ತುತ ಕಂಪನಿಯು ಬಿಡುಗಡೆ ಮಾಡಿರುವ ಪಿ5009 ಹಾಗೂ ಪಿ7012 ದರವು ಕ್ರಮವಾಗಿ ₹3.26 ಲಕ್ಷ ಮತ್ತು ₹3.83 ಲಕ್ಷ (ದೆಹಲಿ ಎಕ್ಸ್ ಷೋರೂಂ) ಆಗಿದೆ. ದೇಶದ ಎಲ್ಲ ಬಜಾಜ್ ಆಟೊದ ಡೀಲರ್‌ಶಿಪ್‌ಗಳಲ್ಲಿ ಬುಕಿಂಗ್ ಆರಂಭವಾಗಿದೆ ಎಂದು ತಿಳಿಸಿದೆ.

'ಬಜಾಜ್ ಗೋಗೋ ತ್ರಿಚಕ್ರ ವಾಹನ ಉದ್ಯಮದಲ್ಲಿ ಆಗುತ್ತಿರುವ ಬದಲಾವಣೆಯನ್ನು ಪ್ರತಿನಿಧಿಸುತ್ತದೆ. ಈಗಾಗಲೇ ಇರುವ ವಿದ್ಯುತ್‌ಚಾಲಿತ ಆಟೊಗಳಿಗೆ ಇದು ಪರ್ಯಾಯವಾಗಿದೆ. ಗ್ರಾಹಕರು ಈ ಆಟೊಗಳನ್ನು ಗೋಗೋ ಎಂದೇ ಕರೆಯಬಹುದು' ಎಂದು ಕಂಪನಿಯ ಇಂಟ್ರಾ ಸಿಟಿ ಬ್ಯುಸಿನೆಸ್ ವಿಭಾಗದ ಅಧ್ಯಕ್ಷ ಸಮರ್‌ದೀಪ್ ಸುಬಂದ್ ಹೇಳಿದ್ದಾರೆ.

ಪಶು ಚಿಕಿತ್ಸಾಲಯ ಹಸ್ತಾಂತರ ಆದೇಶ ವಾಪಸ್: ಕೋರ್ಟ್‌ಗೆ ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಾಮರಾಜಪೇಟೆಯ ಛಲವಾದಿ ಪಾಳ್ಯದಲ್ಲಿರುವ ಪಶು ಚಿಕಿತ್ಸಾಲಯದ ಎರಡು ಎಕರೆ ಜಾಗವನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಹಸ್ತಾಂತರಿಸಿದ ಆದೇಶವನ್ನು ಹಿಂಪಡೆಯಲಾಗಿದೆ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಈ ಸಂಬಂಧ ಹೈಕೋರ್ಟ್ ವಕೀಲ ಗಿರೀಶ್ ಭಾರದ್ವಾಜ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್. ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು ಆದೇಶ ಹಿಂಪಡೆದಿರುವ ಕುರಿತಂತೆ ಪಶುಸಂಗೋಪನಾ ಮತ್ತು ಮೀನುಗಾರಿಕೆ ಇಲಾಖೆಯ ಅಧೀನ ಕಾರ್ಯದರ್ಶಿ ಪತ್ರವನ್ನು ಮೆಮೊ ಮೂಲಕ ನ್ಯಾಯಪೀಠಕ್ಕೆ ಸಲ್ಲಿಸಿದರು. ಇದನ್ನು ದಾಖಲಿಸಿಕೊಂಡ ನ್ಯಾಯಪೀಠ ಅರ್ಜಿ ವಿಲೇವಾರಿ ಮಾಡಿ ಆದೇಶಿಸಿತು. ಅರ್ಜಿದಾರರ ಪರ ಹೈಕೋರ್ಟ್ ವಕೀಲ ವೆಂಕಟೇಶ ಪಿ.ದಳವಾಯಿ ವಾದ ಮಂಡಿಸಿದ್ದರು.

ಕೋರಿಕೆ ಏನಿತ್ತು?: 'ಪಶು ಸಂಗೋಪನಾ ಇಲಾಖೆಯ ಸುಪರ್ದಿಯಲ್ಲಿದ್ದ ಜಾಗವನ್ನು ಚಾಮರಾಜಪೇಟೆಯ ಶಾಸಕರೂ ಆಗಿರುವ ಸಚಿವ ಜಮೀರ್ ಅಹ್ಮದ್ ಖಾನ್ ತಮ್ಮ ಪ್ರಭಾವ ಬಳಸಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಹಸ್ತಾಂತರ ಆಗುವಂತೆ ಮಾಡಿದ್ದಾರೆ. ಈ ಜಾಗದಲ್ಲಿ ಮೌಲಾನಾ ಆಜಾದ್ ಮಾದರಿ ಶಾಲೆ, ಮೊರಾರ್ಜಿ ದೇಸಾಯಿ ವಸತಿ ಶಾಲೆ, ಹಾಸ್ಟೆಲ್ ನಿರ್ಮಾಣ ಮಾಡುವ ಉದ್ದೇಶ ಹೊಂದಲಾಗಿದೆ. ಇಲ್ಲಿನ ಆಸ್ಪತ್ರೆ ಹಾಗೂ ಸಿಬ್ಬಂದಿಯನ್ನು ಜಯನಗರದ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಈ ಕುರಿತಂತೆ ರಾಜ್ಯ ಸರ್ಕಾರ 2024ರ ಫೆ. 26ರಂದು ಹೊರಡಿಸಿರುವ ಆದೇಶವನ್ನು ರದ್ದುಪಡಿಸಬೇಕು' ಎಂದು ಅರ್ಜಿದಾರರು ಮನವಿ ಮಾಡಿದ್ದರು.

ತೇಜಸ್ವಿ-ಶಿವಶ್ರೀ ಕಲ್ಯಾಣ

ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಹಾಗೂ ಗಾಯಕಿ ಶಿವಶ್ರೀ ಸ್ಕಂದಪ್ರಸಾದ್ ಅವರ ವಿವಾಹವು ನಗರದಲ್ಲಿ ಗುರುವಾರ ನಡೆಯಿತು –ಪಿಟಿಐ ಚಿತ್ರ

ಚಲನಚಿತ್ರೋತ್ಸವದಲ್ಲಿ ನಟಿ ರಮ್ಯಾ ಅಭಿಮತ

ಸಂಭಾವನೆ ತಾರತಮ್ಯ ನಿಲ್ಲಬೇಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರರಂಗದಲ್ಲಿ ಪುರುಷ ಹಾಗೂ ಮಹಿಳಾ ಕಲಾವಿದರಿಗೆ ಸಂಭಾವನೆಯಲ್ಲಿ ತಾರತಮ್ಯ ಮಾಡಲಾಗುತ್ತಿದೆ. ಸ್ಯಾಂಡಲ್‌ವುಡ್‌ನಲ್ಲಿ ಮಹಿಳಾ ಸಮಸ್ಯೆಗಳ ಕುರಿತು ಹೇಳಬೇಕಾದ ಕತೆಗಳು ಸಾಕಷ್ಟಿವೆ. ಆದರೆ ಯಾರೂ ಹೇಳುವ ಧೈರ್ಯ ಮಾಡುತ್ತಿಲ್ಲ ಎಂದು ಚಿತ್ರನಟಿ ರಮ್ಯಾ ಬೇಸರ ವ್ಯಕ್ತಪಡಿಸಿದರು.

16ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ 'ಮಹಿಳೆ ಹಾಗೂ ಸಿನಿಮಾ' ಎಂಬ ಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ಒಂದು ಸಿನಿಮಾ ಯಶಸ್ವಿಯಾದರೆ ನಾಯಕರು ಮುಂದಿನ ಸಿನಿಮಾದಲ್ಲಿ ಶೇಕಡ 50ರಷ್ಟು ಸಂಭಾವನೆ ಹೆಚ್ಚಿಸಿಕೊಳ್ಳುತ್ತಾರೆ. ಆದರೆ, ಮಹಿಳಾ ಕಲಾವಿದರಿಗೆ ಕೇವಲ ಶೇಕಡ 5ರಷ್ಟು ಮಾತ್ರ ಹೆಚ್ಚಿಸುತ್ತಾರೆ. ಕೆಲವೊಮ್ಮೆ ಅದೂ ಇಲ್ಲ. ಅವರಷ್ಟೇ ಕೆಲಸ ನಾವೂ ಮಾಡುವಾಗ ನಮಗೆ ಕಡಿಮೆ ಸಂಭಾವನೆ, ಅವರಿಗೆ ಹೆಚ್ಚು ಸಂಭಾವನೆ ಏಕೆ? ಈ ತಾರತಮ್ಯ ನಿಲ್ಲಬೇಕು' ಎಂದರು.

'ಮಹಿಳೆ ಹಾಗೂ ಸಿನಿಮಾ' ಎಂಬ ಗೋಷ್ಠಿಯಲ್ಲಿ ನಟಿ ರಮ್ಯಾ ಮಾತನಾಡಿದರು

'ಈಗಲೂ ನಾವು ಮಹಿಳಾ ಪ್ರಧಾನ ಸಿನಿಮಾ ಎಂದರೆ ಮಹಿಳೆಯರು ಪೊಲೀಸ್ ಡ್ರೆಸ್ ಹಾಕಿಕೊಂಡು ರೌಡಿಗಳನ್ನು ಹೊಡೆಯುವ ಸಿನಿಮಾಗಳನ್ನೇ ಮಾಡುತ್ತಿದ್ದೇವೆ. ಮಲಯಾಳ ಸಿನಿಮಾಗಳು ಅದ್ಭುತವಾದ ಮಹಿಳಾ ಪ್ರಧಾನ ಸಿನಿಮಾಗಳನ್ನು ಮಾಡುತ್ತಿವೆ. ಕನ್ನಡದಲ್ಲಿ ಮಹಿಳಾ ಕೇಂದ್ರಿತ ಸಿನಿಮಾಗಳು ಕಡಿಮೆಯಾಗುತ್ತಿವೆ. ನಾಯಕನನ್ನು ನೋಡಲು ಸಿನಿಮಾಕ್ಕೆ ಪ್ರೇಕ್ಷಕರು ಬರುತ್ತಾರೆ ಎಂಬ ಮನಸ್ಥಿತಿಯಿಂದ ನಾವು ಹೊರಬರಬೇಕಿದೆ' ಎಂದು ಅವರು ಕರೆ ನೀಡಿದರು.

'ಕನ್ನಡದಲ್ಲಿ ನನ್ನ ಪಾತ್ರ ಮುಖ್ಯ ಎನಿಸುವಂಥ ಕಥೆಗಳು ಬಂದರೆ ಖಂಡಿತ ನಾನು ಮತ್ತೆ ಚಿತ್ರರಂಗಕ್ಕೆ ಮರಳುತ್ತೇನೆ. ಆ ಕಥೆಯಲ್ಲಿ ನಾನು ಮುಖ್ಯ ಎನಿಸಬೇಕು. ನಮ್ಮದೇ ನಿರ್ಮಾಣ ಸಂಸ್ಥೆಯಿಂದ ನಾಲ್ಕು ಸಿನಿಮಾಗಳ ನಿರ್ಮಾಣಕ್ಕೆ ಮುಂದಾಗುತ್ತಿದ್ದೇವೆ. ಅದರಲ್ಲಿ ಒಂದು ಸಿನಿಮಾದಲ್ಲಿ ನಾನು ಅಭಿನಯಿಸುವ ಸಾಧ್ಯತೆಯಿದೆ' ಎಂದು ತಮ್ಮ ಭವಿಷ್ಯದ ಯೋಜನೆಗಳ ಕುರಿತು ವಿವರಿಸಿದರು.

ನಿರ್ದೇಶಕಿಯರಾದ ಪ್ರೀತಾ ಜಯರಾಮ್, ನಂದಿನಿ ರೆಡ್ಡಿ ತಮ್ಮ ವಿಚಾರಗಳನ್ನು ಮಂಡಿಸಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

REAL ESTATE SELLING

Agricultural Land Converted

Mysore

2 ACRE, 20 gunta land Mysore 40ft Road sale. Price 2500 per sft. Contact. 9380586105

Flat

J P Nagar

SALE 1BHK flats 2units internally connected, JPNagar 4thphase Near vegamall and upcoming metro. MGK 9901051948.

Sites

Vishweshwariah Layout

BDA 60X40 Site for sale. South facing Rs. 3.5Cr. Immediate Sale. Brokers Excuse. Contact:- 9448455164.

REAL ESTATE BUYING

Industrial & Factory

General

WANTED KIADB Allotted Industrial Plot 0.25 acre to 2.00 acre Land Out Rate Purchase/Joint Venture at Harohalli, Dabaspet, Doddabllapura, IT Park, Hardware Park,Aerospace. Verna Developers, MG-Road, BLR 9353128035/ 9620253180

RENTAL PROPERTIES

Accommodation Available

House

1/2 BHK semi-furnished, ground floor, vegetarians only, Jayanagar, no brkrs, Contact 9902089324

ನ್ಯಾಷನಲ್ ಸಿಲ್ಕ್ ಎಕ್ಸ್ ಪೋ

UP TO 50% DISCOUNT BY WEAVERS

ನೈಸರ್ಗಿಕ ನಾರು ರೇಷ್ಮೆಯ ಪ್ರದರ್ಶನ ಮತ್ತು ಮಾರಾಟ
ಸಿಲ್ಕ್, ಕಾಟನ್ ಸೀರೆ | ಡಿಸೈನ್ & ಸಾಂಪ್ರದಾಯಿಕ ಉಡುಗೆ | ಕುರ್ತಿ | ಫ್ಯಾಬ್ರಿಕ್ | ಇನ್ನೂ ಹಲವು

ಮಾರ್ಚ್ 8 ರಿಂದ 15ರ ವರೆಗೆ

ಹೊಸ ಹಾಗೂ ಇತ್ತೀಚಿನ ವೈವಿಧ್ಯಮಯ ವಿನ್ಯಾಸಗಳೊಂದಿಗೆ ಮದುವೆಯ ವಿಶೇಷ ಸಂಗ್ರಹ

ಭಾರತದಾದ್ಯಂತದ 15+ ಅಧಿಕೃತ ನೇಯ್ಗೆ ತಜ್ಞರಿಂದ ತಯಾರಿಸಿದ ಶುದ್ಧ ರೇಷ್ಮೆ ಮತ್ತು ಹತ್ತಿ ಸೀರೆಗಳು

ಬನಾರಸ್ ಸಿಲ್ಕ್, ಜಾಮದನಿ, ಲಖ್ನೋ ಚಿಕಾನ್, ಕಾಂಚಿಪುರಂ, ಬಿಹಾರ್ ಟಸ್ಸಾರ್ ಮತ್ತು ಮಟ್ಕಾ ಸಿಲ್ಕ್, ಛತ್ತೀಸ್‌ಗಢ್ ಕೊಸಾ ಸಿಲ್ಕ್, ಗುಜರಾತ್ ಪಟೋಲಾ ಮತ್ತು ಬಾಂಧಿನಿ, ಪಶ್ಚಿಮ ಬಂಗಾಳದ ಬಯಾಲು, ಬಲೂಚರಿ, ಢಕಾಯಿ ಜಾಮದನಿ, ಬಲುಚರಿ, ಕಾಂತಾ ಮತ್ತು ಹ್ಯಾಂಡ್ ಪ್ರಿಂಟೆಡ್ ಸಿಲ್ಕ್, ಧರ್ಮಾವರಂ, ಪೈಥಾನಿ, ಚಾಂದೇರಿ, ಎರಿ (ಅಹಿಂಸಾ) ಸೀರೆ, ಶಿಬೋರಿ & ಅಜ್ರಾಕ್ ಪ್ರಿಂಟ್, ಹ್ಯಾಂಡ್ ಕಲಂಕರಿ, ರಾಜಸ್ಥಾನಿ ಬಾಂಧಿನಿ, ಬ್ಲಾಕ್ ಪ್ರಿಂಟ್, ಡ್ರೆಸ್ ಮಟೇರಿಯಲ್ & ದೇಶಾದ್ಯಂತದ ಇನ್ನೂ ಅನೇಕ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ

ಸಿಂಧೂರ್ ಕನ್ವೆನ್ಷನ್ ಸೆಂಟರ್
15ನೇ ಕ್ರಾಸ್, ಸಾರಕ್ಕಿ 1ನೇ ಹಂತ, ಜೆ.ಪಿ.ನಗರ, ರಿಂಗ್ ರಸ್ತೆ, ಬೆಂಗಳೂರು
M: 9412258826 | ENTRY FREE | ALL UPI ONLINE / DEBIT & CREDIT CARDS ACCEPTED

PUBLIC NOTICE

PUBLIC NOTICE

Property bearing Site No.3, 1st Main Road, Chiranjeevi Layout, Hebbal Kempapura, BBMP Ward No.7, Bangalore measuring East to West 40 feet and North to South 30 feet, bounded by East by: Site No 4, West by: Road, North by: 26 feet Road, South by: Site No. 3B, carved out of Sy. No.58/4C (New Sy.No.58/4A) of Hebbal Village, is registered in the name of **MASJID E USMAN E GHANI** and is in peaceful possession from last 15 years.

The property is also registered with Karnataka State Board of Auqaf Vide No: KSBA/REG/56/BNU/2018-19 dated 08.03.2019. Public Notice is issued that this **WAQF** Property is **NOT FOR SALE.**

Any body dealing with this property or entering into any Agreement or Sale will be doing at his risk and consequences.

Sd/- President, MASJID E USMAN E GHANI
11,1st Main,Chiranjeevi Layout, Hebbal - Kempapura, Bengaluru- 560024.
Place: Bengaluru. Dated: 07-03 -2025.

SALE
CHAMRAJPET
COMMERCIAL BUILDING
18,000 SFT,
RENTAL INCOME 7.5 LACS
SALE PRICE 12.50 CRORES
Call: 96322-37557/ 96065-47557

JOB OPPORTUNITIES

General

'LIFE GUARD Required for Swimming Pool. Please Contact Mobile 8970050795, Jp nagar phase 2

Wanted

WANTED COMPUTER Billing Staff Female for a Reputed Plant Nursery in Yelahanka Contact: 9845202274/ 9620498866

PERSONAL

Change of Name

CHANGE OF NAME
I, **Bansri Rajeshbhai Mistry** W/o Kamlesh Dinesh Ganatra, residing at Sai Paradise No. 304, 3rd Floor, 7th Cross, Alfa Garden, K R Puram, Bengaluru-560 036, have changed my name to **BANSRI KAMLESH GANATRA** vide affidavit dated 25-02-2025, sworn before Notary Srinatha D R, Bengaluru.

CHANGE OF NAME
I, **MALLIKARJUNA K N** S/o Basappa, R/at Chowdagondanahalli Village, Holalkere Taluk, Chitradurga Dist., have changed my name to **SHIVAKUMARASWAMY B** vide affidavit dated 28.02.2025 before Notary S. Jagadeesh, Holalkere. Henceforth I shall be called as **SHIVAKUMARASWAMY B** only

CHANGE OF NAME
I, **Kalesh M. S/o Manachar,** aged about 52 years & **Smt. Gangamma M. W/o Kalesh M.,** aged about 41 years, R/o No.1, 1st Main Road, BFW Layout, Laggere, BBMP, Bangalore-560058, Karnataka State. I am to state that in my son's birth certificate his name is mensioned as **NIHAL KUMAR K.** but his correct name is **NISHANTH KUMAR K.** Therefore we changed his correct name as **NISHANTH KUMAR K.** sworn before Notary Public C. Venkatapathy, Bangalore on **15.02.2025.** Henceforth all his transactions and dealings will be in his name **NISHANTH KUMAR K.**

I, G JAYA MARY PRIYA W/o.Naveen Kumar R R residing at No.26, Near Don Bosco Church, Lingarajapuram, Bangalore-560084, have changed my name to PRIYA NAVEEN vide affidavit dated: 05.03.2025 before Notary Mohammed Hussain.K. Henceforth I shall be called as PRIYA NAVEEN only in all documents.

Lost

PUBLIC NOTICE
Loss of Document (Educational Certificate), My **Original Transfer Certificate/School leaving Certificate** is lost. If anyone finds the same, kindly contact: **9900624369** Sawal Das Jethani No. 3 & 4, Giddens Layout, Whitefield, Bangalore- 560066

LOST
I, **Suraksha Smitha,** R/at No.488/A, 1st A Main Road, 8th Block, Jayanagar, Bangalore-70, have lost my **Degree Certificate, Document / Identification No. 18PCM21065, Year 2021, St Joseph's College (Autonomous) Bangalore** while renovating in house. Finders please contact: **9845140767.**

OTHERS

Exhibition Halls/Art Gallery

TRADE FAIR showcasing Kadamba, chalukya Portuguese, and British-era coins, banknotes, medals, tokens, and more. Get free valuation of gold and silver coins by experts. (Note: Modern Republic Indian coins are not included. No Entry for YouTubers) Dates : 7th to 9th March 2025. Time: 11:00 AM to 7:30 PM. Venue : Kala Academy, Panaji, Goa. Entry: Free. Don't miss this unique opportunity! 9820010483.

BUSINESS

Business Offers

Finance

NRI'S INVESTMENTS and finance NOW available (HIGH VALUE FUNDS) on low interest against LANDs & PROPERTIES call -7204995189

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH Classifieds — More value, more impact — DECCAN HERALD — ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY @ 550/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact:
+91 9901641752 | +91 9845114560 | +91 9886213331

ಕಬ್ಬನ್ ಉದ್ಯಾನ: ಖಾಸಗಿ ಕಲಾ ಕೇಂದ್ರಕ್ಕೆ ಸಾರ್ವಜನಿಕರ ವಿರೋಧ

ಬೆಂಗಳೂರು: ಕಬ್ಬನ್ ಉದ್ಯಾನದಲ್ಲಿ ಖಾಸಗಿ ಕಲಾ ಕೇಂದ್ರ ನಿರ್ಮಿಸಲು ಐದು ಎಕರೆ ಜಾಗವನ್ನು ಉದ್ಯಮಿಯೊಬ್ಬರಿಗೆ ಗುತ್ತಿಗೆ ಆಧಾರದಲ್ಲಿ ನೀಡುತ್ತಿರುವುದನ್ನು ಕಬ್ಬನ್ ಉದ್ಯಾನದ ವಾಯು ವಿಹಾರಿಗಳು ಹಾಗೂ ಸಾರ್ವಜನಿಕರು ಖಂಡಿಸಿದ್ದಾರೆ.

ಬೆಂಗಳೂರು ಎಂದರೆ ಎಲ್ಲರಿಗೂ ನೆನಪಾಗುವುದೇ ಲಾಲ್‌ಬಾಗ್ ಮತ್ತು ಕಬ್ಬನ್ ಉದ್ಯಾನ. ಈಗಾಗಲೇ ಕಬ್ಬನ್ ಉದ್ಯಾನ ಅರ್ಧಕ್ಕೂ ಹೆಚ್ಚು ಪ್ರದೇಶವನ್ನು ಕಳೆದುಕೊಂಡಿದೆ. ಸರ್ಕಾರ ಅಭಿವೃದ್ಧಿಯ ಹೆಸರಿನಲ್ಲಿ ಇಲ್ಲಿ ಕಾಂಕ್ರೀಟ್ ಕಟ್ಟಡಗಳನ್ನು ಏಕೆ ನಿರ್ಮಿಸಲು ಮುಂದಾಗುತ್ತಿದೆ ಎಂಬುದು ತಿಳಿಯುತ್ತಿಲ್ಲ. ಖಾಸಗಿ ಕಲಾ ಕೇಂದ್ರ ಮಾಡಬೇಕು ಎಂಬ ಪ್ರಸ್ತಾವ ಕೇವಲ ಸರ್ಕಾರ ಅಥವಾ ಅದಕ್ಕೆ ಸಂಬಂಧಪಟ್ಟವರ ವೈಯುಕ್ತಿಕ ಹಿತಾಸಕ್ತಿಗಾಗಿಯೇ ಹೊರತು ಸಾರ್ವಜನಿಕರ ಅನುಕೂಲಕ್ಕಲ್ಲ. ಇದರಿಂದ ಪರಿಸರಕ್ಕೆ ಧಕ್ಕೆಯಾಗುವುದಷ್ಟೇ ಅಲ್ಲ, ಉದ್ಯಾನ ನಗರಿ ಎನ್ನುವ ಬೆಂಗಳೂರಿಗೂ ಕಳಂಕ ತಟ್ಟುತ್ತದೆ. ಈಗಾಗಲೇ ಸಾಕಷ್ಟು ಸರಕಾರಿ ಕಟ್ಟಡಗಳಿಂದ ತುಂಬಿರುವ ಕಬ್ಬನ್ ಉದ್ಯಾನವನ್ನು ಖಾಸಗಿಯವರಿಗೆ ಬಿಟ್ಟುಕೊಟ್ಟರೆ ನೂರಾರು ವರ್ಷದಷ್ಟು ಹಳೆಯದಾದ ಸಾವಿರಾರು ಮರಗಳಿಗೂ ಹಾನಿಯಾಗುತ್ತದೆ.

ಕಡೂರು ಫಣಿಶಂಕರ್, ತಲಗಟ್ಟಪುರ

ಬೆಂಗಳೂರು ನಗರ ಈಗಾಗಲೇ ಉದ್ಯಾನನಗರಿ ಎಂಬ ಹಣೆಪಟ್ಟಿ ಕಳಚಿ ಕಾಂಕ್ರೀಟ್ ನಾಡು ಎಂದು ಬಿಂಬಿತವಾಗುತ್ತಿದೆ. ನಗರದಲ್ಲಿರುವ ಉದ್ಯಾನಗಳನ್ನು ಉಳಿಸಿ ಬೆಳೆಸುವ ಕೆಲಸವಾಗಬೇಕು. ಇವುಗಳನ್ನು ನಮ್ಮ ಮುಂದಿನ ಪೀಳಿಗೆಗೆ ತಲುಪಿಸುವುದು ನಮ್ಮೆಲ್ಲರ ಜವಾಬ್ದಾರಿ ಆಗಿದೆ. ಕಬ್ಬನ್ ಉದ್ಯಾನದಲ್ಲಿ ಖಾಸಗಿ ಕಟ್ಟಡ ನಿರ್ಮಿಸುವುದಕ್ಕೆ ಸರ್ಕಾರ ಅವಕಾಶ ನೀಡಬಾರದು. ಸರ್ಕಾರ ಕೂಡಲೇ ಈ ನಿರ್ಧಾರದಿಂದ ಹಿಂದೆ ಸರಿಯಬೇಕು. ಇಲ್ಲದಿದ್ದರೆ ಸಾರ್ವಜನಿಕರು ಹೋರಾಟಕ್ಕೆ ಇಳಿಯಬೇಕಾಗುತ್ತದೆ.

ಎಂ.ಎನ್. ಬಸವರಾಜು, ರಾಜರಾಜೇಶ್ವರಿ ನಗರ

ಕಬ್ಬನ್ ಉದ್ಯಾನ ಬೆಂಗಳೂರಿನ ಶ್ವಾಸಕೋಶದಂತೆ ಕಾರ್ಯನಿರ್ವಹಿಸುತ್ತದೆ. ಇಲ್ಲಿ ಯಾವುದೇ ರೀತಿಯ ಕಟ್ಟಡಗಳು ನಿರ್ಮಿಸುವುದಕ್ಕೆ ಅವಕಾಶ ನೀಡಬಾರದು. ಅಭಿವೃದ್ಧಿಯ ಹೆಸರಿನಲ್ಲಿ ಮರ ಗಿಡಗಳ ಮಾರಣ ಹೋಮ ಮಾಡುವುದು ಸರಿಯಲ್ಲ. ಸರ್ಕಾರ ಈ ಬಗ್ಗೆ ಗಮನ ಹರಿಸಬೇಕು. ಖಾಸಗಿ ಕಟ್ಟಡ ನಿರ್ಮಿಸುವ ಪ್ರಸ್ತಾವದಿಂದ ಹಿಂದೆ ಸರಿಯಬೇಕು.

ರಾಧಾ ಮರಿಗೌಡ, ವಾಯು ವಿಹಾರಿ

ಕಬ್ಬನ್ ಉದ್ಯಾನ ಹಾಗೂ ಲಾಲ್‌ಬಾಗ್‌ನಲ್ಲಿರುವ ಪ್ರಾಣಿ, ಪಕ್ಷಿ, ಗಿಡ–ಮರಗಳ ಫೋಟೊಗಳನ್ನು ತೆಗೆಯಲು ಸರ್ಕಾರ ನಿಷೇಧಿಸಿದೆ. ಆದರೆ, ಖಾಸಗಿ ಉದ್ಯಮಿಯೊಬ್ಬರಿಗೆ ಕಬ್ಬನ್ ಉದ್ಯಾನದಲ್ಲಿ ಕಲಾ ಕೇಂದ್ರ ನಿರ್ಮಿಸಲು ಅವಕಾಶ ನೀಡುತ್ತಿರುವುದು ಎಷ್ಟು ಸರಿ? ನಗರದಲ್ಲಿರುವ ಯಾವುದೇ ಉದ್ಯಾನಗಳಲ್ಲಿ ಕಟ್ಟಡಗಳ ನಿರ್ಮಾಣಕ್ಕೆ ಅವಕಾಶ ಕಲ್ಪಿಸಬಾರದು.

ಎ.ಎನ್. ಕೃಷ್ಣಮೂರ್ತಿ, ಹವ್ಯಾಸಿ ಛಾಯಾಗ್ರಾಹಕ

ಕಬ್ಬನ್ ಉದ್ಯಾನ ಹಾಗೂ ಲಾಲ್‌ಬಾಗ್ ಬೆಂಗಳೂರು ನಗರದ ಪರಿಸರ ಸಮತೋಲನವನ್ನು ಕಾಪಾಡುವ ಜೀವನಾಡಿಗಳಾಗಿವೆ. ವಿಶ್ವದ ದೊಡ್ಡ ನಗರಗಳಲ್ಲಿ ಉದ್ಯಾನಗಳನ್ನು ಹೇಗೆ ಸಂರಕ್ಷಿಸಲಾಗುತ್ತಿದೆ ಎಂಬುದನ್ನು ಗಮನಹರಿಸಬೇಕು. ಕಬ್ಬನ್ ಉದ್ಯಾನದಲ್ಲಿ ಖಾಸಗಿ ಕಟ್ಟಡ ನಿರ್ಮಾಣಕ್ಕೆ ಅವಕಾಶ ನೀಡುತ್ತಿರುವುದು ಖಂಡನೀಯ. ಇದು ಪರಿಸರ ಹಾಗೂ ನಾಗರಿಕರ ಹಿತಾಸಕ್ತಿಗೆ ಧಕ್ಕೆ ತರುತ್ತದೆ. ಆದ್ದರಿಂದ, ಈ ಹಸಿರು ಹಾಸಿಗೆ, ಮರಗಿಡಗಳನ್ನು ಉಳಿಸಲು ಮತ್ತು ಬೆಳೆಸಲು ಸಾರ್ವಜನಿಕರು, ವಿದ್ಯಾರ್ಥಿಗಳು, ಹಾಗೂ ಕನ್ನಡ ಪರ ಸಂಘಟನೆಗಳು ಒಗ್ಗೂಡಿ ಕಾರ್ಯನಿರ್ವಹಿಸಬೇಕು. ಸಾರ್ವಜನಿಕ ಹಿತಾಸಕ್ತಿಯನ್ನು ಪರಿಗಣಿಸಿ ಸರ್ಕಾರ ಈ ಯೋಜನೆಯನ್ನು ಕೈಬಿಡಬೇಕು.

ಎಸ್.ಟಿ. ರಾಮಚಂದ್ರ, ಕೋಣನಕುಂಟೆ

ಅಭಿಪ್ರಾಯ ಕಳುಹಿಸಿ

ಕಬ್ಬನ್ ಉದ್ಯಾನದಲ್ಲಿ ಖಾಸಗಿ ಕೇಂದ್ರ ನಿರ್ಮಿಸುವ ಕುರಿತು ಚರ್ಚೆ ನಡೆಯುತ್ತಿದೆ. ಈ ಬಗ್ಗೆ ಸಾರ್ವಜನಿಕರು ತಮ್ಮ ಅಭಿಪ್ರಾಯಗಳನ್ನು 50 ಪದಗಳ ಮಿತಿಯಲ್ಲಿ ಈ ಕೆಳಗಿನ ವಾಟ್ಸ್‌ಆ್ಯಪ್ ಸಂಖ್ಯೆಗೆ ಕಳುಹಿಸಬಹುದು. ಜೊತೆಗೆ ನಿಮ್ಮ ಭಾವಚಿತ್ರವೂ ಇರಲಿ.

ವಾಟ್ಸ್‌ಆ್ಯಪ್ ಸಂಖ್ಯೆ: 96060 38256

ಸಂಧಿವಾತ ಚಿಕಿತ್ಸೆಗೆ ಔಷಧ ಕೊರತೆ

ಬಿಎಂಸಿಆರ್‌ಐ: ವಿಕ್ಟೋರಿಯಾ ಆಸ್ಪತ್ರೆ ಒಪಿಡಿಯಲ್ಲಿ ರುಮಟಾಲಜಿ ಕ್ಲಿನಿಕ್ ಕಾರ್ಯನಿರ್ವಹಣೆ

• ವರುಣ ಹೆಗಡೆ

ಬೆಂಗಳೂರು: ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಡಿ (ಬಿಎಂಸಿಆರ್‌ಐ) ಕಾರ್ಯನಿರ್ವಹಿಸುತ್ತಿರುವ ಸಂಧಿವಾತ–ಕೀಲುರಿತ (ರುಮಟಾಲಜಿ) ಚಿಕಿತ್ಸಾ ಕ್ಲಿನಿಕ್‌ಗೆ ಭೇಟಿ ನೀಡುವ ರೋಗಿಗಳಿಗೆ ಔಷಧ ಸಮಸ್ಯೆ ತಲೆದೋರಿದ್ದು, ವೈದ್ಯರು ಬರೆಯುವ ಬಹುತೇಕ ಔಷಧಗಳು ಸಂಸ್ಥೆಯ ಔಷಧಾಲಯದಲ್ಲಿ ದೊರೆಯುತ್ತಿಲ್ಲ.

ವಿಕ್ಟೋರಿಯಾ ಆಸ್ಪತ್ರೆಯ ಹೊರರೋಗಿ ವಿಭಾಗದ (ಒಪಿಡಿ) ಮೊದಲ ಮಹಡಿಯಲ್ಲಿ ಈ ಕ್ಲಿನಿಕ್ ಕಾರ್ಯನಿರ್ವಹಿಸುತ್ತಿದೆ. ಸರ್ಕಾರಿ ವೈದ್ಯಕೀಯ ವ್ಯವಸ್ಥೆಯಡಿಯ ಏಕೈಕ ಕ್ಲಿನಿಕ್ ಇದಾಗಿದೆ. ರಾಜ್ಯದಲ್ಲಿ ಸಂಧಿವಾತ ತಜ್ಞರ ಕೊರತೆಯಿಂದಾಗಿ, ಸಂಧಿವಾತ ಮತ್ತು ಕೀಲು ಸಮಸ್ಯೆ ಎದುರಿಸುತ್ತಿರು ವವರಿಗೆ ಚಿಕಿತ್ಸೆ ಸಮಸ್ಯೆಯಾಗಿದೆ. ಆದ್ದರಿಂದ ಇಂಡಿಯನ್ ರುಮಟಾಲಜಿ ಅಸೋಸಿಯೇಷನ್ ಕರ್ನಾಟಕ ಶಾಖೆಯ (ಐಆರ್‌ಎಕೆಸಿ) ಜತೆಗೆ ಬಿಎಂಸಿಆರ್‌ಐ ಒಪ್ಪಂದ ಮಾಡಿಕೊಂಡಿದ್ದು, ಪ್ರತಿ ಗುರುವಾರ ಬೆಳಿಗ್ಗೆ 9.30ರಿಂದ ಮಧ್ಯಾಹ್ನ 12.30ರವರೆಗೆ ಈ ಕ್ಲಿನಿಕ್ ಕಾರ್ಯನಿರ್ವಹಿಸುತ್ತಿದೆ. ಇಲ್ಲಿ ರೋಗಿಗಳಿಗೆ ವೈದ್ಯರು ಸೂಚಿಸುವ ಔಷಧಗಳು ವಿಕ್ಟೋರಿಯಾ ಆಸ್ಪತ್ರೆಯ ಔಷಧಾಲಯದಲ್ಲಿ ಸಿಗದಿದ್ದರಿಂದ ಖಾಸಗಿ ಔಷಧ ಮಳಿಗೆಗಳನ್ನು ಅವಲಂಬಿಸಬೇಕಾಗಿದೆ.

ಕ್ಲಿನಿಕ್‌ನ ಹೊರಗೆ ಚಿಕಿತ್ಸೆಗೆ ಕಾಯುತ್ತಿದ್ದ ರೋಗಿಗಳು

> **ಚಿಕಿತ್ಸೆಗೆ ಬರುವವರು ಬಡವರಾದ್ದರಿಂದ ಅವರಿಗೆ ಮಾತ್ರೆಗಳ ವೆಚ್ಚ ಭರಿಸುವುದು ಕಷ್ಟಸಾಧ್ಯವಾಗಲಿದೆ. ಈ ಬಗ್ಗೆ ಬಿಎಂಸಿಆರ್‌ಐಗೆ ಪತ್ರ ಬರೆಯಲಾಗಿದೆ**
> **ಡಾ.ಕೆ.ಎಂ. ಮಹೇಂದ್ರನಾಥ್**
> ಕ್ಲಿನಿಕ್‌ನ ಸಂಧಿವಾತ ತಜ್ಞ

2023ರ ಆ.1ರಿಂದ ಈ ಕ್ಲಿನಿಕ್ ಸೇವೆ ನೀಡುತ್ತಿದೆ. ಈ ಹಿಂದೆ ಇಂಡಿಯನ್ ರುಮಟಾಲಜಿ ಅಸೋಸಿಯೇಷನ್‌ನ ಅಧ್ಯಕ್ಷರೂ ಆಗಿದ್ದ, ಸಂಧಿವಾತ ತಜ್ಞ ಡಾ.ಕೆ.ಎಂ. ಮಹೇಂದ್ರನಾಥ್ ನೇತೃತ್ವದಲ್ಲಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸೇವೆ ನೀಡಲಾಗುತ್ತಿದೆ. ಅವರು ಸಂದರ್ಶಕ ಸಮಾಲೋಚಕರಾಗಿ ಭೇಟಿ ನೀಡುತ್ತಿದ್ದಾರೆ. ಒಪ್ಪಂದದ ಅನುಸಾರ, ಬಿಎಂಸಿಆರ್‌ಐ ಚಿಕಿತ್ಸೆಗೆ ಔಷಧ ಹಾಗೂ ಅಗತ್ಯ ಮೂಲಸೌಕರ್ಯವನ್ನು ಒದಗಿಸಬೇಕಿದೆ. ವೈದ್ಯಕೀಯ ಸೇವೆಯನ್ನು ಐಆರ್‌ಎಕೆಸಿ ವತಿಯಿಂದ ಒದಗಿಸಲಾಗುತ್ತಿದೆ.

ಎರಡು ಕೊಠಡಿ: ಕ್ಲಿನಿಕ್ ನಡೆಸಲು ಎರಡು ಕೊಠಡಿಗಳನ್ನು ನೀಡಲಾಗಿದ್ದು, ಮೂಲಸೌಕರ್ಯ ಒದಗಿಸಿಲ್ಲ. ರೋಗಿಗಳ ನಿರ್ವಹಣೆಗೆ ಶುಶ್ರೂಷಕರನ್ನೂ ನೇಮಿಸಿಲ್ಲ. ಹೊರ ರೋಗಿಗಳಿಗೆ ಕುಳಿತುಕೊಳ್ಳಲು ಹೆಚ್ಚಿನ ಆಸನ ವ್ಯವಸ್ಥೆಯೂ ಇಲ್ಲ. ಇದರಿಂದಾಗಿ ಸಂಧಿವಾತ ಸಮಸ್ಯೆ ಎದುರಿಸುತ್ತಿರುವವರಲ್ಲಿ ಕೆಲವರು ವೈದ್ಯಕೀಯ ಸೇವೆಗೆ ನಿಂತೇ ಇರಬೇಕಾದ ಪರಿಸ್ಥಿತಿಯಿದೆ. ವಿಕ್ಟೋರಿಯಾ ಆಸ್ಪತ್ರೆಯ ಒಳಗಡೆ ಪ್ರಯೋಗಾಲಯ ಇಲ್ಲದಿರುವುದರಿಂದ ‘ಆ್ಯಂಟಿ ನ್ಯೂಕ್ಲಿಯರ್ ಆ್ಯಂಟಿಬಾಡೀಸ್’ ಪರೀಕ್ಷೆ ಸೇರಿ ವಿವಿಧ ಪರೀಕ್ಷೆಗಳಿಗೆ ರೋಗಿಗಳು ಅಲೆದಾಟ ನಡೆಸಬೇಕಾಗಿದೆ.

‘ವೈದ್ಯರು ಬರೆದುಕೊಡುವ ಬಹುತೇಕ ಮಾತ್ರೆಗಳನ್ನು ಹೊರಗಡೆಯೇ ಖರೀದಿಸಬೇಕಾಗಿದೆ. ದುಬಾರಿ ದರದ ಮಾತ್ರೆಗಳು ವಿಕ್ಟೋರಿಯಾ ಆಸ್ಪತ್ರೆಯ ಔಷಧಾಲಯದಲ್ಲಿ ದೊರೆಯುತ್ತಿಲ್ಲ. ಇರುವ ಮಾತ್ರೆಯನ್ನೂ ವೈದ್ಯರು ಒಂದು ತಿಂಗಳಿಗೆ ಬರೆದರೆ, ಒಂದು ವಾರಕ್ಕೆ ಮಾತ್ರ ನೀಡಲಾಗುತ್ತಿದೆ. ಪ್ರಯೋಗಾಲಯ ಪರೀಕ್ಷೆಗೂ ಅಲೆದಾಟ ನಡೆಸಬೇಕಾಗಿದೆ’ ಎಂದು ರೋಗಿಗಳು ಬೇಸರ ವ್ಯಕ್ತಪಡಿಸಿದರು.

‘ವೈದ್ಯರು ಬರೆದ ಔಷಧಗಳಲ್ಲಿ ಒಂದೆರಡು ಔಷಧಗಳನ್ನು ಮಾತ್ರ ಉಚಿತವಾಗಿ ನೀಡಲಾಗುತ್ತಿದೆ. ದುಬಾರಿ ಬೆಲೆಯ ಔಷಧಗಳು ದೊರೆಯುತ್ತಿಲ್ಲ’ ಎಂದು ಸುಂಕದಕಟ್ಟೆಯ ಶಶಿಕಲಾ ತಿಳಿಸಿದರು. ‘ಆಸ್ಪತ್ರೆಯಲ್ಲಿಯೇ ಎಲ್ಲ ಔಷಧ ದೊರೆತರೆ ಸಹಕಾರಿಯಾಗಲಿದೆ. ಲಭ್ಯವಿರುವ ಔಷಧವನ್ನು ವೈದ್ಯರು ಬರೆದಷ್ಟು ಕೂಡ ನೀಡುತ್ತಿಲ್ಲ’ ಎಂದು ಬನ್ನೇರುಘಟ್ಟದ ಜಗದೀಶ್ ಹೇಳಿದರು.

ರೋಗಿಗಳ ಸಂಖ್ಯೆ ಹೆಚ್ಚಳ

ಖಾಸಗಿ ವ್ಯವಸ್ಥೆಯಡಿ ವೈದ್ಯರ ಸಮಾಲೋಚನಾ ಶುಲ್ಕ ಅಧಿಕವಿರುವ ಕಾರಣ, ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ಕ್ಲಿನಿಕ್‌ಗೆ ಅಧಿಕ ಸಂಖ್ಯೆಯಲ್ಲಿ ರೋಗಿಗಳು ಬರುತ್ತಿದ್ದಾರೆ. ವೈದ್ಯರ ಲಭ್ಯತೆ ಆಧರಿಸಿ, 50ರಿಂದ 60 ಹೊರರೋಗಿಗಳಿಗೆ ಪ್ರತಿ ಗುರುವಾರ ಚಿಕಿತ್ಸೆ ಒದಗಿಸಲಾಗುತ್ತಿದೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿನ ಒಳರೋಗಿಗಳನ್ನೂ ಈ ಕ್ಲಿನಿಕ್‌ಗೆ ಕರೆತರಲಾಗುತ್ತದೆ. ನೆರೆಯ ರಾಜ್ಯಗಳಿಂದಲೂ ರೋಗಿಗಳು ಇಲ್ಲಿಗೆ ಬಂದು, ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಯಾವೆಲ್ಲ ಔಷಧ ಸಮಸ್ಯೆ?

‘ಹೈಡ್ರಾಕ್ಸಿಕ್ಲೋರೋಕ್ವಿನ್’, ‘ಮೆಥೊಟ್ರೆಕ್ಸೇಟ್’, ‘ಲೆಫ್ಲುನೊಮೈಡ್’, ‘ಡೆಫ್ಲಾಜಾಕೋರ್ಟ್’, ‘ಎಂಎಂಎಫ್’, ‘ಟ್ಯಾಕ್ರೊಲಿಮಸ್’, ‘ಡೆಪೋಮೆಡ್ರೋಲ್ ಇಂಜೆಕ್ಷನ್’ ಸೇರಿ ಸಂಧಿವಾತಕ್ಕೆ ಸಂಬಂಧಿಸಿದ ವಿವಿಧ 15 ಜೀವರಕ್ಷಕ ಔಷಧಗಳು ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ಔಷಧಾಲಯದಲ್ಲಿ ದಾಸ್ತಾನು ಇಲ್ಲ.

ಲೋಕಾಯುಕ್ತ ದಾಳಿಯ ಸುಳಿವು ಸಿಗುತ್ತಲೇ ಕಚೇರಿ ತೊರೆದ ಅಧಿಕಾರಿಗಳು

ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ಅಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳ ವಿವಿಧ ಉಪ ನೋಂದಣಾಧಿಕಾರಿಗಳ ಕಚೇರಿಗಳ ಮೇಲೆ ಲೋಕಾಯುಕ್ತರು ಮತ್ತು ಉಪ ಲೋಕಾಯುಕ್ತರು ದಾಳಿ ನಡೆಸಿದ ವೇಳೆ ಅನೇಕ ಅಕ್ರಮ ಮತ್ತು ಕರ್ತವ್ಯಲೋಪ ಪತ್ತೆಯಾಗಿವೆ.

ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ಅವರು ನಗರದ ಎರಡು, ಉಪ ಲೋಕಾಯುಕ್ತರಾದ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಅವರು ಗ್ರಾಮಾಂತರ ಜಿಲ್ಲೆಯ ನಾಲ್ಕು ಮತ್ತು ನ್ಯಾಯಮೂರ್ತಿ ಬಿ.ವೀರಪ್ಪ ಅವರು ನಗರ ಹಾಗೂ ರಾಮನಗರದ ನಾಲ್ಕು ಕಚೇರಿಗಳಿಗೆ ದಿಢೀರ್ ಭೇಟಿ ನೀಡಿ ತಪಾಸಣೆ ನಡೆಸಿದರು.

ಈ ವೇಳೆ ಹಲವು ಅಕ್ರಮ ಪತ್ತೆ ಆಗಿದ್ದು, ಪ್ರಕರಣ ದಾಖಲಿಸಿಕೊಳ್ಳಲು ಸೂಚಿಸಿದ್ದಾರೆ. ತಪ್ಪಿತಸ್ಥ ಅಧಿಕಾರಿ ಮತ್ತು ಸಿಬ್ಬಂದಿ ವಿರುದ್ಧ ಅಗತ್ಯ ಕ್ರಮ ತೆಗೆದುಕೊಳ್ಳುವುದಾಗಿ ಹೇಳಿದ್ದಾರೆ.

ನಗರದ ಉಪನೋಂದಣಾಧಿಕಾರಿ ಕಚೇರಿಯಲ್ಲಿ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್‌ಪಾಟೀಲ್ ಅವರು ಅಧಿಕಾರಿಗಳಿಂದ ವಿವರಣೆ ಪಡೆದರು

ಕಚೇರಿ ತೊರೆದ ಅಧಿಕಾರಿಗಳು (ದೊಡ್ಡಬಳ್ಳಾಪುರ ವರದಿ): ಇಲ್ಲಿನ ಉಪ ನೋಂದಣಿ ಕಚೇರಿಗೆ ಉಪ ಲೋಕಾಯುಕ್ತರು ಭೇಟಿ ನೀಡುವ ಮಾಹಿತಿಸಿಗುತ್ತಲೇ ನಗರದ ಕೆಲವು ಸರ್ಕಾರಿ ಕಚೇರಿಯ ಅಧಿಕಾರಿಗಳು ನಿಗದಿತ ಸಮಯಕ್ಕೂ ಮುನ್ನವೇ ಕಚೇರಿಯಿಂದ ನಿರ್ಗಮಿಸಿದರು.

ನಗರದ ಉಪನೋಂದಣಿ ಅಧಿಕಾರಿಗಳ ಕಚೇರಿಗೆ ಗುರುವಾರ ಮಧ್ಯಾಹ್ನ 3ಕ್ಕೆ ಉಪಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಅವರ ನೇತೃತ್ವದಲ್ಲಿ ಅಧಿಕಾರಿಗಳ ತಂಡ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಂತೆ ನಗರಸಭೆ ಸೇರಿದಂತೆ ನಗರದ ಬಹುತೇಕ ಕಚೇರಿಗಳಲ್ಲಿ ಕೆಳ ಹಂತದ ಕೆಲ ಅಧಿಕಾರಿಗಳು ನಿಗದಿತ ಸಮಯಕ್ಕೂ ಮುನ್ನವೇ ಕಚೇರಿಯಿಂದ ನಾಪತ್ತೆಯಾಗಿದ್ದರು.

- ದಾಸನಪುರದ ಕಚೇರಿಯ ಕಸದಬುಟ್ಟಿಯಲ್ಲಿ ₹20,000 ನಗದು ಪತ್ತೆ. ಗುಮಾಸ್ತನ ಖಾತೆಗೆ ಫೋನ್‌ಪೇ ಮೂಲಕ ಪ್ರತಿದಿನ ಹಣ ಪಾವತಿ. ಇ.ಸಿಯ ಹಣ ಎಂದು ವಿವರ ನೀಡಿದ ಸಿಬ್ಬಂದಿ
- ದೇವನಹಳ್ಳಿ ಕಚೇರಿಯ ಎರಡನೇ ದರ್ಜೆ ಸಹಾಯಕನ ಬಳಿ ದಾಖಲೆ ಇಲ್ಲದ ₹20,000 ನಗದು. ಇದೇ ಕಚೇರಿಯಿಂದ ವ್ಯಕ್ತಿಯೊಬ್ಬ ಓಡಿಹೋಗಿದ್ದು, ಆತನ ಬ್ಯಾಗ್‌ನಲ್ಲಿದ್ದ ಡೈರಿಯಲ್ಲಿ ಹಳ್ಳಿಗಳ ಹೆಸರು ಮತ್ತು ಹಣ ಸಂಗ್ರಹದ ವಿವರಗಳು ಇವೆ. ತನಿಖೆಗೆ ಆದೇಶಿಸಲಾಗಿದೆ
- ವಿಜಯನಗರದ ಕಚೇರಿಯ ದ್ವಿತೀಯ ದರ್ಜೆ ಸಹಾಯಕಿಯ ಪತಿಯ ಖಾತೆಗೆ ಇ.ಸಿ ಶುಲ್ಕದ ಹಣವನ್ನು ಫೋನ್‌ಪೇ ಮೂಲಕ ಪಾವತಿ ಮಾಡಲಾಗಿದೆ. ಮತ್ತೊಬ್ಬ ಸಿಬ್ಬಂದಿಯ ಫೋನ್‌ಪೇ ಸ್ಟೇಟ್‌ಮೆಂಟ್‌ನಲ್ಲಿ ಪ್ರತಿ ತಿಂಗಳು ಲಕ್ಷಾಂತರ ಮೊತ್ತ ವರ್ಗಾವಣೆಯಾಗಿದೆ. ಈ ಬಗ್ಗೆ ತನಿಖೆಗೆ ಆದೇಶಿಸಲಾಗಿದೆ
- ವಿಜಯನಗರದ ಕಚೇರಿಯಲ್ಲಿ ನೋಂದಣಿ ಮಾಡಿದ ದಾಖಲೆಗಳಲ್ಲಿ ಪ್ಯಾನ್‌ಕಾರ್ಡ್ ಸಂಖ್ಯೆ ನಮೂದಿಸಿಲ್ಲ
- ಜೆ.ಪಿ.ನಗರದ ಕಚೇರಿ ಸಿಬ್ಬಂದಿಯ ಕಾರಿನಲ್ಲಿ ದುಬಾರಿ ಬೆಲೆಯ ಮೈಕಲ್ ಕೋರ್ಸ್ ಕೈಗಡಿಯಾರ ಪತ್ತೆಯಾಗಿದೆ

ಹಾಸಿಗೆ ಅಡಿ ರದ್ದಾದ ನೋಟು

ಕೋಲಾರ: ಬೆಸ್ಕಾಂನ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ನಾಗರಾಜ್ ಜಿ. ಅವರ ಮನೆಯ ಹಾಸಿಗೆ ಅಡಿಯಲ್ಲಿ ₹1.98 ಲಕ್ಷ ಮೌಲ್ಯದ 500 ಮುಖಬೆಲೆಯ ರದ್ದಾದ ನೋಟುಗಳು ಪತ್ತೆಯಾಗಿವೆ.

ರೈತರ ಸಾಲ ಮನ್ನಾ ಮಾಡಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈತರ ಸಾಲ ಮನ್ನಾ, ಸ್ವಾಮಿನಾಥನ್ ವರದಿ ಜಾರಿ ಮಾಡುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ನೇತೃತ್ವದಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ರೈತರು ಗುರುವಾರ ಪ್ರತಿಭಟನೆ ನಡೆಸಿದರು.

ರೈತರ ಸಮಸ್ಯೆಗಳನ್ನು ಬಗೆಹರಿಸಲು ರೈತ ಕೃಷಿ ಪರಿಷತ್ ರೂಪಿಸಬೇಕು. ಪ್ರತಿ ಕೆ.ಜಿ. ರೇಷ್ಮೆಗೆ ಕನಿಷ್ಠ ₹1 ಸಾವಿರ ಬೆಲೆ ನಿಗದಿ ಮಾಡಬೇಕು. ಪಶುಪಾಲಕರಿಗೆ ಹಾಲಿನ ಪ್ರೋತ್ಸಾಹ ಧನ ಸುಮಾರು ₹ 700 ಕೋಟಿ ಹಣ ಬಿಡುಗಡೆ ಮಾಡಿ, ಲೀಟರ್ ಹಾಲಿಗೆ ಕನಿಷ್ಠ ₹55 ಬೆಲೆ ನಿಗದಿಪಡಿಸಬೇಕು ಎಂದರು.

ಕೃಷಿ ಪಂಪ್‌ಸೆಟ್‌ಗಳಿಗೆ ನಿರಂತರ ಹತ್ತು ಗಂಟೆ 3 ಫೇಸ್ ವಿದ್ಯುತ್ ನೀಡಬೇಕು ಮತ್ತು ತೋಟದ ಮನೆಗಳಿಗೆ ನಿರಂತರ ಜ್ಯೋತಿ ಸಂಪರ್ಕ ಕಲ್ಪಿಸಬೇಕು. ಬಗರ್ ಹುಕುಂ ಸಾಗುವಳಿಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ನಿಲ್ಲಿಸಿ, 12 ವರ್ಷದಿಂದ ಉಳುಮೆ ಮಾಡುತ್ತಿರುವ ರೈತರಿಗೆ ಸಾಗುವಳಿ ಚೀಟಿ ನೀಡಬೇಕು ಎಂದು ಆಗ್ರಹಿಸಿದರು.

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದ ನೇತೃತ್ವದಲ್ಲಿ ರೈತರು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು

ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಅತಿವೃಷ್ಟಿ, ಅನಾವೃಷ್ಟಿ, ಪ್ರಾಣಿಗಳ ಉಪಟಳದಿಂದ ಆದ ಬೆಳೆ ನಷ್ಟಕ್ಕೆ ವೈಜ್ಞಾನಿಕ ಪರಿಹಾರ ನೀಡಬೇಕು. ರಾಜ್ಯದ ಅಭಿವೃದ್ಧಿ ಹೆಸರಿನಲ್ಲಿ ರೈತರ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವುದನ್ನು ನಿಲ್ಲಿಸಬೇಕು. ಭೂಸ್ವಾಧೀನ ಅವಶ್ಯಕತೆ ಇದ್ದರೆ ಜಂಟಿ ಪಾಲುದಾರಿಕೆಯಲ್ಲಿ ಉದ್ಯಮ ಆರಂಭಿಸಿ, ಶೇಕಡ 50:50 ಅನುಪಾತದಲ್ಲಿ ಅಭಿವೃದ್ಧಿ ಪಡಿಸಿದಜಮೀನು ನೀಡಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ರಾಜ್ಯ ರೈತ ಸಂಘಗಳ ಏಕೀಕರಣ ಸಮಿತಿ ಅಧ್ಯಕ್ಷ ಪಚ್ಚೆ ನಂಜುಂಡಸ್ವಾಮಿ, ರಾಜ್ಯ ಅಧ್ಯಕ್ಷ ವಿ.ಆರ್.ನಾರಾಯಣರೆಡ್ಡಿ, ಚೂನಪ್ಪ ಪೂಜೇರಿ, ಕಾರ್ಯಾಧ್ಯಕ್ಷ ಟಿ.ಆರ್. ವಿದ್ಯಾಸಾಗಾರ್, ಶ್ರೀನಿವಾಸ್ ಪಾಲ್ಗೊಂಡಿದ್ದರು.

> **ರೈತರ ಬೇಡಿಕೆಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ತಂದು ಈಡೇರಿಸಲು ಕ್ರಮ ವಹಿಸಲಾಗುವುದು**
> **ಸಂತೋಷ್ ಲಾಡ್,** ಕಾರ್ಮಿಕ ಸಚಿವ

ಮಂಡ್ಯದಲ್ಲಿ ಕೃಷಿ ವಿ.ವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯದಲ್ಲಿ ಹೊಸ ‘ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ (ಸಮಗ್ರ ವಿವಿ) ಸ್ಥಾಪಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಮೈಸೂರು, ಮಂಡ್ಯ, ಹಾಸನ, ರಾಮನಗರ ಜಿಲ್ಲೆಗಳನ್ನು ಸೇರಿಸಿ ಕೃಷಿ ವಿಶ್ವವಿದ್ಯಾಲಯ ಸ್ಥಾಪಿಸುವ ಸಂಬಂಧ ಕಾಯ್ದೆ ರೂಪಿಸಲಾಗುತ್ತಿದೆ. ಮಂಡ್ಯದಲ್ಲಿ ಕೃಷಿ ವಿಶ್ವವಿದ್ಯಾಲಯಲ್ಲಿ ಸ್ಥಾಪಿಸುವುದಾಗಿ 2024–25ನೇ ಸಾಲಿನ ಬಜೆಟ್‌ನಲ್ಲಿ ಮುಖ್ಯಮಂತ್ರಿ ಘೋಷಿಸಿದ್ದರು. ಈ ಬಗ್ಗೆ ಅಧ್ಯಯನಕ್ಕೆ 2024ರ ಮಾರ್ಚ್ 15ರಂದು ವಿಶ್ರಾಂತ ಕುಲಪತಿ ಡಾ.ಎಸ್. ರಾಜೇಂದ್ರ ಪ್ರಸಾದ್ ಅಧ್ಯಕ್ಷತೆಯ ತಜ್ಞರ ಸಮಿತಿ ರಚಿಸಲಾಗಿತ್ತು. ಸಮಿತಿಯು 2024ರ ಜುಲೈ 10ರಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅವರಿಗೆ ವರದಿ ಸಲ್ಲಿಸಿತ್ತು.

ಚಿತ್ರಾವಳಿ

ಮಹಿಳಾ ದಿನಾಚರಣೆಯ ಅಂಗವಾಗಿ ಎಚ್‌ಎಸ್‌ಬಿಸಿ ಇಂಡಿಯಾ ಮತ್ತು ಕನ್ಸರ್ನ್ ಇಂಡಿಯಾ ಫೌಂಡೇಶನ್ ಸಹಯೋಗದಲ್ಲಿ ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ ವಿದ್ಯುತ್ ಚಾಲಿತ (ಇವಿ) 30 ಆಟೊರಿಕ್ಷಾಗಳನ್ನು ವಿತರಿಸಲಾಯಿತು. ಎಚ್‌ಎಸ್‌ಬಿಸಿ ಗ್ಲೋಬಲ್ ಸರ್ವೀಸ್ ಸೆಂಟರ್ಸ್‌ನ ಮುಖ್ಯಸ್ಥೆ ಮಮತಾ ಮದಿರೆಡ್ಡಿ ಉಪಸ್ಥಿತರಿದ್ದರು

ವಿಜಯನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಗುರುವಾರ ಆಯೋಜಿಸಿದ್ದ ಜಾನಪದ ಉತ್ಸವದಲ್ಲಿ ನಮ್ಮ ಸಂಸ್ಕೃತಿ ನಮ್ಮ ಹೆಮ್ಮೆ ಕಾರ್ಯಕ್ರಮಕ್ಕೆ ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತೆ ಮಂಜುಶ್ರೀ ಅವರು ರಾಗಿಯ ರಾಶಿಗೆ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಿದರು. ಕಾಲೇಜಿನ ಪ್ರಾಂಶುಪಾಲರಾದ ಶುಭಾ, ಕನ್ನಡ ಸಂಘದ ಸಂಚಾಲಕರಾದ ದೇವಿಕಾ ಎಸ್, ಇತಿಹಾಸ ವಿಭಾಗದ ಮುಖ್ಯಸ್ಥರಾದ ಸ್ಮಿತಾ ಎಂ. ಭಾವಿಕಟ್ಟಿ, ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಮಂಜುಳಾ ಉಪಸ್ಥಿತರಿದ್ದರು

ರಾಜ್ಯದ ಎಲ್ಲ ವಿಧಾನಸಭಾ ಕ್ಷೇತ್ರಗಳಿಗೂ ಶಾಸಕರ ಅನುದಾನದಡಿ ಈಗ ನೀಡುತ್ತಿರುವ ಅನುದಾನಕ್ಕೆ ₹5 ಕೋಟಿ ಹೆಚ್ಚುವರಿ ಸೇರಿಸುವುದರ ಜತೆಗೆ, ಮೂಲಸೌಕರ್ಯ ಅಭಿವೃದ್ಧಿಗಳಿಗೆ ತಲಾ ₹50 ಕೋಟಿ ನೀಡಬೇಕು ಎಂದು ಬಿಜೆಪಿ ಮತ್ತು ಜೆಡಿಎಸ್ ಶಾಸಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು

ವೆಂಕಟರಮಣ ಸ್ವಾಮಿಯ ಬ್ರಹ್ಮ ರಥೋತ್ಸವ

ಕೆ.ಆರ್.ಪುರ: ವೈಟ್‌ಫೀಲ್ಡ್ ಸಮೀಪದ ಇಮ್ಮಡಿಹಳ್ಳಿಯಲ್ಲಿ ಪ್ರಸನ್ನ ವೆಂಕಟರಮಣ ಸ್ವಾಮಿಯ ಬ್ರಹ್ಮ ರಥೋತ್ಸವವು ವಿಜೃಂಭಣೆಯಿಂದ ನಡೆಯಿತು.

ವಿಶೇಷ ಪೂಜೆ, ಹೂವಿನ ಅಲಂಕಾರ ಮಾಡಲಾಗಿತ್ತು, ಜಾತ್ರಾ ಮಹೋತ್ಸವದಲ್ಲಿ ಮಂಗಳವಾದ್ಯದ ತಂಡಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ದೇವರ ಮೆರವಣಿಗೆ ಮಾಡಲಾಯಿತು.

ಹರಕೆ ಹೊತ್ತ ಭಕ್ತರು ರಥೋತ್ಸವಕ್ಕೆ ಬಾಳೆಹಣ್ಣು, ಹೂ ಅರ್ಪಿಸಿದರು. ಉತ್ಸವದ ಅಂಗವಾಗಿ ನಡೆದ ರಾಜ್ಯಮಟ್ಟದ ಕುಸ್ತಿ ಸ್ಪರ್ಧೆಯು ಜನಮನ ಸೆಳೆಯಿತು. ಶ್ರೀಆದಿಶಕ್ತಿ ದ್ರೌಪದಾಂಭ ಧರ್ಮರಾಯಸ್ವಾಮಿ ಕರಗ ಮಹೋತ್ಸವ ನಡೆಯಿತು. ವೈಟ್‌ಫೀಲ್ಡ್, ಹಗದೂರು, ರಾಮಗೊಂಡನಹಳ್ಳಿ, ನಾಗೊಂಡನಹಳ್ಳಿ, ಚನ್ನಸಂದ್ರ, ನಲ್ಲೂರಹಳ್ಳಿ, ಅಂಬೇಡ್ಕರ್ ಗುಟ್ಟದ ಜನರು ಜಾತ್ರೆಯಲ್ಲಿ ಭಾಗವಹಿಸಿದ್ದರು.

ಮಾಜಿ ಶಾಸಕ ಅರವಿಂದ ಲಿಂಬಾವಳಿ, ದೇವಸ್ಥಾನ ಸಮಿತಿ ವತಿಯಿಂದ ಅನ್ನದಾಸೋಹ ನಡೆಯಿತು. ಧರ್ಮದರ್ಶಿ ಎ.ಹನುಮಂತೇಗೌಡ ಸಮಿತಿಯ ಸದಸ್ಯರಾದ ಬಿ.ನಾರಾಯಣ ಸ್ವಾಮಿ, ವೈ. ನಾಗರಾಜ್, ಶ್ರೀರಾಮಯ್ಯ, ಸುಬ್ಬಾರೆಡ್ಡಿ, ಕೆ. ವೆಂಕಟರಮಣಸ್ವಾಮಿ, ಆರ್.ನಾಗರಾಜ್, ವಿ. ರವಿ, ತಿಪ್ಪಣ್ಣ, ಮುನೇಗೌಡರು, ಎನ್.ಶ್ರೀನಿವಾಸ್, ಹೆಚ್.ಬಿ.ಕೃಷ್ಣಮೂರ್ತಿ, ಯೋಗೇಶ್ ಭಾಗವಹಿಸಿದ್ದರು.

ನಗರದಲ್ಲಿ ಇಂದು

ಸಂಸ್ಕೃತಿ ಸಂಗಮ–2025 ‘ಅಕ್ಕ ರಾಜ್ಯ ಪ್ರಶಸ್ತಿ’ ಪ್ರದಾನ, ‘ವಚನಕಾರ್ತಿಯರ ಕ್ರಾಂತಿಯ ಹೆಗ್ಗುರುತು’ ಪುಸ್ತಕ ಬಿಡುಗಡೆ: ಸಾನ್ನಿಧ್ಯ: ಚನ್ನಬಸವ ಸ್ವಾಮೀಜಿ, ಅಧ್ಯಕ್ಷತೆ: ಟಿ.ಎ. ನಾರಾಯಣಗೌಡ, ಉದ್ಘಾಟನೆ: ಬರಗೂರು ರಾಮಚಂದ್ರಪ್ಪ, ಪ್ರಶಸ್ತಿ ಪ್ರದಾನ: ಬಸವರಾಜ ಹೊರಟ್ಟಿ, ಹೇಮಲತಾ ಮಹಿಷಿ, ಪುಸ್ತಕ ಬಿಡುಗಡೆ: ಈಶ್ವರ ಬಿ. ಖಂಡ್ರೆ, ಪುಸ್ತಕದ ಕುರಿತು: ಶಶಿಕಾಂತ ಪಟ್ಟಣ, ಆಶಯ ನುಡಿ: ಮುದ್ದಪ್ಪ, ಸಿ.ಸಿ. ಹೇಮಲತಾ, ‘ಶರಣೆ ಬೊಂತಾದೇವಿ’ ಪ್ರಶಸ್ತಿ ಸ್ವೀಕರಿಸುವವರು: ಪೂಜಾ ಗಾಂಧಿ, ಆಯೋಜನೆ: ಅಕ್ಕನಮನೆ ಪ್ರತಿಷ್ಠಾನ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4

ಪೂಜಾ ಗಾಂಧಿ

ವಿಶ್ವೇಶತೀರ್ಥರ ಸ್ಮಾರಕ ಆಸ್ಪತ್ರೆ ಉದ್ಘಾಟನೆ: ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಉದ್ಘಾಟನೆ: ಅಮಿತ್ ಶಾ, ಅತಿಥಿಗಳು: ಬಿ.ಎಸ್. ಯಡಿಯೂರಪ್ಪ, ಅರವಿಂದ ಲಿಂಬಾವಳಿ, ಬಿ.ವೈ. ವಿಜಯೇಂದ್ರ, ಕೆ.ಜೈರಾಜ್, ವಾಸುದೇವ ರಾವ್, ಹರಿದಾಸ್ ವಿ.ಕೆ., ಆಯೋಜನೆ: ಎಸ್‌ವಿಎಂ ಹಾಸ್ಪಿಟಲ್ಸ್, ಸ್ಥಳ: ಕುಂದಲಹಳ್ಳಿ ಗೇಟ್, ಮಾರತ್‌ಹಳ್ಳಿ, ಬೆಳಿಗ್ಗೆ 11.30

ಡಿ. ಪರಮೇಶ್ ನಾಯಕ್ ಅವರ ‘ಹಸಿರು ಜಾಗೃತಿ–ಭಾರತದಲ್ಲಿ ಪರಿಸರ ಮಾಲಿನ್ಯ ಮತ್ತು ತ್ಯಾಜ್ಯ ನಿರ್ವಹಣೆ ನಿಯಂತ್ರಿಸಲು ಸಾರ್ವಜನಿಕರ ಭಾಗವಹಿಸುವಿಕೆಗೆ ಸಜ್ಜುಗೊಳಿಸಿ ವರ್ತನೆಯ ಬದಲಾವಣೆ ತರಲು ಹಸಿರು ಆಂದೋಲನ’ ಪುಸ್ತಕ ಬಿಡುಗಡೆ: ದಿನೇಶ್ ಗುಂಡೂರಾವ್, ಉಪಸ್ಥಿತಿ: ಎಸ್.ಎಂ. ಜಯಕರ, ಅಧ್ಯಕ್ಷತೆ: ಎ.ಆರ್. ಗೋವಿಂದಸ್ವಾಮಿ, ಪುಸ್ತಕದ ಕುರಿತು: ಎಂ.ಎಸ್. ರೆಡ್ಡಿ, ಆಯೋಜನೆ: ಎನ್ವಿರಾನ್‌ಮೆಂಟ್ ಸೊಸೈಟಿ ಆಫ್ ಇಂಡಿಯಾ, ಸ್ಥಳ: ಬೆಂಗಳೂರು ಪ್ರೆಸ್‌ಕ್ಲಬ್, ಕಬ್ಬನ್ ಉದ್ಯಾನ, ಸಂಜೆ 4

ಶರಣ ಸಂಗಮ ‘ಬಸವ ತತ್ವದಲ್ಲಿ ಮಹಿಳೆಯರ ಪಾತ್ರ’: ಸಾನ್ನಿಧ್ಯ: ಉಮಾಭಾರತಿ ಮಾತಾಜಿ, ಅತಿಥಿಗಳು: ಪುಷ್ಪಾ ಎಂ., ವಿಶಾಲಕ್ಷಿ, ಅರುಣಕುಮಾರ್ ಡಿ.ಟಿ., ಆಯೋಜನೆ: ರಾಷ್ಟ್ರೀಯ ಬಸವತತ್ವ ಪರಿಷತ್ತು, ಸ್ಥಳ: ಡಾ.ಎಂ. ಚಿದಾನಂದಮೂರ್ತಿ ಸಭಾಂಗಣ, ಗೋವಿಂದರಾಜನಗರ, ಪಾಲಿಕೆ ಸೌಧ, ವಿಜಯನಗರ, ಸಂಜೆ 4.30

‘ಒಂದು ದೇಶ ಒಂದು ಚುನಾವಣೆ’ ಸಂವಾದ: ಅತಿಥಿಗಳು: ವೆಂಕಯ್ಯ ನಾಯ್ಡು, ಪಿ.ಸಿ. ಮೋಹನ್, ಅಧ್ಯಕ್ಷತೆ: ಎಂ.ಜಿ. ಬಾಲಕೃಷ್ಣ, ಆಯೋಜನೆ: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ, ಸ್ಥಳ: ಸರ್ ಎಂ.ವಿ. ಸಭಾಂಗಣ, ಎಫ್‌ಕೆಸಿಸಿಐ, ಕೆ.ಜಿ. ರಸ್ತೆ, ಸಂಜೆ 5

ಪ್ರತಿಭಾ ಶೋಧ ಗೀತೋತ್ಸವ–2025: ಉಪಸ್ಥಿತಿ: ಸಿ.ಎಸ್. ಬೋಪಯ್ಯ ಚೋವಂಡ, ಚಂದ್ರಶೇಖರ್, ಇಂಚರ ಪ್ರವೀಣ್‌ಕುಮಾರ್, ಆನಂದ ಮಾದಲಗೆರೆ, ಆಯೋಜನೆ: ಗಾಯನ ಗಂಗಾ ಟ್ರಸ್ಟ್, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ನೇ.ಭ. ರಾಮಲಿಂಗ ಶೆಟ್ಟಿ ಅವರ ‘ಕನ್ನಡದ ರಥವನ್ನೇರಿದಾರೋ’, ‘ಗವಾಕ್ಷಿ’ ಪುಸ್ತಕಗಳ ಬಿಡುಗಡೆ: ಸಾನ್ನಿಧ್ಯ: ನಿಶ್ಚಲಾನಂದನಾಥ ಸ್ವಾಮೀಜಿ, ಉದ್ಘಾಟನೆ: ಟಿ.ಎ. ನಾರಾಯಣಗೌಡ, ಅಧ್ಯಕ್ಷತೆ: ಮಹೇಶ ಜೋಶಿ, ಪುಸ್ತಕಗಳ ಬಿಡುಗಡೆ: ಗೊ.ರು. ಚನ್ನಬಸಪ್ಪ, ಅಗ್ರಹಾರ ಕೃಷ್ಣಮೂರ್ತಿ, ಅತಿಥಿಗಳು: ದೊಡ್ಡರಂಗೇಗೌಡ, ಕೆ.ಬಿ. ಪರಶಿವಪ್ಪ, ಆಯೋಜನೆ: ಸ್ನೇಹ ಬುಕ್‌ಹೌಸ್, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

‘ಸಮರ್ಪಣೆ’ ಕುಚಿಪುಡಿ ನೃತ್ಯ ವೈಭವ: ಪ್ರಸ್ತುತಿ: ವೈಜಯಂತಿ ಕಾಶಿ ಮತ್ತು ತಂಡ, ಆಯೋಜನೆ ಮತ್ತುಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ವಿದ್ಯುತ್ ಕಂಬ ಬದಲಾವಣೆ

ವರದಿ ಪರಿಣಾಮ

ದಾಬಸ್ ಪೇಟೆ: ಇಲ್ಲಿನ ಇಮಚೇನಹಳ್ಳಿ, ಕರಿಮಣ್ಣೆ, ತಟ್ಟೆಕೆರೆ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ಬದಿಯಲ್ಲಿದ್ದ ಶಿಥಿಲಗೊಂಡಿದ್ದ ವಿದ್ಯುತ್ ಕಂಬವನ್ನು ಬೆಸ್ಕಾಂ ಅಧಿಕಾರಿಗಳು ಬದಲಿಸಿದ್ದಾರೆ.

‘ಪ್ರಜಾವಾಣಿ’ ಮಾರ್ಚ್ 3ರ ಸಂಚಿಕೆಯ ಕುಂದು ಕೊರತೆ ವಿಭಾಗದಲ್ಲಿ ‘ವಿದ್ಯುತ್ ಕಂಬ ಬದಲಿಸಿ’ ಶೀರ್ಷಿಕೆಯಡಿ ವರದಿ ಪ್ರಕಟಿಸಿತ್ತು. ಇದರಿಂದ ಎಚ್ಚೆತ್ತ ಬೆಸ್ಕಾಂ ಅಧಿಕಾರಿಗಳು ಗುರುವಾರ ವಿದ್ಯುತ್ ಕಂಬವನ್ನು ಬದಲಿಸಿದ್ದಾರೆ.

ವರ್ತೂರು ಕೆರೆ ಉಳಿಸಿ ಅಭಿಯಾನ ನಡೆಯಿತು

ಕೆರೆ ಉಳಿಸಿ ಅಭಿಯಾನಕ್ಕೆ ಚಾಲನೆ

ಕೆ.ಆರ್.ಪುರ: ವರ್ತೂರು ಕೆರೆ ಅಂಗಳದಲ್ಲಿ ಕೃಪಾನಿಧಿ ಶಿಕ್ಷಣ ಸಂಸ್ಥೆ ವತಿಯಿಂದ ‘ವರ್ತೂರು ಕೆರೆಯನ್ನು ಉಳಿಸೋಣ- ಇದನ್ನು ನೈಸರ್ಗಿಕವಾಗಿರಿಸೋಣ’ ಎಂಬ ಜಾಗೃತಿ ಅಭಿಯಾನ ನಡೆಯಿತು.

ಪರಿಸರವಾದಿ ಸುರೇಶ್ ಹೆಬ್ಳೀಕರ್ ಅಭಿಯಾನಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿ, ‘ಮಾನವನ ದುರಾಸೆಯಿಂದ ಪ್ರಪಂಚದ ಶೇ 70ರಷ್ಟು ಕೆರೆಗಳು ನಾಶವಾಗಿವೆ. ಕೆರೆಗಳು ನಮ್ಮ ನಗರದ ಶ್ವಾಸಕೋಶಗಳಂತಿವೆ. ಅದನ್ನು ಸಂರಕ್ಷಿಸುವುದು ನಮ್ಮ ಸಾಮೂಹಿಕ ಜವಾಬ್ದಾರಿ’ ಎಂದು ಹೇಳಿದರು.

ಕೃಪಾನಿಧಿ ಸಂಸ್ಥೆಯ ಉಪಾಧ್ಯಕ್ಷೆ ಗೀತಾ ಪ್ರಿಯಾ ಮಾತನಾಡಿ, ‘ಕೆರೆಯ ಪುನಶ್ಚೇತನಕ್ಕಾಗಿ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದರು.

ಪಕ್ಷಿ ವೀಕ್ಷಕ ಪ್ರಸಾದ್ ಜಾವಗಲ್, ಕೃಪಾ ನಿಧಿ ಕಾಲೇಜಿನ ಡಿನ್ ಶ್ಯಾಜನ್ ನಿರ್ದೇಶಕ ಸಾಮ್ಯುಯೆಲ್ ಐಸಾಕ್, ಸೈಜಾನ್ ಪಾಲ್ಗೊಂಡಿದ್ದರು.

ವಂಚನೆ: ಕಿರುತೆರೆ ನಟಿ ವಿಸ್ಮಯಾ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ವಿಸ್ಮಯಾಗೌಡ

ಬೆಂಗಳೂರು: ಹಣ ಪಡೆದು ವಂಚಿಸಿದ್ದ ಆರೋಪದ ಅಡಿ ಕಿರುತೆರೆಯ ನಟಿ ವಿಸ್ಮಯಾಗೌಡ (34) ಅವರ ವಿರುದ್ಧ ಬಸವೇಶ್ವರನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಶಕ್ತಿ ಗಣಪತಿ ನಗರದ ನಿವಾಸಿ ಹಿಮಾನ್ವಿ ಎಂಬುವವರು ನ್ಯಾಯಾಲಯಕ್ಕೆ ಖಾಸಗಿ ದೂರು ಸಲ್ಲಿಸಿದ್ದರು. ವಿಸ್ಮಯಾ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸುವಂತೆ 24ನೇ ಎಸಿಎಂಎಂ ನ್ಯಾಯಾಲಯವು ನಿರ್ದೇಶನ ನೀಡಿದ ಬೆನ್ನಲ್ಲೇ ಪೊಲೀಸರು ತನಿಖೆ ಆರಂಭಿಸಿದ್ದಾರೆ.

‘2019ರಲ್ಲಿ ಇನ್‌ಸ್ಟಾಗ್ರಾಂನಲ್ಲಿ ವಿಸ್ಮಯಾ ಪರಿಚಯವಾಗಿದ್ದರು. ತಾನು ಸಿನಿಮಾ ನಿರ್ದೇಶನ ಮಾಡುತ್ತಿದ್ದೇನೆ. ಅಲ್ಲದೇ, ಇನ್‌ಸ್ಟಾಗ್ರಾಂನಲ್ಲಿ ಲೈಫ್ ಕೋಚರ್ ಆಗಿರುವುದಾಗಿಯೂ ಹೇಳಿಕೊಂಡಿದ್ದರು. ಆರ್ಥಿಕ ಸಮಸ್ಯೆಯಿದ್ದು, ಹಣ ನೀಡುವಂತೆ ಕೇಳಿಕೊಂಡಿದ್ದರು’ ಎಂದು ಹಿಮಾನ್ವಿ ನೀಡಿರುವ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

‘ತಾಯಿಯ ಬ್ಯಾಂಕ್ ಖಾತೆಯಿಂದ ₹5 ಲಕ್ಷ, ನನ್ನ ಉಳಿತಾಯ ಖಾತೆಯಿಂದ ₹1.50 ಲಕ್ಷ ಸೇರಿದಂತೆ ಒಟ್ಟು ₹6.50 ಲಕ್ಷ ನೀಡಿದ್ದೆ. ಹಣ ವಾಪಸ್ ನೀಡುವಂತೆ ಕೇಳಿದಾಗ ಸಬೂಬು ಹೇಳಿದ್ದಾರೆ. ಅವರು ನೀಡಿದ್ದ ಚೆಕ್ ಅನ್ನು ಬ್ಯಾಂಕ್‌ಗೆ ಹಾಕಿದಾಗ ಸಹಿ ವ್ಯತ್ಯಾಸವಿದೆ ಎಂಬುದಾಗಿ ಅಧಿಕಾರಿಗಳು ತಿಳಿಸಿದ್ದರು. ಆರೋಪಿಯು ಮೋಸ ಮಾಡುವ ಉದ್ದೇಶದಿಂದ ಸರಿಯಾದ ಮಾದರಿಯಲ್ಲಿ ಸಹಿ ಹಾಕಿರಲಿಲ್ಲ. ಅಲ್ಲದೇ, ಹಣ ವಾಪಸ್ ಕೇಳಿದಾಗ ನಿಂದಿಸಿ ಜೀವ ಬೆದರಿಕೆ ಹಾಕಿದ್ದಾರೆ’ ಎಂದು ಆರೋಪಿಸಿ ಹಿಮಾನ್ವಿ ದೂರು ನೀಡಿದ್ದಾರೆ.

ತನಿಖಾಧಿಕಾರಿ ಕಿರುಕುಳ: ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಮಾಕ್ಷಿಪಾಳ್ಯದ ಶ್ರೀನಿವಾಸನಗರದ ನಿವಾಸಿ ಮಹದೇವಯ್ಯ ಎಂಬುವವರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ನಿವೇಶನದ ವಿಚಾರಕ್ಕೆ ಸಂಬಂಧಿಸಿ ನಕಲಿ ದಾಖಲೆ ಸೃಷ್ಟಿಸಿದ್ದ ಆರೋಪದಡಿ ಮಹದೇವಯ್ಯ ವಿರುದ್ಧ ರಾಜಗೋಪಾಲನಗರ ಠಾಣೆಯಲ್ಲಿ ಇತ್ತೀಚೆಗೆ ದೂರು ದಾಖಲಾಗಿತ್ತು. ಶಿವಶಂಕರ್ ಎಂಬುವವರು ಮಹದೇವಯ್ಯ ವಿರುದ್ಧ ದೂರು ನೀಡಿದ್ದರು. ಪ್ರಕರಣ ಸಂಬಂಧ ಮಹದೇವಯ್ಯ ಜಾಮೀನು ಪಡೆದು ಪೊಲೀಸ್ ವಿಚಾರಣೆಗೆ ಹಾಜರಾಗುತ್ತಿದ್ದರು.

‘ವಿಚಾರಣೆ ವೇಳೆ ತನಿಖಾಧಿಕಾರಿಯೊಬ್ಬರು ಕಿರುಕುಳ ನೀಡುತ್ತಿದ್ದರು. ಊರು ಬಿಟ್ಟು ಹೋಗುವಂತೆ ಬೆದರಿಕೆ ಹಾಕುತ್ತಿದ್ದರು. ನಿವೇಶನ ನೋಂದಣಿ ಮಾಡಿಕೊಡುವಂತೆಯೂ ಹೆದರಿಸುತ್ತಿದ್ದರು. ಇದರಿಂದ ನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂದು ಮೃತರ ಪತ್ನಿ ದೂರಿದ್ದಾರೆ.

ಚಿನ್ನ ಕಳ್ಳ ಸಾಗಣೆ ಪ್ರಕರಣ: ಖರೀದಿದಾರರ ಪತ್ತೆಗೆ ಡಿಆರ್‌ಐ ಶೋಧ

ರನ್ಯಾಗೆ ಸಂಚುಕೋರರ ನಂಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನ ಕಳ್ಳ ಸಾಗಣೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಸ್ಯಾಂಡಲ್‌ವುಡ್ ನಟಿ ರನ್ಯಾ ರಾವ್ ಅವರಿಗೆ ಸಂಚುಕೋರರ ನಂಟು ಇರುವುದು ಕಂದಾಯ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಅಧಿಕಾರಿಗಳ ತನಿಖೆಯಿಂದ ಬಯಲಾಗಿದೆ.


ರನ್ಯಾ ರಾವ್

ನಗರದಲ್ಲೇ ಬೀಡುಬಿಟ್ಟಿರುವ ಡಿಆರ್‌ಐನ ದೆಹಲಿ ಕಚೇರಿಯ ಅಧಿಕಾರಿಗಳು, ಚಿನ್ನ ಕಳ್ಳ ಸಾಗಣೆ ಪ್ರಕರಣದ ತನಿಖೆಯನ್ನು ಚುರುಕುಗೊಳಿಸಿದ್ದಾರೆ.

‘ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ರನ್ಯಾ ಅವರನ್ನು ಸೋಮವಾರ ರಾತ್ರಿ ವಶಕ್ಕೆ ಪಡೆದುಕೊಂಡು ಕೆಲಕಾಲ ವಿಚಾರಣೆ ನಡೆಸಲಾಗಿತ್ತು. ‘ಚಿನ್ನ ಸಾಗಣೆ ಮಾಡುವಂತೆ ನನ್ನನ್ನು ಬ್ಲ್ಯಾಕ್‌ಮೇಲ್ ಮಾಡಲಾಗಿತ್ತು. ಅನಿವಾರ್ಯವಾಗಿ ಸಾಗಣೆ ಮಾಡುತ್ತಿದ್ದೆ’ ಎಂಬುದಾಗಿ ನಟಿ ಹೇಳಿಕೆ ನೀಡಿದ್ದಾರೆ. ಅವರನ್ನು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದವರು ಯಾರು? ಚಿನ್ನವನ್ನು ತಂದು ಯಾರಿಗೆ ನೀಡುತ್ತಿದ್ದರು ಎಂಬುದನ್ನು ಪತ್ತೆಹಚ್ಚಲು ತನಿಖೆ ತೀವ್ರಗೊಳಿಸಲಾಗಿದೆ. ವಿಮಾನ ನಿಲ್ದಾಣದಿಂದ ಹೊರಗೆ ಬರಲು ನೆರವು ನೀಡಿದ್ದ ಪೊಲೀಸ್ ಕಾನ್‌ಸ್ಟೆಬಲ್‌ನನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ’ ಎಂದು ಮೂಲಗಳು ತಿಳಿಸಿವೆ.

‘ಕರ್ನಾಟಕ ರಾಜ್ಯ ಪೊಲೀಸ್ ವಸತಿ ನಿಗಮದ ಡಿಜಿಪಿ ಕೆ.ರಾಮಚಂದ್ರ ರಾವ್ ಅವರ ಮಲಮಗಳು ರನ್ಯಾ ರಾವ್. ಹೀಗಾಗಿ, ಅವರ ಮೂಲಕ ಚಿನ್ನವನ್ನು ಬೆಂಗಳೂರಿಗೆ ಸಾಗಣೆ ಮಾಡಲು ವರ್ಷದ ಹಿಂದೆಯೇ ಸಂಚುಕೋರರು ಯೋಜನೆ ರೂಪಿಸಿದ್ದರು. ಅದರಂತೆ ಅಜ್ಞಾತ ಸ್ಥಳದಲ್ಲಿ ಭೇಟಿ ಮಾಡಿ ಮನವೊಲಿಸಿದ್ದರು. ಕಮಿಷನ್ ನೀಡುವುದಾಗಿಯೂ ಭರವಸೆ ನೀಡಿದ್ದರು. ನಗರದ ಸಂಚುಕೋರರು, ದುಬೈನ ಮಧ್ಯವರ್ತಿಗಳನ್ನು ಬಳಸಿಕೊಂಡು ಚಿನ್ನವನ್ನು ನಟಿಯ ಮೂಲಕ ತರಿಸುತ್ತಿದ್ದರು. ನಟಿ ತಂದ ಚಿನ್ನದ ಬಿಸ್ಕತ್‌ಗಳನ್ನು ಕರಗಿಸಿ ಆಭರಣ ಮಾಡಿ ಮಾರಾಟ ಮಾಡುತ್ತಿದ್ದರು’ ಎಂದು ಮೂಲಗಳು ಹೇಳಿವೆ.

‘ಒಂದು ಕೆ.ಜಿ ಚಿನ್ನದ ಬಿಸ್ಕತ್‌ಗಳನ್ನು ತಂದರೆ, ₹5ರಿಂದ ₹ 6 ಲಕ್ಷ ಕಮಿಷನ್ ನೀಡುತ್ತಿದ್ದರು. ದುಬೈನಿಂದ ತಂದ ಚಿನ್ನವನ್ನು ಲ್ಯಾವೆಲ್ಲೆ ರಸ್ತೆಯ ನಂದವಾಣಿ ಮ್ಯಾನ್ಷನ್‌ನ ಫ್ಲ್ಯಾಟ್‌ನಲ್ಲಿ ಇಡುತ್ತಿದ್ದರು. ಅಲ್ಲಿಂದ ಚಿನ್ನದ ಬಿಸ್ಕತ್‌ಗಳು ಕಿಂಗ್‌ಪಿನ್‌ಗಳಿಗೆ ತಲುಪಿಸಲಾಗುತ್ತಿತ್ತು. ಆ ಕಿಂಗ್‌ಪಿನ್‌ಗಳನ್ನು ಪತ್ತೆಹಚ್ಚಲು ರನ್ಯಾ ಅವರ ಮೊಬೈಲ್, ಲ್ಯಾಪ್‌ಟಾಪ್ ವಶಕ್ಕೆ ಪಡೆಯಲಾಗಿದೆ’ ಎಂದು ಮೂಲಗಳು ಹೇಳಿವೆ.

ರನ್ಯಾ ಪತಿ ಸೇರಿದಂತೆ ಅವರ ಕುಟುಂಬಸ್ಥರಿಗೂ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು ಎಂದು ಮೂಲಗಳು ಹೇಳಿವೆ.

ಬೆಳಿಗ್ಗೆ ದುಬೈಗೆ, ಸಂಜೆ ವಾಪಸ್!

‘ಕೆ.ರಾಮಚಂದ್ರ ರಾವ್ ಅವರ ಕುಟುಂಬಸ್ಥರು ಹಾಗೂ ಸ್ನೇಹಿತರು ಯಾರೂ ದುಬೈನಲ್ಲಿ ನೆಲಸಿಲ್ಲ. ಆದರೂ, ರನ್ಯಾ ಪದೇ ಪದೇ ದುಬೈಗೆ ತೆರಳುತ್ತಿದ್ದರು. ಕೆಲವು ಬಾರಿ ಬೆಳಿಗ್ಗೆ ಬೆಂಗಳೂರು ವಿಮಾನ ನಿಲ್ದಾಣದಿಂದ ಹೊರಟು, ರಾತ್ರಿಯೇ ವಾಪಸ್ ಬಂದಿದ್ದರು. ಪ್ರವಾಸಿ ವೀಸಾದ ಅಡಿ ದುಬೈಗೆ ರನ್ಯಾ ಹೋಗಿದ್ದರೂ ಅದೇ ದಿನ ರಾತ್ರಿ ವಾಪಸ್ ಬಂದಿದ್ದರು. ಇದು ಡಿಆರ್‌ಐ ಅಧಿಕಾರಿಗಳಿಗೆ ಅನುಮಾನ ಉಂಟು ಮಾಡಿತ್ತು. ರನ್ಯಾ ಅವರ ವಿಮಾನ ಪ್ರಯಾಣದ ಮೇಲೆ ಅಧಿಕಾರಿಗಳು ಕೆಲವು ದಿನಗಳಿಂದ ಕಣ್ಣಿಟ್ಟಿದ್ದರು’ ಎಂದು ಮೂಲಗಳು ಹೇಳಿವೆ.

‘ಚಿನ್ನವನ್ನು ಸಾಗಣೆ ಮಾಡಲು ಅನುಕೂಲಕರವಾದ ಶೈಲಿಯಲ್ಲಿ ರನ್ಯಾ ಬಟ್ಟೆಯನ್ನು ಹೊಲಿಗೆ ಮಾಡಿಸಿಕೊಂಡು ಧರಿಸುತ್ತಿದ್ದರು’ ಎಂದು ಮೂಲಗಳು ಹೇಳಿವೆ.

ನ್ಯಾಯಾಲಯಕ್ಕೆ ಅರ್ಜಿ

ಬಾಡಿ ವಾರಂಟ್ ಮೇಲೆ ಆರೋಪಿಯನ್ನು ವಶಕ್ಕೆ ಪಡೆಯಲು ಆರ್ಥಿಕ ಅಪರಾಧ ಪ್ರಕರಣಗಳ ವಿಶೇಷ ನ್ಯಾಯಾಲಯಕ್ಕೆ ಡಿಆರ್‌ಐ ಅಧಿಕಾರಿಗಳು ಗುರುವಾರ ಅರ್ಜಿ ಸಲ್ಲಿಸಿದರು. ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಧೀಶರು, ಶುಕ್ರವಾರ ಆದೇಶ ಪ್ರಕಟಿಸುವುದಾಗಿ ಹೇಳಿದರು.

ಆರೋಪಿಯನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಬೇಕಿದೆ. ಜೈಲಿನಲ್ಲಿ ಆರೋಪಿಯಿಂದ ಹೆಚ್ಚಿನ ಮಾಹಿತಿ ಪಡೆಯಲು ಸಾಧ್ಯವಿಲ್ಲ. ಮಾ.9ರಿಂದ 11ರವರೆಗೆ ಡಿಆರ್‌ಐ ವಶಕ್ಕೆ ನೀಡುವಂತೆ ತನಿಖಾಧಿಕಾರಿಗಳ ಪರವಾಗಿ ವಕೀಲರು ಮನವಿ ಮಾಡಿದರು.

ಶಿಷ್ಟಾಚಾರ ಉಲ್ಲಂಘನೆ

‘ಶಿಷ್ಟಾಚಾರದ ಹೆಸರಿನಲ್ಲಿ ನಿಯಮ ಉಲ್ಲಂಘನೆ ಮಾಡಲಾಗಿದ್ದು, ವಿಮಾನ ನಿಲ್ದಾಣದ ಭದ್ರತಾ ಅಧಿಕಾರಿಗಳು, ರಾಜ್ಯ ಪೊಲೀಸರಿಗೆ ಕೇಂದ್ರ ಸರ್ಕಾರ ಎಚ್ಚರಿಕೆ ನೀಡಿದೆ. ಸಂಬಂಧಿಸಿದವರಿಗೆ ಮಾತ್ರ ವಿಮಾನ ನಿಲ್ದಾಣದಿಂದ ಹೊರಗೆ ಬರುವಾಗ ಭದ್ರತೆ ನೀಡಬೇಕು. ಅಲ್ಲದೇ ಸರ್ಕಾರಿ ವಾಹನವನ್ನು ಒದಗಿಸಬೇಕೆಂದು ಸೂಚನೆ ನೀಡಿದೆ’ ಎಂಬುದು ಗೊತ್ತಾಗಿದೆ.

ರನ್ಯಾ ಅವರು ಅಧಿಕಾರಿಯ ಪುತ್ರಿ ಎಂದು ಹೇಳಿಕೊಂಡು ಓಡಾಟ ನಡೆಸುತ್ತಿದ್ದರು. ಅಲ್ಲದೇ ಸರ್ಕಾರಿ ವಾಹನವನ್ನೂ ಬಳಸಿದ್ದರು ಎಂಬುದು ಡಿಆರ್‌ಐ ತನಿಖೆ ವೇಳೆ ಗೊತ್ತಾಗಿದೆ.

ಆರೋಪಿಯಿಂದ ವಶಕ್ಕೆ ಪಡೆದುಕೊಂಡ ಚಿನ್ನದ ಬಿಸ್ಕತ್‌ಗಳು

ಸುದ್ದಿ 2 ನಿಮಿಷ

ತಾಯಿ, ಪುತ್ರನ ಕೊಂದಿದ್ದ ಅಪರಾಧಿಗೆ ಜೀವಾವಧಿ ಶಿಕ್ಷೆ

ಬೆಂಗಳೂರು: ಮನೆಗೆ ನುಗ್ಗಿ ತಾಯಿ, ಮಗನ ಕೊಂದಿದ್ದ ಅಪರಾಧಿಗೆ 51ನೇ ಸಿಸಿಎಚ್ ನ್ಯಾಯಾಲಯವು ಜೀವಾವಧಿ ಶಿಕ್ಷೆ ಹಾಗೂ ದಂಡ ವಿಧಿಸಿದೆ.

ಶೇಖಪ್ಪ ಪೂಜಾರಿ ಶಿಕ್ಷೆಗೆ ಒಳಗಾದ ಅಪರಾಧಿ. 2023ರ ಸೆ.4ರಂದು ಟಿ.ದಾಸರಹಳ್ಳಿಯ ನವನೀತಾ (33) ಮತ್ತು ಇವರ ಪುತ್ರ ಸಾಯಿ ಸೃಜನ್‌ನನ್ನು(11) ಶೇಖಪ್ಪ ಕೊಲೆ ಮಾಡಿದ್ದ. ಕೊಲೆಯ ಆರೋಪ ಸಾಬೀತಾಗಿದ್ದು ನ್ಯಾಯಾಲಯವು ಶಿಕ್ಷೆ ಪ್ರಕಟಿಸಿದೆ.

ಕೌಟುಂಬಿಕ ಕಾರಣಕ್ಕೆ 2017ರಲ್ಲಿ ಪತಿಯಿಂದ ನವನೀತಾ ದೂರವಾಗಿ ಪ್ರತ್ಯೇಕವಾಗಿ ವಾಸಿಸುತ್ತಿದ್ದರು. ಎಲೆಕ್ಟ್ರಿಷಿಯನ್ ಆಗಿದ್ದ ಶೇಖಪ್ಪ, ನವನೀತಾರನ್ನು ಪರಿಚಯ ಮಾಡಿಕೊಂಡಿದ್ದ. ನಂತರ ಇಬ್ಬರೂ ಪ್ರೀತಿಸುತ್ತಿದ್ದರು. ಈ ಮಧ್ಯೆ ನವನೀತಾ ಅವರಿಗೆ ಕೆಲಸ ಕೊಡಿಸುವ ವಿಚಾರಕ್ಕೆ ಮತ್ತೊಬ್ಬ ವ್ಯಕ್ತಿಯ ಪರಿಚಯವಾಗಿತ್ತು. ಆತನೊಂದಿಗೆ ನವನೀತಾ ಓಡಾಟ ನಡೆಸುತ್ತಿದ್ದರು. ಈ ವಿಚಾರಕ್ಕೆ ಕೋಪಗೊಂಡಿದ್ದ ಅಪರಾಧಿ, ನವನೀತಾ ಅವರನ್ನು ಚಾಕುವಿನಿಂದ ಇರಿದು ಕೊಲೆ ಮಾಡಿದ್ದ. ಪೊಲೀಸರಿಗೆ ಮಾಹಿತಿ ನೀಡಬಹುದು ಎಂದು ಭಾವಿಸಿ, ಅವರ ಮಗ ಸಾಯಿ ಸೃಜನ್‌ನನ್ನು ಉಸಿರುಗಟ್ಟಿಸಿ ಕೊಲೆ ಮಾಡಿದ್ದ.

ಬಾಗಲಗುಂಟೆ ಠಾಣೆಯ ಪೊಲೀಸರು ಆರೋಪಿಯನ್ನು ಬಂಧಿಸಿದ್ದರು. ಪ್ರಕರಣದ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶ ಸಿ.ಬಿ.ಸಂತೋಷ್ ಅವರು ಶೇಖಪ್ಪಗೆ ಜೀವಾವಧಿ ಶಿಕ್ಷೆ ಹಾಗೂ ₹50 ಸಾವಿರ ದಂಡ ವಿಧಿಸಿದ್ದಾರೆ. ಸರ್ಕಾರಿ ವಕೀಲರಾಗಿ ಬಿ.ಎಚ್.ಭಾಸ್ಕರ್ ವಾದ ಮಂಡಿಸಿದ್ದರು.

ಉತ್ತರ ಪ್ರದೇಶದ ಯುವಕ ಆತ್ಮಹತ್ಯೆ

ಬೆಂಗಳೂರು: ಪರಪ್ಪನ ಅಗ್ರಹಾರ ಪೊಲೀಸ್ ಠಾಣಾ ವ್ಯಾಪ್ತಿಯ ಹರಳೂರು ಕೂಡ್ಲು ರಸ್ತೆಯಲ್ಲಿರುವ ಅಪಾರ್ಟ್‌ಮೆಂಟ್‌ವೊಂದರ ಮೇಲಿಂದ ಜಿಗಿದು ಉತ್ತರ ಪ್ರದೇಶದ ಯುವಕ ಮಯಾಂಕ್ ರಜನಿ ಎಂಬಾತ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

‘12ನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅಪಾರ್ಟ್‌ಮೆಂಟ್‌ನ ಸೆಕ್ಯೂರಿಟಿ ಗಾರ್ಡ್ ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಲಾಯಿತು’ ಎಂದು ಪೊಲೀಸರು ಹೇಳಿದರು. ‘ಮಯಾಂಕ್ ಅವರು ನಾಲ್ಕು ವರ್ಷಗಳ ಹಿಂದೆ ಬೆಂಗಳೂರಿಗೆ ಬಂದಿದ್ದರು. ನವೋದ್ಯಮ ಸಂಸ್ಥೆಯೊಂದನ್ನು ಸ್ಥಾಪಿಸಿದ್ದರು. ಠಾಣಾ ವ್ಯಾಪ್ತಿಯಲ್ಲಿ ಫ್ಲ್ಯಾಟ್‌ವೊಂದನ್ನು ಬಾಡಿಗೆ ಪಡೆದುಕೊಂಡು ನೆಲಸಿದ್ದರು. ಎರಡು ವರ್ಷಗಳಿಂದ ಯುವತಿಯ ಜತೆಗೆ ಸಹಜೀವನ ನಡೆಸುತ್ತಿದ್ದರು’ ಎಂದು ಮೂಲಗಳು ತಿಳಿಸಿವೆ.

‘ನವೋದ್ಯಮದಲ್ಲಿ ನಷ್ಟ ಆಗಿದ್ದರಿಂದ ಯುವಕ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದೆ. ಪ್ರಕರಣದ ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಅಸಹಜ ಸಾವು ಪ್ರಕರಣ ದಾಖಲಾಗಿದೆ.

27 ಚೀಲ ಕೂದಲು ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೋಲದೇವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಲಕ್ಷ್ಮೀಪುರ ಕ್ರಾಸ್‌ನ ಗೋದಾಮಿನಲ್ಲಿ ಇಡಲಾಗಿದ್ದ ₹90 ಲಕ್ಷ ಮೌಲ್ಯದ 27 ಚೀಲ ತಲೆ ಕೂದಲು ಕಳ್ಳತನವಾಗಿದೆ. ವೆಂಕಟರಮಣ ಅವರ ಗೋದಾಮಿನ ಬೀಗ ಒಡೆದು ದುಷ್ಕರ್ಮಿಗಳು ಕಳ್ಳತನ ಮಾಡಿದ್ದಾರೆ. ಮಾಲೀಕರ ದೂರು ಆಧರಿಸಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

‘ವಿದೇಶದ ವಿಗ್ ತಯಾರಿಕಾ ಕಂಪನಿಗಳಿಗೆ ರಫ್ತು ಮಾಡಲು ತಲೆ ಕೂದಲು ಸಂಗ್ರಹಿಸಲಾಗಿತ್ತು. ಚೀನಾ, ಬರ್ಮಾ ಹಾಗೂ ಹಾಂಕಾಂಗ್‌ಗೆ ರಫ್ತು ಮಾಡಲು 27 ಚೀಲಗಳಲ್ಲಿ ಕೂದಲು ದಾಸ್ತಾನು ಮಾಡಲಾಗಿತ್ತು. ಕಳೆದ ವಾರ ಕೂದಲು ಖರೀದಿ ಸಂಬಂಧ ಚೀನಾದ ವ್ಯಾಪಾರಿಗಳ ಜತೆ ಮಾತುಕತೆ ನಡೆದಿತ್ತು’ ಎಂದು ಪೊಲೀಸರು ತಿಳಿಸಿದರು.

ನಮ್ಮ ಮೆಟ್ರೊ: ಆಡಿಯೊ ಸಿಸ್ಟಂ ಅಳವಡಿಸುವ ಮುನ್ನ ನಡೆದಿದ್ದ ಗುಣಮಟ್ಟದ ಪರಿಶೀಲನೆ

ಹಣಕಾಸು ನಿರ್ದೇಶಕರ ಮೇಲೆ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ಮೆಟ್ರೊ’ಗೆ ಸಂಬಂಧಿಸಿದಂತೆ ಟೆಲಿ ಕಮ್ಯುನಿಕೇಶನ್ ತಂತ್ರಜ್ಞಾನವನ್ನು ಖರೀದಿ ಮಾಡುವ ಮೊದಲು ಅದರ ಪರಿಶೀಲನೆಗೆ ತಾಂತ್ರಿಕ ತಜ್ಞರ ಬದಲು ಹಣಕಾಸು ವಿಭಾಗದ ನಿರ್ದೇಶಕರನ್ನು ವಿದೇಶಕ್ಕೆ ಕಳುಹಿಸಿರುವುದು ವಿವಾದಕ್ಕೆ ಕಾರಣವಾಗಿದೆ.

2022ರ ಸೆಪ್ಟೆಂಬರ್‌ನಲ್ಲಿ ನಡೆದ ಈ ಪ್ರಕರಣದ ಬಗ್ಗೆ ಎರಡೂವರೆ ವರ್ಷದ ಬಳಿಕ ಬಿಎಂಆರ್‌ಸಿಎಲ್ ನೌಕರರ ಯೂನಿಯನ್ ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರಿಗೆ ದೂರು ನೀಡಿದ್ದು, ‘ಅಧಿಕಾರಿಯ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದೆ.

ಮೆಟ್ರೊ ನಿಲ್ದಾಣಗಳಲ್ಲಿ ಆಡಿಯೊ ಸಿಸ್ಟಂ ಅಳವಡಿಸುವ ಉಪಗುತ್ತಿಗೆಯನ್ನು ಎಎಸ್‌ಎಲ್ ಪಡೆದಿತ್ತು. ಆಡಿಯೊ ಸಿಸ್ಟಂ ಕಾರ್ಯಕ್ಷಮತೆ, ಗುಣಮಟ್ಟದ ಪರಿಶೀಲನೆ, ತಾಂತ್ರಿಕ ಪರೀಕ್ಷೆಗಳನ್ನು ಬಿಎಂಆರ್‌ಸಿಎಲ್‌ನ ತಾಂತ್ರಿಕ ವಿಭಾಗ ಮಾಡಬೇಕು. ಎಫ್‌ಎಟಿ (ಫ್ಯಾಕ್ಟರಿ ಎಕ್ಸೆಪ್ಟೆನ್ಸ್ ಟೆಸ್ಟ್) ಮಾಡಲು ಎಎಸ್‌ಎಲ್ ಕಂಪನಿಯು ಆಹ್ವಾನವನ್ನು ನೀಡಿತ್ತು.

ಎಫ್‌ಎಟಿ ನಡೆಸಲು ಬಿಎಂಆರ್‌ಸಿಎಲ್ ಹಣಕಾಸು ವಿಭಾಗದ ನಿರ್ದೇಶಕರು 2022ರ ಸೆಪ್ಟೆಂಬರ್ 11ರಿಂದ 18ರವರೆಗೆ ವಿದೇಶ ಪ್ರವಾಸ ಮಾಡಿದ್ದರು. ಅವರ ಪತ್ನಿಯೂ ಜೊತೆಗಿದ್ದರು. ಇದು ಸಂಸ್ಥೆಯ ಸಂಪನ್ಮೂಲದ ದುರುಪಯೋಗವಾಗಿದೆ. ಜೊತೆಗೆ ತನ್ನ ಕಾರ್ಯವ್ಯಾಪ್ತಿಯನ್ನು ಹಣಕಾಸು ನಿರ್ದೇಶಕರು ಮೀರಿದ್ದಾರೆ. ತಾಂತ್ರಿಕ ತಜ್ಞರ ಬದಲು ತಾಂತ್ರಿಕೇತರ ವ್ಯಕ್ತಿ ಎಫ್‌ಎಟಿ ನಡೆಸಲು ಹೋಗಿದ್ದು ಹೇಗೆ? ಮತ್ತು ಯಾಕೆ ಎಂದು ಪತ್ರದಲ್ಲಿ ಪ್ರಶ್ನಿಸಲಾಗಿದೆ.

ಆಡಿಯೊ ಸಿಸ್ಟಮ್ ಎಫ್‌ಎಟಿ ಮಾಡಲು ಹಣಕಾಸು ನಿರ್ದೇಶಕರಿಗೆ ಯಾವ ತಾಂತ್ರಿಕ ಜ್ಞಾನವಿದೆ? ಅದಕ್ಕೆ ಸಂಬಂಧಿಸಿದ ಯಾವ ಶಿಕ್ಷಣವನ್ನು ಅವರು ಪಡೆದಿದ್ದಾರೆ? ಇದು ಕಂಪನಿಗೆ ಮಾಡಿದ ವಂಚನೆ. ನಮ್ಮ ಮೆಟ್ರೊ ಸುರಕ್ಷತೆ ಮತ್ತು ತಾಂತ್ರಿಕ ನಿಯಮದ ಉಲ್ಲಂಘನೆಯಾಗಿದೆ ಎನ್ನಲಾಗಿದೆ.

ಆಡಿಯೊ ಸಿಸ್ಟಂನ ಗುಣಮಟ್ಟ ಇವರಿಗೆ ಗೊತ್ತಾಗುವುದಿಲ್ಲ. ಇದರಿಂದ ಕಳಪೆ ಗುಣಮಟ್ಟದ ಆಡಿಯೊ ಸಿಸ್ಟಂಗಳು ಪೂರೈಕೆ ಆಗುತ್ತವೆ. ಆನಂತರ ಹಾಳಾದರೆ ದುರಸ್ತಿಯ ಹೆಸರಲ್ಲಿ ಮತ್ತಷ್ಟು ದುಂದುವೆಚ್ಚ ಮಾಡಲಾಗುತ್ತದೆ. ಸಂಸ್ಥೆಯ ಸುರಕ್ಷತೆ ಮತ್ತು ಹಿತದೃಷ್ಟಿಯಿಂದ ಹಣಕಾಸು ಅಧಿಕಾರಿಯ ಮೇಲೆ ಕ್ರಮ ಕೈಗೊಳ್ಳಲು ಒತ್ತಾಯಿಸಲಾಗಿದೆ.

‘ಬಾಹ್ಯ ಸಂಸ್ಥೆಯಿಂದ ತನಿಖೆಯಾಗಲಿ’

ಆಡಿಯೊ ಸಿಸ್ಟಂ ಇರಲಿ, ಇನ್ನಿತರ ಯಾವುದೇ ತಂತ್ರಜ್ಞಾನವೇ ಆಗಿರಲಿ ಅದನ್ನು ಅಳವಡಿಸಲು ಖರೀದಿಸುವ ಮುನ್ನ ಪರೀಕ್ಷೆ ನಡೆಸಲು ಸಂಬಂಧ ಪಡದವರು ಹೋಗಿದ್ದು ಯಾಕೆ? ಹಣಕಾಸು ನಿರ್ದೇಶಕರು ಮಾಡಿರುವುದು ಅಧಿಕಾರದ ದುರುಪಯೋಗ. ಅವರ ಮೇಲೆ ಕ್ರಮ ಕೈಗೊಳ್ಳಲು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆದಿದ್ದೇವೆ ಎಂದು ಬಿಎಂಆರ್‌ಸಿಎಲ್ ನೌಕರರ ಯೂನಿಯನ್ ಉಪಾಧ್ಯಕ್ಷ ಸೂರ್ಯನಾರಾಯಣ ಮೂರ್ತಿ ತಿಳಿಸಿದ್ದಾರೆ.

ಕೈಗಾರಿಕೆಯಿಂದ ಸ್ವೀಕರಿಸುವ ಮುನ್ನ ಪರೀಕ್ಷೆ ನಡೆಸಲು ತಂತ್ರಜ್ಞರನ್ನು ಕರೆಯಬೇಕು. ತಂತ್ರಜ್ಞರನ್ನು ಕಳುಹಿಸಿಕೊಡಲು ಗುತ್ತಿಗೆದಾರರು ಬಿಎಂಆರ್‌ಸಿಎಲ್‌ನ ವ್ಯವಸ್ಥಾಪಕ ನಿರ್ದೇಶಕರಿಗೆ ಇಲ್ಲವೇ ತಾಂತ್ರಿಕ ವಿಭಾಗದವರಿಗೆ ಆಹ್ವಾನ ನೀಡಬೇಕು. ಆದರೆ, ಈ ಪ್ರಕರಣದಲ್ಲಿ ಗುತ್ತಿಗೆದಾರರು ಎಫ್‌ಎಟಿ ಮಾಡಲು ಹಣಕಾಸು ನಿರ್ದೇಶಕರನ್ನು ನೇರವಾಗಿ ಆಹ್ವಾನಿಸಿದ್ದರು. ಇದು ಗುತ್ತಿಗೆದಾರರಿಗೂ ಈ ನಿರ್ದೇಶಕರಿಗೂ ಏನೋ ಒಳಸಂಬಂಧ ಇರುವುದನ್ನು ಸೂಚಿಸುತ್ತದೆ ಎಂದು ಮೂರ್ತಿ ಪ್ರತಿಕ್ರಿಯಿಸಿದ್ದಾರೆ.

ಹಣಕಾಸು ನಿರ್ದೇಶಕರನ್ನು ಕೂಡಲೇ ಅಮಾನತು ಮಾಡಬೇಕು. ವೆಚ್ಚವನ್ನು ಅವರಿಂದ ಭರಿಸಬೇಕು ಎಂದು ಒತ್ತಾಯಿಸಿದ್ದಾರೆ.

ಅಪರಾಧ ಸುದ್ದಿ

ಮುಖ್ಯಾಂಶಗಳು

- ತಾಂತ್ರಿಕ ತಜ್ಞರ ಬದಲು ತಾಂತ್ರಿಕೇತರ ವ್ಯಕ್ತಿಯಿಂದ ಎಫ್‌ಎಟಿ
- 2022ರ ಸೆಪ್ಟೆಂಬರ್ 11ರಿಂದ 18ರವರೆಗೆ ವಿದೇಶ ಪ್ರವಾಸ
- ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರಿಗೆ ದೂರು

ಕಾರ್ಯಾಚರಣೆ: ರೌಡಿ ಕುಣಿಗಲ್ ಗಿರಿ, ಸಹಚರ ಹರೀಶ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೌಡಿಶೀಟರ್ ಕುಣಿಗಲ್ ಗಿರಿಯನ್ನು ಬ್ಯಾಡರಹಳ್ಳಿ ಠಾಣೆಯ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಕಳೆದ ಮೂರು ತಿಂಗಳಿನಿಂದ ಬ್ಯಾಡರಹಳ್ಳಿ ವ್ಯಾಪ್ತಿಯಲ್ಲಿ ಗಿರಿ ಬಾಡಿಗೆ ಮನೆ ಮಾಡಿಕೊಂಡಿದ್ದ. ಇದರ ಖಚಿತ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಲಾಯಿತು. ಕಾರ್ಯಾಚರಣೆ ವೇಳೆ ಪೊಲೀಸರ ಮೇಲೆ ಹಲ್ಲೆ ನಡೆಸಲು ಮುಂದಾಗಿದ್ದ. ಎಚ್ಚೆತ್ತ ಪೊಲೀಸರು, ಗಿರಿ ಹಾಗೂ ಆತನ ಸಹಚರ ಹರೀಶ್‌ನನ್ನು ವಶಕ್ಕೆ ಪಡೆದು ಬಂಧಿಸಿದರು ಎಂದು ಮೂಲಗಳು ತಿಳಿಸಿವೆ.

ಗಿರಿ

‘ಎಲ್ಲಿಯೂ ನೆಮ್ಮದಿಯಿಂದ ಬದುಕಲು ಬಿಡುತ್ತಿಲ್ಲ. ನಾನು ಯಾವುದೇ ತಪ್ಪು ಮಾಡಿಲ್ಲ. ನನ್ನನ್ನು ಏಕೆ ಬಂಧಿಸಲು ಬಂದಿದ್ದೀರಿ ಎಂಬುದಾಗಿ ಪೊಲೀಸರನ್ನು ಗಿರಿ ಪ್ರಶ್ನೆ ಮಾಡಿದ’ ಎಂದು ಗೊತ್ತಾಗಿದೆ.

ನಿಧನ ವಾರ್ತೆ

ದಾ.ಕೃ.ದೇವರಾಜ್

ಯಲಹಂಕ: ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯ ಉಪಾಧ್ಯಕ್ಷ, ದಾಸರಹಳ್ಳಿ ನಿವಾಸಿ ದಾ.ಕೃ. ದೇವರಾಜ್(56) ಅನಾರೋಗ್ಯದಿಂದ ಬುಧವಾರ ನಿಧನರಾದರು. ಮೃತರಿಗೆ ತಂದೆ, ತಾಯಿ ಹಾಗೂ ಇಬ್ಬರು ಸಹೋದರಿಯರು ಇದ್ದಾರೆ.

ಅರ್ಕಾವತಿ ಬಡಾವಣೆಯ ಭೂಸ್ವಾಧೀನದ ವಿರುದ್ಧದ ಹೋರಾಟದಲ್ಲಿ ಪಾಲ್ಗೊಂಡಿದ್ದ ದೇವರಾಜ್, ವಿದ್ಯಾರ್ಥಿ ಜನತಾದಳದ ರಾಜ್ಯ ಘಟಕದ ಅಧ್ಯಕ್ಷರಾಗಿದ್ದರು. ದಾಸರಹಳ್ಳಿಯಲ್ಲಿ ಭುವನೇಶ್ವರಿ ದೇವಾಲಯ ಸ್ಥಾಪನೆಗೆ ಶ್ರಮವಹಿಸಿದ್ದರು. ದಾಸರಹಳ್ಳಿಯ ರುದ್ರಭೂಮಿಯಲ್ಲಿ ಗುರುವಾರ ಸಂಜೆ ಅಂತ್ಯಕ್ರಿಯೆ ನೆರವೇರಿತು.

ಶಿವಗಂಗಮ್ಮ

ರಾಜರಾಜೇಶ್ವರಿನಗರ: ದೇವಗೆರೆ ನಿವಾಸಿ ಶಿವಗಂಗಮ್ಮ (90) ಗುರುವಾರ ನಿಧನರಾದರು. ಮೃತರಿಗೆ ನಾಲ್ವರು ಪುತ್ರರಿದ್ದಾರೆ. ಮೃತರ ಅಂತ್ಯಕ್ರಿಯೆ ಗುರುವಾರ ಸಂಜೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚೆನ್ನಾಜಮ್ಮ

ಬೆಂಗಳೂರು: ತಾವರೆಕೆರೆ ಕುಂಬಾರಬೀದಿಯ ನಿವಾಸಿ ಚೆನ್ನಾಜಮ್ಮ (ಕುಮಾರಮ್ಮ) (65) ಅವರು ಗುರುವಾರ ನಿಧನರಾದರು. ಅವರಿಗೆ ನಾಲ್ಕು ಜನ ಮಕ್ಕಳಿದ್ದಾರೆ. ಚಾಮರಾಜಪೇಟೆಯ ಟಿ.ಆರ್. ಮಿಲ್ ವೀರಶೈವ ರುದ್ರಭೂಮಿಯಲ್ಲಿ ಗುರುವಾರ ಚೆನ್ನಾಜಮ್ಮ ಅವರ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಹೈಕೋರ್ಟ್, ‘ಸುಪ್ರೀಂ’ ಹೆಸರಿನಲ್ಲಿ ನಕಲಿ ಆದೇಶ ಸೃಷ್ಟಿಸಿದ್ದ ಆರೋಪ

₹1.53 ಕೋಟಿ ವಂಚನೆ: ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್ ಹೆಸರಿನಲ್ಲಿ ನಕಲಿ ಆದೇಶ ತಯಾರಿಸಿ ಕೋಟ್ಯಂತರ ರೂಪಾಯಿ ಸುಲಿಗೆ ಮಾಡಿದ್ದ ಆರೋಪದಡಿ ಇಬ್ಬರು ಆರೋಪಿಗಳನ್ನು ವಿಧಾನಸೌಧ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತುಮಕೂರು ಜಿಲ್ಲೆಯ ಕುಣಿಗಲ್‌ನ ವಿಜೇತ್ (32) ಹಾಗೂ ಆತನ ಸಹಚರ ಬಿನ್ನಮಂಗಲ ನಿವಾಸಿ ಕೆ.ಎಚ್.ಲೋಹಿತ್ (30) ಬಂಧಿತರು.

ಹೈಕೋರ್ಟ್‌ನ ಜಂಟಿ ರಿಜಿಸ್ಟ್ರಾರ್ ಎಂ.ರಾಜೇಶ್ವರಿ ಅವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು.

ಆರೋಪಿ ವಿಜೇತ್ ಡಿಪ್ಲೊಮಾ ವ್ಯಾಸಂಗ ಮಾಡಿದ್ದರೆ, ಲೋಹಿತ್ ಐಟಿಐ ವ್ಯಾಸಂಗ ಮಾಡಿದ್ದ. ಇಬ್ಬರೂ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಹೆಸರಿನಲ್ಲಿ ನಕಲಿ ಆದೇಶಗಳನ್ನು ತಯಾರಿಸಿ ಯುವತಿ ಸೇರಿ ನಾಲ್ವರು ಎಂಜಿನಿಯರ್‌ಗಳಿಗೆ ವ್ಯಾಟ್ಸ್‌ಆ್ಯಪ್‌ನಲ್ಲಿ ಕಳುಹಿಸಿ ₹1.53 ಕೋಟಿ ವಂಚಿಸಿದ್ದರು ಎಂದು ಪೊಲೀಸರು ಹೇಳಿದರು.

ವಿಜೇತ್

ಲೋಹಿತ್

‘ಮದುವೆಗೆ ಸಂಬಂಧಿಸಿದ ವೆಬ್‌ಸೈಟ್‌ನಲ್ಲಿ ಆರೋಪಿ ವಿಜೇತ್ ತನ್ನ ಸ್ವವಿವರ ಹಾಕಿದ್ದ. ತಾನು ಸಿವಿಲ್ ಎಂಜಿನಿಯರ್ ಎಂಬುದಾಗಿ ನಮೂದಿಸಿಕೊಂಡಿದ್ದ. ಇದಕ್ಕೆ ಯುವತಿಯೊಬ್ಬಳು ಪ್ರತಿಕ್ರಿಯೆ ನೀಡಿದ್ದಳು. ಇಬ್ಬರೂ ಪರಿಚಯವಾಗಿದ್ದರು. ಮೊಬೈಲ್ ಸಂಖ್ಯೆ ಬದಲಾವಣೆ ಮಾಡಿಕೊಂಡು ಮಾತನಾಡುತ್ತಿದ್ದರು. ಈ ಮಧ್ಯೆ ಆರೋಪಿ, ತನ್ನ ಮೇಲೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ದಾಳಿ ನಡೆಸಿ ₹1 ಕೋಟಿ ಜಪ್ತಿ ಮಾಡಿಕೊಂಡಿದ್ದಾರೆ ಎಂಬುದಾಗಿ ನಂಬಿಸಿದ್ದ. ಅಲ್ಲದೇ ದಾಳಿ ನಡೆಸಿದ ಅಧಿಕಾರಿಗಳ ವಿರುದ್ಧ ಕೋರ್ಟ್‌ಗೆ ಹೋಗಿದ್ದೆ. ನ್ಯಾಯಾಲಯವು ಇ.ಡಿಗೆ ದಂಡ ವಿಧಿಸಿದ್ದು ಆ ಹಣವು ಸದ್ಯದಲ್ಲೇ ತನ್ನ ಖಾತೆಗೆ ಬರಲಿದೆ ಎಂಬುದಾಗಿ ಹೇಳಿದ್ದ. ಸದ್ಯ ನನ್ನ ಬಳಿ ಹಣವಿಲ್ಲ. ಹಣ ನೀಡುವಂತೆಯೂ ವಿಜೇತ್ ಕೇಳಿಕೊಂಡಿದ್ದ. ಆತನ ಮಾತು ನಂಬಿದ್ದ ಯುವತಿ ಹಂತ ಹಂತವಾಗಿ ₹50 ಲಕ್ಷಕ್ಕೂ ಅಧಿಕ ಹಣ ವರ್ಗಾವಣೆ ಮಾಡಿದ್ದಳು. ಅಲ್ಲದೇ ತನಗೆ ಪರಿಚಯಸ್ಥರಿಂದಲೂ ಹಣ ವರ್ಗಾವಣೆ ಮಾಡಿಸಿದ್ದಳು’ ಎಂದು ಮೂಲಗಳು ಹೇಳಿವೆ.

ಸ್ವವಿವರ ಡಿಲೀಟ್: ತನ್ನ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆಯಾದ ಮೇಲೆ ವೆಬ್‌ಸೈಟ್‌ನಲ್ಲಿ ಹಾಕಿದ್ದ ವಿವರವನ್ನು ಆರೋಪಿ ಡಿಲೀಟ್ ಮಾಡಿದ್ದ. ನಂತರ, ಮೊಬೈಲ್ ಸ್ವಿಚ್ಡ್ ಆಫ್ ಮಾಡಿಕೊಂಡಿದ್ದ. ಈ ಸಂಬಂಧ ಯುವತಿ ಹಾಗೂ ಆಕೆಯ ಸ್ನೇಹಿತರು ಹೈಕೋರ್ಟ್ ರಿಜಿಸ್ಟ್ರಾರ್ ಅವರಿಗೆ ದೂರು ನೀಡಿದ್ದರು.

ಮದುವೆ ಹಿಂದಿನ ದಿನ ವರ ಪರಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರದಕ್ಷಿಣೆ ನೀಡದ ಕಾರಣ ವರ ಮತ್ತು ಆತನ ಕಡೆಯುವರು ಮದುವೆಯ ಹಿಂದಿನ ರಾತ್ರಿ ಪರಾರಿಯಾಗಿದ್ದಾರೆ ಎಂದು ಆರೋಪಿಸಿ ಯುವತಿಯ ತಂದೆ ಉಪ್ಪಾರಪೇಟೆ ಠಾಣೆಯಲ್ಲಿ ದೂರು ನೀಡಿದ್ದು, ಎಫ್‌ಐಆರ್ ದಾಖಲಾಗಿದೆ.

‘ವರ ಪ್ರೇಮ್‌ಚಂದ್ ಮತ್ತು ವಧು, ಫ್ರಾನ್ಸ್‌ನ ಖಾಸಗಿ ಕಂಪನಿಯಲ್ಲಿ ಒಟ್ಟಿಗೆ ಕೆಲಸ ಮಾಡುತ್ತಿದ್ದರು. 2024ರ ಜುಲೈ 13ರಂದು ಬೆಂಗಳೂರಿನಲ್ಲಿ ಹಿಂದೂ ಸಂಪ್ರದಾಯದಂತೆ ನಿಶ್ಚಿತಾರ್ಥವಾಗಿತ್ತು. ಅಲ್ಲದೇ, ಮಾರ್ಚ್ 2ಕ್ಕೆ ಮದುವೆಗೆ ದಿನಾಂಕ ನಿಗದಿಪಡಿಸಲಾಗಿತ್ತು. ನಂತರ ಪ್ರೇಮ್‌ಚಂದ್ ಮತ್ತು ಯುವತಿಯು ಫ್ರಾನ್ಸ್‌ಗೆ ತೆರಳಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಬಳಿಕ ಫೆಬ್ರುವರಿ 17ರಂದು ಭಾರತಕ್ಕೆ ಮರಳಿದ್ದ ಯುವತಿ, ಮದುವೆಯ ಉಡುಪುಗಳನ್ನು ಖರೀದಿಸುವ ಉದ್ದೇಶದಿಂದ ದೆಹಲಿಯ ಅತಿಥಿ ಗೃಹದಲ್ಲಿ ಮೂರು ದಿನ ಉಳಿದುಕೊಂಡಿದ್ದಳು. ಆಗ ಯುವತಿಯನ್ನು ಭೇಟಿಯಾಗಿದ್ದ ಯುವಕ, ‘ಯುರೋಪಿಯನ್ ಸಂಸ್ಕೃತಿಯ ಪ್ರಕಾರ ಮದುವೆಗೆ ಮುಂಚಿನ ಸಂಬಂಧ’ ಎಂದು ಆಕೆಯೊಂದಿಗೆ ಲೈಂಗಿಕ ಸಂಪರ್ಕ ಹೊಂದಿದ್ದಾನೆ’ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

‘ಮದುವೆ ಸಮಾರಂಭಕ್ಕಾಗಿ ಫೆಬ್ರುವರಿ 28ರಿಂದ ಮಾರ್ಚ್ 2ರವರೆಗೆ ಗಾಂಧಿನಗರದ ರೈಲ್ವೆ ಆಫೀಸರ್ಸ್ ಎನ್‌ಕ್ಲೇವ್‌ನ ನಂದಿ ಕ್ಲಬ್ ಬುಕ್ ಮಾಡಲಾಗಿತ್ತು. ಮಾರ್ಚ್ 1ರಂದು ರಾತ್ರಿ 11 ಗಂಟೆಗೆ ಯುವಕನ ಪೋಷಕರು ಯುವತಿಯ ತಂದೆಯ ಬಳಿ ವರದಕ್ಷಿಣೆಯಾಗಿ ₹50 ಲಕ್ಷ ನಗದು, ಅರ್ಧ ಕೆ.ಜಿ ಚಿನ್ನ, ಒಂದು ಮರ್ಸಿಡಿಸ್ ಬೆಂಜ್ ಕಾರು ಕೊಡುವಂತೆ ಬೇಡಿಕೆಯಿಟ್ಟಿದ್ದಾರೆ’ ಎಂದು ದೂರಲಾಗಿದೆ.

‘ಈಗಾಗಲೇ ಮದುವೆಗಾಗಿ ₹25 ಲಕ್ಷ ವೆಚ್ಚವಾಗಿದೆ. ಹೆಚ್ಚಿನ ಹಣವನ್ನ ಭರಿಸಲು ಸಾಧ್ಯವಿಲ್ಲ’ ಎಂದು ಯುವತಿಯ ತಂದೆ ಹೇಳಿದ್ದಾರೆ. ಇದರಿಂದಾಗಿ ಯುವಕ ಹಾಗೂ ಆತನ ಪೋಷಕರು ರಾತ್ರೋರಾತ್ರಿ ಮದುವೆ ಸ್ಥಳವನ್ನು ತೊರೆದಿದ್ದಾರೆ’ ಎಂದು ಹೇಳಿದ್ದಾರೆ.

ಕಾರು ಪಲ್ಟಿಯಾಗಿ ತಂದೆ, ಮಗ ಸೇರಿ ಮೂವರ ಸಾವು

ಪ್ರಜಾವಾಣಿ ವಾರ್ತೆ

ಚಿಂತಾಮಣಿ: ಚಿಂತಾಮಣಿ–ಮುರುಗಮಲ್ಲ ರಸ್ತೆಯ ಕಾಗತಿ ಮತ್ತು ಕೊಂಗತಿಮ್ಮನಹಳ್ಳಿ ಮಧ್ಯೆ ಗುರುವಾರ ಕಾರು ಪಲ್ಟಿಯಾಗಿ ಮೂವರು ಮೃತಪಟ್ಟಿದ್ದಾರೆ.

ಬೆಂಗಳೂರಿನ ಗುರಪ್ಪನಪಾಳ್ಯದ ನಿವಾಸಿಗಳಾದ ವಾಹಿದ್ (60), ಅವರ ಮಗ ಸಕ್ಲೇನ್ (30) ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ಸರ್ದಾರ್ (50) ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿಗೆ ಕರೆದೊಯ್ಯುತ್ತಿದ್ದಾಗ ಮೃತಪಟ್ಟಿದ್ದಾರೆ.

ಘಟನೆಯಲ್ಲಿ ನಗೀನಾ (45), ಶೋಯೆಬ್ (30) ಹಾಗೂ ಅಮರೀನ್ (25) ಗಾಯಗೊಂಡಿದ್ದಾರೆ. ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ನೀಡಲಾಗಿದೆ. ಅಸನೀಮ್ (3) ಮತ್ತು ಮರಿಯಮ್ (2) ಪಾರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಜನವನ ಸಾರಿಗೆ ಸ್ಥಗಿತ, ಜನರ ಪರದಾಟ • ಜಾಲತಾಣಗಳಲ್ಲಿ ಹರಿದಾಡಿದ ವಿಡಿಯೊ

ವೃದ್ಧೆಯನ್ನು ಡೋಲಿಯಲ್ಲಿ ಸಾಗಿಸಿದ ಗ್ರಾಮಸ್ಥರು

ಪ್ರಜಾವಾಣಿ ವಾರ್ತೆ

ಹನೂರು (ಚಾಮರಾಜನಗರ ಜಿಲ್ಲೆ): ಅನಾರೋಗ್ಯಕ್ಕೀಡಾದ ವೃದ್ಧೆಯನ್ನು ಗ್ರಾಮದ ಜನ ಡೋಲಿ ಕಟ್ಟಿಕೊಂಡು ಆಸ್ಪತ್ರೆಗೆ ಸಾಗಿಸಿದ ವಿಡಿಯೊ ಗುರುವಾರ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು.

ತಾಲ್ಲೂಕಿನ ಮಹದೇಶ್ವರ ಬೆಟ್ಟ ಗ್ರಾಮ ಪಂಚಾಯಿತಿಯ ಪಡಸಲನತ್ತ ಗ್ರಾಮದ ದುಂಡಮ್ಮ ಅವರು ಇಂಡಿಗನತ್ತ ಗ್ರಾಮದ ಹಿರಿಯ ಪುತ್ರ ಮಾದೇಗೌಡರ ಮನೆಯಲ್ಲಿ ವಾಸವಿದ್ದರು. ಗುರುವಾರ ಅವರ ಆರೋಗ್ಯದಲ್ಲಿ ಏರುಪೇರಾದ್ದರಿಂದ ತುರ್ತಾಗಿ ಅವರನ್ನು ಆಸ್ಪತ್ರೆಗೆ ಕರೆದೊಯ್ಯಬೇಕಾಯಿತು. ಆದರೆ ವಾಹನ ಸೌಲಭ್ಯವಿಲ್ಲದೆ, ಮಾದೇಗೌಡರು ಗ್ರಾಮದ ಜನರ ನೆರವಿನೊಂದಿಗೆ ಡೋಲಿ ಕಟ್ಟಿಕೊಂಡು ಕಾಡಿನ ಹಾದಿಯಲ್ಲಿ ನಡೆದು ಬಂದು ಮಹದೇಶ್ವರ ಬೆಟ್ಟದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಕೊಡಿಸಿದರು. ಸದ್ಯ ದುಂಡಮ್ಮ ಚೇತರಿಸಿಕೊಂಡಿದ್ದಾರೆ.


ಹನೂರು ತಾಲ್ಲೂಕಿನ ಇಂಡಿಗನತ್ತ ಗ್ರಾಮದ ಮಹದೇಶ್ವರ ಬೆಟ್ಟದ ಆಸ್ಪತ್ರೆಗೆ ಅನಾರೋಗ್ಯಕ್ಕೀಡಾದ ವೃದ್ಧೆಯನ್ನು ಡೋಲಿಯಲ್ಲಿ ಸಾಗಿಸಿದರು (ವಿಡಿಯೊ ಚಿತ್ರ)

ಜನವನ ಸಾರಿಗೆ ಸ್ಥಗಿತ: ಮಹದೇಶ್ವರ ಬೆಟ್ಟದ ತಪ್ಪಲಿನ ಜನ ಹಾಗೂ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮೂರು ವರ್ಷಗಳ ಹಿಂದೆ ಜಿಲ್ಲಾಡಳಿತ ಹಾಗೂ ಅರಣ್ಯ ಇಲಾಖೆ ಸಹಯೋಗದಲ್ಲಿ ಮೂರು ಜೀಪ್‌ಗಳು ಸಂಚರಿಸುತ್ತಿದ್ದವು. ಕಾಡಿನೊಳಗಿರುವ ಜನ ತುರ್ತು ಸಂದರ್ಭದಲ್ಲಿ ಆಸ್ಪತ್ರೆಗೆ ತೆರಳಲು, ಆಹಾರ ಪದಾರ್ಥಗಳನ್ನು ಸಾಗಿಸಲು ಹಾಗೂ ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಿಗೆ ತೆರಳಲು ಅದೇ ವಾಹನಗಳನ್ನು ಅವಲಂಬಿಸಿದ್ದರು. ಆದರೆ ಕೆಲವು ತಿಂಗಳ ಬಳಿಕ ಜನವನ ಸಾರಿಗೆ ಸ್ಥಗಿತಗೊಂಡಿತು. ಅದನ್ನು ಮತ್ತೆ ಆರಂಭಿಸುವಂತೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ.

ವಾಹನ ಸೌಕರ್ಯಕ್ಕಾಗಿ ಆಗ್ರಹಿಸಿ ಅರಣ್ಯವಾಸಿಗಳು ಲೋಕಸಭಾ ಚುನಾವಣೆಯಲ್ಲಿ ಮತದಾನ ಬಹಿಷ್ಕರಿಸಿದ್ದರು. ಅಧಿಕಾರಿಗಳು ಹಾಗೂ ಗ್ರಾಮಸ್ಥರ ಮಾತಿನ ಚಕಮಕಿಯಿಂದ ಮತಯಂತ್ರಗಳನ್ನೇ ಸುಟ್ಟುಹಾಕಿದ ಘಟನೆಯೂ ನಡೆದಿತ್ತು. ಬಳಿಕ ಜಿಲ್ಲಾ ಉಸ್ತುವಾರಿ ಸಚಿವರಾದಿಯಾಗಿ, ಜಿಲ್ಲಾಡಳಿತ ಗ್ರಾಮಕ್ಕೆ ಭೇಟಿ ನೀಡಿ ಮೂಲಸೌಕರ್ಯ ಕಲ್ಪಿಸುವುದಾಗಿ ಭರವಸೆ ನೀಡಲಾಗಿತ್ತು. ಆದರೆ ಈಗಲೂ ಜನ ತುರ್ತು ಸಂದರ್ಭದಲ್ಲಿ ಡೋಲಿಯನ್ನೇ ಆಶ್ರಯಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯೆ ಪಡೆಯಲು ಮಹದೇಶ್ವರ ಬೆಟ್ಟ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎ.ಇ ರಘು ಅವರಿಗೆ ಕರೆ ಮಾಡಿದರೂ ಸಂಪರ್ಕಕ್ಕೆ ಸಿಗಲಿಲ್ಲ.

> **ಮಹದೇಶ್ವರ ಬೆಟ್ಟದ ಸುತ್ತಲಿನ ಜನರಿಗೆ ಆರೋಗ್ಯ ಕೆಟ್ಟರೆ ಡೋಲಿಯೇ ಗತಿ. ಮೂರು ವರ್ಷಗಳ ಹಿಂದೆ ಜನವನ ಸಾರಿಗೆ ಇತ್ತು. ಈಗ ಇಲ್ಲವಾಗಿದೆ**
> **ನಾಗರಾಜು**
> ಪಡಸಲನತ್ತ ಗ್ರಾಮದ ನಿವಾಸಿ

> **ಜನವನ ಸಾರಿಗೆ ವ್ಯವಸ್ಥೆಯ ಜವಾಬ್ದಾರಿಯನ್ನು ಮಹದೇಶ್ವರ ಬೆಟ್ಟ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ವಹಿಸಲಾಗಿದೆ. ವೃದ್ಧೆಯನ್ನು ಡೋಲಿ ಮೂಲಕ ಆಸ್ಪತ್ರೆಗೆ ಸಾಗಿಸಿದ್ದು ತಿಳಿದಿಲ್ಲ**
> **ವೈ.ಕೆ ಗುರುಪ್ರಸಾದ್**
> ತಹಶೀಲ್ದಾರ್, ಹನೂರು

ಸಂಕ್ಷಿಪ್ತ ಸುದ್ದಿ

ಗೂಂಡಾ ಕಾಯ್ದೆ ರೌಡಿ ಬಂಧನ

ಬೆಂಗಳೂರು: ಹಲವು ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿ ತಲೆಮರೆಸಿಕೊಂಡಿದ್ದ ಶಿವಷಣ್ಮುಗಂ ಅಲಿಯಾಸ್ ಶಿವ (29) ಎಂಬಾತನನ್ನು ಸಿಸಿಬಿಯ ಸಂಘಟಿತ ಅಪರಾಧ (ಪೂರ್ವ) ದಳದ ಅಧಿಕಾರಿಗಳು ಬಂಧಿಸಿದ್ದಾರೆ.

ಲೊಟ್ಟೆಗೊಲ್ಲಹಳ್ಳಿಯ ರೈಲ್ವೆ ಕಾಲೊನಿಯ ನಿವಾಸಿ ಶಿವಷಣ್ಮುಗಂ 2018ರಿಂದಲೂ ಕೊಲೆ, ಕೊಲೆ ಯತ್ನ, ಹಲ್ಲೆ, ಸುಲಿಗೆ, ಅಪಹರಣ, ದರೋಡೆ, ಸಾಕ್ಷಿಗಳಿಗೆ ಬೆದರಿಕೆ ಸೇರಿದಂತೆ ವಿವಿಧ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದ ಎಂದು ಸಿಸಿಬಿ ಪೊಲೀಸರು ತಿಳಿಸಿದರು.

‘ಈತನ ವಿರುದ್ಧ ದಾಖಲಾಗಿದ್ದ ಪ್ರಕರಣಗಳ ಪೈಕಿ, ಐದು ಪ್ರಕರಣಗಳಲ್ಲಿ ಬಂಧನ ವಾರಂಟ್ ಜಾರಿಯಾಗಿತ್ತು. ರೌಡಿ ಚಟುವಟಿಕೆ ನಿಯಂತ್ರಿಸಲು ಗೂಂಡಾ ಕಾಯ್ದೆ ಅಡಿ ಬಂಧಿಸಲು ಅನುಮತಿ ನೀಡುವಂತೆ ಸಿಸಿಬಿ ಪೊಲೀಸರು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರಿಗೆ ಮನವಿ ಸಲ್ಲಿಸಿದ್ದರು. ರೌಡಿಯನ್ನು ಗೂಂಡಾ ಕಾಯ್ದೆ ಅಡಿ ಬಂಧಿಸಿ ಬಳ್ಳಾರಿ ಕೇಂದ್ರ ಕಾರಾಗೃಹಕ್ಕೆ ಕಳುಹಿಸುವಂತೆ ಕಮಿಷನರ್ ಸೂಚಿಸಿದ್ದರು. ತಲೆಮರೆಸಿಕೊಂಡಿದ್ದ ಶಿವಷಣ್ಮುಗಂನನ್ನು ಪತ್ತೆಹಚ್ಚಿ ಬಂಧಿಸಿ ಬಳ್ಳಾರಿಗೆ ಜೈಲಿಗೆ ಕಳುಹಿಸಲಾಗಿದೆ’ ಎಂದರು.

ಮಚ್ಚಿನಿಂದ ಅಡುಗೆ ಸಿಬ್ಬಂದಿ ಮೇಲೆ ಹಲ್ಲೆ

ಬೆಂಗಳೂರು: ಆರ್.ಟಿ.ನಗರದ 80 ಅಡಿ ರಸ್ತೆಯ ಹೋಟೆಲ್‌ನ ಅಡುಗೆ ಸಿಬ್ಬಂದಿ ಮೇಲೆ ಹೋಟೆಲ್ ವ್ಯವಸ್ಥಾಪಕ ಮಚ್ಚಿನಿಂದ ಹಲ್ಲೆ ನಡೆಸಿದ್ದಾನೆ.

ಅಡುಗೆ ಸಿಬ್ಬಂದಿ ಗುರುಮೂರ್ತಿ ಮೇಲೆ ವ್ಯವಸ್ಥಾಪಕ ಶಜಾದ್ ಅಲಿ ಹಲ್ಲೆ ನಡೆಸಿದ್ದಾನೆ. ಆರ್.ಟಿ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಘಟನೆ ಸಂಬಂಧ ಮಾಹಿತಿ ಪಡೆದುಕೊಳ್ಳಲಾಗಿದೆ. ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಲಾಗಿದೆ. ಯುವತಿಯ ವಿಚಾರಕ್ಕೆ ಗಲಾಟೆ ನಡೆದಿರುವ ಶಂಕೆ ವ್ಯಕ್ತವಾಗಿದೆ. ಹೋಟೆಲ್ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ ಪರಿಶೀಲನೆ ನಡೆಸಲಾಗಿದೆ ಎಂದು ಪೊಲೀಸರು ಹೇಳಿದರು.

ತಾಯಿ ಅಂತ್ಯಸಂಸ್ಕಾರ: ₹40 ಲಕ್ಷಕ್ಕೆ ಬೇಡಿಕೆ

ಗೌರಿಬಿದನೂರು: ಪರಿಹಾರ ಹಣಕ್ಕೆ ಮಕ್ಕಳ ಜಗಳ: ಬಿಸಿಲಿನಲ್ಲಿ ಅನಾಥವಾಗಿ ಬಿದ್ದ ತಾಯಿಯ ಶವ

ಪ್ರಜಾವಾಣಿ ವಾರ್ತೆ

ಗೌರಿಬಿದನೂರು (ಚಿಕ್ಕಬಳ್ಳಾಪುರ): ದೊಡ್ಡ ಕುರುಗೋಡು ಗ್ರಾಮದ ತಮ್ಮ ಜಮೀನಿನಲ್ಲಿ ತಾಯಿ ಶವಸಂಸ್ಕಾರ ಮಾಡಲು ಆಕೆಯ ಗಂಡು ಮಕ್ಕಳೇ ₹40 ಲಕ್ಷ ಹಣಕ್ಕೆ ಬೇಡಿಕೆ ಇಟ್ಟ ಘಟನೆ ನಡೆದಿದೆ.

ಕೊನೆಗೆ ಮೃತಳ ನಾಲ್ವರು ಪುತ್ರಿಯರು ಶವವನ್ನು ಗೌರಿಬಿದನೂರು ಗ್ರಾಮಾಂತರ ಪೊಲೀಸ್ ಠಾಣೆಗೆ ಕೊಂಡೊಯ್ದು, ಶವಸಂಸ್ಕಾರಕ್ಕೆ ಅಡ್ಡಿಪಡಿಸುತ್ತಿರುವ ಸಹೋದರರ ವಿರುದ್ಧ ಪ್ರಕರಣ ದಾಖಲಿಸುವಂತೆ ಒತ್ತಾಯಿಸಿದರು.

ಗೌರಿಬಿದನೂರು ತಾಲ್ಲೂಕಿನ ದೊಡ್ಡ ಕುರುಗೋಡು ಗ್ರಾಮದಲ್ಲಿ ಮಕ್ಕಳ ನಡುವೆ ಹಣದ ವಿಷಯಕ್ಕೆ ಜಗಳ ನಡೆದಿದ್ದರಿಂದ ತಾಯಿಯ ಶವ ಬಿಸಿಲಿನಲ್ಲಿ ಅನಾಥವಾಗಿತ್ತು

ಏನಿದು ಪ್ರಕರಣ: ತಾಲ್ಲೂಕಿನ ಕದಿರನ್ನಾರಿನ ಪುತ್ರಿಯ ಮನೆಯಲ್ಲಿ ತಂಗಿದ್ದ ದೊಡ್ಡ ಕುರುಗೋಡು ಗ್ರಾಮದ ಅನಂತಕ್ಕ ಬುಧವಾರ ವೃದ್ಧಾಪ್ಯದಿಂದ ಮೃತಪಟ್ಟರು. ಸ್ವಂತ ಜಮೀನಿನಲ್ಲಿರುವ ತಂದೆಯ ಸಮಾಧಿ ಪಕ್ಕದಲ್ಲಿಯೇ ತಾಯಿ ಶವಸಂಸ್ಕಾರ ಮಾಡಲು ನಿರ್ಧರಿಸಿದ ಪುತ್ರಿಯರು ಶವವನ್ನು ಸ್ವಂತ ಗ್ರಾಮಕ್ಕೆ ತಂದು, ಹೂಳಲು ಗುಂಡಿ ತೋಡಿಸಿದ್ದರು.

ಆಗ ಅಲ್ಲಿಗೆ ಬಂದ ವೃದ್ಧೆಯ ಇಬ್ಬರು ಪುತ್ರರು ₹40 ಲಕ್ಷ ನೀಡಿದರೆ ಮಾತ್ರ ತಂದೆಯ ಸಮಾಧಿ ಪಕ್ಕದಲ್ಲಿ ತಾಯಿಯ ಶವ ಹೂಳಲು ಅವಕಾಶ ನೀಡುವುದಾಗಿ ಹೇಳಿದರು. ಅಧಿಕಾರಿಗಳು ಅಂತ್ಯಸಂಸ್ಕಾರಕ್ಕೆ ಅವಕಾಶ ನೀಡುವಂತೆ ಪಟ್ಟು ಹಿಡಿದರು. ಇದರಿಂದಾಗಿ ವೃದ್ಧೆಯ ಶವ ಹಲವು ತಾಸು ಹೊಲದಲ್ಲಿ ಬಿಸಿಲಿನಲ್ಲಿಯೇ ಇತ್ತು.

ಪರಿಹಾರ ಹಣಕ್ಕಾಗಿ ಮಕ್ಕಳ ಜಟಾಪಟಿ: ಮೃತ ಅನಂತಕ್ಕ ಹೆಸರಿನಲ್ಲಿದ್ದ ಎರಡು ಎಕರೆ ಜಮೀನನ್ನು ಕುಡುಮಲಕುಂಟೆ ಕೈಗಾರಿಕಾ ಪ್ರದೇಶಕ್ಕಾಗಿ ಕೆಐಎಡಿಬಿ ವಶಪಡಿಸಿಕೊಂಡು ₹90 ಲಕ್ಷ ಪರಿಹಾರ ನೀಡಿತ್ತು. ಈ ಹಣವನ್ನು ಆಕೆಯ ಇಬ್ಬರು ಪುತ್ರರು ಸಮನಾಗಿ ಹಂಚಿಕೊಂಡಿದ್ದರು.

ಮೃತಳ ನಾಲ್ವರು ಪುತ್ರಿಯರು ನ್ಯಾಯಾಲಯ ಮೆಟ್ಟಿಲೇರಿ ಪರಿಹಾರ ಹಣದಲ್ಲಿ ಅರ್ಧ ಪಾಲು ಪಡೆದಿದ್ದರು. ಆ ಹಣ ವಾಪಸ್ ನೀಡುವಂತೆ ಈಗ ಕ್ಯಾತೆ ತೆಗೆದಿದ್ದಾರೆ ಎಂದು ವೃದ್ಧೆಯ ಮೊಮ್ಮಗಳು ಕಾಂತಮ್ಮ ಹೇಳಿದರು.

ಕೊನೆಗೆ ಈ ವಿಷಯ ತಹಶೀಲ್ದಾರ್ ಮಹೇಶ್ ಎಸ್. ಪತ್ರಿ ಅವರ ಕಿವಿಗೆ ತಲುಪಿದೆ. ಸ್ಥಳಕ್ಕೆ ಬಂದ ಅವರು, ಮೃತರ ಎಲ್ಲ ಮಕ್ಕಳ ಜೊತೆ ಮಾತನಾಡಿ, ಅಂತ್ಯಕ್ರಿಯೆಗೆ ಅವಕಾಶ ಕಲ್ಪಿಸಿದರು.

ಮಾಧ್ಯಮಗಳ ವರದಿ ಬಳಿಕ ಎಚ್ಚೆತ್ತ ಕೊಪ್ಪಳ ಜಿಲ್ಲಾಡಳಿತ

ಬಲ್ಡೋಟಾ: ಸಿದ್ಧತೆ ಕೆಲಸ ಸ್ಥಗಿತ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಜಿಲ್ಲಾ ಕೇಂದ್ರದ ಸಮೀಪದಲ್ಲಿ ಬಲ್ಡೋಟಾ ಕಂಪನಿ ಉಕ್ಕಿನ ಕಾರ್ಖಾನೆ ಸ್ಥಾಪನೆಗೆ ಮಾಡಿಕೊಳ್ಳುತ್ತಿರುವ ಸಿದ್ಧತೆಯನ್ನು ಮುಖ್ಯಮಂತ್ರಿ ಸೂಚನೆ ಮೇರೆಗೆ ಗುರುವಾರ ಸ್ಥಗಿತಗೊಳಿಸಲಾಗಿದೆ.

ಜಿಲ್ಲೆಯ ಸರ್ವಪಕ್ಷಗಳ ನಿಯೋಗ ಭೇಟಿ ಬಳಿಕ ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೊಪ್ಪಳ ಜಿಲ್ಲಾಧಿಕಾರಿ ನಳಿನ್ ಅತುಲ್ ಅವರಿಗೆ ಸೂಚಿಸಿದ್ದರು. ಆದರೂ ಕಾರ್ಖಾನೆ ಆವರಣದಲ್ಲಿ ಬುಧವಾರ ಎಂದಿನಂತೆ ಕೆಲಸ ನಡೆದ ಬಗ್ಗೆ ಮಾಧ್ಯಮಗಳಲ್ಲಿ ಸುದ್ದಿ ಪ್ರಕಟವಾಗುತ್ತಿದ್ದಂತೆ ಜಿಲ್ಲಾಡಳಿತ ಎಚ್ಚೆತ್ತುಕೊಂಡಿದೆ.

ಮಾಧ್ಯಮಗಳಿಗೆ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಹೆಚ್ಚುವರಿ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, 'ಮುಖ್ಯಮಂತ್ರಿ ಸೂಚನೆ ಮೇರೆಗೆ ಬಲ್ಡೋಟಾ ವಿಸ್ತರಣೆಯ ಎಲ್ಲ ಕಾಮಗಾರಿ ಸ್ಥಗಿತಗೊಳಿಸಲಾಗಿದೆ' ಎಂದು ತಿಳಿಸಿದ್ದಾರೆ.

ಬಲ್ಡೋಟಾ ಕಂಪನಿ ಪ್ರವೇಶದ್ವಾರದಲ್ಲಿ ಹಾಕಿದ್ದ ಬ್ಯಾರಿಕೇಡ್‌ಗಳನ್ನು ದಲಿತ ಸಮುದಾಯದ ಮುಖಂಡರು ಗುರುವಾರ ಕಿತ್ತೆಸೆದರು

ಆಕ್ರೋಶ: ಕಾರ್ಖಾನೆ ನಿರ್ಮಾಣ ಸ್ಥಳಕ್ಕೆ ಹೋಗುವ ಮಾರ್ಗದಲ್ಲಿರುವ ಬಸಾಪುರ ಕೆರೆಗೆ ಅಡ್ಡಲಾಗಿ ಬಲ್ಡೋಟಾ ಕಂಪನಿಯವರು ಹಾಕಿದ್ದ ಬ್ಯಾರಿಕೇಡ್‌ಗಳನ್ನು ಗುರುವಾರ ದಲಿತ ಮುಖಂಡರು ಕಿತ್ತು ಎಸೆದು ಆಕ್ರೋಶ ವ್ಯಕ್ತಪಡಿಸಿದರು.

'ಬಸಾಪುರ ಕೆರೆ ಜನ ಹಾಗೂ ಜಾನುವಾರಗಳಿಗೆ ಅನುಕೂಲವಾಗಿದೆ. ಜನರ ಬಳಕೆಗೆ ಬಿಟ್ಟುಕೊಡಬೇಕು. ಆದರೆ, ಕಂಪನಿಯವರು ಕೆರೆಗೆ ಹೋಗುವ ಜಾಗದಲ್ಲಿ ಬ್ಯಾರಿಕೇಡ್ ಅಳವಡಿಸಿ ಜನರಿಗೆ ತೊಂದರೆ ಮಾಡುತ್ತಿದ್ದಾರೆ' ಎಂದು ದಲಿತ ಸಮುದಾಯದ ಮುಖಂಡರು ಪ್ರಶ್ನಿಸಿದರು.

ಬಳಿಕ ಸ್ಥಳಕ್ಕೆ ಬಂದ ಕಂಪನಿಯ ಎಜಿಎಂ ಪ್ರವೀಣಕುಮಾರ್, 'ಕಾನೂನು ಬದ್ಧವಾಗಿಯೇ ಕಾರ್ಖಾನೆ ನಿರ್ಮಿಸುತ್ತಿದ್ದೇವೆ. ಆದಷ್ಟು ಬೇಗನೆ ಮಾಧ್ಯಮದವರ ಎದುರು ದಾಖಲೆ ಒದಗಿಸುತ್ತೇವೆ. ಸದ್ಯಕ್ಕೆ ಕಾರ್ಖಾನೆ ವಿಸ್ತರಣೆ ಕೆಲಸ ನಿಲ್ಲಿಸಿದ್ದೇವೆ' ಎಂದು ಹೇಳಿದರು.

ನರೇಗಾ: ಕೇಂದ್ರದಿಂದ ₹960 ಕೋಟಿ ಬಾಕಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ (ನರೇಗಾ) ಕೇಂದ್ರ ಸರ್ಕಾರವು ಕರ್ನಾಟಕಕ್ಕೆ ₹960 ಕೋಟಿ ಕೂಲಿ ಅನುದಾನ ಬಾಕಿ ಉಳಿಸಿಕೊಂಡಿದೆ.

ಈ ಯೋಜನೆಯ ಶೇ 100 ರಷ್ಟು ಕೂಲಿ ಮೊತ್ತವನ್ನು ಕೇಂದ್ರ ಸರ್ಕಾರವೇ ಭರಿಸುತ್ತದೆ. ಈ ಮೊತ್ತವು ಫಲಾನುಭವಿಯ ಖಾತೆಗೆ ನೇರವಾಗಿ ವರ್ಗಾವಣೆಯಾಗುತ್ತದೆ. ಬಿಡುಗಡೆಯಾದ ಅನುದಾನದಲ್ಲಿ ಶೇ 75ರಷ್ಟು ವೆಚ್ಚವಾದ ಬಳಿಕ ರಾಜ್ಯ ಸರ್ಕಾರವು ಕೇಂದ್ರಕ್ಕೆ ಹಣ ಬಳಕೆ ಪ್ರಮಾಣಪತ್ರ ಸಲ್ಲಿಸುತ್ತದೆ.

ನರೇಗಾ ಅನುದಾನ ಬಿಡುಗಡೆ (ಕೋಟಿಗಳಲ್ಲಿ)

ವರ್ಷ	ಕೂಲಿ	ಸಾಮಗ್ರಿ ಮೊತ್ತ	ಆಡಳಿತಾತ್ಮಕ	ಒಟ್ಟು
2022-23	3,910	2,542	295	6,748
2023-24	3,794	2002	118	5,915
2024-25	3,848	1,662	200	5,711

₹960 ಕೋಟಿಯ ಪಾವತಿ ಬಗ್ಗೆ ರಾಜ್ಯ ಸರ್ಕಾರ ಪ್ರಮಾಣ ಪತ್ರವನ್ನು ಸಲ್ಲಿಸಿದೆ. ಆದರೆ, ಅನುದಾನ ಬಿಡುಗಡೆ ಆಗಿಲ್ಲ. ಶೀಘ್ರ ಅನುದಾನ ಬಿಡುಗಡೆ ಮಾಡುವಂತೆ ಒತ್ತಾಯಿಸಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಇಲಾಖೆಯು ಕೇಂದ್ರಕ್ಕೆ ಮತ್ತೊಮ್ಮೆ ಪತ್ರ ಬರೆದಿದೆ.

ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಕಾರ್ಮಿಕರಿಗೆ ಕೂಲಿ ನೀಡಲು ₹11,553 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. ಸಾಮಗ್ರಿ ಮೊತ್ತ ರೂಪದಲ್ಲಿ ಕೇಂದ್ರ ಸರ್ಕಾರವು ₹4,987 ಕೋಟಿ ಹಾಗೂ ರಾಜ್ಯ ಸರ್ಕಾರವು ₹1,311 ಕೋಟಿ ಭರಿಸಿವೆ.

2022-23ರಲ್ಲಿ 12.57 ಕೋಟಿ ಹಾಗೂ 2023-24ರಲ್ಲಿ 13.84 ಕೋಟಿ ಮಾನವ ದಿನಗಳನ್ನು ಸೃಜಿಸಲಾಗಿತ್ತು. ಈ ಸಾಲಿನಲ್ಲಿ ಇಲ್ಲಿಯವರೆಗೆ 11.68 ಕೋಟಿ ಮಾನವ ದಿನಗಳನ್ನು ಸೃಜಿಸಲಾಗಿದೆ.

ಬಿಸಿಲ ಧಗೆ: ಕಾಡ್ಗಿಚ್ಚು ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಹೆಚ್ಚುತ್ತಿರುವ ಬಿಸಿಲ ಧಗೆಯಿಂದಾಗಿ ಮುಂದಿನ ಒಂದು ವಾರದ ಅವಧಿಯಲ್ಲಿ ಕೆಲವೆಡೆ ಕಾಡ್ಗಿಚ್ಚು ಕಾಣಿಸಿಕೊಳ್ಳುವ ಸಾಧ್ಯತೆಯಿದೆ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವು (ಕೆಎಸ್‌ಎನ್‌ಡಿ-ಎಂಸಿ) ಮುನ್ನೆಚ್ಚರಿಕೆ ನೀಡಿದೆ.

ರಾಜ್ಯಾದ್ಯಂತ ಒಣಹವೆ ಮುಂದುವರಿಯಲಿದ್ದು, ದಕ್ಷಿಣ ಒಳನಾಡಿನ ಒಂದೆರಡು ಕಡೆ ಗಂಟೆಗೆ 30ರಿಂದ 40 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯಿದೆ. ಮುಂದಿನ ಮೂರು ದಿನಗಳು ಕರಾವಳಿಯಲ್ಲಿ ಕೆಲವೆಡೆ ಬಿಸಿ ಗಾಳಿ ಕಾಣಿಸಿಕೊಳ್ಳುವ ಸಂಭವವಿದೆ. ಉತ್ತರ ಒಳನಾಡಿನಲ್ಲಿ ಎರಡರಿಂದ ಮೂರು ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಹೆಚ್ಚಳವಾಗುವ ಸಾಧ್ಯತೆಯಿದೆ.

ಗುರುವಾರ ಬೆಳಿಗ್ಗೆ 8.30 ಕ್ಕೆ ಕೊನೆಗೊಂಡಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ರಾಯಚೂರು ಹಾಗೂ ಯಾದಗಿರಿಯಲ್ಲಿ ಗರಿಷ್ಠ ಉಷ್ಣಾಂಶ (38.2 ಡಿಗ್ರಿ ಸೆಲ್ಸಿಯಸ್) ವರದಿಯಾಗಿದೆ. ಹಾವೇರಿ, ಕಲಬುರಗಿ, ವಿಜಯನಗರ, ಬಾಗಲಕೋಟೆ ಹಾಗೂ ಧಾರವಾಡದಲ್ಲಿ ಗರಿಷ್ಠ 37 ಡಿಗ್ರಿ ಸೆಲ್ಸಿಯಸ್ ದಾಟಿದೆ.

ಎಸ್‌ಡಿಪಿಐ ರಾಜ್ಯ ಕಚೇರಿಯಲ್ಲೂ ಶೋಧ

ಬೆಂಗಳೂರು: ಎಸ್‌ಡಿಪಿಐ ರಾಜ್ಯ ಕೇಂದ್ರ ಕಚೇರಿ ಮೇಲೂ ಇ.ಡಿ ಅಧಿಕಾರಿಗಳು ಗುರುವಾರ ದಾಳಿ ನಡೆಸಿ, ಶೋಧ ಕಾರ್ಯ ನಡೆಸಿದರು. ಪಕ್ಷದ ಕಚೇರಿಗೆ ಬೆಳಿಗ್ಗೆಯೇ ಬಂದ ಅಧಿಕಾರಿಗಳು, ಕಚೇರಿಯಲ್ಲಿನ ಎಲ್ಲ ದಾಖಲೆ ಪತ್ರಗಳು, ಕಂಪ್ಯೂಟರ್‌ಗಳನ್ನು ಜಾಲಾಡಿದರು.

ಸ್ಪರ್ಧಾ ಪರೀಕ್ಷೆಗಷ್ಟೇ 'ಐದು ಉತ್ತರ' ಆಯ್ಕೆ

ಬೆಂಗಳೂರು: ಪ್ರತಿ ಪ್ರಶ್ನೆಗೆ ಉತ್ತರ ನೀಡಲು ಐದು ಆಯ್ಕೆಗಳನ್ನು ಒಳಗೊಂಡ ಹೊಸ ವಿಧಾನವು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಮಾತ್ರ ಅನ್ವಯವಾಗು ತ್ತದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳಿಗೆ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಸಿಇಟಿ) ಈ ವಿಧಾನ ಅನ್ವಯವಾಗುವು ದಿಲ್ಲ. ಸಿಇಟಿ ಪರೀಕ್ಷಾ ವಿಧಾನ ಈ ಹಿಂದಿನಂತೆಯೇ ಇರಲಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ವಿವಿಧ ಇಲಾಖೆಗಳಲ್ಲಿನ ಖಾಲಿ ಹುದ್ದೆಗಳಿಗೆ ಕೆಇಎ ನಡೆಸುವ ಎಲ್ಲ ಪರೀಕ್ಷೆಗಳಲ್ಲೂ ಪ್ರತಿ ಪ್ರಶ್ನೆಗೆ ಉತ್ತರ ನೀಡಲು ಇದುವರೆಗೆ ನಾಲ್ಕು ಆಯ್ಕೆಗಳು ಇದ್ದವು. ಪರೀಕ್ಷಾ ಅಕ್ರಮ ತಡೆಯಲು ಪ್ರಾಧಿಕಾರ ಐದು ಆಯ್ಕೆಗಳ ವಿಧಾನ ಅಳವಡಿಸಿಕೊಂಡಿದೆ. ಒಬ್ಬ ವಿದ್ಯಾರ್ಥಿ ನಿರ್ದಿಷ್ಟ ಪ್ರಶ್ನೆಗೆ ಉತ್ತರಿಸದಿದ್ದರೆ, ಅವರು ಆಪ್ಟಿಕಲ್ ಮಾರ್ಕ್ ರೆಕಗ್ನಿಷನ್ (ಒಎಂಆರ್) ಹಾಳೆಯಲ್ಲಿ ಒದಗಿಸಲಾದ ಐದನೇ ಆಯ್ಕೆಗೆ ಮಾರ್ಕ್ ಮಾಡಬಹುದು.

ಗ್ರಾ.ಪಂ: ಮಹಿಳಾ ಸ್ನೇಹಿ ಅಭಿಯಾನ

ಬೆಂಗಳೂರು: ಮಹಿಳಾ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ ಮತ್ತು ಮಹಿಳಾ ಗ್ರಾಮ ಸಭೆಗಳನ್ನು ಮಾರ್ಚ್ 8ರಿಂದ ನಡೆಸಲು ಸಚಿವ ಪ್ರಿಯಾಂಕ್ ಖರ್ಗೆ ಸೂಚಿಸಿದ್ದಾರೆ.

ಅಂತರರಾಷ್ಟ್ರೀಯ ಮಹಿಳಾ ದಿನವಾದ ಮಾರ್ಚ್ 8ರಿಂದ ಜೂನ್ 30ರವರೆಗೆ ಈ ಅಭಿಯಾನ ನಡೆಯಲಿದೆ. ಮಹಿಳೆಯರು ವಾರ್ಡ್ ಮತ್ತು ಗ್ರಾಮ ಸಭೆಗಳಲ್ಲಿ ಭಾಗವಹಿಸಿ ತಮ್ಮ ಸಮಸ್ಯೆಗಳು ಮತ್ತು ಬೇಡಿಕೆ ಮಂಡಿಸಬಹುದು. ಸ್ಥಳೀಯ ಮಹಿಳಾ ಸ್ವಸಹಾಯ ಹಾಗೂ ಸ್ತ್ರೀಶಕ್ತಿ ಸಂಘಗಳ ಸಹಭಾಗಿತ್ವದಲ್ಲಿ ವಿಶೇಷ ಕಾರ್ಯಕ್ರಮ, ಚಟುವಟಿಕೆ ಆಯೋಜಿಸಬೇಕು ಎಂದಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ (ವಿಜಯನಗರ) ಕಚೇರಿ, ಶಾಸಕರ ಭವನ, 1ನೇ ಮಹಡಿ, 3ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು – 560 040.

ಸಂಖ್ಯೆ: ಕಾ.ಪಾ.ಅ(ವಿಜನ)/ಸ.ಅ/ಕೆಪಿಪಿಪಿ/10/2024–25 ದಿನಾಂಕ: 06.03.2025

ತಿದ್ದುಪಡಿ – 1

ವಿಷಯ: ಟೆಂಡರ್ ಷೆಡ್ಯೂಲ್ 'ಬಿ' ಗಳನ್ನು ಡೌನ್‌ಲೋಡ್ ಮಾಡುವ, ಸ್ವೀಕರಿಸುವ ಮತ್ತು ಟೆಂಡರ್ ತೆರೆಯುವ ದಿನಾಂಕ ಮುಂದೂಡಿರುವ ಬಗ್ಗೆ.

ಉಲ್ಲೇಖ: ಟೆಂಡರ್ ಪ್ರಕಟಣೆ ಸಂಖ್ಯೆ: ಕಾಪಾಅ/ವಿಜನ/ಸಅ/ಕೆಪಿಪಿಪಿ/10/2024–25, ದಿನಾಂಕ: 25.02.2025

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಟೆಂಡರ್‌ನ ಕ್ರಮ ಸಂಖ್ಯೆ 07ರ ವಾರ್ಡ್ ಸಂಖ್ಯೆ–151 ದೀಪಾಂಜಲಿನಗರದಲ್ಲಿ ವಾಲ್ಮೀಕಿ ಸಮುದಾಯ ಭವನವನ್ನು ನಿರ್ಮಾಣ ಮಾಡುವ ಕಾಮಗಾರಿಗಳ ಟೆಂಡರ್ ಷೆಡ್ಯೂಲ್ ಬಿ ಗಳನ್ನು ಡೌನ್‌ಲೋಡ್ ಮಾಡುವ ದಿನಾಂಕ, ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ ಮತ್ತು ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕವನ್ನು ಈ ಕೆಳಕಂಡಂತೆ ಮುಂದೂಡಲಾಗಿದೆ. ಉಳಿದಂತೆ ಟೆಂಡರ್ ನಿಯಮಾವಳಿಗಳಲ್ಲಿ ಯಾವುದೇ ಬದಲಾವಣೆಯಿರುವುದಿಲ್ಲ.

ಟೆಂಡರ್ ವೇಳಾಪಟ್ಟಿ: (1) ಕಾಮಗಾರಿಯ ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡುವ ದಿನಾಂಕ **20.03.2025** ರಿಂದ (2) ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ **29.03.2025** ರಂದು ಸಂಜೆ **4:00** ಗಂಟೆಯವರೆಗೆ (3) ಕಾಮಗಾರಿಯ ಪೂರ್ವಭಾವಿ ಸಭೆ **25.03.2025** ರಂದು ಮಧ್ಯಾಹ್ನ **3:00** ಗಂಟೆಗೆ (4) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ **01.04.2025** ರಂದು ಬೆಳಗ್ಗೆ **11:30** ಗಂಟೆಗೆ

ಸಹಿ/– ಕಾರ್ಯಪಾಲಕ ಅಭಿಯಂತರರು,
ವಿಜಯನಗರ ವಿಭಾಗ

ಕರ್ನಾಟಕ ಸರ್ಕಾರ

ಕರ್ನಾಟಕ ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ
ಹುಣಸೂರು ವನ್ಯಜೀವಿ ಉಪ ವಿಭಾಗ, ಹುಣಸೂರು
e-mail acfhunsurwlsd2020@gmail.com

ಸಂಖ್ಯೆ/ಸ.ಅ.ಸಂ./ಹುವಉ/ರೈಬಾ/ಟೆಂಡರ್/ಸಿಆರ್–19/2024–25 ದಿನಾಂಕ:01.03.2025

ಟೆಂಡರ್ ಅಧಿಸೂಚನೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ 2024–25ನೇ ಸಾಲಿನಲ್ಲಿ ಹುಣಸೂರು ವನ್ಯಜೀವಿ ಉಪ ವಿಭಾಗದ ಆನೆಚೌಕೂರು, ವನ್ಯಜೀವಿ ವಲಯದ ವ್ಯಾಪ್ತಿಯಲ್ಲಿ "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ–4ರಲ್ಲಿನ ಷರತ್ತುಗಳಿಗನುಗುಣವಾಗಿ" ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ ಪೋರ್ಟಲ್ (https://kppp.karnataka.gov.in) ಮೂಲಕ ಟೆಂಡರ್ ಕರೆಯಲಾಗಿದೆ.

ಉಪಯೋಗಿತ ರೈಲ್ವೆ ಹಳಿಗಳನ್ನು ಖರೀದಿಸಿ ಆನೆ ತಡೆ ಬ್ಯಾರಿಕೇಡ್ ನಿರ್ಮಿಸುವುದು.	2.50 ಕಿ.ಮೀ (3ಯೂನಿಟ್)	481.00 ಲಕ್ಷಗಳು*

(* ಸರ್ಕಾರದಿಂದ ಅನುದಾನ ಬಿಡುಗಡೆ ಮಾಡುವ ನಿರೀಕ್ಷೆ ಮೇರೆಗೆ)

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **15/03/2025 ಸಂಜೆ 4:00 ಗಂಟೆ.** ಸದರಿ ದಿನಾಂಕದಂದು ಟೆಂಡರ್ ಆಗದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮರು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಹಾಗೂ ಸಮಯ **:24/03/2025 ಸಂಜೆ 4:00 ಗಂಟೆ**

ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ದೂರವಾಣಿ : 08222–252041

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಹುಣಸೂರು ವನ್ಯಜೀವಿ ಉಪ ವಿಭಾಗ, ಹುಣಸೂರು

DIPR/DDMYS/1389/KSMCA/1020/2024-25

ಆಡಳಿತಾಧಿಕಾರಿ,
ಕರ್ನಾಟಕ ರಾಜ್ಯ ಆದಿ ಜಾಂಬವಾಭಿವೃದ್ಧಿ ಸಂಘ(ರಿ).
ನಂ. 143, ಆದಿಜಾಂಬವ ಹಾಸ್ಟೆಲ್, ಮಾಗಡಿ ರಸ್ತೆ, ಬೆಂಗಳೂರು.

ಸಂಖ್ಯೆ: ಆಡಳಿತಾಧಿಕಾರಿ/ಕ.ರಾ.ಆ.ಜಾ.ಸ/01/2020–21 ದಿನಾಂಕ: 01.03.2025

ಸಂಘದ ಸದಸ್ಯರಿಗೆ ತಿಳುವಳಿಕೆ ಪತ್ರ

ಈ ಮೇಲ್ಕಂಡ ಸಂಘದ ಆಡಳಿತ ಮಂಡಳಿ ರಚಿಸುವ ಸಂಬಂಧ, ಲಭ್ಯವಿರುವ ದಾಖಲಾತಿಗಳ ಆಧಾರದ ಮೇಲೆ ಸದಸ್ಯರ ಪಟ್ಟಿಯನ್ನು ತಯಾರಿಸಲಾಗುತ್ತಿದ್ದು, ಯಾರಾದರೂ ಈ ಹಿಂದೆ ಸಂಘದ ಸದಸ್ಯತ್ವ ಪಡೆದಿದ್ದಲ್ಲಿ ಸಂಘಕ್ಕೆ ಸಂಬಂಧಿಸಿದ ಯಾವುದಾದರೂ ಮೂಲ ದಾಖಲಾತಿಗಳು/ಸದಸ್ಯತ್ವ ಪಡೆದಿರುವ ಬಗ್ಗೆ ಪೂರಕ ದಾಖಲಾತಿಗಳಾದ ಸದಸ್ಯತ್ವ ಶುಲ್ಕ ಪಾವತಿಸಿರುವ ಬಗ್ಗೆ ರಶೀದಿಗಳು/ಸದಸ್ಯತ್ವ ಅನುಮೋದಿಸಿರುವ ಬಗ್ಗೆ ಆಡಳಿತ ಮಂಡಲಿ/ವಾರ್ಷಿಕ ಸಭೆಯ ಠರಾವು, ಷೇರು ಪ್ರಮಾಣ ಪತ್ರ ಹಾಗೂ ಇತರೆ ದಾಖಲಾತಿಗಳು ಇದ್ದಲ್ಲಿ, **ದಿನಾಂಕ: 31.03.2025ರೊಳಗೆ** ಈ ಕೆಳಕಂಡ ವಿಳಾಸಕ್ಕೆ ನೋಂದಾಯಿತ ಅಂಚೆ ಮೂಲಕ ಅಥವಾ ಮುದ್ದಾಂ ಮೂಲಕ ತಲುಪಿಸತಕ್ಕದ್ದು. ತಪ್ಪಿದಲ್ಲಿ ಲಭ್ಯವಿರುವ ದಾಖಲಾತಿಗಳ ಆಧಾರದ ಮೇಲೆ ಸದಸ್ಯರ ಪಟ್ಟಿಯನ್ನು ತಯಾರಿಸಿ ಆಡಳಿತ ಮಂಡಳಿಯನ್ನು ಸ್ಥಾಪಿಸಲು, ಚುನಾವಣಾ ಪ್ರಕ್ರಿಯೆಗಳನ್ನು ಪ್ರಾರಂಭಿಸಲಾಗುವುದೆಂದು ಈ ಮೂಲಕ ಸಂಘದ ಸದಸ್ಯರಿಗೆ ತಿಳಿಸಲಾಗಿದೆ.

ವಿಳಾಸ: ಆಂಜನಮೂರ್ತಿ, ಸಹಕಾರ ಅಭಿವೃದ್ಧಿ ಅಧಿಕಾರಿ(ಬಳಕೆ ಮತ್ತು ಮಾರಾಟ ಶಾಖೆ, ಸಹಕಾರ ಸಂಘಗಳ ನಿಬಂಧಕರ ಕಛೇರಿ, ಆಲಿ ಆಸ್ಕರ್ ರಸ್ತೆ, ವಸಂತನಗರ, ಬೆಂಗಳೂರು–560052.

ಸಹಿ/–ಆಂಜನಮೂರ್ತಿ, ಆಡಳಿತಾಧಿಕಾರಿ.

ವಾಣಿಜ್ಯ ತೆರಿಗೆಗಳ ಇಲಾಖೆ

ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿ,
ವಾಣಿಜ್ಯ ತೆರಿಗೆಗಳ ಕಾರ್ಯಾಲಯ–1, ಮಹಾಕವಿ ಕಾಳಿದಾಸ ರಸ್ತೆ,
ಗಾಂಧಿನಗರ, ಬೆಂಗಳೂರು–560 009. ದೂರವಾಣಿ ಸಂಖ್ಯೆ: 080–22205239.

ಸಂಖ್ಯೆ: ವಾತೆಜಂಆ/ಮಾಸಂಅ/ಸಿಆರ್–12/2024–25 ದಿನಾಂಕ: 28–02–2025

ಪ್ರಕಟಣೆ

ವಾಣಿಜ್ಯ ತೆರಿಗೆಗಳ ಇಲಾಖೆಯು GST AMNESTY SCHEME (ಜಿಎಸ್‌ಟಿ ಕ್ಷಮಾದಾನ ಯೋಜನೆ) ಕಾಯ್ದೆಯಲ್ಲಿನ ವಿಷಯವನ್ನು ವರ್ತಕ ಸಮುದಾಯಕ್ಕೆ ಸಾಮಾಜಿಕ ಜಾಲತಾಣಗಳ ಮೂಲಕ ಜಾಗೃತಿ ಮೂಡಿಸಲು 5 ವಿಡಿಯೋ ತುಣುಕುಗಳನ್ನು ಬಿಡುಗಡೆ ಮಾಡಿದ್ದು, ಈ ಯೋಜನೆಯ ಸದುಪಯೋಗ ಪಡೆಯಲು ತೆರಿಗೆ ಪಾವತಿದಾರರು 2017–18, 2018–2019 ಮತ್ತು 2019–2020ರ ತೆರಿಗೆ ಬಾಕಿ ಇರುವ ಆರ್ಥಿಕ ವರ್ಷಗಳಿಗೆ ವರ್ಷವಾರು ಪ್ರತ್ಯೇಕವಾಗಿ ಅರ್ಜಿಯನ್ನು ಸಲ್ಲಿಸಬೇಕಾಗಿರುತ್ತದೆ. ಬಾಕಿ ಇರುವ ಪೂರ್ಣ ತೆರಿಗೆಯನ್ನು **31.03.2025ರೊಳಗೆ** ಪಾವತಿಸಿದ ನಂತರ, ನಿಗದಿತ ನಮೂನೆಯಲ್ಲಿ **GST Online Portal ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30.06.2025,** ತದನಂತರ ಬಡ್ಡಿ ಮತ್ತು ದಂಡವನ್ನು ಮನ್ನಾ ಮಾಡಲಾಗುವುದು ಎಂಬುದರ ಕುರಿತು ವಿಡಿಯೋ ತುಣುಕುಗಳನ್ನು You-tube CTD Karnataka ಹಾಗೂ ಇಲಾಖಾ ಜಾಲತಾಣ gst.kar.nic.in ನಲ್ಲಿ ವೀಕ್ಷಿಸಿ ವರ್ತಕ ಸಮುದಾಯದವರು GST AMNESTY SCHEMEನ್ನು ಸದುಪಯೋಗಪಡಿಸಿಕೊಳ್ಳಲು ಸೂಚಿಸಿದೆ.

ಸಹಿ/–
ವಾಣಿಜ್ಯ ತೆರಿಗೆಗಳ ಆಯುಕ್ತರು
ಕರ್ನಾಟಕ, ಬೆಂಗಳೂರು

ವಾಸಾಸಂಇ/ವಾ.ಪ್ರ/5405/ಎಂಎಎ/2024–25

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ

ಮುಖ್ಯ ಅಭಿಯಂತರವರ ಕಾರ್ಯಾಲಯ, ಧಾರವಾಡ
ಸರ್.ಎಂ. ವಿಶ್ವೇಶ್ವರಯ್ಯ ರಸ್ತೆ, ಜಲಮಂಡಳಿ ಆವರಣ, ಧಾರವಾಡ–580001.
ದೂರವಾಣಿ :0836–2447090 ಇ–ಮೇಲ್ : kwbcen@gmail.com

ಟೆಂಡರ್ ಪ್ರಕಟಣೆ (ಎಲೆಕ್ಟ್ರಾನಿಕ್ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಈ ಕೆಳಗಿನ ಕಾಮಗಾರಿಗಳಿಗೆ ತಾಂತ್ರಿಕ ಮತ್ತು ಆರ್ಥಿಕ ಅರ್ಹತಾ ಅಗತ್ಯತೆಗಳನ್ನು ತೃಪ್ತಿಕರವಾಗಿ ಅರ್ಹರಿರುವ ಸಂಸ್ಥೆ/ಗುತ್ತಿಗೆದಾರರಿಂದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ (ದ್ವಿ–ಟೆಂಡರ್ ದಾಖಲೆ ಪದ್ಧತಿಯಲ್ಲಿ) ಟೆಂಡರ್ ಆಹ್ವಾನಿಸಲಾಗಿದೆ. ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ:2169 ದಿನಾಂಕ: 03–03–2025.

(1) ಅಮೃತ್–2.0 ರಡಿ (Tranche-3) ಬಸವನ ಬಾಗೇವಾಡಿ ಪಟ್ಟಣದ ನೀರು ಸರಬರಾಜು ವ್ಯವಸ್ಥೆಯ ಹಾಲಿವಿರುವ 375mm ವ್ಯಾಸದ PSC ಹಾಗೂ 406mm ವ್ಯಾಸದ MS ಕೊಳವೆ ಬದಲಾಯಿಸಿ 457mm ವ್ಯಾಸದ (5.6 mm ದಪ್ಪ) ಹೊಸ ಕೊಳವೆ ಮಾರ್ಗವನ್ನು ಅಳವಡಿಸಿ ಚಾಲನೆಗೊಳಿಸುವುದು ಹಾಗೂ 5 ವರ್ಷಗಳ ನಿರ್ವಹಣೆ ಮತ್ತು ದುರಸ್ತಿ (1 ವರ್ಷದ DLP ಒಳಗೊಂಡು) DBOT ಮಾದರಿಯಲ್ಲಿ (ಇಡುಗಂಟು ಟೆಂಡರ್– ವೇರಿಯೇಷನ್ ಇರುವುದಿಲ್ಲಾ) INDENT NO. KUWSDB/2024-25/WS/ WORK_INDENT320.

(2) ಅಮೃತ್–2.0 ರಡಿ (Tranche-3) ನಿಡಗುಂದಿ ಪಟ್ಟಣಕ್ಕೆ ನೀರು ಸರಬರಾಜು ವಿತರಣಾ ವ್ಯವಸ್ಥೆ ಕಲ್ಪಿಸುವುದು ಹಾಗೂ 5 ವರ್ಷಗಳ ನಿರ್ವಹಣೆ ಮತ್ತು ದುರಸ್ತಿ (1 ವರ್ಷದ DLP ಒಳಗೊಂಡು) DBOT ಮಾದರಿಯಲ್ಲಿ (ಇಡುಗಂಟು ಟೆಂಡರ್– ವೇರಿಯೇಷನ್ ಇರುವುದಿಲ್ಲಾ) INDENT NO. KUWSDB/2024-25/WS/ WORK_INDENT321.

(3) ಅಮೃತ್–2.0 ರಡಿ Tranche (1 & 2) ಬಬಲೇಶ್ವರ ಪಟ್ಟಣಕ್ಕೆ ನೀರು ಸರಬರಾಜು ವಿತರಣಾ ವ್ಯವಸ್ಥೆ ಕಲ್ಪಿಸುವುದು ಹಾಗೂ 5 ವರ್ಷಗಳ ನಿರ್ವಹಣೆ ಮತ್ತು ದುರಸ್ತಿ (1 ವರ್ಷದ DLP ಒಳಗೊಂಡು) DBOT ಮಾದರಿಯಲ್ಲಿ (ಇಡುಗಂಟು ಟೆಂಡರ್– ವೇರಿಯೇಷನ್ ಇರುವುದಿಲ್ಲಾ) INDENT NO. KUWSDB/ 2024-25/WS/WORK_INDENT322.

(4) ಅಮೃತ್–2.0 ರಡಿ (Tranche-2) ತಿಕೋಟಾ ಪಟ್ಟಣಕ್ಕೆ ನೀರು ಸರಬರಾಜು ವಿತರಣಾ ವ್ಯವಸ್ಥೆ ಕಲ್ಪಿಸುವುದು ಹಾಗೂ 5 ವರ್ಷಗಳ ನಿರ್ವಹಣೆ ಮತ್ತು ದುರಸ್ತಿ (1 ವರ್ಷದ DLP ಒಳಗೊಂಡು) DBOT ಮಾದರಿಯಲ್ಲಿ (ಇಡುಗಂಟು ಟೆಂಡರ್– ವೇರಿಯೇಷನ್ ಇರುವುದಿಲ್ಲಾ) INDENT NO. KUWSDB/2024-25/WS/WORK_INDENT323.

(5) ಅಮೃತ್–2.0 ರಡಿ (Tranche-3) ಸಿದ್ದಾಪುರ ಪಟ್ಟಣಕ್ಕೆ 2ನೇ ಹಂತದ ನೀರು ಸರಬರಾಜು ವ್ಯವಸ್ಥೆ ಕಲ್ಪಿಸುವುದು ಹಾಗೂ 5 ವರ್ಷಗಳ ನಿರ್ವಹಣೆ ಮತ್ತು ದುರಸ್ತಿ (1 ವರ್ಷದ DLP ಒಳಗೊಂಡು) DBOT ಮಾದರಿಯಲ್ಲಿ (ಇಡುಗಂಟು ಟೆಂಡರ್– ವೇರಿಯೇಷನ್ ಇರುವುದಿಲ್ಲಾ) INDENT NO. KUWSDB/2024-25/WS/WORK_INDENT324.

ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಡುವುದು ಅಥವಾ ಮುಖ್ಯ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ಧಾರವಾಡ ಕಚೇರಿಯನ್ನು ಸಂಪರ್ಕಿಸಬಹುದು.

ಸಹಿ/– ಮುಖ್ಯ ಅಭಿಯಂತರು,
ಕನನೀಸ ಮತ್ತು ಒಚ ಮಂಡಳಿ, ಧಾರವಾಡ.

ವಾ.ಸಾ.ಇ./ಧಾ/1047/2024–25/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ)
KSIIDC
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)

'ಖನಿಜ ಭವನ', 4ನೇ ಮಹಡಿ, ಪೂರ್ವ ಭಾಗ, ನಂ.49, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–1
ದೂ: 080–22258131–33, ಇ–ಮೇಲ್: murthy.ksiidc@gmail.com / info@ksiidc.com ವೆಬ್‌ಸೈಟ್: http://ksiidc.karnataka.gov.in

ಪೂರ್ವ ಭಾಗ, ಖನಿಜ ಭವನ, ಕೆಎಸ್‌ಐಐಡಿಸಿ, ಬೆಂಗಳೂರು ಇಲ್ಲಿ ಹಾಲಿ ಇರುವ ಎಲಿವೇಟರನ್ನು ತೆಗೆದು ಹೊಸದಾದ ಪ್ರಯಾಣಿಕರ/ವಾಣಿಜ್ಯ ಎಲಿವೇಟರ್‌ನ ವಿನ್ಯಾಸ, ಪೂರೈಕೆ, ಸ್ಥಾಪನೆ, ಪರೀಕ್ಷೆ ಮತ್ತು ಕಾರ್ಯಾರಂಭ ಸೇರಿದಂತೆ ಎಲಿವೇಟರ್ ಕೆಲಸಗಳ ನಿರ್ವಹಣೆಗೆ ಗುತ್ತಿಗೆದಾರರ ಆಯ್ಕೆಗಾಗಿ ಇ–ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ), ಕರ್ನಾಟಕ ಸರ್ಕಾರ ಇವರು ಪೂರ್ವ ಭಾಗ, ಖನಿಜ ಭವನ, ನಂ.49, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001 ಇಲ್ಲಿ ಹಾಲಿ ಇರುವ ಎಲಿವೇಟರನ್ನು ತೆಗೆದು ಹೊಸದಾದ ಪ್ರಯಾಣಿಕರ / ವಾಣಿಜ್ಯ ಎಲಿವೇಟರ್‌ನ ವಿನ್ಯಾಸ, ಪೂರೈಕೆ, ಸ್ಥಾಪನೆ, ಪರೀಕ್ಷೆ ಮತ್ತು ಕಾರ್ಯಾರಂಭ ಸೇರಿದಂತೆ ಎಲಿವೇಟರ್ ಕೆಲಸಗಳ ನಿರ್ವಹಣೆಗೆ ಗುತ್ತಿಗೆದಾರರ ಆಯ್ಕೆಗಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಆಹ್ವಾನಿಸಿದೆ. ಟೆಂಡರ್ ದಸ್ತಾವೇಜುಗಳು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ **(https: //kppp.karnataka.gov.in)** ನಲ್ಲಿ ಲಭ್ಯವಿದೆ.

ಇಎಂಡಿ ಮೊತ್ತ **ರೂ.65,000/– (ರೂಪಾಯಿ ಅರವತ್ತೈದು ಸಾವಿರ ಮಾತ್ರ).**

ಪ್ರಮುಖ ದಿನಾಂಕಗಳು: ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ **ದಿನಾಂಕ: 07.03.2025 ರ ನಂತರ.** ಬಿಡ್ ಪೂರ್ವ ಸಭೆ: **ದಿನಾಂಕ 14.03.2025 ರಂದು ಬೆಳಿಗ್ಗೆ 11.30 ಗಂಟೆಗೆ.** ಟೆಂಡರ್ ದಸ್ತಾವೇಜುಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 29.03.2025, 17:30 ಗಂಟೆಯವರೆಗೆ.** ಈ ಟೆಂಡರ್ ಗೆ ಸಂಬಂಧಿಸಿದಂತೆ, ಯಾವುದೇ ಬದಲಾವಣೆಗಳಿದ್ದಲ್ಲಿ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಅಪ್‌ಲೋಡ್ ಮಾಡಲಾಗುವುದು.

ಸಹಿ/– ಪ್ರಧಾನ ವ್ಯವಸ್ಥಾಪಕರು,
ಕೆಎಸ್‌ಐಐಡಿಸಿ ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯಿತಿ ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು

ದೂರವಾಣಿ ಸಂಖ್ಯೆ 08262–220936 E-Mail: zpedckm@rediffmail.com

ಟೆಂಡರ್ ಪ್ರಕಟಣೆ ಸಂಖ್ಯೆ–09/2024–25/4ನೇ ಕರೆ/2957 ದಿನಾಂಕ :04.03.2025

–:ಟೆಂಡರ್ ಪ್ರಕಟಣೆ :–(4 ನೇ ಕರೆ)

ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರುರವರು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಬೂದು ನೀರು ನಿರ್ವಹಣೆ (ಎಂ.ಜಿ.ಎನ್.ಆರ್.ಇ.ಜಿ.ಎ.) ಯೋಜನೆಯಡಿ ಸಾಮಾಗ್ರಿ ಸರಬರಾಜು ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕೆ.ಪಿ.ಪಿ.ಪಿ. ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಗರಿಷ್ಠ ಅಂದಾಜು ಮೊತ್ತ ರೂ.57,65,369.82 ಗಳು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ Standard. Tender Document KG-2 ರಂತೆ ವಿವರಗಳನ್ನು ಲಗತ್ತಿಸತಕ್ಕದ್ದು, ಸದರಿ ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ. ಮೂಲಕ ಡೌನ್ ಲೋಡ್ ಮಾಡಿದ ಡಾಕ್ಯೂಮೆಂಟ್ ಗಳನ್ನು ದಿನಾಂಕ : 04.03.2025 ರಿಂದ ದಿನಾಂಕ : 18.03.2025 ರವರೆಗೆ ಸಂಜೆ 5.30 ಗಂಟೆಯೊಳಗೆ ಭರ್ತಿ ಮಾಡಿ ಅಪ್‌ಲೋಡ್ ಮಾಡುವುದು. ತಾಂತ್ರಿಕ ಬಿಡ್ಡನ್ನು ಸಾಧ್ಯವಾದಲ್ಲಿ ದಿನಾಂಕ:20.03.2025 ರಂದು ಸಂಜೆ 5.05 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್ಡನ್ನು ಸಾಧ್ಯವಾದಲ್ಲಿ ದಿನಾಂಕ:22.03.2025 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಈ ದಿನಾಂಕದಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರು ದಿನವನ್ನು ಪರಿಗಣಿಸಲಾಗುವುದು. ಪ್ರಕಟಣೆಯನ್ನು kppp.karnataka.gov.in website ನಲ್ಲಿ ಓದಿಕೊಳ್ಳುವುದು. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/–ಕಾರ್ಯ ಚಾಲಕ ಇಂಜನಿಯರ್,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನಿಯರ್ ರವರ ಕಾರ್ಯಾಲಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚನ್ನರಾಯಪಟ್ಟಣ

ಕಛೇರಿ ದೂರವಾಣಿ: 08176–252749

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:40/2024–25
ದಿನಾಂಕ: 01.03.2025

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚನ್ನರಾಯಪಟ್ಟಣ, ವ್ಯಾಪ್ತಿಯ ಚನ್ನರಾಯಪಟ್ಟಣ ಮತ್ತು ಹೊಳೆನರಸೀಪುರ ತಾಲ್ಲೋಕಿಗೆ 2024–25ನೇ ಸಾಲಿನ 5054 ಮಳೆಹಾನಿ ಯೋಜನೆಯಡಿ ಯೋಜನೆಯಡಿ ಅನುಮೋದನೆಯಾಗಿರುವ (1)ಹೊಳೆನರಸೀಪುರ ತಾಲ್ಲೂಕು ಕಸಬಾ ಹೋಬಳಿ ಆಲದಹಳ್ಳಿ, ಗುಳ್ಳದಪುರ, ಹರಳಹಳ್ಳಿ, ಎಲೆಚಾಗಹಳ್ಳಿ, ಬೂವನಹಳ್ಳಿ, ನಾಗಲಾಪುರ, ಸಂಕನಹಳ್ಳಿ, ಗಂಗೂರು,ಅಂಕವಳ್ಳಿ, ಪಡುವಲ ಹಿಪ್ಪೆ, ಮೂಡಲಹಿಪ್ಪೆ, ತಟ್ಟೆಕೆರೆ, ಮಾರನಾಯಕನಹಳ್ಳಿ, ಈಡಿಗನಹೊಸೂರು, ವಳಂಬಿಗೆ, ಮೂಳೆಕಾಳೇನಹಳ್ಳಿ, ಉಲಿವಾಲ ಕೊಪ್ಪಲು, ಸಿಂಗಾಪುರ, ಜಿ ಸೊಮನಹಳ್ಳಿ, ಸುಣ್ ಕಲ್ಲು ಹೊಸೂರು ಹಳೇಕೋಟೆ ಹೋಬಳಿ ಕಿನ್ನರಹಳ್ಳಿ, ಕಬ್ಬಿನಹಳ್ಳಿ, ಹಂಗರಹಳ್ಳಿ, ಬಸವನಾಯಕನಹಳ್ಳಿ, ಮಾಚಗೌಡನಹಳ್ಳಿ, ಮೂಡಲಕೊಪ್ಪಲು, ಪರಸನಹಳ್ಳಿ, ತೆರಣ್ಯ,ಅರೇಕಲ್ಲು ಹೊಸಹಳ್ಳಿ, ಕಲ್ಲೇನಹಳ್ಳಿ, ಬಿಟ್ಟಗೌಡನಹಳ್ಳಿ, ಕುಂಚೇವು, ಬಾರೆಹೊಸೂರು, ಕಾಮೇನ ಹಳ್ಳಿ ,ಕೋಡಿಹಳ್ಳಿ, ಕೆ.ಕೆಹೊಸೂರು, ಬೆಟ್ಟದಸಾತೇನಹಳ್ಳಿ, ಹರಿಹರಪುರ, ಮಳಲಿ, ಪಿಳ್ಳೇನಹಳ್ಳಿ,ಸಬ್ಬನಹಳ್ಳಿ, ಹಳೆಕೋಟೆ, ಮಾವನೂರು, ಕ್ಯಾತನಹಳ್ಳಿ, ವಡ್ಡರಪಾಳ್ಯ, ಹನುಮನಹಳ್ಳಿ, ನ್ಯಾಮನಹಳ್ಳಿ, ಕಾಮಸಮುದ್ರ, ಚನ್ನಾಪುರ, ಬನಕುಪ್ಪೆ, ಹರದನಹಳ್ಳಿ ಗ್ರಾಮಗಳ ಪರಿಮಿತಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ RDPR/2024-25/RD/ WORK_INDENT 13322 ಟೆಂಡರ್ ಮೊತ್ತ ರೂ 405.71 ಲಕ್ಷಗಳಿಗೆ (ಜಿ.ಎಸ್.ಟಿ ಹೊರತುಪಡಿಸಿ) (2)ಚನ್ನರಾಯಪಟ್ಟಣ ತಾ. ದಂಡಿಗನಹಳ್ಳಿ ಹೋ., ಕುಂಭೇನಹಳ್ಳಿ ಅಗ್ರಹಾರಕೊಪ್ಪಲು, ಚಿತ್ತನಹೊಸಹಳ್ಳಿ, ಅಗ್ರಹಾರ ಚೋಳೇನಹಳ್ಳಿ, ಅಗ್ರಹಾರ, ನಂಬೀಹಳ್ಳಿ, ಎನ್.ಬಿಂಡೇನಹಳ್ಳಿ , ದೊಡ್ಡಕರಡೇವು ಮುರಾರನಹಳ್ಳಿ, ಬೆಳಗುಲಿ, ಕುಂದೂರು, ಲಕ್ಷ್ಮೀಪುರ, ತಿಮ್ಲಾಪುರ, ಎ.ಕಾಳೇನಹಳ್ಳಿ, ತಿಪ್ಪೂರು, ವಾರನಹಳ್ಳಿ, ಸಾತೇನಹಳ್ಳಿ, ಚೌಳಗಾಲ, ಕೆ.ಸಿಂಗೇನಹಳ್ಳಿ, ಬರಗೂರು ಬಾರೆ, ದೊಡ್ಡಮತಿಘಟ್ಟ, ಮಾಳೇನಹಳ್ಳಿ, ಕಲ್ಲೇನಹಳ್ಳಿ ಗ್ರಾಮಗಳ ಪರಿಮಿತಿಯಲ್ಲಿ ಸಿ.ಸಿ. ರಸ್ತೆ ಮತ್ತು ಚರಂಡಿ ನಿಮಾಣ ಕಾಮಗಾರಿ RDPR/2024-25/RD/WORK_INDENT 13311 ಟೆಂಡರ್ ಮೊತ್ತ ರೂ 225.38 ಲಕ್ಷಗಳಿಗೆ (ಜಿ.ಎಸ್.ಟಿ ಹೊರತುಪಡಿಸಿ) ಲೋಕೋಪಯೋಗಿ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ/ಎನ್ರೋಲ್ ಮಾಡಿಸಿರುವ ಅರ್ಹ ಗುತ್ತಿಗೆದಾರರಿಂದ ಸ್ಪರ್ಧಾತ್ಮಕ ಟೆಂಡರನ್ನು KPPP ಅಂತರ್ಜಾಲದಲ್ಲಿ ದಿನಾಂಕ: 15.03.2025ರ ಸಂಜೆ 5.00 ಘಂಟೆಯುವರೆಗೆ ಟೆಂಡನ್ರ್ನು ನಿಗಧಿತ ನಮೂನೆಗಳನ್ನು https://kppp.karnataka gov.in/kppp ನಲ್ಲಿ ಡೌನ್ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ: 15.03.2025ರ ಸಂಜೆ 5.00 ಗಂಟೆಯೊಳಗೆ ಅಪ್‌ಲೋಡ್ ಮಾಡತಕ್ಕದ್ದು. ದಿನಾಂಕ 14.03.2025ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿನಾಂಕ: 17.03.2025ರಂದು ಬೆಳಿಗ್ಗೆ 11.00 ಗಂಟೆಗೆ ಗುತ್ತಿಗೆದಾರರ ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು. ತಾಂತ್ರಿಕ ಬಿಡ್ಡ್ ಅನುಮೋದನೆಯಾದ ನಂತರ ಗುತ್ತಿಗೆದಾರರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು. ಕಾಮಗಾರಿಗಳ ವಿವರಗಳು KPPP ಅಂತರ್ಜಾಲದಲ್ಲಿ ಲಭ್ಯವಿರುತ್ತವೆ. ಸದರಿ ಕಾಮಗಾರಿಗೆ ಸಂಬಂಧಪಟ್ಟಂತೆ ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಪ.ರಾಜ್.
ಇಂ.ವಿಭಾಗ, ಚನ್ನರಾಯಪಟ್ಟಣ.

ವಾಸಾಸಂಇ/ಹಿಸನಿ/ಹಾಸನ/1031/ಕೆಎಸ್‌ಎಂಸಿಎ/2024–25

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ತುಮಕೂರು

Email: dhotumkur@gmail.com ph:0816-2278387

ಸಂ:ಜಿಆತು/ವಾವಿ/12/2024–25 ದಿನಾಂಕ: 01.03.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಇ–ಪ್ರೂಕ್ಯೂರ್‌ಮೆಂಟ್ ಮೂಲಕ

ವಿಷಯ: ಹೊರಗುತ್ತಿಗೆ ಆಧಾರದ ಮೇಲೆ ವಾಹನಗಳನ್ನು ಬಾಡಿಗೆಗೆ ಪಡೆಯುವ ಬಗ್ಗೆ.

ತುಮಕೂರು ಜಿಲ್ಲೆಯಲ್ಲಿನ ತಾಲ್ಲೂಕು ಆರೋಗ್ಯಾಧಿಕಾರಿಗಳು ಹಾಗೂ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳ ದೈನಂದಿನ ಕಾರ್ಯಗಳನ್ನು ನಿರ್ವಹಿಸಲು ಹೊರಗುತ್ತಿಗೆ ಆದಾರದ ಮೇರೆಗೆ ಬಾಡಿಗೆ ವಾಹನಗಳನ್ನು (ಚಾಲಕರ ಸಮೇತ) ಪಡೆಯುವ ಸಂಬಂದ ಅಲ್ಪಾವಧಿ ಟೆಂಡರ್ ಆಹ್ವಾನಸಲಾಗಿದೆ. ಇ–ಪ್ರೂಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಟೆಂಡರ್‌ದಾರರಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದ್ದು ಆಸಕ್ತಿಯುಳ್ಳ ಟೆಂಡರ್‌ದಾರರು https://eproc.karnataka.gov.in ವೆಬ್‌ಸೈಟ್ ಮುಖಾಂತರ ಟೆಂಡರ್ ಪ್ರಕಟಣೆಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ವಿವರ ಅವಶ್ಯಕತೆ ಇದ್ದಲ್ಲಿ ಈ ಕಚೇರಿಯ ದೂರವಾಣಿ ಸಂಖ್ಯೆ:0816–2278387 ನ್ನು ಸಂಪರ್ಕಿಸಬಹುದು.

ಟೆಂಡರ್ ದಾಸ್ತಾವೇಜುಗಳನ್ನು ಪಡೆಯುವ ವಿಧಾನ:

1. ಇ–ಪ್ರೂಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಡೌನ್ ಲೋಡ್ ಮಾಡಿಕೊಳ್ಳಬೇಕಾದ ದಿನಾಂಕ:03–03–2025 ರಿಂದ. 2. ಇ–ಪ್ರೂಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ಭರ್ತಿಮಾಡಲಾದ ಟೆಂಡರ್ ದಾಸ್ತಾವೇಜುಗಳನ್ನು ಅಪ್‌ಲೋಡ್ ಮಾಡಬೇಕಾದ ದಿನಾಂಕ:18–03–2025. 3. ಟೆಂಡರ್ ಅಂದಾಜು ಮೊತ್ತ ರೂ.53.00/– ಲಕ್ಷಗಳು

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು,
ತುಮಕೂರು.

DIPR/TUM/675/KSMCA/2024-25

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ, ತುಮಕೂರು.

ಕ್ರ.ಸಂ:ಕಾಇಂ:ಲೋಇವಿ:ತುಮ:ಸಇಂ–1:ಟೆಂಡರ್48/2024–25
ದಿನಾಂಕ : 05.03.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ.48/2024–25
ದಿನಾಂಕ: 05.03.2025

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 48/2024–25:ದಿನಾಂಕ 05–03–2025 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ 8443 ಠೇವಣಿ ವಂತಿಕೆ (ಗಣಿ ಪುನಃಶ್ಚೇತನ ಯೋಜನೆ–CEPMIZ) ಲೆಕ್ಕ ಶೀರ್ಷಿಕೆ ಅಡಿಯಲ್ಲಿ 08 ಕಾಮಗಾರಿಗೆ KPPP-Portal ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಗರಿಷ್ಠ ಮೊತ್ತ ರೂ.2691.90 ಲಕ್ಷಗಳು, ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ: 393.11 ಲಕ್ಷಗಳು, ಇ.ಎಂ.ಡಿ ಗರಿಷ್ಠ ಮೊತ್ತ ರೂ.2691899/– ಮತ್ತು ಕನಿಷ್ಠ ಮೊತ್ತ ರೂ.589662/–, ಅರ್ಹ ಗುತ್ತಿಗೆದಾರರು 2 ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 9 ರಿಂದ 11 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: 20–03–2025 ರ 17–30 ಗಂಟೆಗೆ, KPPP-Portal ಮೂಲಕ ಟೆಂಡರ್‌ಅನ್ನು ದಿನಾಂಕ 06–03–2025 ರಿಂದ 21–03–2025 ರ 16.00 ಗಂಟೆಯವರೆಗೆ ಪಡೆಯಬಹುದಾಗಿದೆ. ಟೆಂಡರ್‌ಅನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: 21–03–2025 ರ 16–00 ಗಂಟೆವರೆಗೆ, ತಾಂತ್ರಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 24–03–2025 ರ 11–00 ಗಂಟೆಗೆ, ಆರ್ಥಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 25–03–2025 ರ 16–30 ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ:https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ. ಸದರಿ ಟೆಂಡರ್ ಪ್ರಕಟಣೆಯಲ್ಲಿ ಆಗುವಂತಹ ಮುಂದಿನ ಬದಲಾವಣೆಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.

DIPR/TUM/687/KSMCA/2024-25

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ:ಮು.ಪ್ರ.ವ್ಯ(ತಾ)/ಉ.ಪ್ರ.ವ್ಯ(ಎಪಿಸಿಸಿ&ಪ್ರೊ)/ಕಾಇಂ–ಪ್ರೊ–1/ಸ.ಕಾ.ನಿ.ಇಂ/217–226 ದಿನಾಂಕ:06.03.2025

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣೆ ಸಂಖ್ಯೆ ಮೂಲಕ ಕೆಳಕಂಡ ಕಾಮಗಾರಿಗಳಿಗೆ ಸಂಯೋಜಿತ ಪ್ಯಾಕೇಜ್ ಅಡಿಯಲ್ಲಿ, ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ವಿಚಾರಣಾ ಸಂಖ್ಯೆ/ ಕಾಮಗಾರಿಯ ವಿವರ
ಕವಿಪ್ರನಿನಿ/2024–25/ ಎಸ್‌ಎಸ್/ವರ್ಕ್_ಇಂಡೆಂಟ್ 2136.
ಕರ್ನಾಟಕ ರಾಜ್ಯದ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕವಿಪ್ರನಿನಿ)ದ ಬೆಂಗಳೂರು ಆನಂದರಾವ್ ವೃತ್ತದಲ್ಲಿ ಇರುವ ಕವಿಪ್ರನಿನಿಯ ಜಮೀನಿನಲ್ಲಿ 220 ಕೆವಿ ಗ್ಯಾಸ್ ಇನ್ಸುಲೇಟೆಡ್ ವಿದ್ಯುತ್ ಉಪಕೇಂದ್ರ ಹಾಗೂ ರಿಯಲ್ ಎಸ್ಟೇಟ್ ಅಭಿವೃದ್ಧಿಪಡಿಸಲು ಅಭಿವೃದ್ಧಿದಾರರನ್ನು ಆಯ್ಕೆ ಮಾಡಲು.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ https://kptcl.karnataka.gov.in ನ ಹೈಪರ್‌ಲಿಂಕ್ 'ಇ ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ' ಅಥವಾ https://kppp.karnataka.gov.in ನಲ್ಲಿ ಲಾಗಿನ್ ಆಗಿ ದಿನಾಂಕ **10.03.2025 ರಂದು 17.30 ಗಂಟೆ ಅಥವಾ ನಂತರದಿಂದ** ಪಡೆಯಬಹುದು. ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ **09.04.2025 17.30 ಗಂಟೆ.** ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು. ಇದಕ್ಕೆ ಸಂಬಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು / ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/– ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ),
ನಿಗಮ ಕಛೇರಿ, 2ನೇ ಮಹಡಿ, ಕ.ವಿ.ಪ್ರ.ನಿ.ನಿ,
ಕಾವೇರಿ ಭವನ, ಬೆಂಗಳೂರು–560009.

ಶ್ರೀ ರಾಘವೇಂದ್ರ ಸ್ವಾಮಿಗಳ 430ನೇ ವರ್ಧಂತಿ ಮಹೋತ್ಸವದ ಪ್ರಯುಕ್ತ ಮಂತ್ರಾಲಯದ ಮಠದಲ್ಲಿ ರಾಯರ ಮೂರ್ತಿಗೆ ಸುಬುಧೇಂದ್ರ ತೀರ್ಥರು ಪೂಜೆ ಸಲ್ಲಿಸಿದರು

ರಾಘವೇಂದ್ರ ಸ್ವಾಮಿಗಳ ವರ್ಧಂತಿ ಮಹೋತ್ಸವ

ಪ್ರಜಾವಾಣಿ ವಾರ್ತೆ

ರಾಯಚೂರು: ಶ್ರೀ ರಾಘವೇಂದ್ರ ಸ್ವಾಮಿಗಳವರ 430ನೇ ವರ್ಧಂತಿ ಮಹೋತ್ಸವವು ಮಂತ್ರಾಲಯದ ಮಠದಲ್ಲಿ ಗುರುವಾರ ವಿಜೃಂಭಣೆಯಿಂದ ನೆರವೇರಿತು.

ಸುಬುಧೇಂದ್ರ ತೀರ್ಥ ಸ್ವಾಮೀಜಿ ಮಾರ್ಗದರ್ಶನದಲ್ಲಿ ರಾಯರ ಬೃಂದಾವನಕ್ಕೆ ಪಂಚಾಮೃತ ಅಭಿಷೇಕ ನೆರವೇರಿಸಲಾಯಿತು. ಮಹಾ ಆರತಿ ಬೆಳಗಲಾಯಿತು.

ರಾಯರ ರಥೋತ್ಸವಕ್ಕೆ ಸುಬುಧೇಂದ್ರ ತೀರ್ಥರು ಚಾಲನೆ ನೀಡಿದರು. ನಂತರ ದೀಪ ಪ್ರಜ್ವಲನ ಮಾಡುವ ಮೂಲಕ 'ನಾದ ಹರಂ' ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಉತ್ಸವದ ಅಂಗವಾಗಿ ತಮಿಳುನಾಡಿನ ಅಂತರರಾಷ್ಟ್ರೀಯ ಕಲಾವಿದರೂ ಸೇರಿದಂತೆ ಖ್ಯಾತ ಸಂಗೀತ ಕಲಾವಿದರು ಭಕ್ತಿಯಿಂದ ನಾದ ನಮನ ಸೇವೆ ಸಲ್ಲಿಸಿದರು. ಶ್ರೀಗಳು ವೀಣೆ ನುಡಿಸಿದರು. ಕಾರ್ಯಕ್ರಮದಲ್ಲಿ ಅಪಾರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು.

ರಾಜ್ಯದಲ್ಲಿ ಬಿಹಾರಕ್ಕಿಂತ ಕೆಟ್ಟ ಪರಿಸ್ಥಿತಿ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): 'ಸಂಪದ್ಭರಿತವಾದ ಕರ್ನಾಟಕದಲ್ಲಿ ಬಿಹಾರಕ್ಕಿಂತಲೂ ಕೆಟ್ಟ ಪರಿಸ್ಥಿತಿ ನಿರ್ಮಾಣವಾಗಲಿದೆ. ಆ ರೀತಿ ಆಗಲೇಬೇಕು ಎಂದಿದ್ದರೆ ನಾವೇನೂ ಮಾಡಲು ಸಾಧ್ಯವಿಲ್ಲ' ಎಂದು ಕೇಂದ್ರ ಬೃಹತ್ ಕೈಗಾರಿಕೆ ಸಚಿವ ಎಚ್‌.ಡಿ. ಕುಮಾರಸ್ವಾಮಿ ರಾಜ್ಯ ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಎಚ್‌.ಡಿ. ಕುಮಾರಸ್ವಾಮಿ

ತಾಲ್ಲೂಕಿನ ಅಕ್ಕೂರಿನಲ್ಲಿ ಗುರುವಾರ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ಕಟ್ಟಡ ಉದ್ಘಾಟನೆ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ರಾಜ್ಯವನ್ನು ಉಳಿಸುವವರು ಯಾರು ಎಂಬುದನ್ನು ಜನ ಮೊದಲು ಅರ್ಥ ಮಾಡಿಕೊಳ್ಳಬೇಕು. ಬುದ್ಧಿವಂತರಾಗಿ ತೀರ್ಮಾನ ಕೈಗೊಳ್ಳಬೇಕು ಎಂದರು.

ರಾಜ್ಯ ಸರ್ಕಾರ ಹಾಗೂ ಬಜೆಟ್ ನಿರೀಕ್ಷೆ ಕುರಿತು ಚರ್ಚಿಸುವುದರಲ್ಲಿ ಅರ್ಥವೇ ಇಲ್ಲ. ಆ ರೀತಿ ಮಾಡುವುದು ಕೆಸರಿನ ಮೇಲೆ ಕಲ್ಲು ಎಸೆದಂತೆ. ಎಸ್‌ಸಿ ಮತ್ತು ಎಸ್‌ಟಿ ಸಮುದಾಯದ ಪರಿಸ್ಥಿತಿ ಏನಾಗಿದೆ. ಜನಸಾಮಾನ್ಯರ ಕೆಲಸಗಳು ಯಾವ ರೀತಿ ನಡೆಯುತ್ತಿವೆ. ರಾಜ್ಯ ಯಾವ ಸ್ಥಿತಿಯಲ್ಲಿದೆ ಎಂಬುದನ್ನು ನೀವೇ ಗಮನಿಸಬೇಕು. ಕಳೆದ ಎರಡು ವರ್ಷಗಳಿಂದ ಇವರು ಏನು ಮಾಡಿದ್ದಾರೆ ಎಂದು ಪ್ರಶ್ನಿಸಿದರು.

'ನಾನು ಎರಡು ಸಲ ಮುಖ್ಯಮಂತ್ರಿಯಾಗಿದ್ದಾಗ ಗುತ್ತಿಗೆದಾರರಿಗೆ ಪ್ರತಿ ತಿಂಗಳು ಹಣ ಬಿಡುಗಡೆ ಮಾಡುತ್ತಿದ್ದೆ. ಆಗ ಯಾವ ಗುತ್ತಿಗೆದಾರರೂ ಬಂದು ನನಗೆ ಪರ್ಸೆಂಟೇಜ್ ಕೊಟ್ಟಿರಲಿಲ್ಲ. ನಾನಿದ್ದಾಗ ಈ ಪರ್ಸೆಂಟೇಜ್ ಚರ್ಚೆಯೇ ನಡೆದಿರಲಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಕೋರ್ಟ್‌ಗೆ ಕರೆತಂದಿದ್ದಾಗ ಪರಾರಿಯಾದ ಕೈದಿ

ಪ್ರಜಾವಾಣಿ ವಾರ್ತೆ

ಮಸ್ಕಿ (ರಾಯಚೂರು ಜಿಲ್ಲೆ): ನ್ಯಾಯಾಂಗ ಬಂಧನದಲ್ಲಿದ್ದ ವಿಚಾರಣಾಧೀನ ಕೈದಿಯೊಬ್ಬ ಡಿಎಆರ್ ಪೊಲೀಸರನ್ನು ನೂಕಿ ಪರಾರಿಯಾದ ಘಟನೆ ಗುರುವಾರ ಪಟ್ಟಣದ ಸಿವಿಲ್ ಮತ್ತು ಜೆಎಂಎಫ್‌ಸಿ ಕೋರ್ಟ್ ಆವರಣದ ಮುಂದೆ ನಡೆದಿದೆ.

ದೊಡ್ಡ ದುರಗೇಶ ಪರಾರಿಯಾದ ಕೈದಿ. ಕಳ್ಳತನ ಪ್ರಕರಣವೊಂದರ ವಿಚಾರಣೆಗೆ ಹೋಗಿದ್ದ ಬಳಗಾನೂರು ಪೊಲೀಸರ ಮೇಲೆ ಹಲ್ಲೆ ನಡೆಸಿದ ಆರೋಪದ ಮೇಲೆ ಬಂಧಿತರಾಗಿದ್ದ ದೊಡ್ಡ ದುರಗೇಶ ಹಾಗೂ ಸಣ್ಣ ದುರಗೇಶನನ್ನು 20 ದಿನಗಳ ಹಿಂದೆ ಬಂಧಿಸಿ ಜೈಲಿಗೆ ಕಳುಹಿಸಲಾಗಿತ್ತು. ನ್ಯಾಯಾಂಗ ಬಂಧನದ ಅವಧಿ ಮುಗಿದಿದ್ದರಿಂದ ಗುರುವಾರ ಕೋರ್ಟ್‌ಗೆ ಹಾಜರುಪಡಿಸಲು ಕರೆ ತರಲಾಗಿತ್ತು. ನ್ಯಾಯಾಧೀಶರು ಆರೋಪಿಗಳ ನ್ಯಾಯಾಂಗ ಬಂಧನವನ್ನು ವಿಸ್ತರಿಸಿ ಆದೇಶಿಸಿದರು.

ಜಿಲ್ಲಾ ಕಾರಾಗೃಹದಿಂದ ದೊಡ್ಡ ದುರಗೇಶನನ್ನು ಐವರು ಜಿಲ್ಲಾ ಸಶಸ್ತ್ರ ಮೀಸಲು ಪೊಲೀಸರು ನ್ಯಾಯಾಲಯಕ್ಕೆ ಕರೆತಂದಿದ್ದರು. ನ್ಯಾಯಾಲಯ ಸಭಾಂಗಣದಿಂದ ಹೊರಬಂದ ಬಳಿಕ ದೊಡ್ಡ ದುರಗೇಶ ಪೊಲೀಸರನ್ನು ನೂಕಿ ಜಾಲಿ ಗಿಡಗಳ ನಡುವೆ ಹೋಗಿ ಪರಾರಿ ಆಗಿದ್ದಾನೆ. ಪೊಲೀಸರು ಬೆನ್ನಟ್ಟಿದರೂ ಕೈದಿ ಸಿಗಲಿಲ್ಲ ಎಂದು ತಿಳಿದು ಬಂದಿದೆ.

'ಕೈದಿ ಪರಾರಿಯಾದ ಪ್ರಕರಣ ಸಂಬಂಧ ಕರ್ತವ್ಯದಲ್ಲಿದ್ದ ಪೊಲೀಸರ ಮೇಲೆ ಇಲಾಖೆ ಶಿಸ್ತು ಕ್ರಮ ಕೈಗೊಳ್ಳಲಿದೆ. ಈ ಬಗ್ಗೆ ಇಲಾಖೆ ತನಿಖೆ ಆರಂಭವಾಗಿದೆ. ತಪ್ಪಿಸಿಕೊಂಡ ಆರೋಪಿ ದೊಡ್ಡ ದುರಗೇಶನ ಪತ್ತೆಗಾಗಿ ಇಬ್ಬರು ಡಿವೈಎಸ್ಪಿಗಳ ನೇತೃತ್ವದಲ್ಲಿ ನಾಲ್ಕು ತಂಡ ರಚಿಸಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪುಟ್ಟಮಾದಯ್ಯ 'ಪ್ರಜಾವಾಣಿ'ಗೆ ತಿಳಿಸಿದರು.

ಕಳ್ಳತನ ಪ್ರಕರಣದ ವಿಚಾರಣೆಗಾಗಿ ಮಸ್ಕಿ ಪಟ್ಟಣದ ಆರೋಪಿಗಳ ಮನೆ ಬಳಿ 2024ರ ಜನವರಿಯಲ್ಲಿ ತೆರಳಿದ್ದ ಇಬ್ಬರು ಪೊಲೀಸರ ಮೇಲೆ ಆರೋಪಿಗಳು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದರು. ಒಂದು ವರ್ಷದ ನಂತರ ಬಳಗಾನೂರು ಪೊಲೀಸರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದರು.

ಶಿಕ್ಷಣ ತಜ್ಞ ದೊರೆಸ್ವಾಮಿ ಇನ್ನಿಲ್ಲ

ಬೆಂಗಳೂರು: ಪಿಇಎಸ್ ವಿಶ್ವವಿದ್ಯಾಲಯದ ಸಂಸ್ಥಾಪನಾಧ್ಯಕ್ಷ ಹಾಗೂ ಕುಲಾಧಿಪತಿ ಎಂ.ಆರ್. ದೊರೆಸ್ವಾಮಿ (89) ಅವರು ಗುರುವಾರ ಸಂಜೆ ನಿಧನರಾದರು.

ಅವರು ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದರು. ಮೃತರಿಗೆ ಪತ್ನಿ ರಾಧಾ ಮನೋಹರಿ, ಪಿಇಎಸ್ ವಿಶ್ವವಿದ್ಯಾಲಯದ ಸಮ ಕುಲಾಧಿಪತಿಯೂ ಆಗಿರುವ ಪುತ್ರ ಪ್ರೊ.ಡಿ. ಜವಾಹರ್, ಸೊಸೆ ಸುಮನ್ ಜವಾಹರ್, ಪುತ್ರಿ ಡಿ. ರೂಪಾ, ಅಳಿಯ ಸುರೇಶ್ ಕೃಷ್ಣ ಇದ್ದಾರೆ.

ಅವರ ನಿವಾಸದಲ್ಲಿ ಶುಕ್ರವಾರ ಮಧ್ಯಾಹ್ನ 3.30ರವರೆಗೆ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಸಂಜೆ 4.30ಕ್ಕೆ ಬನಶಂಕರಿ ಚಿತಾಗಾರದಲ್ಲಿ ಅಂತ್ಯಸಂಸ್ಕಾರ ನಡೆಯಲಿದೆ.



ಶಿಕ್ಷಣ ತಜ್ಞರಾದ ದೊರೆಸ್ವಾಮಿ ಅವರು, 1937ರ ನವೆಂಬರ್ 7ರಂದು ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ನರ್ರವೂರಿನಲ್ಲಿ ಕೃಷಿ ಕುಟುಂಬದಲ್ಲಿ ಜನಿಸಿದ್ದರು. ಬಳಿಕ ಕುಟುಂಬಸ್ಥರೊಂದಿಗೆ ಬೆಂಗಳೂರಿಗೆ ಬಂದ ಅವರು, ಪ್ರಾಥಮಿಕ ಶಿಕ್ಷಣವನ್ನು ಕನ್ನಡ ಮಾಧ್ಯಮದಲ್ಲಿ ಪಡೆದಿದ್ದರು. ಬೆಂಗಳೂರು ವಿಶ್ವವಿದ್ಯಾಲಯದಿಂದ ಕಾನೂನು ಪದವಿ, ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದರು.

ದಯಾನಂದ ಸಂಜೆ ಕಾಲೇಜು, ಹನುಮಂತನಗರದ ಪಿಇಎಸ್ ಕಾಲೇಜಿನ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸಿದ ಅವರು, 2013ರಿಂದ ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿಯಾಗಿದ್ದರು.

ಶಿಕ್ಷಣ ಕ್ಷೇತ್ರದಲ್ಲಿ ದೂರದೃಷ್ಟಿ ಹೊಂದಿದ್ದ ಅವರು, 1972ರಲ್ಲಿ ಪಿಇಎಸ್ ಪದವಿಪೂರ್ವ ಕಾಲೇಜು ಪ್ರಾರಂಭಿಸಿದ್ದರು. ಬಳಿಕ ಪದವಿ ಕಾಲೇಜು, ವಿಶ್ವವಿದ್ಯಾಲಯ ಪ್ರಾರಂಭಿಸಿದರು. 40 ವಿದ್ಯಾರ್ಥಿಗಳೊಂದಿಗೆ ಪ್ರಾರಂಭಿಸಿದ ಸಂಸ್ಥೆಯು, ಕರ್ನಾಟಕ ಮತ್ತು ಆಂಧ್ರಪ್ರದೇಶದಲ್ಲಿ ಶಾಖೆಗಳನ್ನು ಹೊಂದಿದೆ. ಸುಮಾರು 18 ಸಾವಿರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ದೊರೆಸ್ವಾಮಿ ಅವರು ಬಿಜೆಪಿಯಿಂದ ವಿಧಾನಪರಿಷತ್ತಿನ ಸದಸ್ಯರಾಗಿದ್ದರು. ಬಿ.ಎಸ್. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರದ ಅವಧಿಯಲ್ಲಿ ರಾಜ್ಯ ಸರ್ಕಾರದ ಶಿಕ್ಷಣ ಸುಧಾರಣೆಗಳ ಸಲಹೆಗಾರರಾಗಿ ಕಾರ್ಯನಿರ್ವಹಿಸಿದ್ದರು. ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆಗೆ ರಾಜ್ಯ ಸರ್ಕಾರದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸೇರಿ ವಿವಿಧ ಪ್ರಶಸ್ತಿಗಳಿಂದ ಗೌರವಿಸಲ್ಪಟ್ಟಿದ್ದಾರೆ.

रजिस्ट्री सं. डी.एल. 33004/99 REGD. No. D.L. - 33004/99

भारत का राजपत्र
The Gazette of India

सी.जी.-डी.एल.-अ.-01032025-261389
CG - DL - E - 01032025-261389

असाधारण
EXTRAORDINARY
भाग - II - खण्ड - 3 - उप खण्ड - (ii)
PART II - Section -3 - Sub section (ii)
प्राधिकार से प्रकाशित
PUBLISHED BY AUTHORITY

सं. - 1028] नई दिल्ली, शुक्रवार, फरवरी 28, 2025 / फाल्गुन 9, 1946
No. 1028] NEW DELHI, FRIDAY, FEBRUARY 28, 2025 / PHALGUNA 9, 1946

ಭಾರತ ಸರ್ಕಾರ
ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ

ರಾಷ್ಟ್ರೀಯ ಹೆದ್ದಾರಿ 73 ಮತ್ತು 275, ಮೊದಲನೇ ಮಹಡಿ, ವಿಠಲ್ ಆರ್ಕೇಡ್ ಕಟ್ಟಡ, ಕೊಟ್ಟಾರ ಚೌಕಿ ಬಳಿ, ದೇರೆಬೈಲ್ ಗ್ರಾಮ, ಅಶೋಕನಗರ ಅಂಚೆ, ಮಂಗಳೂರು–575006

ದೂರವಾಣಿ: 0824–2423344 ಇಮೇಲ್ : slaonhmlr@gmail.com

ಸಂ: ಎಲ್ಎಕ್ಯೂ ಸಿಆರ್ 1/2024–25 ದಿನಾಂಕ: 05.03.2025

ಸಾರ್ವಜನಿಕ ಪ್ರಕಟಣೆ

ರಾಷ್ಟ್ರೀಯ ಹೆದ್ದಾರಿ ಕಾಯಿದೆ 1956 (1956ರ 48) ಮತ್ತು ತಿದ್ದು ಪಡಿ ಕಾಯಿದೆ 1997ರ ಸೆಕ್ಷನ್ 3ಡಿ(1) ಮತ್ತು (2)ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಭಾರತ ಸರಕಾರವು ತನ್ನ ಗಜೆಟ್ ಅಧಿಸೂಚನೆ ನಂ **ಎಸ್.ಒ. 1036(ಇ) ದಿನಾಂಕ 28ನೇ ಫೆಬ್ರವರಿ 2025ರಲ್ಲಿ** ಈ ಕೆಳಗೆ ಪ್ರಕಟಿಸಿರುವ ಅಧಿಸೂಚನೆಯಲ್ಲಿರುವ ಜಮೀನುಗಳನ್ನು **ಕಿ.ಮೀ. 0.00 ರಿಂದ 28.49 (ಉಜಿರೆ–ಧರ್ಮಸ್ಥಳ–ಪೆರಿಯಶಾಂತಿ ವಿಭಾಗ)ರಲ್ಲಿ ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ ನಂಬರ್ 73 (ಹೊಸ) ಸ್ಪರ್ ರಸ್ತೆ ನಿರ್ಮಾಣ** (ಅಗಲೀಕರಣ/ಸುಸಜ್ಜಿತ ಭುಜದೊಂದಿಗೆ ನಾಲ್ಕು ಲೇನಿಂಗ್ ಇತ್ಯಾದಿ) ಭೂಸ್ವಾಧೀನಪಡಿಸಿಕೊಳ್ಳಲು ಅವಶ್ಯವಾಗಿರುತ್ತದೆ. ಆದ್ದರಿಂದ ರಾಷ್ಟ್ರೀಯ ಹೆದ್ದಾರಿ ಕಾಯಿದೆ–1956ರ ಕಲಂ 3(ಜಿ) ಉಪ ಕಲಂ (1) (2) (3) ಮತ್ತು (4) ಹಾಗೂ 1997ರ ತಿದ್ದುಪಡಿಯಡಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಅನುಸೂಚಿಯಲ್ಲಿ ನಮೂದಿಸಿರುವ ಜಮೀನುದಾರರಿಗೆ ಹಾಗೂ ಸದರಿ ಜಮೀನುಗಳಲ್ಲಿ ಹಿತಾಸಕ್ತಿ ಉಳ್ಳವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅನುಸೂಚಿಯಲ್ಲಿ ನಮೂದಿಸಿರುವ ಜಮೀನುಗಳನ್ನು ಕೇಂದ್ರ ಸರಕಾರವು ಮೇಲ್ಕಾಣಿಸಿದ ಉದ್ದೇಶಕ್ಕೆ ವಶಪಡಿಸಿಕೊಂಡಿರುವುದರಿಂದ ಸದರಿ ಜಮೀನುಗಳಿಗೆ ಪರಿಹಾರ ನಿರ್ಧರಿಸಿ ಪಾವತಿಸಲು ಸಂಬಂಧಪಟ್ಟ ಅಧಿಕೃತ ದಾಖಲೆಗಳನ್ನು ಅಂದರೆ (1) ಜಮೀನಿನ ಮೂಲ ದಾಖಲೆ ಪತ್ರ (2) ಭೂಪರಿವರ್ತನೆ ಆಗಿದ್ದಲ್ಲಿ ಆದೇಶದ ಪ್ರತಿ ಕಡ್ಡಾಯವಾಗಿ, (3) ಕ್ರಯ/ವಿಕ್ರಯ/ ಇತರೆ ಪತ್ರಗಳು (4) ಚಾಲ್ತಿ ಸಾಲಿನ ಆರ್ ಟಿ ಸಿ (5) ಮ್ಯುಟೇಶನ್ ಪ್ರತಿ ಮತ್ತು ಕಂದಾಯ ಪಾವತಿಸಿದ ರಶೀದಿ ಹಾಗೂ ಅಪೇಕ್ಷಿಸಿದ ಪರಿಹಾರ ಧನ (ಸೂಕ್ತ ಸಮರ್ಥನೆಯೊಂದಿಗೆ) ಈ ಪ್ರಕಟಣೆಯಲ್ಲಿ ನಮೂದಿಸಿರುವ ವೇಳೆ ಹಾಗೂ ದಿನಾಂಕದಂದು ನೀವಾಗಲೀ ಅಥವಾ ನಿಮ್ಮ ಅಧಿಕೃತ ಪ್ರತಿನಿಧಿಯ ಮೂಲಕವಾಗಲಿ ಅಥವಾ ತಮ್ಮ ಪರ ನ್ಯಾಯವಾದಿಗಳಾಗಲಿ, **ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ, ರಾಷ್ಟ್ರೀಯ ಹೆದ್ದಾರಿ–73 ಮತ್ತು 275, ಮೊದಲನೇ ಮಹಡಿ, ವಿಠಲ್ ಆರ್ಕೇಡ್ ಕಟ್ಟಡ, ಕೊಟ್ಟಾರ ಚೌಕಿ ಬಳಿ, ದೇರೆಬೈಲ್ ಗ್ರಾಮ, ಅಶೋಕನಗರ ಅಂಚೆ, ಮಂಗಳೂರು–575006,** ಇವರ ಮುಂದೆ ಖುದ್ದಾಗಿ ಕೋರಿಕೆ ಅರ್ಜಿಯೊಂದಿಗೆ ಹಾಜರುಪಡಿಸತಕ್ಕದ್ದು.

ಸದ್ರಿಯವರ ಸಕ್ಷಮ ಅರ್ಜಿಯೊಂದಿಗೆ ವೈಯಕ್ತಿಕ ಮನವಿಯನ್ನು ಸಲ್ಲಿಸಬೇಕು

ಕ್ರ ಸಂ.	ಜಿಲ್ಲೆಯ ಹೆಸರು	ತಾಲ್ಲೂಕಿನ ಹೆಸರು	ಗ್ರಾಮದ ಹೆಸರು	ದಿನಾಂಕ ಮತ್ತು ಸಮಯ
1.	ದಕ್ಷಿಣ ಕನ್ನಡ	ಬೆಳ್ತಂಗಡಿ	ಉಜಿರೆ	25–03–2025 (ಪೂರ್ವಾಹ್ನ 11–00 ಗಂಟೆ)
2			ಧರ್ಮಸ್ಥಳ	
3			ನಿಡ್ಲೆ	
4			ಕೊಕ್ಕಡ	
5	ದಕ್ಷಿಣ ಕನ್ನಡ	ಕಡಬ	ಕೌಕ್ರಾಡಿ	

ಸಹಿ/–
ಹರ್ಷವರ್ಧನ ಎಸ್.ಜೆ. (ಕೆ.ಎ.ಎಸ್)
ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ,
ರಾಷ್ಟ್ರೀಯ ಹೆದ್ದಾರಿ – 73 ಮತ್ತು 275
ಕೊಟ್ಟಾರ ಚೌಕಿ, ಮಂಗಳೂರು.

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ
ಅಧಿಸೂಚನೆ
ನವದೆಹಲಿ, ದಿನಾಂಕ : 28ನೇ ಫೆಬ್ರವರಿ 2025

ಎಸ್.ಓ 1036 (ಇ).– ಭಾರತ ಸರಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದ ಅಧಿಸೂಚನೆ ನಂಬರ್. **ಎಸ್.ಓ.4608(ಇ) ರಂತೆ ದಿನಾಂಕ:22–10–2024 ರಂದು** ಭಾರತ ಸರಕಾರದ ವಿಶೇಷ ರಾಜ್ಯ ಪತ್ರ ಅಸಾಧಾರಣ ಭಾಗ II, ಕಲಂ3 ರ ಉಪಕಲಂ (ii) ರಂತೆ ಮತ್ತು ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956 ರ 48) ಕಲಂ 3ಎ ಉಪಕಲಂ (1)ರಂತೆ (ಇನ್ನು ಮುಂದೆ ಮೇಲೆ ತಿಳಿಸಿರುವ ಕಾಯ್ದೆ) ಕೇಂದ್ರ ಸರಕಾರವು **ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯ (ಉಜಿರೆ–ಧರ್ಮಸ್ಥಳ–ಪೆರಿಯಶಾಂತಿ ವಿಭಾಗ) ಕಿ.ಮೀ. 0.00 ರಿಂದ ಕಿ.ಮೀ. 28.49 ರಲ್ಲಿ ರಾಷ್ಟ್ರೀಯ ಹೆದ್ದಾರಿ ನಂಬರ್ 73ರ (ಹೊಸ) ಸ್ಪರ್ ರಸ್ತೆ ನಿರ್ಮಾಣ** (ಅಗಲೀಕರಣ/ಸುಸಜ್ಜಿತ ಭುಜದೊಂದಿಗೆ ನಾಲ್ಕು ಲೇನಿಂಗ್ ಇತ್ಯಾದಿ) ಮಾಡುವ ಸಲುವಾಗಿ ಈ ಅಧಿಸೂಚನೆಯಲ್ಲಿ ಸೂಚಿಸಿರುವ ಅನುಸೂಚಿಯಲ್ಲಿ ನಮೂದಿಸಿರುವ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿದೆ ಎಂದು ಘೋಷಿಸಿದೆ.

ಅದರಂತೆ ಮೇಲ್ಕಂಡ ಅಧಿಸೂಚನೆಯ ಸಾರಾಂಶಗಳನ್ನು ಕಾಯ್ದೆ ಕಲಂ 3ಎ ರ ಉಪ ಕಲಂ (3)ರಂತೆ **ದಿನಾಂಕ 31–10–2024 ರ "ಪ್ರಜಾವಾಣಿ" ಮತ್ತು "ದ ಟೈಮ್ಸ್ ಆಫ್ ಇಂಡಿಯಾ"** ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗಿದೆ.

ಅದರಂತೆ ಆಕ್ಷೇಪಣೆಯನ್ನು ಸ್ವೀಕರಿಸಿ ಮತ್ತು ವಿಚಾರಣೆ ನಡೆಸಲಾಗಿದ್ದು, ವಿಶೇಷ ಭೂಸ್ವಾಧೀನಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಯವರು ಮಾನ್ಯ ಮಾಡಿರುವುದಿಲ್ಲ. ಅದರಂತೆ ಕಾಯಿದೆ ಕಲಂ 3ಡಿ ಉಪಕಲಂ (1)ರಂತೆ ಸಕ್ಷಮ ಪ್ರಾಧಿಕಾರವು ತನ್ನ ವರದಿಯನ್ನು ಕೇಂದ್ರ ಸರಕಾರಕ್ಕೆ ಸಲ್ಲಿಸಿದೆ.

ಆದುದರಿಂದ ಈಗ ಸಕ್ಷಮ ಪ್ರಾಧಿಕಾರದಿಂದ ಸ್ವೀಕರಿಸಲಾದ ವರದಿಯಂತೆ ಕೇಂದ್ರ ಸರಕಾರವು ಕಾಯ್ದೆಯಲ್ಲಿನ ಕಲಂ 3(ಡಿ), ಉಪಕಲಂ(1)ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಅನುಸೂಚಿಯಲ್ಲಿ ನಮೂದಿಸಿರುವ ಜಮೀನುಗಳನ್ನು ಮೇಲ್ಕಾಣಿಸಿದ ಉದ್ದೇಶಕ್ಕಾಗಿ ಕಡ್ಡಾಯವಾಗಿ ಭೂಸ್ವಾಧೀನಪಡಿಸಿದೆ ಎಂದು ಈ ಮೂಲಕ ಘೋಷಿಸಿದೆ. ಮತ್ತು ಕಾಯ್ದೆಯ ಕಲಂ 3(ಡಿ) ಉಪಕಲಂ (2)ರ ಅನುಸರಣೆಯಂತೆ ಕೇಂದ್ರ ಸರಕಾರವು ಅಧಿಕೃತ ರಾಜ್ಯ ಪತ್ರದಲ್ಲಿ ಪ್ರಕಟಣೆಯಾದಂತೆ, ಅಧಿಸೂಚನೆಯ ಅನುಸೂಚಿಯಲ್ಲಿ ನಮೂದಿಸಿರುವ ಎಲ್ಲಾ ಜಮೀನುಗಳು ಎಲ್ಲಾ ಋಣಭಾರದಿಂದ ವಿರಹಿತಪಡಿಸಿ ಕೇಂದ್ರ ಸರಕಾರದ ಸಂಪೂರ್ಣ ಸ್ವಾಯತ್ತೆಗೆ ಒಳಗೊಂಡಿದೆ ಎಂದು ಈ ಮೂಲಕ ಘೋಷಿಸಲಾಗಿದೆ.

ಷೆಡ್ಯೂಲ್

ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯ (ಉಜಿರೆ–ಧರ್ಮಸ್ಥಳ–ಪೆರಿಯಶಾಂತಿ ವಿಭಾಗ) ಕಿ.ಮೀ. 0.00 ರಿಂದ ಕಿ.ಮೀ. 28.49 ರಲ್ಲಿ ರಾಷ್ಟ್ರೀಯ ಹೆದ್ದಾರಿ ನಂಬರ್ 73ರ (ಹೊಸ) ಸ್ಪರ್ ರಸ್ತೆ ನಿರ್ಮಾಣ (ಅಗಲೀಕರಣ/ಸುಸಜ್ಜಿತ ಭುಜದೊಂದಿಗೆ ನಾಲ್ಕು ಲೇನಿಂಗ್ ಇತ್ಯಾದಿ) ಮಾಡುವ ಸಲುವಾಗಿ ಭೂಸ್ವಾಧೀನಪಡಿಸಿಕೊಳ್ಳಲಿರುವ ಕಟ್ಟಡ ಸಹಿತ ಮತ್ತು ಕಟ್ಟಡ ರಹಿತ ಜಮೀನುಗಳ ಸಂಕ್ಷಿಪ್ತ ವಿವರಗಳು.

ರಾಜ್ಯ: ಕರ್ನಾಟಕ **ಜಿಲ್ಲೆಯ ಹೆಸರು : ದಕ್ಷಿಣ ಕನ್ನಡ**

ಕ್ರ. ಸಂ.	ಸರ್ವೆ/ ಆಸ್ತಿ ಸಂಖ್ಯೆ	ಜಮೀನಿನ ವಿವರಣೆ	ಜಮೀನಿನ ತರಹೆ	ವಿಸ್ತೀರ್ಣ (ಹೆಕ್ಟೇರುಗಳಲ್ಲಿ)	ಭೂಮಾಲೀಕರು/ಹಿತಾಸಕ್ತಿಯುಳ್ಳವರ ಹೆಸರು
1	2	3	4	5	6
			ತಾಲೂಕು: ಬೆಳ್ತಂಗಡಿ		
			ಗ್ರಾಮ: ಉಜಿರೆ		
1	250/3ಬಿ1ಎ1	ಸಾಮಾನ್ಯ	ಖುಷ್ಕಿ	0.032376	ಸರ್ಕಾರಿ, ಹಿತಾಸಕ್ತಿದಾರರು ವಿಜಯ ಶೆಟ್ಟಿ, ಸಾವಿತ್ರಿ, ಕೃಷ್ಣ ಶೆಟ್ಟಿ, ಸುಶೀಲ, ಸೂರಜ್, ಹರಿಪ್ರಸಾದ್, ಸುನಂದ ಶೆಟ್ಟಿ
2	251/1	ಸರ್ಕಾರಿ	ಖುಷ್ಕಿ	0.020235	ಸರ್ಕಾರಿ, ಹಿತಾಸಕ್ತಿದಾರರು ಪೂರಣ್ ವರ್ಮ ಬಿನ್ ದಿ ಯಶೋ ವರ್ಮ
3	251/2	ಖಾಸಗಿ	ಖುಷ್ಕಿ	0.0010118	ದಿಲಿಪ್ ಎನ್.ಬಲ್ಲಾಳ್ ಬಿನ್ ದಿ ನಾಗರಾಜ್ ಬಲ್ಲಾಳ್, ರಾಜರತ್ನ ಬಲ್ಲಾಳ್ ಬಿನ್ ದಿ ನಾಗರಾಜ್ ಬಲ್ಲಾಳ್, ಮಹಾವೀರ .ಬಲ್ಲಾಳ್ ಬಿನ್ ದಿ ನಾಗರಾಜ್ ಬಲ್ಲಾಳ್, ಸಂಪದ ಬಲ್ಲಾಳ್ ಬಿನ್ ದಿ ನಾಗರಾಜ್ ಬಲ್ಲಾಳ್
4	251/3	ಖಾಸಗಿ	ಖುಷ್ಕಿ	0.0010118	ಸಂಪದ ಬಿನ್ ಡಿ.ಪಿ. ನಾಗರಾಜ್ ಬಲ್ಲಾಳ್
5	252/8	ಖಾಸಗಿ	ತರಿ	0.0131527	ಕುಶಲ ಕೋಂ. ಜಯಾನಂದ ಗೌಡ
6	453/2ಎ1	ಖಾಸಗಿ	ಖುಷ್ಕಿ	0.0060705	ಸಿದ್ದವನ ಟ್ರಸ್ಟ್ ಆಡಳಿತಾಧಿಕಾರಿ ಡಿ ವೀರೇಂದ್ರ ಹಗಡೆ ಬಿನ್ ದಿ ರತ್ನವರ್ಮ ಹೆಗಡೆ
			ಗ್ರಾಮ: ಧರ್ಮಸ್ಥಳ		
7	156/1ಬಿ1	ಖಾಸಗಿ	ಖುಷ್ಕಿ/ಭೂ.ಪ.	0.0020235	ಗಣೇಶ್ ಡಿ ಬಿನ್.ದಿ ಸೋಮಪ್ಪ ಗೌಡ
8	156/4	ಖಾಸಗಿ	ಖುಷ್ಕಿ/ಭೂ.ಪ.	0.0010118	ಕೃಷ್ಣ ಬಿನ್.ದಿ ಸೋಮಪ್ಪ ಗೌಡ
9	156/5	ಖಾಸಗಿ	ಖುಷ್ಕಿ	0.0010118	ಸುರೇಶ್ ಬಿನ್.ದಿ ಸೋಮಪ್ಪ ಗೌಡ
10	156/6	ಖಾಸಗಿ	ಖುಷ್ಕಿ	0.0010118	ಶಿವ ಕುಮಾರ್ ಬಿನ್.ದಿ ಸೋಮಪ್ಪ ಗೌಡ
11	265/1ಎ1ಎ1	ಸಾಮಾನ್ಯ (ಸರ್ಕಾರಿ /ಖಾಸಗಿ)	ಖುಷ್ಕಿ	0.720366	ಸರ್ಕಾರಿ, ಹಿತಾಸಕ್ತಿದಾರರು ರಾಮಣ್ಣ ಗುಡಿಗಾರ್ ಚೆಲುವಯ್ಯ ಪೂಜಾರಿ ಬಿನ್ ಶಾಂತಪ್ಪ ಪೂಜಾರಿ ಉಮೇಶ್ ಪ್ರಭು ಶ್ರೀನಿವಾಸ ಬಾಳಿಗ ಪದ್ಮ ಪ್ರಸಾದ್ ಬಿನ್ ಫಣಿರಾಜ್ ಜೈನ್, ನಾರಾಯಣ್ ಮಂಜು ನಿವಾಸ, ರಮೇಶ್ ಬಿನ್ ಅನಂತಯ್ಯ, ರತ್ನ ಕೋಂ. ವಿಶ್ವನಾಥ ರಾವ್
12	266/2	ಖಾಸಗಿ	ಖುಷ್ಕಿ/ಭೂ.ಪ.	0.0030352	ರಾಜೇಂದ್ರ ಆಜ್ರಿ ಬಿನ್. ನಾಗರಾಜ ಆಜ್ರಿ
13	266/7	ಖಾಸಗಿ	ಖುಷ್ಕಿ/ಭೂ.ಪ.	0.0020235	ಚಾಮರಾಜ ಇಂದ್ರ ಬಿನ್ ಬ್ರಹ್ಮಯ್ಯ ಇಂದ್ರ
14	288/1	ಖಾಸಗಿ	ಖುಷ್ಕಿ	0.0101175	287/1 ಗೋಪಾಲ ಕಲ್ಯಾಣಿ ವಿಮಲಾವತಿ, ವೀಣಾ, ವಿನಾಯಕ, ಸುಭದಾ, ಉದಯ,ಆರತಿ, ಜಗದೀಶ
15	288/1	ಖಾಸಗಿ	ಖುಷ್ಕಿ	0.0273173	ಡಿ ವೀರೇಂದ್ರ ಹಗಡೆ ಹಿತಾಸಕ್ತಿದಾರರು ಬದ್ರಿಯಾ ಜುಮ್ಮಾ ಮಸೀದಿ ಕನ್ಯಾಡಿ 11
16	297/3ಎ	ಸರ್ಕಾರಿ	ಖುಷ್ಕಿ	0.441123	ಸರ್ಕಾರಿ, ಹಿತಾಸಕ್ತಿದಾರರು ಧರ್ಮರಾಜ್ ಬಿನ್. ನೇಮಿರಾಜ್, ಸುಜಯ ಕೆ ಕೋಂ.ಜಗನ್ನಾಥ ರಾವ್, ಮೋಹನ ರಾವ್ ಬಿನ್ ಜಯಂತ ರಾವ್ ಗ್ರಾಮ ಪಂಚಾಯತ್ ಧರ್ಮಸ್ಥಳ
17	297/4ಎ1	ಸಾಮಾನ್ಯ (ಸರ್ಕಾರಿ/ ಖಾಸಗಿ)	ಖುಷ್ಕಿ	0.0101175	ಸರ್ಕಾರಿ, ಹಿತಾಸಕ್ತಿದಾರರು ಡಿ ವೀರೇಂದ್ರ ಹೆಗಡೆ
18	56/4ಎ3	ಖಾಸಗಿ	ತರಿ	0.0394583	ಅರುಣಾ ಅಂದ್ರಾದೆ ಕೋಂ ಮ್ಯಾನುವಲ್ ಅಂದ್ರಾದೆ
19	56/6ಬಿ	ಖಾಸಗಿ	ತರಿ	0.0637402	56/6ಬಿ1 8.25 ಸೆಂಟ್ಸ್ ಸದಾಶಿವ ಗೌಡ ಬಿನ್ ಕೊರಗಪ್ಪಗೌಡ 56/6ಬಿ2 7.50ಸೆಂಟ್ಸ್ ಬಾಲಕೃಷ್ಣ ಗೌಡ ಬಿನ್ ಕೊರಗಪ್ಪಗೌಡ
20	56/6ಸಿ	ಖಾಸಗಿ	ತರಿ	0.0617168	ವಿನುತಾ ಕೋಂ.ಚಂದ್ರಕಾಂತ ಗೌಡ
21	61/2	ಸರ್ಕಾರಿ	ಖುಷ್ಕಿ	0.129504	ಸರ್ಕಾರಿ, ಹಿತಾಸಕ್ತಿದಾರರು ಸುಂದರ ಗೌಡ ಬಿನ್ ಅಮನಿ ಗೌಡ
22	74/5ಎ1	ಖಾಸಗಿ	ಬಾಗಾಯ್ತು	0.0010118	ಭವಾನಿ ಕೋಂ ದಿ ಭಾಸ್ಕರ ರಾವ್, ಅನಿತಾ ಬಿನ್ ದಿ ಭಾಸ್ಕರ ರಾವ್
23	74/5ಎ2	ಖಾಸಗಿ	ಖುಷ್ಕಿ/ಭೂ.ಪ	0.0020235	ಅಯ್ಯಪ್ಪ ಪ್ರಭು ಬಿನ್ ಭವಾನಿ ಶಂಕರ್
24	74/5ಬಿ	ಖಾಸಗಿ	ಖುಷ್ಕಿ/ಭೂ.ಪ	0.0020235	ಟಿ.ಎನ್.ಸುಬ್ರಹ್ಮಣ್ಯ ಬಿನ್ ನಾರಾಯಣ ಆಚಾರ್
25	74/5ಸಿ2	ಖಾಸಗಿ	ಬಾಗಾಯ್ತು	0.004047	ಹೆಚ್ ರತ್ನಾಕರ್ ಪ್ರಭು ಬಿನ್ ದಿ ಕೇಶವ ಪ್ರಭು
26	74/5ಸಿ3	ಖಾಸಗಿ	ಖುಷ್ಕಿ/ಭೂ.ಪ	0.0030352	ಚಾಮರಾಜ ಇಂದ್ರ ಬಿನ್ ಬ್ರಹ್ಮಯ್ಯ ಇಂದ್ರ
27	89/1	ಖಾಸಗಿ	ಖುಷ್ಕಿ	0.0091058	ಶಾರದಾ ಪ್ರಭು ಹಿತಾಸಕ್ತಿದಾರರು ಪೂರಣ್ ವರ್ಮ ಬಿನ್ ದಿ. ಯಶೋ ವರ್ಮ
28	89/10	ಖಾಸಗಿ	ಖುಷ್ಕಿ	0.016188	ಶಾರದಾ ಪ್ರಭು, ಹಿತಾಸಕ್ತಿದಾರರು ಎಸ್.ಡಿ.ಎಂ ಪಬ್ಲಿಕೇಶನ್ ಟ್ರಸ್ಟ್
			ಗ್ರಾಮ: ನಿಡ್ಲೆ		
29	113/10	ಖಾಸಗಿ	ಖುಷ್ಕಿ	0.044517	ಇ.ವಿ. ರಾಮ ಭಟ್ ಬಿನ್. ವೆಂಕಟರಮಣ ಭಟ್
30	113/14	ಖಾಸಗಿ	ಖುಷ್ಕಿ	0.0141645	ಎಸ್.ವೆಂಕಟರಮಣ ಬಿನ್. ನರಸಿಂಹ ಕಕ್ಕ್ಯಣ್ಣಯ್ಯ
31	113/17	ಖಾಸಗಿ	ಖುಷ್ಕಿ	0.0556462	ಕಿಶೋರ್ ಕುಮಾರ್ ಬಿನ್. ಜಯರಾಮ್ ರಾವ್
32	113/9	ಖಾಸಗಿ	ಬಾಗಾಯ್ತು	0.0171997	ಇ.ವಿ. ರಾಮ ಭಟ್ ಬಿನ್. ವೆಂಕಟರಮಣ ಭಟ್
33	114/2ಸಿ1	ಸಾಮಾನ್ಯ (ಸರ್ಕಾರಿ/ ಖಾಸಗಿ)	ಖುಷ್ಕಿ	0.0212468	ಟಿ ರುಕ್ಮಿಣಿ ವೈ ರಾವ್ ಕೋಂ ಟಿ ಯೋಗೀಶ್ ರಾವ್ ಗುರುಪ್ರಕಾಶ್ ಯಂ, ಬಿನ್ ದಿ ಟಿ ಯೋಗೀಶ್ ರಾವ್ ಶಶಿಪ್ರಕಾಶ್ ಯಂ ಬಿನ್ ದಿ ಟಿ ಯೋಗೀಶ್ ರಾವ್ ವಾಣಿ ಕೋಂ ದಿ:ಸತ್ಯ ಪ್ರಕಾಶ್ ರಾವ್ ಮೈನರ್ ಸ್ನೇಹ ಮಲ್ಲಿಗೆ ರಾವ್ ಬಿನ್ ಸತ್ಯಪ್ರಕಾಶ್ ರಾವ್ ಮೈನರ್ ಸಹನಾ ರಾವ್ ಬಿನ್ ಗಾರ್ಡಿಯನ್ ವಾಣಿ
34	114/2ಸಿ2	ಖಾಸಗಿ	ಖುಷ್ಕಿ	0.012141	ಟಿ ರುಕ್ಮಿಣಿ ವೈ ರಾವ್ ಕೋಂ ಟಿ ಯೋಗೀಶ್ ರಾವ್ ಗುರುಪ್ರಕಾಶ್ ಯಂ ಬಿನ್ ದಿ ಟಿ ಯೋಗೀಶ್ ರಾವ್ ಶಶಿಪ್ರಕಾಶ್ ಯಂ ಬಿನ್ ದಿ ಟಿ ಯೋಗೀಶ್ ರಾವ್ ವಾಣಿ ಕೋಂ ದಿ:ಸತ್ಯ ಪ್ರಕಾಶ್ ರಾವ್ ಮೈನರ್ ಸ್ನೇಹ ಮಲ್ಲಿಗೆ ರಾವ್ ಬಿನ್ ಸತ್ಯಪ್ರಕಾಶ್ ರಾವ್ ಮೈನರ್ ಸಹನಾ ರಾವ್ ಬಿನ್ ಗಾರ್ಡಿಯನ್ ವಾಣಿ
35	114/3ಎ1	ಸಾಮಾನ್ಯ (ಸರ್ಕಾರಿ /ಖಾಸಗಿ)	ಖುಷ್ಕಿ	0.032376	ಸರ್ಕಾರಿ ಮತ್ತು ಹಿತಾಸಕ್ತಿದಾರರು ತಿಮ್ಮಪ್ಪ ಗೌಡ ಜೀತೇಂದ್ರ ಬಿನ್ ರವಿರಾಜ್ (ವರ್ಧಮಾನ್ ಕೋಕನೆಟ್ ಆಯಿಲ್) ಜೆ.ಸಿ. ಆಂಟನಿ ಬಿನ್ ಟಿ ಜೆ ಚಾಕೋ ಕುಂಞ ಬಿನ್ ಕುಂಡ ಮುಗೇರ ವಿಶ್ವನಾಥ್ ಗ್ರಾಮ ಪಂಚಾಯತ್ ನಿಡ್ಲೆ ಸಿದ್ದಪ್ಪ ಗೌಡ ಬಿನ್ ಹುಕ್ರಪ್ಪ ಗೌಡ ಭದ್ರಯ್ಯ ಗೌಡ ಬಿನ್ ಪೂವಣಿ ಗೌಡ
36	122/4	ಖಾಸಗಿ	ಖುಷ್ಕಿ	0.0263055	ಸಂಪತ್ ರತ್ನ ರಾವ್ ಬಿನ್ ಸುಂದರ ರಾವ್
37	122/5ಎ2	ಖಾಸಗಿ	ತರಿ	0.0070823	ಟಿ ರುಕ್ಮಿಣಿ ವೈ ರಾವ್ ಕೋಂ ಟಿ ಯೋಗೀಶ್ ರಾವ್
38	122/5ಸಿ1	ಖಾಸಗಿ	ಖುಷ್ಕಿ/ಭೂ.ಪ.	0.0020235	ಸಂಪತ್ ರತ್ನ ರಾವ್ ಬಿನ್ ಸುಂದರ ರಾವ್
39	122/5ಸಿ2	ಖಾಸಗಿ	ತರಿ	0.0182115	ಟಿ ರುಕ್ಮಿಣಿ ವೈ ರಾವ್ ಕೋಂ ಟಿ ಯೋಗೀಶ್ ರಾವ್ ಗುರುಪ್ರಕಾಶ್ ಯಂ ಬಿನ್ ದಿ ಟಿ ಯೋಗೀಶ್ ರಾವ್ ಶಶಿಪ್ರಕಾಶ್ ಯಂ ಬಿನ್ ದಿ ಟಿ ಯೋಗೀಶ್ ರಾವ್ ವಾಣಿ ಕೋಂ ದಿ:ಸತ್ಯ ಪ್ರಕಾಶ್ ರಾವ್ ಮೈನರ್ ಸ್ನೇಹ ಮಲ್ಲಿಗೆ ರಾವ್ ಬಿನ್ ಸತ್ಯಪ್ರಕಾಶ್ ರಾವ್ ಮೈನರ್ ಸಹನಾ ರಾವ್ ಬಿನ್ ಗಾರ್ಡಿಯನ್ ವಾಣಿ
40	122/9	ಖಾಸಗಿ	ಖುಷ್ಕಿ/ಭೂ.ಪ.	0.0101175	ಯಸ್ ನವರತ್ನರಾವ್ ಬಿನ್ ಸುಂದರ ರಾವ್
41	123/2ಬಿ	ಖಾಸಗಿ	ಭಾಗಾಯ್ತು	0.004047	ಸತ್ಯವತಿ ಟಿ ಕೋಂ ದಿ ಸತೀಶ್ ರಾವ್, ಪ್ರಸನ್ನ ಟಿ ಬಿನ್ ದಿ ಸತೀಶ್ ರಾವ್, ಪ್ರತಿಮಾ ಬಿನ್ ದಿ ಸತೀಶ್ ರಾವ್, ಪ್ರಭಾ ಬಿನ್ ದಿ ಸತೀಶ್ ರಾವ್
42	124/2	ಖಾಸಗಿ	ಖುಷ್ಕಿ	0.012141	ಸತ್ಯವತಿ ಟಿ ಕೋಂ ದಿ ಸತೀಶ್ ರಾವ್, ಪ್ರಸನ್ನ ಟಿ ಬಿನ್ ದಿ ಸತೀಶ್ ರಾವ್, ಪ್ರತಿಮಾ ಬಿನ್ ದಿ ಸತೀಶ್ ರಾವ್ ಪ್ರಭಾ ಬಿನ್ ದಿ ಸತೀಶ್ ರಾವ್
43	128/1	ಖಾಸಗಿ	ಭಾಗಾಯ್ತು	0.0313642	ಇ.ವಿ. ರಾಮ ಭಟ್ ಬಿನ್. ವೆಂಕಟರಮಣ ಭಟ್
44	187/10	ಖಾಸಗಿ	ತರಿ	0.068799	ಕೃಷ್ಣರಾಜ ಹೆಬ್ಬಾರ್ ವೀರಪ್ಪ ಪೂಜಾರಿ ಜಂಟಿ
45	187/12	ಖಾಸಗಿ	ತರಿ	0.04047	ಲಿಂಗಪ್ಪ ಪೂಜಾರಿ ಕೃಷ್ಣರಾಜ ಹೆಬ್ಬಾರ್ ಜಂಟಿ
46	187/13	ಖಾಸಗಿ	ತರಿ	0.044517	ಶಶಿಕಲಾ ಕೋಂ ದಿ ಲಿಂಗಪ್ಪ ಪೂಜಾರಿ, ಅಶ್ವತ್ ಎ ಬಿನ್ ದಿ ಲಿಂಗಪ್ಪ ಪೂಜಾರಿ, ಅಕ್ಷತಾ ಎ ಬಿನ್ ದಿ ಲಿಂಗಪ್ಪ ಪೂಜಾರಿ ,ಆಶಿತ್ ಎ ಬಿನ್ ದಿ ಲಿಂಗಪ್ಪ ಪೂಜಾರಿ
47	209/1ಬಿ	ಸಾಮಾನ್ಯ (ಸರ್ಕಾರಿ/ ಖಾಸಗಿ)	ಖುಷ್ಕಿ	0.004047	ಸರ್ಕಾರಿ ಮತ್ತು ಹಿತಾಸಕ್ತಿದಾರರು ವಿಜಯ್ ಬಿನ್ ರಾಜು ಮೈಸೂರು
48	209/1ಸಿ	ಸಾಮಾನ್ಯ (ಸರ್ಕಾರಿ/ ಖಾಸಗಿ)	ಖುಷ್ಕಿ	0.0030352	ಸರ್ಕಾರಿ ಮತ್ತು ಹಿತಾಸಕ್ತಿದಾರರು ಚೆನ್ನಮ್ಮ
49	210/1ಎ	ಖಾಸಗಿ	ಖುಷ್ಕಿ	0.0657638	ಮಾರಿ ಪಕೀರ
50	218/2ಎ1	ಸರ್ಕಾರಿ	ಖುಷ್ಕಿ	0.2327025	ಸರ್ಕಾರಿ ಮತ್ತು ಹಿತಾಸಕ್ತಿದಾರರು ವಿಶ್ವನಾಥ ಗೌಡ ಗ್ರಾಮ ಪಂಚಾಯತ್ ನಿಡ್ಲೆ
51	234/3	ಖಾಸಗಿ	ಖುಷ್ಕಿ	0.12141	ನಾಡ ಯಾನೆ ಹುಲಿದೈವ ಮತ್ತು ಉಳ್ಳಾಲ್ತಿ ಅಮ್ಮ ದೈವ
52	252/1ಬಿ	ಖಾಸಗಿ	ಖುಷ್ಕಿ	0.0748695	ಭವಾನಿ ಕೋಂ ಮಂಗುರು ಗೌಡ
53	277/2ಎ2	ಖಾಸಗಿ	ಖುಷ್ಕಿ	0.0920693	ಕುಂಞ ಮಲೆಕುಡಿಯ ಬಿನ್ ಮಾಯಿಲ ಮಲೆಕುಡಿಯ
54	277/2ಬಿ2	ಖಾಸಗಿ	ಖುಷ್ಕಿ	0.0020235	ವಿನ್ಸೆಂಟ್ ಡಿಸೋಜ ಬಿನ್ ಗ್ಲಾಡಿಸ್ ಡಿಸೋಜ
55	292/2	ಖಾಸಗಿ	ಬಾಗಾಯ್ತು	0.016188	ಯು ಕೆ ಉಷಾ ಕೋಂ ದಿ ಉದಯಕುಮಾರ್, ಉತ್ತೇಜ್ ಬಿನ್ ದಿ ಉದಯಕುಮಾರ್, ಉನ್ನತ್ ಬಿನ್ ದಿ ಉದಯಕುಮಾರ್
56	329/2	ಖಾಸಗಿ	ಖುಷ್ಕಿ	0.072846	ಯು ಕೆ ಉಷಾ ಕೋಂ ದಿ ಉದಯಕುಮಾರ್ ಉತ್ತೇಜ್ ಬಿನ್ ದಿ ಉದಯಕುಮಾರ್ ಉನ್ನತ್ ಬಿನ್ ದಿ ಉದಯಕುಮಾರ್
57	329/3	ಖಾಸಗಿ	ಖುಷ್ಕಿ	0.28329	ರಾಘವೇಂದ್ರ ರಾವ್ ಸಣ್ಣಯ್ಯ ಬಿನ್ ಎಸ್ ಪಿ ರಮೇಶ್‌ರಾವ್
58	330/8	ಖಾಸಗಿ	ಖುಷ್ಕಿ	0.0060705	ಕೃಷ್ಣ ಪ್ರಸಾದ್ ಎಸ್ ರೈ ದೇವಿಕೃಪಾ ರೈ
59	330/9	ಖಾಸಗಿ	ಖುಷ್ಕಿ	0.0060705	ಇಂದಿರಾ ಪಿ ಕೆ ಕೋಂ ಬಿ ಕೆ ಶಿವದಾಸ್ ಸಂಜಯ್ ಎನ್ಎಸ್ ಬಿನ್ ದಿ ಶಿವದಾಸ್ ಸಚಿನ್ ಎನ್ ಎಸ್ ಬಿನ್ ದಿ ಶಿವದಾಸ್ ಅನುಷಾ ಎನ್ ಎಸ್ ಬಿನ್ ದಿ ಶಿವದಾಸ್
			ಗ್ರಾಮ: ಕೊಕ್ಕಡ		
60	17/9	ಸಾಮಾನ್ಯ (ಸರ್ಕಾರಿ/ ಖಾಸಗಿ)	ಖುಷ್ಕಿ	0.004047	ಸರ್ಕಾರಿ ಅಬ್ದುಲ್ ಖಾದರ್ ಬಿನ್ ಅಬ್ಬಾಸ್ ಬ್ಯಾರಿ ಕುಲ್ಸುಮ್ಮ ಕೋಂ ಅಹಮದ್ ಬ್ಯಾರಿ ಮೂಸ ಯಾನೆ ಖಾಸಿಂ ಬಿನ್ ಇಸ್ಮಾಯಿಲ್ ಆಯಿಷಾ ಕೋಂ. ಅಬೂಬಕ್ಕರ್ ಮತ್ತು ಇತರರು
61	188/1	ಸಾಮಾನ್ಯ (ಸರ್ಕಾರಿ/ ಖಾಸಗಿ)	ಖುಷ್ಕಿ	0.0050587	ಸರ್ಕಾರಿ ಅಬೂಟ ಡಿ'ಸೋಜಾ ಬಿನ್. ಪೌಲ್ ಡಿ'ಸೋಜಾ ಮತ್ತು ಇತರರು
62	196/4ಎ	ಖಾಸಗಿ	ಖುಷ್ಕಿ	0.016188	ಸರ್ಕಾರಿ ಐಸಮ್ಮ ಕ್ಲಾರಾ ಮ್ಯಾಕ್ಸಿ ಲೋಬೋ
63	202/1ಎ1	ಸರ್ಕಾರಿ	ಖುಷ್ಕಿ	0.016188	ಸರ್ಕಾರಿ ಮತ್ತು ಹಿತಾಸಕ್ತಿದಾರರು ಶಾಂತಾ (ಸತ್ಯ ನಾರಾಯಣ ಭಟ್) ಹರೀಶ್ಚಂದ್ರ ಆಚಾರ್

contd...

ಸಮೀರ್‌ಗೆ ನೋಟಿಸ್: ಕೋರ್ಟ್ ತಡೆ

ಕಾನೂನು ಪ್ರಕ್ರಿಯೆಯಲ್ಲಿ ವ್ಯತ್ಯಯ: ಬಳ್ಳಾರಿ ಪೊಲೀಸರ ವಿರುದ್ಧ ನ್ಯಾಯಪೀಠದಿಂದ ಅತೃಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಧರ್ಮಸ್ಥಳದ ಸೌಜನ್ಯಾ ಮೇಲಿನ ಅತ್ಯಾಚಾರ ಮತ್ತು ಕೊಲೆ ಆರೋಪದ ಪ್ರಕರಣಕ್ಕೆ ಸಂಬಂಧಿಸಿದಂತೆ ಸುದ್ದಿ ಬಿತ್ತರಿಸಿದ ಯೂ-ಟ್ಯೂಬರ್ ಎಂ.ಡಿ.ಸಮೀರ್ ಅವರಿಗೆ ಬಳ್ಳಾರಿ ಪೊಲೀಸರು ಠಾಣೆಗೆ ಹಾಜರಾಗಲು ನೋಟಿಸ್ ನೀಡುವ ಮುನ್ನ ಕಾನೂನು ಪ್ರಕ್ರಿಯೆಯಲ್ಲಿ ಎಡವಿದ್ದಾರೆ' ಎಂದು ಅತೃಪ್ತಿ ವ್ಯಕ್ತಪಡಿಸಿರುವ ಹೈಕೋರ್ಟ್, ನೋಟಿಸ್‌ಗೆ ಮಧ್ಯಂತರ ತಡೆ ನೀಡಿದೆ.

ಪೊಲೀಸ್ ನೋಟಿಸ್ ಪ್ರಶ್ನಿಸಿ ಎಂ.ಡಿ. ಸಮೀರ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ತುರ್ತು ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸಮೀರ್ ಪರ ಸುಪ್ರೀಂ ಕೋರ್ಟ್ ವಕೀಲ ಎ.ವೇಲನ್ ವಿಡಿಯೊ ಕಾನ್ಫರೆನ್ಸ್ ಮುಖಾಂತರ ಹಾಜರಾಗಿ, 'ಸಮೀರ್ ಯೂ-ಟ್ಯೂಬರ್ ಆಗಿದ್ದು, ಸೌಜನ್ಯಾ ಕೊಲೆಗೆ ಸಂಬಂಧಿಸಿದಂತೆ ವಿಡಿಯೊ ಅಪ್‌ಲೋಡ್ ಮಾಡಿದ್ದರು. ಇದನ್ನು ಲಕ್ಷಾಂತರ ಮಂದಿ ವೀಕ್ಷಿಸಿದ್ದಾರೆ. ಇದನ್ನು ಆಧರಿಸಿ ಪೊಲೀಸರು ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡಿದ್ದಾರೆ' ಎಂದು ನ್ಯಾಯಪೀಠಕ್ಕೆ ವಿವರಿಸಿದರು.

'ದೂರಿನ ಅನ್ವಯ ಬಳ್ಳಾರಿಯ ಪೊಲೀಸರು ಇದೇ 5ರ ರಾತ್ರಿ ನೋಟಿಸ್ ಜಾರಿಗೊಳಿಸಿ, ಗುರುವಾರ (ಮಾ.6) ಬೆಳಿಗ್ಗೆ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ್ದಾರೆ. ರಾತ್ರೋರಾತ್ರಿ ಬೆಂಗಳೂರಿನ ವಕೀಲರ ಕಚೇರಿಗೆ ನುಗ್ಗಿ ಸಮೀರ್ ಅವರನ್ನು ಬಂಧಿಸಲು ಪ್ರಯತ್ನಿಸಿದ್ದಾರೆ. ವಕೀಲರ ಮಧ್ಯಪ್ರವೇಶದಿಂದ ಅದು ತಪ್ಪಿದೆ. ಕೌಲ್ ಬಜಾರ್ ಠಾಣೆಯ ಪೊಲೀಸರು ನೀಡಿರುವ ಈ ನೋಟಿಸ್ ಸಕಾರಣ ಹೊಂದಿಲ್ಲ. ಏಕಪಕ್ಷೀಯ ಮತ್ತು ಸಹಜ ನ್ಯಾಯತತ್ವಕ್ಕೆ ವಿರುದ್ಧವಾಗಿದ್ದು, ಇದಕ್ಕೆ ತಡೆ ನೀಡಬೇಕು' ಎಂದು ಮನವಿ ಮಾಡಿದರು.

ಇದಕ್ಕೆ ಪ್ರಾಸಿಕ್ಯೂಷನ್ ಪರ ವಕೀಲರು, 'ಪೊಲೀಸರು ವಿಚಾರಣೆಗೆ ಹಾಜರಾಗುವಂತೆ ಸಮೀರ್‌ಗೆ ನೋಟಿಸ್ ಜಾರಿ ಮಾಡಿದ್ದಾರೆ. ಎಫ್ಐಆರ್ ಪ್ರತಿ ಪಡೆದುಕೊಂಡು, ಅದರಲ್ಲಿ ಏನು ಮಾಹಿತಿ ಇದೆ ಎಂಬುದನ್ನು ಪರಿಶೀಲಿಸಲಾಗುವುದು. ವಿಚಾರಣೆಗೆ ಹಾಜರಾಗಲು ಸಕಾರಣವನ್ನು ಒಳಗೊಂಡ ಸಮಯವನ್ನು ನೀಡಬಹುದು' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಇದು ಧರ್ಮಸ್ಥಳದ ಪ್ರಕರಣವೇ' ಎಂದು ಪ್ರಶ್ನಿಸಿತಲ್ಲದೇ, 'ನೋಟಿಸ್‌ನೊಂದಿಗೆ ಲಗತ್ತಿಸಿರುವ ಎಫ್ಐಆರ್ ಎಲ್ಲಿದೆ? ಇದೇ ನ್ಯಾಯಪೀಠದ ಆದೇಶವನ್ನು ಆಧರಿಸಿ ರಾಜ್ಯ ಸರ್ಕಾರ ಹೊರಡಿಸಿರುವ ಸುತ್ತೋಲೆಯನ್ನು ನೀವು ನೋಡಿಲ್ಲವೇ? ಸುತ್ತೋಲೆಗೆ ವಿರುದ್ಧವಾಗಿ ತನಿಖಾಧಿಕಾರಿ ಹೇಗೆ ನಡೆದುಕೊಳ್ಳುತ್ತಾರೆ? ಬಿಎನ್ಎಸ್ ಕಾಯ್ದೆಯ ಅಡಿಯಲ್ಲಿ ಯಾರನ್ನಾದರೂ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದರೆ ಎಫ್ಐಆರ್ ಅನ್ನು ಅದರ ಜೊತೆಗೆ ಲಗತ್ತಿಸಬೇಕಲ್ಲವೇ' ಎಂದು ಕಿಡಿ ಕಾರಿತು.

ಪ್ರತಿವಾದಿ ಬಳ್ಳಾರಿ ಕೌಲ್ ಬಜಾರ್ ಠಾಣೆ ಪೊಲೀಸರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿತು. ಸಮೀರ್ ಪರ ಸುಪ್ರೀಂ ಕೋರ್ಟ್ ವಕೀಲ ಪವನ್ ಶ್ಯಾಮ್ ವಕಾಲತ್ತು ವಹಿಸಿದ್ದಾರೆ.

ಪೊಲೀಸರಿಂದ ಪ್ರಕರಣ ದಾಖಲು

ಸಮೀರ್ ಎಂ.ಡಿ

ಬಳ್ಳಾರಿ: ಧರ್ಮಸ್ಥಳದಲ್ಲಿ 2012ರಲ್ಲಿ ನಡೆದ ವಿದ್ಯಾರ್ಥಿನಿ ಸೌಜನ್ಯಾ ಕೊಲೆ ಪ್ರಕರಣವನ್ನು ವಿಶ್ಲೇಷಿಸಿ ಸಮೀರ್ ಎಂಬುವರು ಸಾಮಾಜಿಕ ಮಾಧ್ಯಮ ಯೂಟ್ಯೂಬ್‌ನಲ್ಲಿ ವಿಡಿಯೊ ಹಂಚಿಕೊಂಡಿರುವುದಕ್ಕೆ ಸಂಬಂಧಿಸಿದಂತೆ ಬಳ್ಳಾರಿ ಕೌಲ್ ಬಜಾರ್ ಠಾಣೆಯಲ್ಲಿ ಸ್ವಯಂ ಪ್ರೇರಿತ ಪ್ರಕರಣ ದಾಖಲಾಗಿದೆ.

'ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್)-2023ರ ಸೆಕ್ಷನ್ 299' (ಧಾರ್ಮಿಕ ನಂಬಿಕೆಗಳು ಅಥವಾ ಆಚರಣೆಗಳನ್ನು ಉದ್ದೇಶಪೂರ್ವಕವಾಗಿ ಅಪಮಾನಿಸುವುದು) ಅಡಿಯಲ್ಲಿ ಬುಧವಾರ ಎಫ್‌ಐಆರ್ ದಾಖಲಿಸಲಾಗಿದೆ.

'ದೂತ: ಸಮೀರ್ ಎಂಡಿ/ದೂತ' ಎಂಬ ಯೂಟ್ಯೂಬ್ ಚಾನೆಲ್ ಮೂಲಕ ಹೊರಡಿಸಲಾದ ವಿಡಿಯೊದಿಂದ ಜನರು ಹೊಂದಿರುವ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗಿದೆ' ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

'ಪ್ರಕರಣ ದಾಖಲಾಗಿದ್ದು, ನೋಟಿಸ್ ನೀಡಲಾಗಿದೆ. ಸಮೀರ್ ವಿಚಾರಣೆಗೆ ಹಾಜರಾಗಬೇಕು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಶೋಭಾರಾಣಿ ವಿ.ಜೆ ತಿಳಿಸಿದರು. ಸಮೀರ್ ಬಂಧನಕ್ಕೆ ಪ್ರಯತ್ನ ನಡೆದಿದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಈ ಪ್ರಕರಣದಲ್ಲಿ ಹಾಕಲಾಗಿರುವ ಸೆಕ್ಷನ್‌ಗಳ ಪ್ರಕಾರ. ಬಂಧನಕ್ಕೆ ಅವಕಾಶ ಇಲ್ಲ' ಎಂದರು.

ಸಮೀರ್ ಮೂಲತಃ ಬಳ್ಳಾರಿಯ ಬಂಡಿಹಟ್ಟಿಯವರು. ಅವರ ತಾಯಿ ಆಂಧ್ರ ಪ್ರದೇಶದ ಗುಂತಕಲ್‌ನಲ್ಲಿ ನೆಲೆಸಿದ್ದಾರೆ ಎಂದು ಗೊತ್ತಾಗಿದೆ. ಸಮೀರ್ ಸದ್ಯ ಬೆಂಗಳೂರಿನಲ್ಲಿ ವಾಸವಿದ್ದಾರೆ ಎಂಬ ಮಾಹಿತಿ ಇದೆ ಎಂದರು.

ತುರ್ತು ಏನಿತ್ತು?

'ಇದರಲ್ಲಿ ಅಂಥ ತುರ್ತು ಏನಿತ್ತು? ವಿಡಿಯೊದಲ್ಲಿ ಪ್ರಭಾವಿಗಳನ್ನು ಬಿಂಬಿಸಲಾಗಿದೆ ಎಂದು ಅರ್ಜಿದಾರರನ್ನು ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಿದ್ದೀರಾ' ಎಂದು ತನಿಖಾಧಿಕಾರಿಯನ್ನು ನ್ಯಾಯಪೀಠ ತೀವ್ರ ತರಾಟೆಗೆ ತೆಗೆದುಕೊಂಡಿತು.

'ನೋಟಿಸ್ ಜೊತೆಗೆ ಎಫ್ಐಆರ್ ಪ್ರತಿ ನೀಡುವುದು ಕಡ್ಡಾಯವಲ್ಲವೇ?, ನಿಮಗೆ ಏನಾದರೂ ಒತ್ತಡವಿತ್ತೇ? ನೋಟಿಸ್ ಕೊಡುವುದಕ್ಕೆ ರಾತ್ರಿ ಹೊತ್ತೆ ಹೋಗಬೇಕಿತ್ತಾ? ಸುತ್ತೋಲೆ ಪಾಲನೆ ಮಾಡದೆಯೇ ನೋಟಿಸ್ ಕೊಟ್ಟಿದ್ದೇಕೆ' ಎಂದು ಪ್ರಾಸಿಕ್ಯೂಷನ್ ಅನ್ನು ಪ್ರಶ್ನಿಸಿ ನೋಟಿಸ್‌ಗೆ ಮಧ್ಯಂತರ ತಡೆ ನೀಡಿತು.

ವಿಎಚ್‌ಪಿ ಎಚ್ಚರಿಕೆ

ಪುತ್ತೂರು (ದಕ್ಷಿಣ ಕನ್ನಡ): ಸೌಜನ್ಯಾ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಧಾರ್ಮಿಕ ಕ್ಷೇತ್ರವನ್ನು ಕೇಂದ್ರೀಕರಿಸಿ ಸಮೀರ್ ಮಾಡಿರುವ ವಿಡಿಯೊ ಸಾಮಾಜಿಕ ಜಾಲ ತಾಣದಲ್ಲಿ ಹರಿದಾಡಿದ ಬೆನ್ನಲ್ಲೇ, ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಮುಖಂಡರು ಸಮೀರ್ ವಿರುದ್ಧ ಗುರುವಾರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ವಿಎಚ್‌ಪಿ ಕರ್ನಾಟಕ ಪ್ರಾಂತ ಉಪಾಧ್ಯಕ್ಷ ಯು. ಪೂವಪ್ಪ, 'ಸಮೀರ್ ತಪ್ಪನ್ನು ತಿದ್ದಿಕೊಳ್ಳದಿದ್ದರೆ, ಮುಂದೆ ಏನು ಮಾಡಬೇಕು ಎನ್ನುವುದು ತಿಳಿದಿದೆ' ಎಂದು ಎಚ್ಚರಿಕೆ ನೀಡಿದರು.

'ವಿಮೆ: ಉತ್ತರಾಧಿಕಾರಿ ಮನವಿಯೂ ಪರಿಗಣನಾರ್ಹ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಮಾ ಪಾಲಿಸಿಗಳ ಪರಿಹಾರ ಮೊತ್ತ ಪಡೆಯಲು ಮೃತರ ಉತ್ತರಾಧಿಕಾರಿಗಳು ಮನವಿ ಸಲ್ಲಿಸಿದ ಪಕ್ಷದಲ್ಲಿ ವಿಮೆಗೆ ನಾಮನಿರ್ದೇಶಿತರಾದವರಿಗೆ (ನಾಮಿನಿ) ಸಂಪೂರ್ಣ ಪರಿಹಾರ ಪಡೆಯುವ ಹಕ್ಕು ಇರುವುದಿಲ್ಲ' ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ತಮ್ಮ ಮಗನ ವಿಮೆಗೆ ನಾಮನಿರ್ದೇಶಿತರಾಗಿದ್ದ ಗದಗ ಜಿಲ್ಲೆಯ ಲಕ್ಷ್ಮೇಶ್ವರ ತಾಲ್ಲೂಕಿನ ಯಲ್ಲಾಪುರ ನಿವಾಸಿ ನೀಲವ್ವ (61) ಸಲ್ಲಿಸಿದ್ದ ಅರ್ಜಿ (ಆರ್‌ಎಫ್‌ಎ)

ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅನಂತ ರಾಮನಾಥ ಹೆಗಡೆ ಅವರಿದ್ದ ಏಕಸದಸ್ಯ ನ್ಯಾಯಪೀಠ (ಧಾರವಾಡ) ಈ ಕುರಿತಂತೆ ಇತ್ತೀಚೆಗೆ ಆದೇಶಿಸಿದೆ.

'ನಾಮ ನಿರ್ದೇಶನಗಳನ್ನು ನಿಯಂತ್ರಿಸುವ ವಿಮಾ ಕಾಯ್ದೆ-1938ರ ಕಲಂ 39, ವೈಯಕ್ತಿಕ ಉತ್ತರಾಧಿಕಾರ ಕಾನೂನಾದ ಹಿಂದೂ ಉತ್ತರಾಧಿಕಾರ ಕಾಯ್ದೆ-1956 ಅನ್ನು ಅತಿಕ್ರಮಣ ಮಾಡುವುದಿಲ್ಲ. ಹೀಗಾಗಿ, ವಿಮೆಯಿಂದ ಇರುವ ಪರಿಹಾರ ಪ್ರಯೋಜನಗಳನ್ನು ನಾಮ ನಿರ್ದೇಶಿತರೊಂದಿಗೆ ಕಾನೂನು ಬದ್ಧ ಉತ್ತರಾಧಿಕಾರಿಗಳೂ ಪಡೆಯುವ ಹಕ್ಕು ಹೊಂದಿರುತ್ತಾರೆ' ಎಂದು ನ್ಯಾಯಪೀಠ ಹೇಳಿದೆ.

'ಕಾನೂನು ಬದ್ಧ ಉತ್ತರಾಧಿಕಾರಿಗಳು ವಿಮೆಯ ಪರಿಹಾರಕ್ಕಾಗಿ ಮನವಿ ಸಲ್ಲಿಸದಿದ್ದರೆ ಮಾತ್ರ ನಾಮ-ನಿರ್ದೇಶಿತರು ವಿಮೆಯ ಸಂಪೂರ್ಣ ಹಕ್ಕನ್ನು ಹೊಂದಿರುತ್ತಾರೆ. ಅರ್ಜಿ ಸಲ್ಲಿಸಿದಲ್ಲಿ ನಾಮ ನಿರ್ದೇಶಿತರಿಗೆ ಸಂಪೂರ್ಣ ಪರಿಹಾರ ಪಡೆಯುವ ಹಕ್ಕು ಇರುವುದಿಲ್ಲ. ಆದ್ದರಿಂದ, ಒಂದು ವೇಳೆ ಕಾನೂನುಬದ್ಧ ಉತ್ತರಾಧಿಕಾರಿಗಳು ಮನವಿ ಮಾಡಿದಲ್ಲಿ ನಾಮ ನಿರ್ದೇಶಿತರ ಹಕ್ಕು ಉತ್ತರಾಧಿಕಾರಿಗಳ ಹಕ್ಕನ್ನು ನಿಯಂತ್ರಿಸುವುದಿಲ್ಲ. ಯಾವುದೇ ವ್ಯಕ್ತಿಯ ವಿಮೆಗೆ ತಾಯಿಯನ್ನು ನಾಮ ನಿರ್ದೇಶನ ಮಾಡಿ ಮೃತ ಪಟ್ಟಲ್ಲಿ, ಮೃತರ ಪತ್ನಿ, ಮಗು ಮತ್ತು ತಾಯಿ ಪರಿಹಾರವನ್ನು ಮೂರನೇ ಒಂದು ಭಾಗದಂತೆ ಹಂಚಿಕೊಳ್ಳಬೇಕು' ಎಂದು ನ್ಯಾಯಪೀಠ ವಿವರಿಸಿದೆ.

1	2	3	4	5	6
64	202/1ಎ2	ಖಾಸಗಿ	ಖುಷ್ಕಿ	0.0435053	ಕಮಲಾ ಲಲಿತಾ ಕೊರಗಪ್ಪ ಅಂಗಾರು, ಗುರುವ ಮೇರ ರವರ ಮಕ್ಕಳು
65	202/1ಎ3	ಖಾಸಗಿ	ಖುಷ್ಕಿ	0.0010118	ಮಾಲಿಂಗ ಹರಿಜನ ಬಿನ್. ಬಟ್ಯ ಹರಿಜನ
66	242/1	ಖಾಸಗಿ	ಖುಷ್ಕಿ	0.0020235	ಫ್ರಾನ್ಸಿಸ್ ಫೆರ್ನಾಂಡಿಸ್ ಹಿತಾಸಕ್ತಿದಾರರು ಫಿಲೋಮಿನಾ ಡಿ'ಸೋಜಾ ಕೋಂ. ಫ್ರಾನ್ಸಿಸ್ ಮತ್ತು ಇತರರು
67	242/2	ಖಾಸಗಿ	ಖುಷ್ಕಿ	0.0101175	ಮೂಸೆ ಕುಂಞಿ ಬಿನ್ ಅಹಮದ್ ಕುಂಞ ಮರಿಯಮ್ಮ ಬಿನ್ ಅಬೂಬಕ್ಕರ್
68	242/4	ಖಾಸಗಿ	ಖುಷ್ಕಿ	0.004047	ಜೋಸೆಫ್ ಪಾಯಿಸ್
69	254/1	ಖಾಸಗಿ	ಖುಷ್ಕಿ	0.0060705	ಶಶಿಕಿರಣ್ ಆರ್ ಗೋಗಟೆ ಬಿನ್ ದಿ ಗೋಗಟೆ ರಘುಪತಿ ಭಟ್
70	254/11	ಖಾಸಗಿ	ಖುಷ್ಕಿ	0.0010118	ಭುವನೇಶ್ವರಿ
71	254/2	ಸರ್ಕಾರಿ	ಖುಷ್ಕಿ	0.0070823	ಸರ್ಕಾರಿ ಸರ್ಕಾರಿ ಶಾಲೆ
72	254/8	ಖಾಸಗಿ	ಖುಷ್ಕಿ	0.0050587	ರಾಮಕೃಷ್ಣ ಶಬರಾಯ
73	254/9	ಖಾಸಗಿ	ಖುಷ್ಕಿ	0.0030352	ರಾಧ
74	259/2	ಸರ್ಕಾರಿ	ಖುಷ್ಕಿ	0.004047	ಸರ್ಕಾರಿ ಮತ್ತು ಹಿತಾಸಕ್ತಿದಾರರು ಬಾಬು ಗೌಡ ಬಿನ್ ವೀರಪ್ಪ ಗೌಡ
75	266/3	ಸರ್ಕಾರಿ	ಖುಷ್ಕಿ	0.0111293	ಸರ್ಕಾರಿ ಮತ್ತು ಹಿತಾಸಕ್ತಿದಾರರು ಜೋಸೆಫ್
76	266/4	ಸರ್ಕಾರಿ	ಖುಷ್ಕಿ	0.060705	ಸರ್ಕಾರಿ ಮತ್ತು ಹಿತಾಸಕ್ತಿದಾರರು ಯತಿಂದ್ರ ಕೇಶವ ಮಲೆಕುಡಿಯ, ಕೊಕ್ಕಡ ಗ್ರಾಮ ಪಂಚಾಯತ್ ರಾಜು ಇ.ಕೆ (ಹೋಟೇಲ್ ಮುತ್ತಪ್ಪನ್) ಹೇಮಂತ್ ಬಿನ್ ನಂಜುಂಡ (ಫ್ಲವರ್ ಶಾಪ್) ಲೀಲಾ ಕೋಂ ರಮೇಶ್
77	27/18	ಖಾಸಗಿ	ಬಾಗಾಯ್ತು	0.0010118	ಎಮ್.ಸತ್ಯ ನಾರಾಯಣ ಭಟ್ ಬಿನ್ ಡಿ.ಮಹಾಬಲ ಭಟ್
78	296/1	ಸರ್ಕಾರಿ	ಖುಷ್ಕಿ	0.036423	ಸರ್ಕಾರಿ ಮತ್ತು ಹಿತಾಸಕ್ತಿದಾರರು ಕೇಶವ ಮಲೆಕುಡಿಯ
79	296/3	ಸಾಮಾನ್ಯ (ಸರ್ಕಾರಿ/ಖಾಸಗಿ)	ಖುಷ್ಕಿ	0.004047	ದಿನೇಶ್ ಕೆ. ಬಿನ್ ಐತ ಹರಿಜನ ಯಾನೆ ಐತಪ್ಪ
80	308/2ಎ1ಸಿ	ಸಾಮಾನ್ಯ (ಸರ್ಕಾರಿ/ಖಾಸಗಿ)	ಖುಷ್ಕಿ	0.113316	ಸರ್ಕಾರಿ ಮತ್ತು ಹಿತಾಸಕ್ತಿದಾರರು ಸೆಬಾಸ್ಟಿಯನ್
ತಾಲೂಕು: ಕಡಬ					
ಗ್ರಾಮ: ಕೌಕ್ರಾಡಿ					
81	137/1	ಖಾಸಗಿ	ಖುಷ್ಕಿ	0.060705	ಕೊಕ್ಕಡ ಇಗರ್ಜಿ ಭಂಡಾರ
82	152/1ಬಿ1	ಖಾಸಗಿ	ಖುಷ್ಕಿ	0.004047	ಕೊಕ್ಕಡ ಇಗರ್ಜಿ ಭಂಡಾರ ರೆ ಫಾದರ್ ಎಂ.ಎಸ್ ರೆಗೋ
83	152/1ಬಿ2	ಖಾಸಗಿ	ಖುಷ್ಕಿ	0.008094	ಕೆ.ಪಿ ಆಂಟನಿ ಅಲೆಕ್ಸ್ ಬಿನ್ ದಿ ಜೆಸಿಂತಾ ಪಿ.ವಿ.
84	153/3	ಖಾಸಗಿ	ಖುಷ್ಕಿ	0.0091058	ಕೆ.ಎಮ್. ಎಸ್ತಫನ್ ಬಿನ್ ಕೆ.ಜೆ ಮ್ಯಾತ್ಯು
85	153/5	ಖಾಸಗಿ	ಖುಷ್ಕಿ	0.0101175	ಹಿಲಾರಿ ಡಿ'ಸೋಜಾ ಬಿನ್ ಸಾಲ್ವಡೋರ್ ಡಿ'ಸೋಜಾ
86	153/6	ಖಾಸಗಿ	ಖುಷ್ಕಿ	0.012141	ಸಂದೀಪ್ ಬಿನ್ ಚಂದಯ್ಯ ಶೆಟ್ಟಿ ಹಿತಾಸಕ್ತಿದಾರರು ರೋಬರ್ಟ್ ಗಲ್ಬಾವೋ ಬಿನ್ ಸೈಮನ್ ಗಲ್ಬಾವೋ ಮತ್ತು ಹಿಲಾರಿ ಡಿ'ಸೋಜಾ ಬಿನ್ ಸಾಲ್ವಡೋರ್ ಡಿ'ಸೋಜಾ
87	153/7	ಖಾಸಗಿ	ಖುಷ್ಕಿ/ಭೂ.ಪ.	0.0060705	ಎ.ಸಿ.ಮ್ಯಾತ್ಯು ಬಿನ್ ದಿ ಕೆ.ವಿ ಚಾಕೋ
88	153/8	ಖಾಸಗಿ	ಖುಷ್ಕಿ/ಭೂ.ಪ.	0.0010118	ಎನ್. ಉಮೇಶ್ ಬಿನ್ ಶಿವಣ್ಣ
89	158/10	ಖಾಸಗಿ	ಖುಷ್ಕಿ/ಭೂ.ಪ.	0.0010118	ಕೆ. ವೆಂಕಟರಮಣ ಭಟ್
90	158/9	ಖಾಸಗಿ	ಖುಷ್ಕಿ/ಭೂ.ಪ.	0.004047	ಶಿಬು ಜೋನ್ ಬಿನ್ ಪಿ.ಟಿ ಜೋನ್
91	160/1ಇ2	ಸರ್ಕಾರಿ	ಖುಷ್ಕಿ	0.0424935	ಸರ್ಕಾರಿ ಮತ್ತು ಹಿತಾಸಕ್ತಿದಾರರು ಸೈಂಟ್ ಜೋನ್ ಬ್ಯಾಪ್ಟಿಸ್ಟ್ ಚರ್ಚ್ ಕೊಕ್ಕಡ
92	163/1ಎ1ಎ2	ಖಾಸಗಿ	ಖುಷ್ಕಿ	0.12141	ಕೆ.ಜಿ.ಬೆನ್ನಿ ಬಿನ್ ಕೆ.ಜಿ.ಜಾರ್ಜ್ ಸರ್ಕಾರಿ
93	163/1ಎ1ಬಿ	ಖಾಸಗಿ	ಖುಷ್ಕಿ	0.0951045	ಎ.ಸಿ.ಮ್ಯಾತ್ಯು ಬಿನ್ ದಿ ಕೆ.ವಿ ಚಾಕೋ ಮತ್ತು ಎ.ಸಿ. ವಿನಯ್ ರಾಜ್ ಬಿನ್ ದಿ ಕೆ.ವಿ ಚಾಕೋ
94	163/1ಎ1ಸಿ	ಸರ್ಕಾರಿ	ಖುಷ್ಕಿ	0.0091058	ಸರ್ಕಾರಿ ಎ.ಎನ್.ಎಮ್. ಕ್ವಾಟ್ರಸ್
95	163/1ಬಿ	ಸರ್ಕಾರಿ	ಖುಷ್ಕಿ	0.060705	ಸರ್ಕಾರಿ ಮತ್ತು ಹಿತಾಸಕ್ತಿದಾರರು ಡೆನ್ನಿಸ್ ಪಿರೇರಾ
96	163/2	ಖಾಸಗಿ	ಖುಷ್ಕಿ	0.0050587	ಮ್ಯಾಕ್ಸಿ ರಾಜೇಶ್ ಬಿನ್ ಡೆನ್ನಿಸ್ ಪಿರೇರಾ
97	163/3	ಖಾಸಗಿ	ಖುಷ್ಕಿ/ಭೂ.ಪ.	0.048564	ಮ್ಯಾಕ್ಸಿ ರಾಜೇಶ್ ಬಿನ್ ಡೆನ್ನಿಸ್ ಪಿರೇರಾ
98	180/3ಎ	ಖಾಸಗಿ	ಖುಷ್ಕಿ	0.0252938	ಲಕ್ಷ್ಮಿ ಕೋಂ ದಿ ರಾಮ ಮಲೆಕುಡಿಯ ತನಿಯಪ್ಪ ಬಿನ್ ದಿ ರಾಮ ಮಲೆಕುಡಿಯ ನೀಲಯ್ಯ ಬಿನ್ ದಿ ರಾಮ ಮಲೆಕುಡಿಯ ಪೊಡಿಯ ದಿ ರಾಮ ಮಲೆಕುಡಿಯ ಐತ್ತಪ್ಪ ಬಿನ್ ದಿ ಸೀತಾ ಕುಸುಮ ಬಿನ್ ಬಿನ್ ದಿ ಸೀತಾ ಚಂದ್ರಶೇಖರ ಬಿನ್ ದಿ ಸೀತಾ ಪುಷ್ಪರಾಜ ಬಿನ್ ದಿ ಸೀತಾ ಮೈನರ್ ರಾಮಣ್ಣ ಬಿನ್ ದಿ ಸೀತಾ
99	60	ಖಾಸಗಿ	ಖುಷ್ಕಿ	0.0101175	ಯು ಹೇಮಲತಾ ಕೋಂ ಬಾಲಕೃಷ್ಣ ಸುವರ್ಣ
			ಒಟ್ಟು	3.9569549	

[ಎಫ್‌ನಂ. ಆರ್‌ಡಬ್ಲ್ಯು/ಎನ್.ಹೆಚ್/73/ಕೆ ಎನ್ ಟಿ/2022/3ಡಿ]

ಸಹಿ/- ಅಭಯ್ ಜೈನ್, ನಿರ್ದೇಶಕರು

ಹೊನ್ನು, ಮಣ್ಣಿನಲ್ಲಿ ಹೂಡಿಕೆ

ಸರ್ಕಾರಿ ಅಧಿಕಾರಿಗಳು ತಮ್ಮ ಅಕ್ರಮ ಸಂಪಾದನೆಯ ಬಹುಪಾಲನ್ನು ಚಿನ್ನಾಭರಣ, ಕೃಷಿ ಜಮೀನು, ನಿವೇಶನಗಳು ಮತ್ತು ಬಂಗಲೆಗಳ ಮೇಲೆ ಹೂಡಿಕೆ ಮಾಡಿದ್ದಾರೆ ಎಂಬುದು ಲೋಕಾಯುಕ್ತ ಪೊಲೀಸರ ದಾಳಿಯ ವೇಳೆ ಪತ್ತೆಯಾಗಿದೆ. ಅವರ ವಿವಿಧ ಸ್ವರೂಪದ ಹೂಡಿಕೆಯ ವಿವರ ಈ ಮುಂದಿನಂತಿದೆ

ಟಿ.ಡಿ.ನಂಜುಂಡಪ್ಪ, ಮುಖ್ಯ ಎಂಜಿನಿಯರ್, ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು

₹8.46 ಕೋಟಿ ಆಸ್ತಿಯ ಒಟ್ಟು ಮೌಲ್ಯ

- 9 ನಿವೇಶನ, 3 ವಾಸದ ಮನೆ, 2 ಎಕರೆ ಕೃಷಿ ಜಮೀನು ಸೇರಿ ಒಟ್ಟು ₹4.97 ಕೋಟಿ ಮೌಲ್ಯದ ಸ್ಥಿರಾಸ್ತಿ
- ₹56.05 ಲಕ್ಷದ ಚಿನ್ನಾಭರಣ, ₹39.30 ಲಕ್ಷ ವಾಹನಗಳು, ₹4.40 ಲಕ್ಷ ನಗದು

ಎಚ್.ಬಿ.ಕಲ್ಲೇಶಪ್ಪ, ಕಾರ್ಯಪಾಲಕ ಎಂಜಿನಿಯರ್, ಬಿಬಿಎಂಪಿ, ಬೆಂಗಳೂರು

₹6.50 ಕೋಟಿ ಆಸ್ತಿಯ ಒಟ್ಟು ಮೌಲ್ಯ

- 2 ನಿವೇಶನ, 3 ವಾಸದ ಮನೆ, ₹1.20 ಕೋಟಿ ಮೌಲ್ಯದ ಕೃಷಿ ಜಮೀನು ಸೇರಿ ಒಟ್ಟು ₹7.46 ಕೋಟಿ ಮೌಲ್ಯದ ಸ್ಥಿರಾಸ್ತಿ
- ₹15.10 ಲಕ್ಷದ ಚಿನ್ನಾಭರಣ, ₹70 ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತುಗಳು, ₹3.29 ಲಕ್ಷ ನಗದು

ನಾಗರಾಜ್ ಜಿ., ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಬೆಸ್ಕಾಂ, ಕೆಎಸ್‌ಎಸ್‌ಐಡಿಸಿ ಕಟ್ಟಡ, ರಾಜಾಜಿನಗರ, ಬೆಂಗಳೂರು

₹2.18 ಕೋಟಿ ಆಸ್ತಿಯ ಒಟ್ಟು ಮೌಲ್ಯ

- 2 ನಿವೇಶನ, 1 ವಾಸದ ಮನೆ, 10 ಎಕರೆ 30 ಗುಂಟೆ ಕೃಷಿ ಜಮೀನು ಸೇರಿ ಒಟ್ಟು ₹2.85 ಕೋಟಿ ಮೌಲ್ಯದ ಸ್ಥಿರಾಸ್ತಿ
- ₹20 ಲಕ್ಷದ ಚಿನ್ನಾಭರಣ, ₹12 ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತುಗಳು, ₹6.00 ಲಕ್ಷ ನಗದು, ₹21 ಲಕ್ಷದ ವಾಹನಗಳು, ₹1.98 ಲಕ್ಷ ಮುಖಬೆಲೆಯ ರದ್ದಾದ ನೋಟುಗಳು

ಡಾ.ನಾಗರಾಜ್ ಜೆ.ಎಸ್., ಜಿಲ್ಲಾ ಅಂಕಿತ ಅಧಿಕಾರಿ, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ, ದಾವಣಗೆರೆ

₹6.14 ಕೋಟಿ ಆಸ್ತಿಯ ಒಟ್ಟು ಮೌಲ್ಯ

- 1 ನಿವೇಶನ, 4 ವಾಸದ ಮನೆ, 3 ಎಕರೆ ಕೃಷಿ ಜಮೀನು ಸೇರಿ ಒಟ್ಟು ₹4.49 ಕೋಟಿ ಮೌಲ್ಯದ ಸ್ಥಿರಾಸ್ತಿ
- ₹94 ಲಕ್ಷದ ಚಿನ್ನಾಭರಣ, ₹32 ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತುಗಳು, ₹1.17 ಲಕ್ಷ ನಗದು, ₹38.18 ಲಕ್ಷದ ವಾಹನಗಳು

ಜಗನ್ನಾಥ, ಯೋಜನಾ ಜಾರಿ ಘಟಕ, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಕೆ.ಆರ್.ವೃತ್ತ, ಬೆಂಗಳೂರು

₹4.55 ಕೋಟಿ ಆಸ್ತಿಯ ಒಟ್ಟು ಮೌಲ್ಯ

- 2 ನಿವೇಶನ, 2 ವಾಸದ ಮನೆ, 48 ಎಕರೆ ಕೃಷಿ ಜಮೀನು ಸೇರಿ ಒಟ್ಟು ₹1.57 ಕೋಟಿ ಮೌಲ್ಯದ ಸ್ಥಿರಾಸ್ತಿ

ಬೆಸ್ಕಾಂ ಎಇಇ ನಾಗರಾಜ ಜಿ. ಅವರ ಮನೆಯಲ್ಲಿ ಪತ್ತೆಯಾದ ನಗ–ನಗದು

- ₹72 ಲಕ್ಷದ ಚಿನ್ನಾಭರಣ, ₹50 ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತುಗಳು, ₹1.90 ಲಕ್ಷ ನಗದು, ₹19.20 ಲಕ್ಷದ ವಾಹನಗಳು, ₹27 ಲಕ್ಷದ ಉಳಿತಾಯ

ಡಾ.ಜಗದೀಶ್ ಪಿ., ಸಾಮಾನ್ಯ ವೈದ್ಯಕೀಯ ಅಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ತಾವರೆಕೆರೆ, ಶಿರಾ ತಾಲ್ಲೂಕು, ತುಮಕೂರು

₹3.11 ಕೋಟಿ ಆಸ್ತಿಯ ಒಟ್ಟು ಮೌಲ್ಯ

- 5 ನಿವೇಶನ, 4 ವಾಸದ ಮನೆ, 14 ಎಕರೆ 30 ಗುಂಟೆ ಕೃಷಿ ಜಮೀನು ಸೇರಿ ಒಟ್ಟು ₹1.96 ಕೋಟಿ ಮೌಲ್ಯದ ಸ್ಥಿರಾಸ್ತಿ
- ₹87.56 ಲಕ್ಷದ ಚಿನ್ನಾಭರಣ, ₹8 ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತುಗಳು, ₹1.15 ಲಕ್ಷ ನಗದು, ₹18.25 ಲಕ್ಷದ ವಾಹನಗಳು

ಮಲ್ಲಪ್ಪ ಸಾಬಣ್ಣ ದುರ್ಗದ್, ಪ್ರಥಮ ದರ್ಜೆ ಸಹಾಯಕ, ಪಂಚಾಯತ್ ರಾಜ್ ಎಂಜಿನಿಯರಿಂಗ್ ಇಲಾಖೆ, ಬಾಗಲಕೋಟೆ

₹1.92 ಕೋಟಿ ಆಸ್ತಿಯ ಒಟ್ಟು ಮೌಲ್ಯ

- 4 ನಿವೇಶನ, 3 ವಾಸದ ಮನೆ, 13 ಎಕರೆ ಕೃಷಿ ಜಮೀನು ಸೇರಿ ಒಟ್ಟು ₹94.15 ಲಕ್ಷ ಮೌಲ್ಯದ ಸ್ಥಿರಾಸ್ತಿ
- ₹2.56 ಲಕ್ಷದ ಚಿನ್ನಾಭರಣ, ₹14.87 ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತುಗಳು, ₹16,354 ನಗದು, ₹80.50 ಲಕ್ಷದ ವಾಹನಗಳು

ಶಿವಾನಂದ ಶಿವಶಂಕರ ಕೆಂಬಾವಿ, ಪ್ರಥಮ ದರ್ಜೆ ಸಹಾಯಕ, ಕರ್ನಾಟಕ ಗೃಹ ಮಂಡಳಿ, ವಿಜಯಪುರ

₹3.64 ಕೋಟಿ ಆಸ್ತಿಯ ಒಟ್ಟು ಮೌಲ್ಯ

- 3 ವಾಸದ ಮನೆ, 4 ಎಕರೆ ಕೃಷಿ ಜಮೀನು ಸೇರಿ ಒಟ್ಟು ₹2.21 ಕೋಟಿ ಮೌಲ್ಯದ ಸ್ಥಿರಾಸ್ತಿ
- ₹26.22 ಲಕ್ಷದ ಚಿನ್ನಾಭರಣ, ₹45 ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತುಗಳು, ₹15.08 ಲಕ್ಷ ನಗದು, ₹57 ಲಕ್ಷದ ವಾಹನಗಳು

ಸಗಣಿ ತಿನ್ನುವವರನ್ನು ಸುಮ್ಮನೇ ಬಿಡುವುದಿಲ್ಲ: ಹೈಕೋರ್ಟ್

ಕೆಪಿಎಸ್‌ಸಿಗೆ ತೀವ್ರ ತರಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಲೋಕಸೇವಾ ಆಯೋಗವನ್ನು (ಕೆಪಿಎಸ್‌ಸಿ) ಸ್ವಚ್ಛಗೊಳಿಸುವಲ್ಲಿ ಸರ್ಕಾರ ನಿಷ್ಕ್ರಿಯವಾಗಿದ್ದು, ಇದನ್ನು ಶುದ್ಧೀಕರಿಸುವ ಪ್ರಕ್ರಿಯೆಗೆ ಹೈಕೋರ್ಟ್ ಮುಂದಾಗಬೇಕಾಗುತ್ತದೆ' ಎಂದು ವಿಭಾಗೀಯ ನ್ಯಾಯಪೀಠ ಸರ್ಕಾರಕ್ಕೆ ಕಠಿಣ ಎಚ್ಚರಿಕೆ ನೀಡಿದೆ.

'ಸಹಾಯಕ ಎಂಜಿನಿಯರ್‌ಗಳ ನೇಮಕದಲ್ಲಿ ಅಕ್ರಮ ನಡೆದಿರುವುದು ಸಾಬೀತಾಗಿರುವ ಹಿನ್ನೆಲೆಯಲ್ಲಿ ಅವರನ್ನು ಸೇವೆಯಿಂದ ವಜಾಗೊಳಿಸುವಂತೆ ಆಯೋಗ ಮಾಡಿರುವ ಶಿಫಾರಸಿಗೆ ತಡೆ ನೀಡಬೇಕು' ಎಂಬ ಮನವಿಯನ್ನು ನಿರಾಕರಿಸಿರುವ ಕೆಎಟಿ ಆದೇಶ ಪ್ರಶ್ನಿಸಿ ಎಂಜಿನಿಯರ್‌ಗಳಾದ ವಿಶ್ವಾಸ್ ಮತ್ತಿತರರು ಸಲ್ಲಿಸಿರುವ ಮೇಲ್ಮನವಿಗಳನ್ನು ಹಿರಿಯ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

'ಕೆಪಿಎಸ್‌ಸಿ ಶುದ್ಧೀಕರಣ ಪ್ರಕ್ರಿಯೆಯನ್ನು ನಾವೇ ಆರಂಭಿಸುತ್ತೇವೆ. ಯಾರೆಲ್ಲಾ ಸಗಣಿ ತಿನ್ನುತ್ತಿದ್ದಾರೆಯೋ ಅವರನ್ನು ಸುಮ್ಮನೆ ಬಿಡೋದಿಲ್ಲ. ಈ ವಿಚಾರದಲ್ಲಿ 4-5 ತಲೆ ಉರುಳಿದರೆ ಸರಿ ಹೋಗುತ್ತದೆ. ಎಲ್ಲಾ ಕಡೆ ಕೆಟ್ಟವರೇ ಇರುತ್ತಾರೆ ಎಂದೇನಿಲ್ಲ. ಒಳ್ಳೆಯವರೂ ಇರುತ್ತಾರೆ. ಆದರೆ ಕೆಟ್ಟ ಜನರು ಒಳ್ಳೆಯವರನ್ನು ಬಿಡೋದಿಲ್ಲ. ಹಾಗಾಗಿ, ನಾವು ಆಯೋಗದ ನೇಮಕದಲ್ಲಿ ಪಾರದರ್ಶಕತೆ ತರಲು ಏನೆಲ್ಲಾ ಮಾಡಬೇಕೋ ಅದನ್ನು ಮಾಡುತ್ತೇವೆ. ವ್ಯವಸ್ಥೆಯನ್ನು ಉಳಿಸಬೇಕಾಗಿದೆ. ಇಲ್ಲವಾದರೆ ಮುಂದಿನ ತಲೆಮಾರಿಗೆ ಏನು ಉತ್ತರ ಹೇಳುವುದು' ಎಂದು ನ್ಯಾಯಪೀಠ ಖಾರವಾಗಿ ಪ್ರಶ್ನಿಸಿತು.

ದಾಖಲೆ ಸಲ್ಲಿಕೆ: ಕೆಪಿಎಸ್‌ಸಿ ಪರ ಹಾಜರಾಗಿದ್ದ ಪದಾಂಕಿತ ಹಿರಿಯ ವಕೀಲ ರೂಬೇನ್ ಜಾಕೋಬ್, 'ನೇಮಕದಲ್ಲಿ ಅಕ್ರಮ ನಡೆಸಲಾಗಿದೆ' ಎಂಬ ಆರೋಪಕ್ಕೆ ಸಂಬಂಧಿಸಿದ ಒಎಂಆರ್ ಶೀಟ್‌ಗಳು, ಎಫ್‌ಎಸ್ಎಲ್ ವರದಿ, ಪೆನ್ ಡ್ರೈವ್ ಸೇರಿ ಎಲ್ಲಾ ದಾಖಲೆಗಳನ್ನು ಮುಚ್ಚಿದ ಲಕೋಟೆಯಲ್ಲಿಪೀಠಕ್ಕೆ ಸಲ್ಲಿಸಿದರು.

ಇದನ್ನು ದಾಖಲಿಸಿಕೊಂಡ ನ್ಯಾಯಪೀಠ, 'ಮುಚ್ಚಿದ ಲಕೋಟೆಯಲ್ಲಿರುವ ವಿವರಗಳನ್ನು ಮೊದಲಿಗೆ ಕೆಲವು ವಕೀಲರ ಸಮಕ್ಷಮದಲ್ಲಿ ನಾವೇ ಪರಿಶೀಲಿಸುತ್ತೇವೆ. ಅಗತ್ಯ ಬಿದ್ದರೆ ಎಲ್ಲಾ ವಿವರಗಳನ್ನು ಸಾರ್ವಜನಿಕವಾಗಿ ಬಿಚ್ಚಿಡುತ್ತೇವೆ. ಸಾರ್ವಜನಿಕ ಸ್ಥಳಗಳಲ್ಲಿ ಟಿವಿಗಳನ್ನು ಹಾಕಿಸಿ; ಆಯೋಗದಲ್ಲಿ ಏನೆಲ್ಲಾ ನಡೀತಿದೆ ಎಂಬುದನ್ನು ಬಹಿರಂಗಪಡಿಸಲಾಗುವುದು' ಎಂದು ನುಡಿಯಿತು.

'2023ರ ಸೆಪ್ಟೆಂಬರ್‌ನಲ್ಲೇ ಎಲ್ಲಾ ಬ್ಯಾಕ್ ಲಾಗ್ ಹುದ್ದೆಗಳನ್ನು ಭರ್ತಿ ಮಾಡುವಂತೆ ಮುಖ್ಯ ನ್ಯಾಯಮೂರ್ತಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು. ಇದಕ್ಕೆ ಸರ್ಕಾರವೂ ಒಪ್ಪಿಕೊಂಡಿತ್ತು. ಆದರೆ ಇನ್ನೂ ನೇಮಕ ಪ್ರಕ್ರಿಯೆ ನಡೆಸಿಲ್ಲ. ಈ ರೀತಿ ಹೈಕೋರ್ಟ್ ಆದೇಶ ಪಾಲನೆ ಮಾಡದೇ ಹೋದರೆ ಬೆಲೆ ಎಲ್ಲಿದೆ' ಎಂದು ನ್ಯಾಯಪೀಠ ಅತೃಪ್ತಿ ಹೊರ ಹಾಕಿತು. ಇದೇ ವೇಳೆ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಅವರಿಗೆ, 'ಆಯೋಗವನ್ನು ಸರಿಪಡಿಸಲು ನ್ಯಾಯಾಲಯಕ್ಕೆ ಎಲ್ಲಾ ರೀತಿಯ ಸಹಕಾರ ನೀಡಿ' ಎಂದು ಸೂಚಿಸಿತು.

'ದೊಡ್ಡ ಕುಳಗಳ ಕೈವಾಡ ಇಲ್ಲದೆ ಇಂತಹ ಅಕ್ರಮಗಳೆಲ್ಲಾ ನಡೆಯುವುದಿಲ್ಲ' ಎಂದು ಕಿಡಿಕಾರಿದ ನ್ಯಾಯಪೀಠ, 'ಆಯೋಗದ ಯಾವ್ಯಾವ ಸದಸ್ಯರು ಮತ್ತು ಸಿಬ್ಬಂದಿ ವಿರುದ್ಧ ಎಷ್ಟು ಕ್ರಿಮಿನಲ್ ಕೇಸುಗಳು ವಿಚಾರಣೆಗೆ ಬಾಕಿ ಇವೆ. ಅವೆಲ್ಲಾ ಯಾವ ಹಂತದಲ್ಲಿವೆ ಎಂಬ ವಿವರಗಳನ್ನು ಮುಂದಿನ ವಿಚಾರಣೆ ವೇಳೆಗೆ ಒದಗಿಸಿ' ಎಂದು ಅಡ್ವೊಕೇಟ್ ಜನರಲ್ ಅವರಿಗೆ ನಿರ್ದೇಶಿಸಿ ವಿಚಾರಣೆ ಮುಂದೂಡಿತು.

ಪಿಡಿಒ ವರ್ಗಾವಣೆಗೆ ಕೌನ್ಸೆಲಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ (ಪಿಡಿಒ) ವರ್ಗಾವಣೆಯನ್ನು ಕೌನ್ಸೆಲಿಂಗ್ ಮೂಲಕ ನಡೆಸಲು ಗ್ರಾಮೀಣಾಭಿವೃದ್ಧಿ ಇಲಾಖೆ ಸುತ್ತೋಲೆ ಹೊರಡಿಸಿದೆ.

ಪಿಡಿಒ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಗ್ರೇಡ್-1, ಕಾರ್ಯದರ್ಶಿ ಗ್ರೇಡ್-2, ದ್ವಿತೀಯ ದರ್ಜೆ ಲೆಕ್ಕ ಸಹಾಯಕರನ್ನು ಇದೇ ಮೊದಲ ಬಾರಿ ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಮಾಡಲು ತಿದ್ದುಪಡಿ ಕರಡನ್ನು 2024ರ ಜೂನ್‌ನಲ್ಲೇ ಪ್ರಕಟಿಸಲಾಗಿತ್ತು. ಆಕ್ಷೇಪಣೆ, ಕೋರ್ಟ್ ಪ್ರಕರಣಗಳ ಕಾರಣದಿಂದ ಪ್ರಕ್ರಿಯೆ ವಿಳಂಬವಾಗಿತ್ತು.

ಈಗ ಪ್ರಕ್ರಿಯೆ ಪುನರಾರಂಭಗೊಂಡಿದ್ದು, ಆಯಾ ಜಿಲ್ಲೆಯ ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿಗಳು ವೆಬ್‌ಸೈಟ್‌ನಲ್ಲಿರುವ ದತ್ತಾಂಶಗಳ ಪರಿಶೀಲನೆಯನ್ನು ಇದೇ ಮಾರ್ಚ್ 10ರ ಒಳಗೆ ಪೂರ್ಣಗೊಳಿಸಬೇಕು. 15ರ ಒಳಗೆ ಆಕ್ಷೇಪಣೆಗಳ ಪರಿಶೀಲನೆ ನಡೆಸಬೇಕು. 19ರ ಒಳಗೆ ಎಲ್ಲ ಸಿಇಒಗಳು ಅನುಮೋದನೆ ನೀಡಬೇಕು ಎಂದು ಸೂಚಿಸಲಾಗಿದೆ.

ಉತ್ಸವ ತಿರುವನಂತಪುರದಲ್ಲಿ ಅಟ್ಟುಕಾಲ ಪೊಂಗಾಲ ಉತ್ಸವದ ಅಂಗವಾಗಿ ಅಟ್ಟುಕಾಲ ದೇವಿ ದೇವಸ್ಥಾನದಲ್ಲಿ ಗುರುವಾರ ಭಕ್ತರು 'ನಾರಂಗಾವಿಳಕ್ಕು' ವಿಧಿಯನ್ನು ನೆರವೇರಿಸಿದರು –ಪಿಟಿಐ ಚಿತ್ರ

ಯುಎಇ: ಬೆನ್ನು ಬೆನ್ನಿಗೆ ಶಿಕ್ಷೆ ಜಾರಿ; ಕುಟುಂಬದವರಿಗೆ ಆತಂಕ

29 ಭಾರತೀಯರಿಗೆ ಗಲ್ಲು ಶಿಕ್ಷೆ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಯುಎಇಯಲ್ಲಿ ಬೆನ್ನು ಬೆನ್ನಿಗೆ ಮರಣ ದಂಡನೆ ಶಿಕ್ಷೆ ಜಾರಿಗೊಳಿಸಲಾಗುತ್ತಿದೆ ಎಂಬ ವರದಿಯು, ಭಾರತದ ಅನೇಕ ಕುಟುಂಬಗಳಿಗೆ ಕಳವಳ ಉಂಟುಮಾಡಿದೆ. 2025ರ ಫೆಬ್ರುವರಿ ಅಂತ್ಯದವರೆಗಿನ ಮಾಹಿತಿ ಪ್ರಕಾರ ಯುಎಇಯಲ್ಲಿ ಭಾರತದ 29 ಮಂದಿ ಮರಣದಂಡನೆಗೆ ಗುರಿಯಾಗಿದ್ದಾರೆ.

ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ಕೀರ್ತಿ ವರ್ಧನ್ ಸಿಂಗ್ ಅವರು ಫೆ.13ರಂದು ರಾಜ್ಯಸಭೆಗೆ ನೀಡಿದ ಮಾಹಿತಿಯಂತೆ, ಭಾರತದ ಒಟ್ಟು 54 ಮಂದಿ ವಿದೇಶಗಳಲ್ಲಿ ಮರಣ ದಂಡನೆ ಎದುರಿಸುತ್ತಿದ್ದಾರೆ. ಅವುಗಳಲ್ಲಿ ಅತಿ ಹೆಚ್ಚು ಯುಎಇಯಲ್ಲಿ ಆಗಿದ್ದು (29), ಸೌದಿ ಅರೇಬಿಯಾದಲ್ಲಿ 12 ಭಾರತೀಯರು ಗಲ್ಲು ಎದುರಿಸುತ್ತಿದ್ದಾರೆ.

ಯುಎಇಯಲ್ಲಿ ಈಚೆಗೆ ಮರಣ ದಂಡನೆಗೆ ಗುರಿಯಾದ ಉತ್ತರ ಪ್ರದೇಶದ ಒಬ್ಬ ಮಹಿಳೆ ಮತ್ತು ಕೇರಳದ ಇಬ್ಬರು ಪುರುಷರು ಈ 29 ಮಂದಿಯಲ್ಲಿ ಸೇರಿದ್ದಾರೆ.

'ವಿದೇಶಿ ಪ್ರಜೆಯ ಮರಣದಂಡನೆಯನ್ನು ಜಾರಿಗೊಳಿಸುವ ಮುನ್ನ ಆಯಾ ದೇಶದವರು ಅವರ ಕುಟುಂಬದವರಿಗೆ ಮಾಹಿತಿ ನೀಡಬೇಕು' ಎಂದು ಈ ಪ್ರಶ್ನೆಯನ್ನು ರಾಜ್ಯಸಭೆಯಲ್ಲಿ ಎತ್ತಿದ ಸದಸ್ಯ ಹ್ಯಾರಿಸ್ ಬೀರಾನ್ 'ಪ್ರಜಾವಾಣಿ'ಗೆ ತಿಳಿಸಿದರು.

'ಆದರೆ ಯುಎಇಯಲ್ಲಿ ಮೂವರು ಭಾರತೀಯರ ಗಲ್ಲು ಶಿಕ್ಷೆ ಜಾರಿಗೊಳಿಸುವಾಗ ಈ ನಿಯಮವನ್ನು ಪಾಲಿಸಲಾಗಿಲ್ಲ. ಆದ್ದರಿಂದ ಕೇಂದ್ರ ಸರ್ಕಾರವು ಈ ವಿಷಯವನ್ನು ಪರಿಗಣಿಸಬೇಕು' ಎಂದು ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್‌ಅನ್ನು ಪ್ರತಿನಿಧಿಸುವ ಬೀರಾನ್ ಹೇಳಿದರು.

ಅರಬ್ ದೇಶಗಳಲ್ಲಿ ಮರಣ ದಂಡನೆ ಎದುರಿಸುತ್ತಿರುವ ಮಹಿಳೆ ಸೇರಿ ಕೇರಳದ ಇಬ್ಬರ ಬಿಡುಗಡೆಗಾಗಿ ನಡೆದಿರುವ ಪ್ರಯತ್ನಗಳು ಈಗಾಗಲೇ ಸಾಕಷ್ಟು ಸುದ್ದಿಯಾಗಿವೆ. ಸಂತ್ರಸ್ತ ಕುಟುಂಬಕ್ಕೆ ಪರಿಹಾರದ ಹಣ (ಬ್ಲಡ್ ಮನಿ) ಪಾವತಿಸುವ ಮೂಲಕ ಅವರ ಬಿಡುಗಡೆಗೆ ಪ್ರಯತ್ನ ಮುಂದುವರಿದಿದೆ.

ಯೆಮನ್‌ನಲ್ಲಿ ತನ್ನ ವ್ಯವಹಾರ ಪಾಲುದಾರ ತಲಾಲ್ ಅಬ್ದು ಮಹ್ದಿ ಅವರನ್ನು ಕೊಲೆ ಮಾಡಿದ್ದಕ್ಕಾಗಿ ಕೇರಳದ 36 ವರ್ಷದ ನರ್ಸ್ ನಿಮಿಷ ಪ್ರಿಯಾ ಮರಣದಂಡನೆ ಎದುರಿಸುತ್ತಿದ್ದಾರೆ. ಮಹ್ದಿ ಕುಟುಂಬಕ್ಕೆ ಪರಿಹಾರವಾಗಿ ಸುಮಾರು ₹34 ಲಕ್ಷ ಈಗಾಗಲೇ ನೀಡಲಾಗಿದೆ.

₹ 34 ಕೋಟಿ ಸಂಗ್ರಹ: ಸೌದಿ ಅರೇಬಿಯಾದಲ್ಲಿ ಮರಣದಂಡನೆಗೆ ಗುರಿಯಾಗಿರುವ ಕೇರಳದ ಚಾಲಕ ಅಬ್ದುಲ್ ರಹೀಂ ಅವರ ಬಿಡುಗಡೆ ಕೂಡಾ ತಡವಾಗಿದೆ. 15 ವರ್ಷದ ಬಾಲಕನನ್ನು ಕೊಂದ ಪ್ರಕರಣದಲ್ಲಿ ಅವರಿಗೆ ರಿಯಾದ್‌ನ ನ್ಯಾಯಾಲಯ ಗಲ್ಲು ಶಿಕ್ಷೆ ವಿಧಿಸಿದೆ. ಬಾಲಕನ ಕುಟುಂಬವು ಪರಿಹಾರವಾಗಿ ₹ 34 ಕೋಟಿ ಪಡೆದು ರಹೀಂಗೆ ಕ್ಷಮಾದಾನ ನೀಡಿದೆ. ಕೇರಳದಲ್ಲಿ ದೇಣಿಗೆ ಮೂಲಕ ಈ ಮೊತ್ತ ಸಂಗ್ರಹಿಸಲಾಗಿದೆ.

ಇಬ್ಬರು ಮಲಯಾಳಿಗಳಿಗೆ ಗಲ್ಲು

ಅರಬ್ ಸಂಯುಕ್ತ ಸಂಸ್ಥಾನದಲ್ಲಿ (ಯುಎಇ) ಮರಣದಂಡನೆಗೆ ಗುರಿಯಾಗಿದ್ದ ಇಬ್ಬರು ಮಲಯಾಳಿಗಳನ್ನು ರಕ್ಷಿಸಲು ಇಲ್ಲಿನ ಅನಿವಾಸಿ ಭಾರತೀಯರು ನಡೆಸಿದ ಹೋರಾಟ ವ್ಯರ್ಥವಾಗಿದೆ.

ಪ್ರತ್ಯೇಕ ಪ್ರಕರಣದಲ್ಲಿ ಇಬ್ಬರನ್ನು ಹತ್ಯೆಗೈದ ಆರೋಪದ ಮೇಲೆ ಕಾಸರಗೋಡು ಜಿಲ್ಲೆಯ ಚೀಮೇನಿಯ ಪೊಡವೂರ್ ನಿವಾಸಿ ಮುರಳೀಧರನ್ (43) ಹಾಗೂ ಕಣ್ಣೂರು ಜಿಲ್ಲೆಯ ತಲಶ್ಶೇರಿಯ ಕುನ್ನೋತ್ತ್‌ನ ಮೊಹಮ್ಮದ್ ರೀನಶ್ (28) ಅವರಿಗೆ ಗುರುವಾರ ಮರಣದಂಡನೆ ಶಿಕ್ಷೆ ವಿಧಿಸಲಾಗಿದೆ.

ಮುರಳೀಧರನ್‌ಗೆ ತಂದೆ ಕೇಶವನ್, ತಾಯಿ ಜಾನಕಿ, ಕಿರಿ ಸಹೋದರ ಮುಕೇಶ್ ಇದ್ದಾರೆ. ಕಿರಿಯ ಸಹೋದರಿಗೆ ಮದುವೆಯಾಗಿದೆ. ಅವರ ಅಂತಿಮ ಸಂಸ್ಕಾರ ನಡೆಸಲು ಯುಎಇಗೆ ಹೋಗುವ ಯಾವುದೇ ಆಲೋಚನೆಯಿಲ್ಲ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

2006ರಲ್ಲಿ ಮುರಳೀಧರನ್ ಅವರು ಕೆಲಸಕ್ಕಾಗಿ ಯುಎಇಗೆ ತೆರಳಿದ್ದರು. ಒಮ್ಮೆಯೂ ಮನೆಗೆ ಬಂದಿರಲಿಲ್ಲ. 2009ರಲ್ಲಿ ಮಲಪ್ಪುರಂ ತಿರೂರ್‌ನ ನಿವಾಸಿಯೊಬ್ಬರನ್ನು ಕೊಂದ ಆರೋಪದ ಮೇಲೆ ಪೊಲೀಸ್ ಕಸ್ಟಡಿಗೆ ಪಡೆಯಲಾಗಿತ್ತು.

ಈ ವೇಳೆ ವಿದೇಶದಲ್ಲಿದ್ದ ಅವರ ತಂದೆ ಜೈಲಿನಲ್ಲಿದ್ದ ಮಗನನ್ನು ಭೇಟಿಯಾಗಿದ್ದರು. ಇದಾದ ಬಳಿಕ ಆತನನ್ನು ಜೈಲಿನಿಂದ ಹೊರತರಲು ಯತ್ನಿಸಿದ್ದರು. ನಂತರ ಅನಿವಾಸಿ ಭಾರತೀಯರನ್ನು ಭೇಟಿಯಾಗಿದ್ದರು. ಕಾನೂನು ಹೋರಾಟಕ್ಕಾಗಿ, ಒಂದಿಷ್ಟು ಆಸ್ತಿ ಮಾರಾಟ ಮಾಡಿದ್ದರು.

'2009ರಿಂದಲೂ ಬದುಕಿಸಲು ಪ್ರಯತ್ನ ನಡೆಸಿದ್ದೆನು. ಕೇರಳ ಸರ್ಕಾರದ ನೆರವು ಕೋರಿದ್ದೆನು. ಕೆಲವು ದಿನಗಳ ಹಿಂದೆ ಕರೆಮಾಡಿದ್ದ ಆತನೇ ಗಲ್ಲುಶಿಕ್ಷೆ ಜಾರಿಯಾಗುವ ಕುರಿತು ತಿಳಿಸಿದ್ದ' ಎಂದು ಕೇಶವನ್ ಅವರು ಮಾಧ್ಯಮಗಳಿಗೆ ಮಾಹಿತಿ ನೀಡಿದ್ದರು.

'ಆತನ ಸಾವಿನ ಸುದ್ದಿ ಕೇಳಿ ಕುಟುಂಬ ಆಘಾತಕ್ಕೊಳಗಾಗಿದೆ' ಎಂದು ಸ್ಥಳೀಯ ಪಂಚಾಯಿತಿ ಸದಸ್ಯೆ ಶೋಭಾನಾ ತಿಳಿಸಿದರು.

2023ರ ಫೆಬ್ರುವರಿ ತಿಂಗಳಲ್ಲಿ ಯುಎಇ ನಿವಾಸಿಗೆ ಚೂರಿ ಇರಿದು ಹತ್ಯೆ ಮಾಡಿದ ಆರೋಪದಲ್ಲಿ ಕಣ್ಣೂರು ಜಿಲ್ಲೆಯ ತಲಶ್ಶೇರಿಯ ರೀನಶ್ ಕೂಡ ಮರಣದಂಡನೆ ಗುರಿಯಾಗಿದ್ದರು. ರೀನಶ್ ಅವರನ್ನು ಶಿಕ್ಷೆಯಿಂದ ಪಾರು ಮಾಡಲು ಕುಟುಂಬದ ಸದಸ್ಯರು ನಡೆಸಿದ ಪ್ರಯತ್ನಗಳು ಸಹ ವಿಫಲವಾಗಿವೆ.

ವಕ್ಫ್ ಮಸೂದೆಗೆ ವಿರೋಧ

ಒಂದನೇ ಪುಟದಿಂದ...

ಕೇಂದ್ರ ಸರ್ಕಾರದ ಉದ್ದೇಶಿತ ತಿದ್ದುಪಡಿಯು ಕಾಯ್ದೆಯ ಪ್ರಜಾ ಸತ್ತಾತ್ಮಕ ಸ್ವರೂಪಕ್ಕೆ ಧಕ್ಕೆ ಉಂಟು ಮಾಡುತ್ತದೆ. ವಕ್ಫ್ ಮಂಡಳಿಯಲ್ಲಿ ಪ್ರಜಾಸತ್ತಾತ್ಮಕವಾಗಿ ಚುನಾಯಿತ ಸದಸ್ಯರು ಇರುತ್ತಾರೆ. ಆದರೆ, ಅಧ್ಯಕ್ಷರನ್ನು ನಾಮನಿರ್ದೇಶನ ಮಾಡಲಾಗುತ್ತದೆ. ಮೂಲಭೂತ ಹಕ್ಕುಗಳು, ಸ್ವಾತಂತ್ರ್ಯ, ಒಕ್ಕೂಟ ವ್ಯವಸ್ಥೆ, ಜಾತ್ಯತೀತ, ಪ್ರಜಾಪ್ರಭುತ್ವ ಮತ್ತು ನಾಗರಿಕ ನಂಬಿಕೆಯ ಹಕ್ಕನ್ನು ರಕ್ಷಿಸಿಕೊಳ್ಳಬೇಕಾಗಿದೆ. ಈ ಎಲ್ಲ ಕಾರಣಗಳಿಂದ, ಸಂವಿಧಾನದ ಮೂಲಭೂತ ತತ್ವಗಳನ್ನು ಉಲ್ಲಂಘಿಸುವ ನಿಬಂಧನೆಗಳನ್ನು ಒಳಗೊಂಡಿರುವವಕ್ಫ್ (ತಿದ್ದುಪಡಿ) ಮಸೂದೆಯನ್ನು ಅಂಗೀಕರಿಸಲೇಬಾರದು ಎಂದು ಎರಡೂ ಸದನದಲ್ಲಿ ನಿರ್ಣಯ ಮಂಡಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ತಪಾಸಣೆ

ಎರಡನೇ ಮುಖಪುಟದಿಂದ...

2022ರಲ್ಲಿ ಈ ಕಚೇರಿಗಳಲ್ಲಿ ಪರಿಶೀಲನೆ ನಡೆಸಿ, ತನಿಖೆಗೆ ಆದೇಶಿಸಲಾಗಿತ್ತು. ಅದರ ಮುಂದುವರಿದ ಭಾಗವಾಗಿ ಗುರುವಾರ ದಿಢೀರ್ ತಪಾಸಣೆ ನಡೆಸಿದ್ದು, ಅಧಿಕಾರಿ ಮತ್ತು ಸಿಬ್ಬಂದಿ ಕರ್ತವ್ಯಲೋಪ ಎಸಗಿರುವುದು ಪತ್ತೆಯಾಗಿದೆ. ಹಾಜರಾತಿಗೆ ಸಹಿ ಹಾಕದಿರುವುದು, ಕಚೇರಿಯಲ್ಲಿ ಇರದಿರುವುದು ಮತ್ತು ನಗದು ವಹಿ ನಿರ್ವಹಣೆ ಮಾಡದಿರುವುದು ಪತ್ತೆಯಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೆಲ ಕಚೇರಿಗಳ ಮೇಲೆ ದಾಳಿ ನಡೆಸುತ್ತಿದ್ದಂತೆ ಅಧಿಕಾರಿಗಳು, ಮಧ್ಯವರ್ತಿಗಳು ಕಚೇರಿ ಬಿಟ್ಟು ಓಡಿಹೋಗಿದ್ದಾರೆ. ಒಂದು ಕಚೇರಿಯಲ್ಲಿ ಎಲ್ಲ ಸಿಬ್ಬಂದಿ ಪರಾರಿಯಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಒಳ್ಳೆಯವರಾಗಿರಿ. ಆದರೆ ಅದನ್ನು ಸಾಬೀತುಪಡಿಸುವುದರಲ್ಲೇ ನಿಮ್ಮ ಜೀವನ ಮತ್ತು ಸಮಯವನ್ನು ವ್ಯರ್ಥ ಮಾಡಬೇಡಿ. -ಗೌತಮ ಬುದ್ಧ

ಶಾಲೆಗಳಲ್ಲಿ ಸ್ಮಾರ್ಟ್‌ಫೋನ್ ಬಳಕೆ ಜವಾಬ್ದಾರಿಯುತ ನಡೆಯಲ್ಲಿದೆ ಹಿತ

'ಡಿಜಿಟಲ್ ಸಾಕ್ಷರತೆ'ಯನ್ನು ಕೂಡ 'ಸಾಕ್ಷರತೆ'ಯ ಭಾಗವಾಗಿಯೇ ಕಾಣಲಾಗುತ್ತಿರುವ ಪ್ರಸಕ್ತ ಸಂದರ್ಭದಲ್ಲಿ, ಶಾಲೆಗಳಲ್ಲಿ ಮಕ್ಕಳು ಸ್ಮಾರ್ಟ್‌ಫೋನ್ ಬಳಸುವುದರ ಮೇಲೆ ಸಂಪೂರ್ಣ ನಿಷೇಧ ವಿಧಿಸಲು ದೆಹಲಿ ಹೈಕೋರ್ಟ್ ನಿರಾಕರಿಸಿದೆ. ಆದರೆ ಶಾಲೆಗಳಲ್ಲಿ ಮಕ್ಕಳು ಸ್ಮಾರ್ಟ್‌ಫೋನ್ ಬಳಸುವುದು ಜವಾಬ್ದಾರಿಯುತವಾಗಿರಬೇಕು ಎನ್ನುವ ಮೂಲಕ ಹೈಕೋರ್ಟ್, ಕಾಲದ ಅಗತ್ಯಕ್ಕೆ ಸ್ಪಂದಿಸುವ ಕೆಲಸ ಮಾಡಿದೆ. ಶಾಲೆಗಳಲ್ಲಿ ವಿದ್ಯಾರ್ಥಿಗಳು ಸ್ಮಾರ್ಟ್‌ಫೋನ್ ಬಳಸುವುದು ಯಾವ ಬಗೆಯಲ್ಲಿ ಇರಬೇಕು ಎಂಬ ವಿಚಾರವಾಗಿ ಹೈಕೋರ್ಟ್ ಒಂದಿಷ್ಟು ಮಾರ್ಗಸೂಚಿಗಳನ್ನು ಆದೇಶದಲ್ಲಿ ಹೇಳಿದೆ. ಈ ಮಾರ್ಗಸೂಚಿಗಳು ಸ್ಮಾರ್ಟ್‌ಫೋನ್‌ನ ಜವಾಬ್ದಾರಿಯುತ ಬಳಕೆಗೆ ಒತ್ತು ನೀಡಿವೆ. ಇವು ಸ್ವಾಗತಾರ್ಹವಾದ ಮಾರ್ಗಸೂಚಿಗಳು. ಸ್ಮಾರ್ಟ್‌ಫೋನ್‌ಗಳು ಇಂದು ನಿತ್ಯಜೀವನದ ಅವಿಭಾಜ್ಯ ಅಂಗ. ತಂದೆ-ತಾಯಿ ಅನುದಿನ ಬಳಕೆ ಮಾಡುವ ಸ್ಮಾರ್ಟ್‌ಫೋನ್‌ಗಳನ್ನು ಮಕ್ಕಳು ಕೂಡ ಶಾಲೆಗಳಲ್ಲಿ ಬಳಸಬಾರದು ಎಂದು ಬಯಸುವುದು ಸದ್ಯದ ಸ್ಥಿತಿಯಲ್ಲಿ ಅಪೇಕ್ಷಣೀಯ ಅಲ್ಲ. ಇಂಟರ್ನೆಟ್ ಮೂಲಕ ಲಭ್ಯವಾಗುವ ಅಗಾಧ ಮಾಹಿತಿ, ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನವನ್ನು ಹಿತಮಿತವಾಗಿ ಬಳಸಿಕೊಂಡು ಕಲಿಕೆಯ ಪ್ರಕ್ರಿಯೆಯನ್ನು ಇನ್ನಷ್ಟು ಚೇತೋಹಾರಿಯಾಗಿ ಮಾಡುವುದು, ಆನ್‌ಲೈನ್ ಕಲಿಕೆಯ ಸಾಧ್ಯತೆಗಳನ್ನು ಬಳಸಿ ಹಳ್ಳಿಯ ಮೂಲೆಯಲ್ಲಿ ಇರುವ ಮಕ್ಕಳಿಗೂ ಉತ್ಕೃಷ್ಟವಾದ ಕಲಿಕಾ ಸಾಮಗ್ರಿಗಳು ಸಿಗುವಂತೆ ಮಾಡುವುದು, ಸ್ಮಾರ್ಟ್‌ಫೋನ್‌ಗಳನ್ನು ಬಳಸಿ ಮಕ್ಕಳ ಸುರಕ್ಷತೆಯನ್ನು ಖಾತರಿಪಡಿಸಿ ಕೊಳ್ಳುವುದರತ್ತ ಶಿಕ್ಷಣ ತಜ್ಞರ ಆಲೋಚನೆಗಳು ಹರಿಯುತ್ತಿರುವ ಈ ಹೊತ್ತಿನಲ್ಲಿ, ಶಾಲೆಗಳಲ್ಲಿ ಮಕ್ಕಳು ಸ್ಮಾರ್ಟ್‌ಫೋನ್ ಬಳಸುವುದರ ಮೇಲೆ ಸಂಪೂರ್ಣ ನಿಷೇಧ ಹೇರುವುದು ಪ್ರತಿಗಾಮಿ ನಡೆಯೇ ಆಗುತ್ತದೆ.

ಸ್ಮಾರ್ಟ್‌ಫೋನ್‌ಗಳ ಜವಾಬ್ದಾರಿಯುತ ಬಳಕೆಯನ್ನು ಮಕ್ಕಳಿಗೆ ಹೇಳಿಕೊಡುವ ವಿಷಯದಲ್ಲಿ ಶಿಕ್ಷಕರು ಮತ್ತು ಪಾಲಕರ ಹೊಣೆಗಾರಿಕೆ ದೊಡ್ಡದಿದೆ

ಆದರೆ ಕೋರ್ಟ್‌ನ ಆದೇಶದಲ್ಲಿ ಉಲ್ಲೇಖವಾಗಿರುವಂತೆ ಸ್ಮಾರ್ಟ್‌ಫೋನ್‌ಗಳ ಬಳಕೆಯು ಬಹಳ ಜವಾಬ್ದಾರಿಯುತವಾಗಿರಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಮಕ್ಕಳು, ಹದಿಹರೆಯದವರು ಸ್ಮಾರ್ಟ್‌ಫೋನ್‌ಗಳನ್ನು ಬಳಸುವುದರಲ್ಲಿ ಒಳಿತೂ ಇದೆ, ಕೆಡುಕೂ ಇದೆ ಎಂಬುದು ಸತ್ಯ. ಹೀಗಿದ್ದರೂ ಕೆಡುಕುಗಳನ್ನು ನಿವಾರಿಸುವ ಉದ್ದೇಶದಿಂದ ತಂತ್ರಜ್ಞಾನದ ಬಳಕೆಯ ಮೇಲೆ ಸಂಪೂರ್ಣವಾಗಿ ನಿಷೇಧ ಹೇರುವುದು, ಆ ತಂತ್ರಜ್ಞಾನದ ಒಳಿತುಗಳನ್ನು ಕೂಡ ನಿರಾಕರಿಸುವ ನಡೆಯಾಗುತ್ತದೆ. ಇದರಿಂದ ಲಾಭ ಇಲ್ಲ. ಶಾಲಾ ಆಡಳಿತ ವ್ಯವಸ್ಥೆಗಳು, ಶಾಲಾ ಶಿಕ್ಷಕರು ಈ ವಿಚಾರದಲ್ಲಿ ಹೊಸಕಾಲಕ್ಕೆ ಸ್ಪಂದಿಸುವ ಕೆಲಸ ಮಾಡಬೇಕು. ಸ್ಮಾರ್ಟ್ ಫೋನ್‌ಗಳನ್ನು ಜವಾಬ್ದಾರಿ ಯುತವಾಗಿ ಬಳಕೆ ಮಾಡುವುದು ಹೇಗೆ ಎಂಬ ಬಗ್ಗೆ ಶಿಕ್ಷಕರು ಮತ್ತು ಶಾಲೆಗಳ ಮುಖ್ಯಸ್ಥರು ಮಕ್ಕಳಿಗೆ ಪಾಠ ಹೇಳುವ ಕೆಲಸ ಮಾಡಬೇಕು. ಇದಕ್ಕಾಗಿ ರಾಜ್ಯ ಅಥವಾ ರಾಷ್ಟ್ರ ಮಟ್ಟದಲ್ಲಿ ಸ್ಪಷ್ಟವಾದ ಮಾರ್ಗಸೂಚಿಗಳನ್ನು ರೂಪಿಸುವ ಕೆಲಸವು ಸರ್ಕಾರಗಳಿಂದ ಆಗಬೇಕು. ಸ್ಮಾರ್ಟ್‌ಫೋನ್‌ಗಳ ಜವಾಬ್ದಾರಿಯುತ ಬಳಕೆಯನ್ನು ಹೇಳಿಕೊಡುವ ಕೆಲಸದಲ್ಲಿ ಪಾಲಕರ ಹೊಣೆಗಾರಿಕೆಯೂ ಬಹಳ ದೊಡ್ಡದಿದೆ. ಆ ಜವಾಬ್ದಾರಿಯನ್ನು ಅವರು ಮುತುವರ್ಜಿಯಿಂದ ನಿಭಾಯಿಸಬೇಕು.

ಮಕ್ಕಳು ಸ್ಮಾರ್ಟ್‌ಫೋನ್ ಬಳಕೆ ಮಾಡುವ ಸಂದರ್ಭದಲ್ಲಿ ಎದುರಾಗಬಹುದಾದ ಬಹುದೊಡ್ಡ ಅಪಾಯಗಳಲ್ಲಿ ಒಂದು, ಅವರು ಇಂಟರ್ನೆಟ್ ಮೂಲಕ ಅಪರಿಚಿತರಿಂದ ಕಿರುಕುಳಕ್ಕೆ ಗುರಿಯಾಗುವುದು. ಇದು ಮಕ್ಕಳ ಸೂಕ್ಷ್ಮ ಮನಸ್ಸಿನ ಮೇಲೆ ಬಹಳ ಕೆಟ್ಟ ಪರಿಣಾಮ ಉಂಟುಮಾಡಬಹುದು. ಇಂತಹ ಪರಿಸ್ಥಿತಿ ಎದುರಾದರೆ ಅದನ್ನು ನಿರ್ವಹಿಸುವುದು ಹೇಗೆ, ಅದನ್ನು ತಕ್ಷಣ ಪಾಲಕರ ಗಮನಕ್ಕೆ ತರುವುದರ ಮಹತ್ವ ಏನು ಎಂಬುದನ್ನು ಮಕ್ಕಳಿಗೆ ತಿಳಿಹೇಳುವ ಕೆಲಸ ಆಗಬೇಕು. ಅಲ್ಲದೆ, ಮಕ್ಕಳು ಇಂಟರ್ನೆಟ್ ಮೂಲಕ ವಿವಿಧ ವಿಷಯಗಳ ಬಗ್ಗೆ ಶೋಧ ನಡೆಸುವಾಗ ಅವರ ವಯಸ್ಸಿಗೆ ಸೂಕ್ತವಲ್ಲದ ವಸ್ತು-ವಿಷಯವು ಅಲ್ಲಿ ಕಾಣಿಸಿಕೊಳ್ಳದೇ ಇರುವಂತೆ ಮಾಡಲು ಅಗತ್ಯವಿರುವ ನಿಯಂತ್ರಣ ವ್ಯವಸ್ಥೆಯನ್ನು ಸ್ಮಾರ್ಟ್‌ಫೋನ್‌ಗೆ ಅಳವಡಿಸಬೇಕಿರುವುದು ಪಾಲಕರ ಕಡೆಯಿಂದ ಆಗಬೇಕಿರುವ ಮತ್ತೊಂದು ಮಹತ್ವದ ಕೆಲಸ. ತಮ್ಮ ಮಗು ಸ್ಮಾರ್ಟ್‌ಫೋನ್ ಅನ್ನು ಹೇಗೆ ಬಳಕೆ ಮಾಡುತ್ತಿದೆ ಎಂಬ ಬಗ್ಗೆ ಮನೆಗಳಲ್ಲಿ ಪಾಲಕರು ನಿಗಾ ಇರಿಸಬೇಕು. ಮನೆಯಲ್ಲಿ ಮಗು ಸ್ಮಾರ್ಟ್‌ಫೋನ್ ಬಳಕೆ ಮಾಡುವ ಬಗೆ ಹೇಗೆ ಇರುತ್ತದೆ ಎಂಬುದು ಆ ಮಗು ಅದನ್ನು ಶಾಲೆಯಲ್ಲಿ ಹೇಗೆ ಬಳಸಲು ಬಯಸುತ್ತದೆ ಎಂಬುದರ ಮೇಲೆ ಪರಿಣಾಮ ಉಂಟುಮಾಡುತ್ತದೆ. ಹೀಗಾಗಿ, ಸ್ಮಾರ್ಟ್‌ಫೋನ್ ಬಳಕೆಗೆ ಮಗುವಿಗೆ ಅವಕಾಶ ಕೊಡುವ ಹಾಗೂ ಬಳಕೆಯ ಮೇಲೆ ಸದಾಶಯದಿಂದ ಕೆಲವು ನಿರ್ಬಂಧಗಳನ್ನು ವಿಧಿಸುವ ಕೆಲಸದಲ್ಲಿ ಪಾಲಕರು ಮತ್ತು ಶಿಕ್ಷಕರು ಸಮನ್ವಯದಿಂದ ಮುಂದಕ್ಕೆ ಸಾಗಬೇಕು.

ದಿನದ ಟ್ವೀಟ್

ಆರೋಗ್ಯಕರ ಸ್ಪರ್ಧೆ ಯಾಕೆ ಬೇಡ?

ಆಟೊರಿಕ್ಷಾ ಸೇವೆ ಪಡೆಯುತ್ತಿರುವ ನಾಗರಿಕರು ಬೈಕ್ ಟ್ಯಾಕ್ಸಿಗಳನ್ನು ಬಯಸುತ್ತಾರೆ, ನನ್ನನ್ನೂ ಒಳಗೊಂಡಂತೆ. ನಾನು ಒಬ್ಬನೇ ಪ್ರಯಾಣಿಸಬೇಕಾಗಿದ್ದಾಗ ಮೂರು ಮಂದಿಗೆ ತಗಲುವಷ್ಟು ಮೊತ್ತವನ್ನು (ಆಟೊರಿಕ್ಷಾದಲ್ಲಿ) ನಾನೇಕೆ ಕೊಡಬೇಕು? ಅದಕ್ಕಿಂತ ಹೆಚ್ಚಾಗಿ, ಈ ರಿಕ್ಷಾದವರು ಮೀಟರ್ ವ್ಯವಸ್ಥೆಗೆ ಬೆಲೆ ಕೊಡುವುದಿಲ್ಲ. ಅಷ್ಟೇ ಅಲ್ಲ ಓಲಾ, ಉಬರ್, 'ನಮ್ಮ ಯಾತ್ರಿ'ಯಂತಹ ಆ್ಯಪ್‌ಗಳ ಮೂಲಕ ಬರುವ ಕೋರಿಕೆಗಳನ್ನೂ ಅವರು ಮನಸೋಇಚ್ಛೆ ರದ್ದುಪಡಿಸುತ್ತಾರೆ.

(ಬೈಕ್ ಟ್ಯಾಕ್ಸಿ ವಿರೋಧಿಸಿ ಹಾಗೂ ರಿಕ್ಷಾ ಪ್ರಯಾಣ ದರ ಪರಿಷ್ಕರಣೆಗೆ ಒತ್ತಾಯಿಸಿ ಬೆಂಗಳೂರು ಆಟೊರಿಕ್ಷಾ ಒಕ್ಕೂಟದವರು ಪ್ರತಿಭಟನೆಗೆ ಮುಂದಾಗಿರುವುದಕ್ಕೆ ಪ್ರತಿಕ್ರಿಯೆ)

ಸಿ.ಎಸ್.ಲಕ್ಷ್ಮೀಶ, ಶಿಕ್ಷಕ

ಕಿಡಿನುಡಿ



ಬಸ್, ಮೆಟ್ರೊ ಪ್ರಯಾಣ ದರ ಏರಿಕೆ ಮಾಡಿದರೂ ಜನ ತಲೆಕೆಡಿಸಿಕೊಂಡಿಲ್ಲ. ಸರ್ಕಾರದ ವೈಫಲ್ಯಗಳು, ಅಕ್ರಮಗಳ ಕುರಿತ ಚರ್ಚೆ ಜನರಿಗೇ ಬೇಕಿಲ್ಲ. ಹೀಗಿದ್ದಾಗ ವಿರೋಧ ಪಕ್ಷಗಳು ಏನು ಮಾಡುತ್ತವೆ? ಗ್ಯಾರಂಟಿ ಯೋಜನೆಗಳಿಂದ ಜನ ನೆಮ್ಮದಿಯಾಗಿ ಇರಬೇಕಲ್ಲವೇ?

ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

25 ವರ್ಷಗಳ ಹಿಂದೆ

ಮಂಗಳವಾರ, 7-3-2000

• ಆರ್‌ಎಸ್‌ಎಸ್ ವಿವಾದ: ಎನ್‌ಡಿಎ ಮಾತುಕತೆ ವಿಫಲ

ನವದೆಹಲಿ, ಮಾರ್ಚ್ 6 (ಪಿಟಿಐ, ಯುಎನ್‌ಐ)– ಒಂದು ವಾರದಿಂದ ಸಂಸತ್ತಿನ ಉಭಯ ಸದನಗಳಲ್ಲಿ ಕೋಲಾಹಲಕ್ಕೆ ಕಾರಣವಾಗಿರುವ ಆರ್‌ಎಸ್‌ಎಸ್ ವಿವಾದದ ಕುರಿತು ನಿಖರ ತೀರ್ಮಾನ ಕೈಗೊಳ್ಳಲು ಪ್ರಧಾನಿ ವಾಜಪೇಯಿ ಅವರು ಕರೆದಿದ್ದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟದ (ಎನ್‌ಡಿಎ) ಸಭೆ ವಿಫಲವಾಗಿದೆ.

ಸಂಸತ್ ಕಲಾಪ ಆರಂಭವಾಗುವುದಕ್ಕೆ ಮೊದಲು ನಡೆದ ಸಭೆಯಲ್ಲಿ ಬಹುತೇಕ ಎನ್‌ಡಿಎ ಘಟಕ ಪಕ್ಷಗಳು, ಸರ್ಕಾರಿ ನೌಕರರು ಆರ್‌ಎಸ್‌ಎಸ್ ಚಟುವಟಿಕೆಯಲ್ಲಿ ಪಾಲ್ಗೊಳ್ಳಬಹುದು ಎಂದು ಗುಜರಾತ್ ಸರ್ಕಾರ ಹೊರಡಿಸಿದ ಆದೇಶವನ್ನು ವಿರೋಧಿಸಿದವು ಎಂದು ಎನ್‌ಡಿಎ ಮೂಲಗಳು ತಿಳಿಸಿವೆ. ಇದರಿಂದಾಗಿ ಈ ವಿಷಯದ ಬಗ್ಗೆ ನಿರ್ಣಯವನ್ನು ಮತಕ್ಕೆ ಹಾಕಲು ಅವಕಾಶವಿರುವ ನಿಯಮ 184ರ ಅಡಿಯಲ್ಲಿ ಸಂಸತ್ತಿನಲ್ಲಿ ಚರ್ಚೆಗೆ ಅವಕಾಶ ನೀಡಬೇಕು ಎನ್ನುವ ಪ್ರತಿಪಕ್ಷಗಳ ಬೇಡಿಕೆಯನ್ನು ಈ ಪಕ್ಷಗಳು ವಿರೋಧಿಸಿದವು.

ಆರ್‌ಎಸ್‌ಎಸ್‌ಗೆ ಸಂಬಂಧಿಸಿದಂತೆ ಹೊರಡಿಸಿರುವ ಅಧಿಸೂಚನೆಯನ್ನು ಹಿಂತೆಗೆದುಕೊಳ್ಳುವಂತೆ ಬಿಜೆಪಿ ವರಿಷ್ಠ ಮಂಡಳಿಯು ಗುಜರಾತ್ ಸರ್ಕಾರಕ್ಕೆ ಸೂಚಿಸುವ ಸಂಭವ ಇಲ್ಲವೇ ಇಲ್ಲ ಎಂದು ಪಕ್ಷದ ಮುಖಂಡ ಎಂ.ವೆಂಕಯ್ಯ ನಾಯ್ಡು ಸುದ್ದಿಗಾರರಿಗೆ ತಿಳಿಸಿದ್ದಾರೆ.

50 ವರ್ಷಗಳ ಹಿಂದೆ

ಶುಕ್ರವಾರ, 7-3-1975

• ದೆಹಲಿಯಲ್ಲಿ ಐದು ಲಕ್ಷ ಜನರ ಬೃಹತ್ ಜಾಥಾ

ನವದೆಹಲಿ, ಮಾರ್ಚ್ 6– ತುರ್ತು ಪರಿಸ್ಥಿತಿ, ಬಿಹಾರ ವಿಧಾನಸಭೆ ರದ್ದು ಹಾಗೂ ಭ್ರಷ್ಟಾಚಾರ ಹತ್ತಿಕ್ಕುವ ಬೇಡಿಕೆಗಳ ಒತ್ತಾಯಕ್ಕಾಗಿ ಜಯಪ್ರಕಾಶ್ ನಾರಾಯಣ್ ಇಂದು ಐದು ಲಕ್ಷಕ್ಕೂ ಹೆಚ್ಚು ಜನರ ಭಾರಿ ಮೆರವಣಿಗೆಯನ್ನು ಸಂಸತ್ ಭವನಕ್ಕೆ ಕೊಂಡೊಯ್ದರು.

ಕಮ್ಯುನಿಸ್ಟೇತರ ವಿರೋಧ ಪಕ್ಷಗಳು ಮತ್ತು ಜನತಾ ಸಂಘರ್ಷ ಸಮಿತಿ ವ್ಯವಸ್ಥೆಗೊಳಿಸಿದ್ದ ಎಂಟು ಕಿಲೊಮೀಟರ್ ಉದ್ದದ ಚರಿತ್ರಾರ್ಹ ಮೆರವಣಿಗೆ ಕೆಂಪುಕೋಟೆಯಿಂದ ಹೊರಟಿತು. ಅಪ್ಪಟ ಬಿಳಿ ಖಾದಿ ಬಟ್ಟೆಯಿಂದ ಅಲಂಕರಿಸಿದ್ದ ತೆರೆದ ಜೀಪಿನಲ್ಲಿ ಜಯಪ್ರಕಾಶ್ ನಾರಾಯಣ್ ಕುಳಿತಿದ್ದರು.

• ಲೋಕೋಪಯೋಗಿ ಇಲಾಖೆ ಅಧಿಕಾರಿಗಳ ತನಿಖೆ ವಿವರ

ಬೆಂಗಳೂರು, ಮಾರ್ಚ್ 6– ಧಾರವಾಡ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯ 15 ಮಂದಿ ಅಧಿಕಾರಿಗಳನ್ನು ರಾಜ್ಯ ಸರ್ಕಾರ ವಿಚಾರಣೆಗೆ ಗುರಿಪಡಿಸಿದೆ.

ತಪ್ಪು ಅಳತೆ ಹಾಗೂ ವಾಸ್ತವಿಕವಾಗಿ ಕಾಮಗಾರಿ ಕೈಗೊಳ್ಳದೆ ಹಣ ಪಾವತಿ ಮಾಡಿದರೆಂಬ ಕಾರಣಗಳಿಗಾಗಿ ಈ ಅಧಿಕಾರಿಗಳನ್ನು ವಿಚಾರಣೆಗೆ ಗುರಿಪಡಿಸಲಾಗಿದೆ ಎಂದು ಸಚಿವರು, ಸುಮತಿ ಬಿ.ಮಡಿಮನ್ (ಕಾಂ–ಧಾರವಾಡ) ಅವರಿಗೆ ಇಂದು ವಿಧಾನ ಸಭೆಯಲ್ಲಿ ತಿಳಿಸಿದರು.

ಶೈಕ್ಷಣಿಕ ಪ್ರಗತಿ: ಖಾಸಗಿ ಶಾಲೆಯವರಿಗಿಂತ ಮುಂದಿದ್ದಾರೆ ಸರ್ಕಾರಿ ಶಾಲಾ ಮಕ್ಕಳು

ಸರ್ಕಾರಿ ಶಾಲೆ: ಕಲಿಕೆಯ ಸೆಲೆ

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಕ್ಯಾಂಪಸ್ ಸಂದರ್ಶನದ ವೇಳೆಯಲ್ಲಿ ಸಂದರ್ಶನಕ್ಕೆ ಹಾಜರಾಗಿದ್ದ ವಿದ್ಯಾರ್ಥಿಯೊಬ್ಬ ಸಂದರ್ಶಕ ಸಮಿತಿ ಸದಸ್ಯರ ಮೇಲೆ ಕೂಗಾಡುತ್ತಿದ್ದ. 'ಯಾಕೆ ಕೂಗಾಡುತ್ತಿದ್ದೀರಿ? ಏನಾಯಿತು?' ಎಂದು ಪ್ರಾಂಶುಪಾಲರು ಕೇಳಿದರು. 'ನೋಡಿ ಸರ್, ಇವರು ಕೇಳಿದ ಪ್ರಶ್ನೆಯೊಂದಕ್ಕೆ ನಾನು ಉತ್ತರಿಸಲಿಲ್ಲ. ಅದಕ್ಕೆ, ನೀವು ಕೋವಿಡ್ ಬ್ಯಾಚ್‌ನವರೇ ಅಂತ ಕೇಳಿ ಅವಮಾನಿಸುತ್ತಿದ್ದಾರೆ' ಎಂದ.

ಕಂಪನಿಯವರು 'ಸರ್, ನಾವೇನು ಸಂಕೀರ್ಣ ಪ್ರಶ್ನೆಯನ್ನು ಕೇಳಲಿಲ್ಲ, ತುಂಬಾ ಬೇಸಿಕ್ ಆದ ಮತ್ತು ವಿಷಯಕ್ಕೆ ಸಂಬಂಧಿಸಿದ ಪ್ರಶ್ನೆಯನ್ನೇ ಕೇಳಿದ್ದೆವು. ಆತನಿಂದ ಉತ್ತರ ಬರಲಿಲ್ಲ. ಮತ್ತೊಮ್ಮೆ ಪ್ರಯತ್ನ ಮಾಡಲು ಹೇಳಿದೆವು. ಆದರೆ ಆತ ಅದಕ್ಕೆ ತಯಾರಿರಲಿಲ್ಲ. ನಮ್ಮ ಅನುಭವದಂತೆ, ಸಾಮಾನ್ಯವಾಗಿ ಕೋವಿಡ್‌ನ ದಿನಗಳಲ್ಲಿ ಪದವಿ ಶಿಕ್ಷಣ ಮುಗಿಸಿದ ವಿದ್ಯಾರ್ಥಿಗಳು ತಮಗೆ ಉತ್ತರ ತಿಳಿಯದು ಎಂದು ಸುಮ್ಮನಾಗಿಬಿಡುತ್ತಾರೆ. ಕೋವಿಡ್-19 ಅವಧಿಯಲ್ಲಿ ಸರಿಯಾದ ತರಗತಿ ಪಾಠಗಳು ನಡೆಯದೆ ಕಲಿಕೆ ಸಾಧ್ಯವಾಗಿರಲಿಕ್ಕಿಲ್ಲ ಎಂಬ ಅರ್ಥದಲ್ಲಿ ಆ ಪ್ರಶ್ನೆ ಕೇಳಿದೆವೇ ವಿನಾ ಅವಮಾನಿಸುವ ಯಾವ ಉದ್ದೇಶವೂ ಇರಲಿಲ್ಲ' ಎಂದರು.

'ತರಗತಿ ಪಾಠಗಳು ನಡೆಯದಿದ್ದರೆ ನಮ್ಮದೇನು ತಪ್ಪು? ನಾವೇನು ಕಾಲೇಜು ನಡೆಸಬೇಡಿ ಅಂತ ಕೇಳಿಕೊಂಡಿದ್ದೆವಾ? ಗ್ರಾಮೀಣ ಪ್ರದೇಶದ ನಮ್ಮಂತಹವರಿಗೆ ಕಲಿಕೆಯ ಎಲ್ಲ ದಾರಿಗಳೂ ಮುಚ್ಚಿಹೋಗಿದ್ದವು. ಅದು ನಮ್ಮ ತಪ್ಪೇ?' ಎಂದು ಮರುಪ್ರಶ್ನೆ ಮಾಡಿದ. ಅಭ್ಯರ್ಥಿಗೆ ಪ್ರಶ್ನೆಯ ಹಿಂದಿನ ತರ್ಕವನ್ನು ವಿವರಿಸಿ 'ನಿಮ್ಮ ಸಿಟ್ಟು ಸಹಜ, ಇದರಲ್ಲಿ ನಿಮ್ಮ ತಪ್ಪೇನೂ ಇಲ್ಲ. ಕೋವಿಡ್‌ನಿಂದ ಎಲ್ಲ ಹಂತದ ವಿದ್ಯಾರ್ಥಿಗಳಿಗೂ ತೊಂದರೆಯಾಗಿದೆ. ಇದಕ್ಕೆ ನೀವು ಹೊರತಲ್ಲ' ಎಂದು ಪ್ರಾಂಶುಪಾಲರು ಸಮಾಧಾನ ಹೇಳಿದರು.

ಇದಾದ ಮರುವಾರವೇ ಗ್ರಾಮೀಣ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಶಿಕ್ಷಣದ ಸ್ಥಿತಿಗತಿ ಕುರಿತ ವಾರ್ಷಿಕ ವರದಿ (ಎಎಸ್‌ಇಆರ್) ಹೊರಬಂತು. ಅದರ ಪ್ರಕಾರ, ಕೋವಿಡ್ ದಿನಗಳಲ್ಲಿ ಕುಸಿದುಹೋಗಿದ್ದ ವಿದ್ಯಾರ್ಥಿಗಳ ಕಲಿಕಾ ಕ್ಷಮತೆಯಲ್ಲಿ ನಂತರದ ವರ್ಷಗಳಲ್ಲಿ ಏರುಗತಿ ಕಂಡುಬಂದಿದೆ. ಖುಷಿಯ ವಿಷಯವೆಂದರೆ, ಗ್ರಾಮೀಣ ಭಾಗದ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳು ಖಾಸಗಿ ಶಾಲೆಯ ವಿದ್ಯಾರ್ಥಿಗಳಿಗಿಂತ ಎರಡು ಹೆಜ್ಜೆ ಮುಂದೆ ಇದ್ದಾರೆ! ಕಲಿಕೆಯ ವಿಷಯದಲ್ಲಿ ಕೋವಿಡ್‌ನ ಅಡ್ಡ ಪರಿಣಾಮಗಳನ್ನು ಎದುರಿಸುವಲ್ಲಿ ಖಾಸಗಿ ಶಾಲೆಯ ಮಕ್ಕಳಿಗಿಂತ ಸರ್ಕಾರಿ ಶಾಲೆಯ ಮಕ್ಕಳು ತುಸು ಹೆಚ್ಚೇ ಸಮರ್ಥರು. ಖಾಸಗಿ ಶಾಲೆಗಳ ವಿದ್ಯಾರ್ಥಿಗಳ ಕಲಿಕೆಯೂ ಪ್ರಗತಿಯಲ್ಲಿದ್ದು ಆತಂಕಪಡುವಂತಹದ್ದೇನೂ ಇಲ್ಲ ಎಂಬುದು ವರದಿಯ ಸಾರಾಂಶ.

ಸ್ವಯಂಸೇವಾ ಸಂಸ್ಥೆ ಪ್ರಥಮ್, ದೇಶದ 605 ಜಿಲ್ಲೆಗಳ, 5 ವರ್ಷದಿಂದ 16 ವರ್ಷದೊಳಗಿನ ಸುಮಾರು ಆರೂವರೆ ಲಕ್ಷ ವಿದ್ಯಾರ್ಥಿಗಳ ಕಲಿಕಾ ಕ್ಷಮತೆ ಕುರಿತ ಸಮೀಕ್ಷೆ ನಡೆಸಿದೆ. ಐದನೇ ತರಗತಿಯ ವಿದ್ಯಾರ್ಥಿಗಳಿಗೆ ಅಂಕಗಣಿತದ ಸಾಮಾನ್ಯ ಪ್ರಶ್ನೆಗಳನ್ನು ಬಿಡಿಸಲು, ಮೂರಂಕಿಯ ಸಂಖ್ಯೆಗಳನ್ನು ಭಾಗಿಸಲು ಮತ್ತು ಎರಡನೇ ತರಗತಿಯ ಪುಸ್ತಕಗಳಲ್ಲಿರುವ ಪ್ರಾಥಮಿಕ ಪಾಠಗಳನ್ನು ಸರಾಗವಾಗಿ ಓದಲು ಬರುತ್ತದೆಯೇ ಎಂಬುದನ್ನು ಪರೀಕ್ಷಿಸಲಾಗಿತ್ತು. ಈ ಮೂರೂ ವಿಭಾಗಗಳಲ್ಲಿ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳ ಕ್ಷಮತೆಯು ಖಾಸಗಿ ಶಾಲೆಯ ವಿದ್ಯಾರ್ಥಿಗಳಿಗಿಂತ ಉತ್ತಮವಾಗಿದೆ. ಈ ವಿಷಯವು ಸರ್ಕಾರಿ ಶಾಲೆಗಳ ಶಿಕ್ಷಕ ಸಮುದಾಯದ ಮನೋಬಲವನ್ನು ಹೆಚ್ಚಿಸಿದೆ.

ಕರ್ನಾಟಕ, ಮಧ್ಯಪ್ರದೇಶ, ಅಸ್ಸಾಂ, ಹರಿಯಾಣ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಮಹಾರಾಷ್ಟ್ರ, ರಾಜಸ್ಥಾನ, ಉತ್ತರಾಖಂಡ ಮತ್ತು ತಮಿಳುನಾಡಿನ ವಿದ್ಯಾರ್ಥಿಗಳ ಸಾಧನೆ ಉತ್ತಮವಾಗಿದೆ ಎಂಬ ಅಂಶವು ವರದಿಯಲ್ಲಿ ಉಲ್ಲೇಖಗೊಂಡಿದೆ. ಈ ರಾಜ್ಯಗಳ ಖಾಸಗಿ ಶಾಲೆಯ ವಿದ್ಯಾರ್ಥಿಗಳ ಪ್ರಗತಿಯು ಸರ್ಕಾರಿ ಶಾಲೆಯ ಮಕ್ಕಳಿಗೆ ಹೋಲಿಸಿದರೆ ಸ್ವಲ್ಪ ಕಡಿಮೆ ಇದೆ. ಛತ್ತೀಸ್‌ಗಢ ರಾಜ್ಯದ ಖಾಸಗಿ ಹಾಗೂ ಸರ್ಕಾರಿ ಶಾಲೆ ಈ ಎರಡೂ ವಲಯಗಳಲ್ಲಿ ಹೇಳಿಕೊಳ್ಳುವಂತಹ ಪ್ರಗತಿಯಾಗಿಲ್ಲ. ಬಹುದೊಡ್ಡ ಅಚ್ಚರಿ ಎಂದರೆ, ಕೇರಳ ರಾಜ್ಯದ ವಿದ್ಯಾರ್ಥಿಗಳು ಕಲಿಕೆಯಲ್ಲಿ ಹಿಂದುಳಿದಿದ್ದಾರೆ!

2018ರಲ್ಲಿ, ಪಠ್ಯವನ್ನು ಓದಬಲ್ಲ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳ ಪ್ರಮಾಣ ಶೇಕಡ 44.2ರಷ್ಟಿತ್ತು. 2022ರಲ್ಲಿ ಅದು ಶೇ 38.5ಕ್ಕೆ ಕುಸಿದಿತ್ತು. 2024ರಲ್ಲಿ ಅದರ ಪ್ರಮಾಣ ಶೇ 44.8ರಷ್ಟು ಆಗಿದೆ. ಅಂದರೆ ಕೋವಿಡ್ ದಿನಗಳಲ್ಲಿ ಇದ್ದುದಕ್ಕಿಂತ ಹೆಚ್ಚಾಗಿದೆ. ಮೂರಂಕಿಯ ಸಂಖ್ಯೆಗಳನ್ನು ಭಾಗಿಸುವ ಕ್ಷಮತೆಯ ವಿಷಯದಲ್ಲಿ 2018ರ ವೇಳೆಗೆ ಶೇ 22.7ರಷ್ಟಿದ್ದ ಪ್ರಮಾಣವು 2022ರ ವೇಳೆಗೆ ಅಲ್ಪ ಕುಸಿತ ಕಂಡು ಶೇ 21.6 ಆಗಿತ್ತು. ನಂತರ 2024ರ ವೇಳೆಗೆ ಶೇ 26.5 ತಲುಪಿದ್ದು, ಸ್ವಲ್ಪ ಮಟ್ಟಿಗೆ ಏರಿಕೆಯಾಗಿದೆ.

ಕೋವಿಡ್‌ಗಿಂತ ಮುಂಚಿನ ದಿನಗಳಲ್ಲಿ ಖಾಸಗಿ ಶಾಲೆಗಳ ವಿದ್ಯಾರ್ಥಿಗಳ ಕಲಿಕಾ ಕ್ಷಮತೆಯು ಶೇ 65.1ರಷ್ಟಿತ್ತು. ಕೋವಿಡ್ ದಿನಗಳಲ್ಲಿ ಈ ಪ್ರಮಾಣವು ಶೇ 8.3ರಷ್ಟು ಕುಸಿತ ಕಂಡು 2022ಕ್ಕೆ ಶೇ 56.8ಕ್ಕೆ ಇಳಿದಿತ್ತು. 2024ರ ವೇಳೆಗೆ ಶೇ 59.3 ತಲುಪಿದ್ದು, ಏರಿಕೆ ಪ್ರಮಾಣ ಶೇ 2.5 ಮಾತ್ರ. ಅಂಕಗಣಿತದ ಸಮಸ್ಯೆಗಳನ್ನು ಬಿಡಿಸುವ ವಿಷಯದಲ್ಲಿ ವಿದ್ಯಾರ್ಥಿಗಳ ಸಾಧನೆಯು ಕೋವಿಡ್ ಪೂರ್ವ ದಿನಗಳಲ್ಲಿ ಇದ್ದುದಕ್ಕಿಂತ ಏರಿಕೆ ಕಂಡಿದೆ.

ಖಾಸಗಿ ಶಾಲೆಗಳು ಜಿಲ್ಲೆ, ಪಟ್ಟಣ ಪ್ರದೇಶ, ತಾಲ್ಲೂಕು ಮತ್ತು ಗ್ರಾಮೀಣ ಪ್ರದೇಶಗಳೆನ್ನದೆ, ಸರಿಯಾದ ಮೂಲ ಸೌಕರ್ಯಗಳು ಇಲ್ಲದಿದ್ದರೂ ಎಲ್ಲೆಂದರಲ್ಲಿ ಅಸ್ತಿತ್ವಕ್ಕೆ ಬರುತ್ತವೆ. ಆಧುನಿಕ ಕಲಿಕಾ ಸೌಲಭ್ಯ ಕಲ್ಪಿಸಿದ್ದೇವೆ, ಇಂಟರ್‌ನೆಟ್ ಆಧರಿತ ಶಿಕ್ಷಣ ನೀಡುತ್ತೇವೆ, ವೈಯಕ್ತಿಕ ಗಮನ ನೀಡುತ್ತೇವೆ ಎಂದೆಲ್ಲ ಹೇಳಿಕೊಂಡು ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳುತ್ತವೆ. ಪ್ರತಿಷ್ಠೆಯ ಕಾರಣದಿಂದ ಬಹುತೇಕ ಪೋಷಕರು ಹೆಚ್ಚಿನ ಶುಲ್ಕ ನೀಡಿ ಆ ಶಾಲೆಗಳಿಗೆ ಮಕ್ಕಳನ್ನು ದಾಖಲಿಸುತ್ತಾರೆ.

ನುರಿತ ಅಧ್ಯಾಪಕರು, ಚಂದದ ಸಮವಸ್ತ್ರ, ಬಸ್ ಸೌಲಭ್ಯ, ಖ್ಯಾತ ಕ್ರೀಡಾಪಟುಗಳಿಂದ ಕ್ರೀಡಾ ತರಬೇತಿ... ಹೀಗೆ ಹತ್ತು ಹಲವು ಆಕರ್ಷಣೆಗಳೊಂದಿಗೆ ಪೋಷಕರನ್ನು ಸೆಳೆಯುವ ಖಾಸಗಿ ಶಾಲೆಗಳು, ಮಕ್ಕಳ ಕಲಿಕೆ ವೃದ್ಧಿಸುವಲ್ಲಿ ವಿಫಲವಾಗಿರುವುದು ಅಚ್ಚರಿಯ ಸಂಗತಿ. ಹಿಂದಿನ ಒಂದು ದಶಕದಲ್ಲಿ ಶೇ 80ರಷ್ಟು ಸರ್ಕಾರಿ ಶಾಲೆಗಳಲ್ಲಿ ಮೂಲ ಸೌಕರ್ಯಗಳಾದ ಕುಡಿಯುವ ನೀರು, ಗ್ರಂಥಾಲಯ, ಬಳಕೆಯೋಗ್ಯ ಶೌಚಾಲಯ, ವಿದ್ಯುತ್ ಸಂಪರ್ಕ, ಆಟದ ಮೈದಾನಗಳು ಸರಿಯಾದ ಪ್ರಮಾಣದಲ್ಲಿ ಲಭ್ಯವಿವೆ. ಅಂಗವಿಕಲರಿಗೆ ಬೇಕಾದ ರ‍್ಯಾಂಪ್ ಸೌಲಭ್ಯ ಖಾಸಗಿ ಶಾಲೆಗಳಿಗಿಂತ ಸರ್ಕಾರಿ ಶಾಲೆಗಳಲ್ಲಿಯೇ ಹೆಚ್ಚಾಗಿದೆ ಎಂಬ ವಿಚಾರ ವರದಿಯಲ್ಲಿದೆ. ಹತ್ತು ವರ್ಷಗಳ ಹಿಂದೆ ಬರೀ ಶೇ 45ರಷ್ಟು ಶಾಲೆಗಳಲ್ಲಿ ವಿದ್ಯುತ್ ಸಂಪರ್ಕ ಇತ್ತು. ಈಗ ಆ ಸಂಖ್ಯೆ ದ್ವಿಗುಣಗೊಂಡಿದೆ. ಆದರೆ ಕಂಪ್ಯೂಟರ್, ಇಂಟರ್ನೆಟ್ ಮತ್ತು ಮಳೆನೀರು ಸಂಗ್ರಹದ ಅನುಕೂಲಗಳು ಬೇಕಾದ ಪ್ರಮಾಣದಲ್ಲಿ ಇಲ್ಲ.

ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಇನ್ನಷ್ಟು ನೆರವಾಗಲು, ಕೇಂದ್ರ ಸರ್ಕಾರ ತನ್ನ ಅಧೀನಕ್ಕೆ ಒಳಪಡುವ ಶಾಲೆಗಳಲ್ಲಿ ಐದು ಮತ್ತು ಎಂಟನೇ ತರಗತಿಗಳಲ್ಲಿ ವಿದ್ಯಾರ್ಥಿಗಳನ್ನು ಅನುತ್ತೀರ್ಣಗೊಳಿಸಬಾರದು ಎಂಬ ಪದ್ಧತಿಯನ್ನು ತೆಗೆದುಹಾಕಿದೆ. ವಿದ್ಯಾರ್ಥಿಗಳನ್ನು ಕಲಿಕೆಯಿಂದ ವಿಮುಖವಾಗಿಸುವ ಮೊಬೈಲ್ ಫೋನ್ ಬಳಕೆ ನಿಷೇಧಿಸುವುದು ಅಪೇಕ್ಷಣೀಯವಲ್ಲ ಮತ್ತು ಸಂಪೂರ್ಣ ನಿಷೇಧ ಅಸಾಧ್ಯ ಎಂದು ದೆಹಲಿ ಹೈಕೋರ್ಟ್ ಇತ್ತೀಚೆಗಷ್ಟೇ ಹೇಳಿದೆ. ಎಎಸ್‌ಇಆರ್ ವರದಿಯ ಪ್ರಕಾರ, ದೇಶದ ಶೇ 57ರಷ್ಟು ಮಕ್ಕಳು ಮಾತ್ರ ಶಿಕ್ಷಣ ಸಂಬಂಧಿತ ವಿಷಯಗಳಿಗಾಗಿ ಮೊಬೈಲ್ ಫೋನ್ ಬಳಸುತ್ತಾರೆ. ಇವರೂ ಸೇರಿದಂತೆ ಒಟ್ಟಾರೆ ಶೇ 76ರಷ್ಟು ಮಕ್ಕಳು ಸಾಮಾಜಿಕ ಜಾಲತಾಣಗಳ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾರೆ.

ಕೋವಿಡ್-19ರ ದಿನಗಳಲ್ಲಿ ಶಾಲೆ- ಕಾಲೇಜುಗಳನ್ನು ಪ್ರವೇಶಿಸಿದ ಡಿಜಿಟಲ್ ಮಾಧ್ಯಮ ಆಧರಿಸಿದ ಶಿಕ್ಷಣದಿಂದ ಕಲಿಕಾ ಪ್ರಗತಿಯಾಗಿದೆ ಎಂಬುದಕ್ಕೆ ಯಾವುದೇ ಪುರಾವೆ ಇಲ್ಲ ಎಂದು ಯುನೆಸ್ಕೊ ಹೇಳಿತ್ತು. ಶಾಲೆಗಳಲ್ಲಿ ಮೊಬೈಲ್ ಫೋನ್ ಬಳಕೆ ನಿಷೇಧಿಸಬೇಕು ಎಂದು ಎರಡು ವರ್ಷಗಳ ಹಿಂದೆಯೇ ಕಟ್ಟುನಿಟ್ಟಾಗಿ ತಿಳಿಸಿತ್ತು. ಇದಲ್ಲದೆ ಆನ್‌ಲೈನ್ ಶಿಕ್ಷಣಕ್ಕೆ ಒತ್ತು ನೀಡಿದ ಸರ್ಕಾರಗಳು ಎಳೆಯರಿಗೆ ಸಂಬಂಧಿಸಿದ ದತ್ತಾಂಶ ಕಾಪಾಡುವಲ್ಲಿ ವಿಫಲವಾಗಿ ಮಕ್ಕಳ ಹಕ್ಕುಗಳನ್ನು ಉಲ್ಲಂಘಿಸಿವೆ ಎಂದಿತ್ತು.

ಇರಲಿ, ಒಟ್ಟಿನಲ್ಲಿ ಸರ್ಕಾರಿ ಶಾಲೆಯ ಮಕ್ಕಳು ಕಲಿಕೆಯಲ್ಲಿ ಮುಂದಿದ್ದಾರೆ ಎಂದರೆ ನಮ್ಮ ಸರ್ಕಾರಿ ಶಾಲೆಗಳು ಚೆನ್ನಾಗಿವೆ ಎಂದರ್ಥ. ಆದರೂ ಇದು ಸಾಲದು. ಅರ್ಧಕ್ಕರ್ಧ ಸಂಖ್ಯೆಯ ವಿದ್ಯಾರ್ಥಿಗಳು ಕಲಿಕೆಯಲ್ಲಿ ಇನ್ನೂ ಹಿಂದುಳಿದಿದ್ದಾರೆ. ಅವರ ಕಲಿಕೆಗೂ ಆದ್ಯತೆ ದೊರಕಬೇಕು. ಸರ್ಕಾರಗಳು ಸರ್ಕಾರಿ ಶಾಲೆಗಳನ್ನು ಮುಚ್ಚುವ ಕಾರ್ಯವನ್ನು ಮೊದಲು ನಿಲ್ಲಿಸಬೇಕು.

ಚುರುಮುರಿ

ನಟ್ಟು-ಬೋಲ್ಟಿಗೆ ಎಣ್ಣೆ!

• ಬಿ.ಎನ್.ಮಲ್ಲೇಶ್

'ಏನೋ ತೆಪರ, ಏನು ಇವತ್ತಿನ ಸುದ್ದಿ?' ಹರಟೆಕಟ್ಟೆಯಲ್ಲಿ ದುಬ್ಬೀರ ಕೇಳಿದ.

'ಸುದ್ದೀನಾ? ಬಾಳದಾವು... ನಟ್ಟು-ಬೋಲ್ಟುಗಳು, ಡಮ್ಮಿಗಳು, ಕಾಮಿಡಿ ಪೀಸ್‌ಗಳು, ಅರೆ ಹುಚ್ಚರು, ಪೇಮೆಂಟ್ ಗಿರಾಕಿಗಳು... ಸಾಕಾ ಬೇಕಾ?' ಪಟ್ಟಿ ಒಪ್ಪಿಸಿದ ತೆಪರೇಸಿ.

'ಸಾಕು ಬಿಡಪ, ತಲಿ ಕೆಡ್ತತಿ. ಈ ಸೀರಿಯಲ್ ನೋಡೋ ಹೆಣ್ಮಕ್ಕಳಿಗೆ, ನ್ಯೂಸ್ ನೋಡೋ ಗಂಡ್ಮಕ್ಕಳಿಗೆ ಬಿ.ಪಿ. ಬರೋದು ಗ್ಯಾರಂಟಿ' ಮಂಜಮ್ಮ ನಕ್ಕಳು.

'ತಲಿ ಕೆಡಿಸ್ಕಾಬಾರ್ದು, ಸುಮ್ನೆ ಮಜಾ ತಗಾಬೇಕು. ಈಗ ಅದ್ಯಾವುದೋ ನಟ್ಟು-ಬೋಲ್ಟು ವಿಚಾರ, ಅದ್ನ ಪಾಸಿಟಿವ್ ಆಗಿ ತಗಾಬೇಕು'.

'ಪಾಸಿಟಿವ್ ಆಗಾ? ಹೆಂಗೆ?'

'ಈಗ ನಟ್ಟು, ಬೋಲ್ಟು ಟೈಟ್ ಮಾಡ್ಬೇಕು ನಿಜ. ಯಾರಿಗೆ? ಎಲ್ಲಿ? ತೆರಿಗೆ ಸೋರಿಕೆ ಆಗೋ ಕಡೆ ನಟ್ಟು-ಬೋಲ್ಟು ಟೈಟ್ ಮಾಡ್ಬೇಕು. ಲಂಚ ಹೊಡಿಯೋರಿಗೆ, ಭೂಮಿ ನುಂಗೋರಿಗೆ, ಕೊಲೆ-ಸುಲಿಗೆ ಮಾಡೋರಿಗೆ ನಟ್ಟು- ಬೋಲ್ಟು ಟೈಟ್ ಮಾಡ್ಬೇಕು ಅಲ್ವಾ?'

'ಕರೆಕ್ಟ್, ಸಿನಿಮಾದೋರೂ ಈಗ ಅದ್ನ ಪಾಸಿಟಿವ್ ಆಗಿ ತಗಂಡಿದಾರಂತೆ' ಗುಡ್ಡೆ ಹೇಳಿದ.

'ಹೌದಾ? ಹೆಂಗೆ?'

'ಇನ್ಮುಂದೆ ಹೀರೊಗಳು ಮಚ್ಚು-ಲಾಂಗು ಬಿಟ್ಟು ದೊಡ್ಡ ಸ್ಪ್ಯಾನರ್ ಹಿಡ್ಕಂಡು ಫೈಟ್ ಮಾಡ್ತಾರಂತೆ'.

'ಒಳ್ಳೆ ಐಡಿಯಾ' ಎಂದ ದುಬ್ಬೀರ, 'ಏನೇ ಆದ್ರೂ ಕೆಲ ರಾಜಕಾರಣಿಗಳ ನಾಲಿಗೆ ಟೈಟ್ ಮಾಡಾಕಾಗಲ್ಲ ಬಿಡ್ರಲೆ. ಅವರ ನಾಲಿಗೆಗೆ ನಟ್ಟೂ ಇರಲ್ಲ, ಬೋಲ್ಟೂ ಇರಲ್ಲ ಅದಕ್ಕೆ!' ಎಂದು ನಕ್ಕ.

'ಈ ಗುಡ್ಡೇದೂ ನಟ್ಟು-ಬೋಲ್ಟು ಟೈಟ್ ಮಾಡ್ಬೇಕಲ್ಲ, ಯಾವಾಗ್ಲೂ ಉದ್ರಿ ಕೇಳ್ತಾನೆ' ಮಂಜಮ್ಮಗೆ ಕೋಪ.

'ಅಯ್ಯೋ ನನ್ ನಟ್ಟು-ಬೋಲ್ಟು ಮೊದ್ಲೇ ಟೈಟಾಗಿವೆ ಮಂಜಮ್ಮ, ಈಗ ಲೂಸ್ ಮಾಡ್ಬಾಕಬೇಕು' ಎಂದ ಗುಡ್ಡೆ.

'ಅದ್ಕೆ ಏನ್ ಮಾಡ್ಬೇಕು?'

'ಸ್ವಲ್ಪ ಎಣ್ಣೆ ಬಿಟ್ಕಾಬೇಕು'.

'ಥೂ ನಿನ್ ಮಕಕ್ಕಿಷ್ಟು...' ಎಂದಳು ಮಂಜಮ್ಮ, ಎಲ್ಲರೂ ಗೊಳ್ಳಂತ ನಕ್ಕರು.

ಚರ್ಚೆ

ಹಣ ವರ್ಗಾವಣೆ: ಯಾವುದು ವಾಸ್ತವ?

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ಮೀಸಲಿಟ್ಟ ನಿಧಿಯನ್ನು ದುರ್ಬಳಕೆ ಮಾಡಿಕೊಳ್ಳುವುದು ಸಾಮಾಜಿಕ ನ್ಯಾಯವಲ್ಲ

• ವಾದಿರಾಜ್

ಪರಿಶಿಷ್ಟರ ಕಲ್ಯಾಣಕ್ಕಾಗಿ ಮೀಸಲಾಗಿದ್ದ ಹಣವನ್ನು ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಿಗೆ ವರ್ಗಾವಣೆ ಮಾಡುವುದನ್ನು ಸಮಾಜ ಕಲ್ಯಾಣ ಸಚಿವ ಡಾ. ಎಚ್.ಸಿ.ಮಹದೇವಪ್ಪ ಸಮರ್ಥಿಸಿಕೊಂಡಿದ್ದಾರೆ (ಸಂಗತ, ಮಾರ್ಚ್ 5). 2023ರ ವಿಧಾನಸಭೆ ಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರ ಹಿಡಿಯಲು ಐದು ಗ್ಯಾರಂಟಿಗಳನ್ನು ಘೋಷಿಸಿತು. ಅದನ್ನು ಮತದಾರರಿಗೆ ನಂಬಿಸಲು ಹರಸಾಹಸ ನಡೆಸಿತು. ಆಗ ಸಿದ್ದರಾಮಯ್ಯ ಅವರು 'ಮಹದೇವಪ್ಪ ನಿಂಗೂ ಫ್ರೀ, ಕಾಕಾ ಪಾಟೀಲ ನಿಂಗೂ ಫ್ರೀ, ನಂಗೂ ಫ್ರೀ, ನನ್ನ ಹೆಂಡತಿಗೂ ಫ್ರೀ' ಅಂತ ಹೇಳಿದ್ದು ವ್ಯಾಪಕ ಪ್ರಚಾರ ಪಡೆದಿತ್ತು.

ಆ ಸಂದರ್ಭದಲ್ಲಿ ಕಾಂಗ್ರೆಸ್‌ನ ಯಾವ ನಾಯಕರೂ ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡ ಉಪ ಯೋಜನೆಯ (ಟಿಎಸ್‌ಪಿ) ಹಣವನ್ನು ಬಳಸುವುದಾಗಿ ಹೇಳಿರಲಿಲ್ಲ. ಆದರೆ ಚುನಾವಣೆಯಲ್ಲಿ ಗೆದ್ದು ಅಧಿಕಾರ ಹಿಡಿದ ತರುವಾಯ ಕಾಂಗ್ರೆಸ್ ಮಾಡಿದ್ದೇನು?

2023ರಲ್ಲಿ ಈ ಉಪ ಯೋಜನೆಗಳಿಗೆ ಸೇರಿದ ₹ 11,144 ಕೋಟಿಯನ್ನು ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ದುರ್ಬಳಕೆ ಮಾಡಿಕೊಂಡಿತು. ಪರಿಶಿಷ್ಟರ ಮೀಸಲು ನಿಧಿಗೆ ಮೊದಲ ಸಲ ಅನೈತಿಕವಾಗಿ ಕೈಹಾಕುವಾಗ ಮುಖ್ಯಮಂತ್ರಿ ಹಿಂಜರಿದಿದ್ದರು. ಸಚಿವ ಸಂಪುಟ ಸಭೆಯಲ್ಲಿ ಸಮಾಜ ಕಲ್ಯಾಣ ಸಚಿವರೂ ಸೇರಿದಂತೆ ಕೆಲ ಸಚಿವರು ವಿರೋಧ ವ್ಯಕ್ತಪಡಿಸಿದ್ದರು. ಆದರೆ ಕೆಲವೇ ತಿಂಗಳಲ್ಲಿ ಸರ್ಕಾರ ಸಂವೇದನೆ ಕಳೆದುಕೊಂಡು ಅನ್ಯಾಯವನ್ನು ಸಮರ್ಥಿಸಿಕೊಳ್ಳುವ ಸ್ಥಿತಿ ತಲುಪಿದೆ.

2024ರಲ್ಲೂ ಇದೇ ಚಾಳಿಯನ್ನು ಮುಂದುವರಿಸಿದ ಸರ್ಕಾರ, ಈ ಎರಡೂ ನಿಧಿಗಳಿಂದ ₹ 14,282.68 ಕೋಟಿಯನ್ನು ಗ್ಯಾರಂಟಿ ಅನುಷ್ಠಾನಕ್ಕಾಗಿ ದುರ್ಬಳಕೆ ಮಾಡಿಕೊಂಡಿತು. ಆದರೆ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು ಮಾತ್ರ ಇಲ್ಲ, ಪ್ರಬಲ ವರ್ಗಗಳಿಗೆ ಸೇರಿದವರು, ಹಿಂದುಳಿದವರು, ಅಲ್ಪಸಂಖ್ಯಾತರ ಜೊತೆಗೆ ಸರ್ಕಾರಿ ನೌಕರರು, ಆದಾಯ ತೆರಿಗೆ ಕಟ್ಟುವವರು ಎಲ್ಲರೂ ಇದ್ದಾರೆ. ಉಳಿದವರಿಗೆಲ್ಲ ಸರ್ಕಾರ ತನ್ನ ಖಜಾನೆಯಿಂದ ಹಣ ಕೊಡುತ್ತದೆ. ಆದರೆ ಪರಿಶಿಷ್ಟರಿಗೆ ಕೊಡಲು ಮಾತ್ರ ಅವರ ಮೀಸಲು ನಿಧಿಗೆ ಕನ್ನ ಹಾಕುತ್ತದೆ ಎಂದರೆ ಇದನ್ನು ಸಾಮಾಜಿಕ ನ್ಯಾಯ ಎನ್ನಲು ಸಾಧ್ಯವೇ?

ಅಲ್ಪಸಂಖ್ಯಾತರಿಗೆಂದೇ ಬಜೆಟ್ಟಿನಲ್ಲಿ ಪ್ರತ್ಯೇಕವಾಗಿ ಸಾವಿರಾರು ಕೋಟಿ ರೂಪಾಯಿ ತೆಗೆದಿರಿಸಲಾಗಿದೆ. ಆದರೆ ಸರ್ಕಾರವು ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಆ ಹಣವನ್ನು ಮುಟ್ಟುವುದಿಲ್ಲ ಎಂದರೆ, ಸರ್ಕಾರ ದಲಿತದ್ರೋಹಿ ಅಲ್ಲದೆ ಮತ್ತೇನು?

ವಾಸ್ತವದಲ್ಲಿ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಉಪ ಯೋಜನೆಗಳ ಮೂಲ ಉದ್ದೇಶವಾದರೂ ಏನು? ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಬಲೀಕರಣ. ಶಿಕ್ಷಣ, ಉದ್ಯೋಗ, ಸ್ವಾವಲಂಬನೆ ಮೂಲಕ ಪ್ರತಿ ವ್ಯಕ್ತಿ, ಕುಟುಂಬವನ್ನು ಸಶಕ್ತಗೊಳಿಸುವುದು. ದಲಿತ ಕೇರಿ, ಕಾಲೊನಿಗಳು, ಆದಿವಾಸಿಹಾಡಿಗಳಿಗೆ ಮೂಲ ಸೌಕರ್ಯ ಒದಗಿಸುವುದು. ಭೂ ಒಡೆತನ, ಭೂಮಿಗೆ ನೀರು, ಸ್ವಉದ್ಯೋಗ, ಸ್ವಂತ ವಾಹನ, ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ, ವಸತಿಶಾಲೆ, ಹಾಸ್ಟೆಲ್ ನಿರ್ಮಾಣ ಮಾಡುವುದು.

ಆದರೆ ಈಗ ಏನಾಗಿದೆ? ಯಾವುದೇ ನೀತಿ, ನಿಯಮ ಇಲ್ಲದೆ, ಪೂರ್ವಯೋಜನೆ ಇಲ್ಲದೆ ಇದ್ದಬದ್ದವರಿಗೆಲ್ಲ ಗ್ಯಾರಂಟಿ ಘೋಷಿಸಿ, ತನ್ನ ಕೈಗೆ ತಾನೇ ಹಗ್ಗ ಕಟ್ಟಿಕೊಂಡ ಸರ್ಕಾರ, ಪರಿಶಿಷ್ಟರ ಮೀಸಲು ನಿಧಿಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ.

ಪರಿಶಿಷ್ಟ ಸಮುದಾಯಗಳ ಕಲ್ಯಾಣಕ್ಕಾಗಿ ಇರುವ ಡಾ. ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಆದಿ ಜಾಂಬವ ಅಭಿವೃದ್ಧಿ ನಿಗಮ, ತಾಂಡಾ ಅಭಿವೃದ್ಧಿ ನಿಗಮ, ಭೋವಿ ಅಭಿವೃದ್ಧಿ ನಿಗಮ, ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ (ಲಿಡ್ಕರ್), ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ, ಅಲೆಮಾರಿ ಹಾಗೂ ಅರೆಅಲೆಮಾರಿ ಅಭಿವೃದ್ಧಿ ನಿಗಮ ಎಲ್ಲಕ್ಕೂ ಸೇರಿ ಸರ್ಕಾರ ಹಂಚಿಕೆ ಮಾಡಿದ್ದು ಬರೀ ₹ 332 ಕೋಟಿ. ಅದರಲ್ಲಿ ಬಿಡುಗಡೆ ಆದದ್ದು ₹ 88 ಕೋಟಿ. ಸರ್ಕಾರದ ಹಣಕಾಸಿನ ನೆರವಿಲ್ಲದೆ ಈ ನಿಗಮಗಳು ಸೊರಗಿವೆ. ಯಾವ ನಿಗಮದಲ್ಲಿಯೂ ಯಾವ ಯೋಜನೆಯೂ ಜಾರಿಯಾಗುತ್ತಿಲ್ಲ. ಸಾರಿಗೆ, ಸಂಬಳಕ್ಕೂ ಕಾಸಿಲ್ಲದ ದಿವಾಳಿ ಸ್ಥಿತಿ ಇದೆ.

ಅನ್ಯ ಯೋಜನೆಗಳಿಗೆ ಹಣ ವರ್ಗಾವಣೆಗೆ ಅವಕಾಶ ಇಲ್ಲದಂತೆ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಕಾಯ್ದೆಯ ಸೆಕ್ಷನ್ 7(ಡಿ) ರದ್ದು ಮಾಡಿದ್ದು ತಾನೇ ಎಂದು ಬೆನ್ನು ತಟ್ಟಿಕೊಳ್ಳುವ ಸರ್ಕಾರ, 7(ಸಿ) ಸೆಕ್ಷನ್ ರದ್ದು ಮಾಡಿಲ್ಲ ಎಂದು ಪಿಸುಗುಟ್ಟುತ್ತಿದೆ. ವಿಶೇಷ ಸಂದರ್ಭದಲ್ಲಿ ಉತ್ತಮ ಕಾರ್ಯಕ್ಕೆ ಈ ಅನುದಾನ ಬಳಸಬಹುದು ಎಂಬ 7(ಸಿ) ಸೆಕ್ಷನ್ ರದ್ದು ಮಾಡಿ, ಪರಿಶಿಷ್ಟರು, ಆದಿವಾಸಿಗಳ ಮೀಸಲು ಹಣ ಪೂರ್ತಿಯಾಗಿ ಅವರ ಸಬಲೀಕರಣಕ್ಕೆ ಸಲ್ಲುವಂತೆ ಮಾಡಬೇಕಾದದ್ದು ಆದ್ಯತೆ ಆಗಬೇಕು.

ಕಾಕಾ ಪಾಟೀಲರಿಗೆ ಯಾವ ಖಜಾನೆಯಿಂದ ಗ್ಯಾರಂಟಿ ಹಣ ಸಂದಾಯ ಆಗುತ್ತಿದೆಯೋ ಅದೇ ಬಾಬ್ತಿನಲ್ಲೇ ಮಹದೇವಪ್ಪನವರಿಗೂ ಗ್ಯಾರಂಟಿ ಹಣ ದಕ್ಕಲಿ ಎಂದು ಕೇಳುವುದರಲ್ಲಿ ತಪ್ಪೇನಿದೆ?

ಲೇಖಕ: ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಕರ್ತ

ವಾಚಕರ ವಾಣಿ

ಕಾಫಿಪುಡಿಗೂ ತಗಲಿತು ಬಿಸಿ!

ಎಂದಿನಂತೆ ಮನೆಗೆ ಕಾಫಿಪುಡಿ ತರಲು ಗುರುವಾರ ಅದೇ ಅಂಗಡಿಗೆ ಹೋಗಿ 'ಒಂದು ಕೆ.ಜಿ. ಕಾಫಿಪುಡಿ ಕೊಡಿ' ಎಂದೆ. ದುಡ್ಡು ಕೊಡಲು ಹೋದಾಗ 'ಸರ್, ಬೆಲೆ ಹೆಚ್ಚಾಗಿದೆ. ಇನ್ನೂ ನೂರಾಇಪ್ಪತ್ತು ಕೊಡಿ' ಎಂದರು. ಬರೀ ಒಂದೂವರೆ ತಿಂಗಳ ಹಿಂದಷ್ಟೇ ನೂರರಿಂದ ನೂರೈವತ್ತು ರೂಪಾಯಿಯವರೆಗೂ ಹೆಚ್ಚಾಗಿತ್ತು. ಇಷ್ಟು ಬೇಗ ಮತ್ತೆ ದರ ಏರಿಸಿದ್ದಾರೆ. ಒಲ್ಲದ ಮನಸ್ಸಿನಿಂದಲೇ ಕಾಫಿಪುಡಿಯನ್ನು ಹಿಂದಿರುಗಿಸಿ, ಈ ರೀತಿಯ ಬೆಲೆ ಏರಿಕೆ ಏಕೆ ಎಂದು ಪ್ರಶ್ನಿಸಿದೆ. ಫಸಲು ಕಡಿಮೆ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆ ಹೆಚ್ಚು ಎಂಬ ಉತ್ತರ ಬಂತು.

ಇಲ್ಲಿನ ಉತ್ಪಾದನೆ ನಮಗೇ ಸಾಲುತ್ತಿಲ್ಲ ಎಂದ ಮೇಲೆ ರಫ್ತು ಮಾಡುವುದನ್ನು ನಿರ್ಬಂಧಿಸಲಿ. ಈರುಳ್ಳಿಯಂತಹ ಪದಾರ್ಥಗಳ ಬೆಲೆ ವಿಪರೀತ ಹೆಚ್ಚಾದಾಗ ಸರ್ಕಾರ ಮಧ್ಯಪ್ರವೇಶಿಸಿ, ಕೆಲ ದಿನಗಳ ಕಾಲ ರಫ್ತಿನ ಮೇಲೆ ನಿಷೇಧ ಹೇರುವ ಮೂಲಕ ಬೆಲೆ ನಿಯಂತ್ರಣಕ್ಕೆ ಮುಂದಾದ ಉದಾಹರಣೆಗಳಿವೆ. ಅದೇ ಮಾದರಿಯಲ್ಲಿ ಕಾಫಿಪುಡಿಯನ್ನೂ ಅವಶ್ಯ ವಸ್ತು ಎಂದು ಪರಿಗಣಿಸಿ ರಫ್ತಿನ ಮೇಲೆ ಕಡಿವಾಣ ಹಾಕಬೇಕು. ಜನರಿಗೆ ಕಾಫಿಪುಡಿ ಕೈಗೆಟಕುವ ದರದಲ್ಲಿ ಸಿಗುವಂತೆ ಮಾಡಬೇಕು.

ಈಗಾಗಲೇ ಬಸ್ ಹಾಗೂ ಮೆಟ್ರೊ ಪ್ರಯಾಣ ದರ ಏರಿದೆ. ಹಾಲಿನ ದರ ಪುನಃ ಏರುವ ಸೂಚನೆ ಹೊರಬಿದ್ದಿದೆ. ದಿನನಿತ್ಯದ ಅನೇಕ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದ್ದು, ಜನರ ಜೀವನ ಹೈರಾಣಾಗಿದೆ. ಸರ್ಕಾರ ಕೂಡಲೇ ಸೂಕ್ತ ಕ್ರಮ ಕೈಗೊಳ್ಳಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ನಂಬಿಕೆಗೆ ದ್ರೋಹ ಎಸಗುವುದು ಅಕ್ಷಮ್ಯ

ಮೈಸೂರು ಜಿಲ್ಲೆಯಲ್ಲಿ ಶಿಕ್ಷಕರೊಬ್ಬರು ಮೂವರು ವಿದ್ಯಾರ್ಥಿನಿಯರಿಗೆ ಜಂತುಹುಳುವಿನ ಔಷಧಿ ಹೆಸರಿನಲ್ಲಿ ಮತ್ತು ಭರಿಸುವ ಔಷಧಿ ನೀಡಿ ಅವರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎನ್ನಲಾದ ಪ್ರಕರಣ ವರದಿಯಾಗಿದೆ. ಶಾಲೆಗೆ ಮಕ್ಕಳನ್ನು ದಾಖಲಿಸುವ ಪೋಷಕರು ಶಿಕ್ಷಕರ ಮೇಲೆ ಅಪಾರವಾದ ನಂಬಿಕೆ, ಗೌರವ ಹಾಗೂ ವಿಶ್ವಾಸವನ್ನು ಇಟ್ಟಿರುತ್ತಾರೆ. ವಿದ್ಯಾರ್ಥಿಗಳೂ ಶಿಕ್ಷಕರನ್ನು ಗೌರವ, ಪ್ರೀತಿಯಿಂದ ಕಾಣುತ್ತಾರೆ. ಕೆಲವರಂತೂ ಶಿಕ್ಷಕರಿಗೆ ಹಣ್ಣು, ತರಕಾರಿಯಂತಹ ವಸ್ತುಗಳನ್ನು ಪ್ರೀತಿಯಿಂದ ತಂದು ಕೊಡುವುದುಂಟು. ಇಂತಹ ಪ್ರೀತಿಗೆ ಗೌರವ ಬರುವಂತೆ ನಡೆದುಕೊಳ್ಳುವುದು ಶಿಕ್ಷಕರ ಕರ್ತವ್ಯವಾಗಿರುತ್ತದೆ.

ಬಹುತೇಕ ಶಿಕ್ಷಕ, ಶಿಕ್ಷಕಿಯರು ಬದ್ಧತೆ, ಶಿಸ್ತಿನಿಂದ ಕೆಲಸ ಮಾಡುತ್ತಿದ್ದಾರೆ. ಆದರೆ ಕೆಲವರ ಬೇಜವಾಬ್ದಾರಿ ನಡವಳಿಕೆ, ಕಾನೂನುಬಾಹಿರ ಕೃತ್ಯಗಳು ಪೋಷಕರಲ್ಲಿ ಆತಂಕ ಸೃಷ್ಟಿಸುತ್ತವೆ. ಬೇಲಿಯೇ ಎದ್ದು ಹೊಲ ಮೇಯ್ದರೆ ಇನ್ನಾರನ್ನು ಕೇಳುವುದು? ಈ ಸಂಬಂಧದ ಕಾನೂನುಗಳು ಬಲಗೊಳ್ಳಬೇಕು ಮತ್ತು ಶಿಕ್ಷಕ ಸಮೂಹ ತಮ್ಮ ವೃತ್ತಿಯ ಗಾಂಭೀರ್ಯ ಅರಿತುಕೊಂಡು ಅತ್ಯಂತ ಜವಾಬ್ದಾರಿಯಿಂದ ನಡೆದುಕೊಳ್ಳಬೇಕು.

ಈ.ಬಸವರಾಜು, ಬೆಂಗಳೂರು

ಶಾಸಕರ ಅನುದಾನ ಪುಸ್ತಕಕ್ಕೂ ಮೀಸಲಾಗಲಿ

ಕ್ಷೀಣಿಸುತ್ತಿರುವ 'ಪುಸ್ತಕ ಓದು' ಸಂಸ್ಕೃತಿಯನ್ನು ಪುನರುಜ್ಜೀವನ ಮಾಡುವ ಉದ್ದೇಶದಿಂದ, ಶಾಸಕರು ತಲಾ ಎರಡು ಲಕ್ಷ ರೂಪಾಯಿ ಮೌಲ್ಯದ ಪುಸ್ತಕ ಕೊಂಡು ತಮ್ಮ ಕ್ಷೇತ್ರದ ಸಾರ್ವಜನಿಕ ಗ್ರಂಥಾಲಯಗಳಿಗೆ ಕೊಡಲಿ ಎನ್ನುವ ಸದುದ್ದೇಶದಿಂದ ವಿಧಾನಸೌಧದಲ್ಲಿ ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಪುಸ್ತಕ ಮೇಳ ಏರ್ಪಡಿಸಿದರು; ಆದರೆ ಶಾಸಕರು ಮೇಳಕ್ಕೆ ಬರಲಿಲ್ಲ, ಪುಸ್ತಕ ಕೊಳ್ಳಲಿಲ್ಲ ಎನ್ನುವ ಸುದ್ದಿ (ಪ್ರ.ವಾ., ಮಾರ್ಚ್ 4) ಕೇಳಿ ಆಘಾತವಾಯಿತು. ಜನರಲ್ಲಿ ಸುಸಂಸ್ಕೃತ ಭಾವ ಬೆಳೆಸಲು ಸಹಕಾರಿಯಾದ ಓದಿನ ಸಂಸ್ಕೃತಿಯ ಬಗ್ಗೆ ಶಾಸಕರ ಉದಾಸೀನ ಭಾವ ವಿಷಾದ ಉಂಟುಮಾಡಿತು.

ಮೇಳದಲ್ಲಿ ತಾವು ಪ್ರಕಟಿಸಿದ ಪುಸ್ತಕಗಳ ಪಟ್ಟಿಯನ್ನು ಶಾಸಕರಿಗೆ ಕೊಟ್ಟು, ತಮ್ಮ ಗೋದಾಮಿನಲ್ಲಿರುವ ಪುಸ್ತಕಗಳು ಓದುಗರಿಗೆ ತಲುಪುತ್ತವೆ ಎನ್ನುವ ಸಂಭ್ರಮದಲ್ಲಿದ್ದ ಪ್ರಕಾಶಕರಿಗೆ 'ಈಗ ಕೊಳ್ಳಲು ದುಡ್ಡಿಲ್ಲ' ಎಂದ ಶಾಸಕರ ಪ್ರತಿಕ್ರಿಯೆಯು ಉಕ್ಕುವ ಉತ್ಸಾಹದ ಮೇಲೆ ತಣ್ಣೀರು ಎರಚಿರಬಹುದು. ಇನ್ನು ಮುಂದಾದರೂ ಸರ್ಕಾರವು ಮುಂದಿನ ದಿನಗಳಲ್ಲಿ ಬಿಡುಗಡೆಯಾದ ಅನುದಾನದಲ್ಲಿ ಕನಿಷ್ಠ ₹ 2 ಲಕ್ಷವನ್ನು ಪುಸ್ತಕ ಕೊಳ್ಳುವುದಕ್ಕೇ ಮೀಸಲಿಡುವಂತೆ ಆದೇಶಿಸುವುದು ಉಚಿತ.

ಸತ್ಯಬೋಧ, ಬೆಂಗಳೂರು

ಕಚ್ಚುವುದು ಬೇಡ, ಭುಸುಗುಟ್ಟಿದರೆ ಸಾಕು!

'ನಾವು ಜೀವನದಲ್ಲಿ ತೀರಾ ಬಾಗಿ ನಡೆದರೆ ಜನ ನಮ್ಮ ತಲೆಯ ಮೇಲೆ ನಡೆದುಕೊಂಡು ಹೋಗುತ್ತಾರೆ' ಎಂಬ ಪಾಟೀಲ ಪುಟ್ಟಪ್ಪ ಅವರ ಹಿತವಚನ (ಸುಭಾಷಿತ, ಮಾರ್ಚ್ 6) ಅಕ್ಷರಶಃ ಸತ್ಯವಾದುದು. ಬಾಗಿ ನಡೆದವನ ಬಾಳು ಬಂಗಾರ ಅನ್ನುವ ಮಾತು ಇದೆಯಾದರೂ ಅಂಥವರು ಬಹಳಷ್ಟು ಕಷ್ಟಗಳನ್ನು ಎದುರಿಸಬೇಕಾಗುತ್ತದೆ ಮತ್ತು ಅದರ ಫಲಿತಾಂಶ ತಡವಾಗಿ ಸಿಗುತ್ತದೆ. ಅಷ್ಟು ಹೊತ್ತಿಗೆ ಆಯುಷ್ಯ ಕಡಿಮೆಯಾಗಿರುತ್ತದೆ. ವಿನಯ, ಸರಳತೆ, ತಾಳ್ಮೆ, ಸೌಜನ್ಯ ಬೇಕು. ಅದರಿಂದ ವ್ಯಕ್ತಿತ್ವದ ಘನತೆ ಇಮ್ಮಡಿಯಾಗುತ್ತದೆ. ಆದರೆ ಅದರಿಂದ ಕೆಲವು ಸಲ ಕುಂದು ತರುವ, ಉದಾಸೀನ ಮಾಡುವ ಪ್ರವೃತ್ತಿಗೆ ಗುರಿಯಾಗಬೇಕಾಗುತ್ತದೆ.

ಇನ್ನು ಆಡಳಿತ ನಡೆಸುವಲ್ಲಿ ಬಾಗಿ ನಡೆದರೆ ಒಳ್ಳೆಯ ಆಡಳಿತ ನೀಡುವುದು ಸುಲಭವಲ್ಲ. ಪುರಾಣದ ಒಂದು ಮಾತಿನಂತೆ, ನಾಗರಹಾವಿಗೆ ವಿಷ ನೀಡಿದ ಶಿವ ಅದಕ್ಕೆ ಕಚ್ಚು ಎಂದು ಹೇಳಿಕೊಡಲಿಲ್ಲವಂತೆ. ಹಾವು ಸಾರ್ವಜನಿಕವಾಗಿ ಕಂಡಾಗ ಜನ ಅದರ ಮೇಲೆ ಹಲ್ಲೆ ಮಾಡತೊಡಗಿದರು. ಇದರಿಂದ ಬೇಸತ್ತ ಹಾವು ಮತ್ತೊಮ್ಮೆ ಶಿವನನ್ನು ಭೇಟಿಯಾಗಿ ತನ್ನ ಸಂಕಷ್ಟವನ್ನು ವಿವರಿಸಿತು. ಆಗ ಶಿವ 'ನಾನು ಕಚ್ಚಬೇಡ ಎಂದೆ. ಆದರೆ ಹೆಡೆ ಎತ್ತಿ ಭುಸುಗುಡಬೇಡ ಎಂದು ಹೇಳಿರಲಿಲ್ಲ. ಹಾಗೆ ಮಾಡಿದರೆ ಸಾಕು ಜನ ಹೆದರುತ್ತಾರೆ' ಎಂದನಂತೆ. ಇದರಲ್ಲಿ ಮಾರ್ಮಿಕತೆ ಅಡಗಿದೆ. ನಾಗರಹಾವಿನ ಹೆಸರು ಕೇಳಿದರೆ ಭಯ ಆಗುತ್ತದೆ. ಇನ್ನು ನೋಡಿದರಂತೂ ಅದು ಹೆಚ್ಚಿನವರಲ್ಲಿ ತೀರಾ ಭಯ ಹುಟ್ಟಿಸುತ್ತದೆ. ನಮ್ಮ ವರ್ತನೆಗಳು ಎಲ್ಲೆ ಮೀರಬಾರದು. ಒಳ್ಳೆಯ ನಡವಳಿಕೆಯನ್ನು ದೌರ್ಬಲ್ಯ ಅಂದುಕೊಳ್ಳಬಾರದು. ಅಂತಹ ವ್ಯಕ್ತಿಯ ವ್ಯಕ್ತಿತ್ವವನ್ನು ಗೌರವಿಸುವುದು ಒಳ್ಳೆಯದು. ಇದು ಮತ್ತಷ್ಟು ಸದ್ಗುಣಗಳು ಸೃಷ್ಟಿಯಾಗಲು ಕಾರಣವಾಗುತ್ತದೆ.

ರುದ್ರಮೂರ್ತಿ ಎಂ.ಜೆ., ಚಿತ್ರದುರ್ಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಫೋನ್ ಗೀಳು ಹೆಚ್ಚಳ; ಮಕ್ಕಳ ದೈಹಿಕ, ಮಾನಸಿಕ ಬೆಳವಣಿಗೆಯ ಮೇಲೆ ಪ್ರತಿಕೂಲ ಪರಿಣಾಮ

ಮುಳುವು ಆಗದಿರಲಿ ಮೊಬೈಲ್

ಮೊಬೈಲ್ ಫೋನ್ ಇಂದು ಅನಿವಾರ್ಯ ಸಾಧನವಾಗಿ ಮಾರ್ಪಟ್ಟಿದೆ. ಬುದ್ಧಿ ಮತ್ತು ದೇಹ ಬೆಳೆಯುವ ಹಂತದಲ್ಲಿರುವ ಮಕ್ಕಳಲ್ಲಿಯೂ ಮೊಬೈಲ್ ಗೀಳು ಹೆಚ್ಚುತ್ತಿದ್ದು, ಈ ಬಗ್ಗೆ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ. ಆದರೆ, ಮಕ್ಕಳ ಮೊಬೈಲ್ ಬಳಕೆ ನಿಷೇಧ ಸಾಧ್ಯವಿಲ್ಲದೇ ಇರುವುದರಿಂದ, ಅವರ ಬಳಕೆಯ ಅವಧಿಯನ್ನು (ಸ್ಕ್ರೀನ್ ಟೈಮ್) ಕಡಿಮೆ ಮಾಡುವುದು, ಉತ್ತಮ ವಿಚಾರಗಳ ಕಲಿಕೆಗೆ ಬಳಸುವಂತೆ ಪ್ರೇರೇಪಿಸುವುದು ಸೇರಿದಂತೆ ಹಲವು ರೀತಿಯ ಕ್ರಮಗಳನ್ನು ಕೈಗೊಳ್ಳಬೇಕಿದೆ. ಇಲ್ಲದಿದ್ದರೆ, ಟಿ.ವಿ ಮತ್ತು ಮೊಬೈಲ್ ಫೋನ್ ಮಕ್ಕಳ ಭವಿಷ್ಯದ ಮೇಲೆ ನಕಾರಾತ್ಮಕ ಪರಿಣಾಮಗಳನ್ನು ಬೀರುವ ಅಪಾಯವಿದೆ

ಪ್ರಜಾವಾಣಿ ವಾರ್ತೆ

ಮಕ್ಕಳು ಶಾಲಾ ಕಾಲೇಜುಗಳಲ್ಲಿ ಮೊಬೈಲ್ ಬಳಸುವುದನ್ನು ನಿಷೇಧಿಸುವುದು ಅಪೇಕ್ಷಣೀಯವೂ ಅಲ್ಲ, ಕಾರ್ಯಸಾಧುವೂ ಅಲ್ಲ ಎಂದು ದೆಹಲಿ ಹೈಕೋರ್ಟ್ ಹೇಳಿದೆ. ಆದರೆ, ಇದೇ ವೇಳೆ, ಮಕ್ಕಳು ಮೊಬೈಲ್ ಬಳಸುವುದನ್ನು ಮಿತಗೊಳಿಸಬೇಕೂ ಎಂದು ಹೇಳಿರುವ ಕೋರ್ಟ್, ಅದಕ್ಕಾಗಿ ಮಾರ್ಗಸೂಚಿಯನ್ನೂ ಬಿಡುಗಡೆ ಮಾಡಿದೆ. ಕೋವಿಡ್ ನಂತರದ ದಿನಗಳಲ್ಲಿ ಮಕ್ಕಳಲ್ಲಿ ಮೊಬೈಲ್ ಬಳಕೆಯ ಅವಧಿ (ಸ್ಕ್ರೀನ್ ಟೈಮ್) ಹೆಚ್ಚಾಗಿದ್ದು, ಇದು ಅವರ ಶೈಕ್ಷಣಿಕ ಪ್ರಗತಿಯ ಮೇಲೆ ಅಷ್ಟೇ ಅಲ್ಲದೆ ಅವರ ಆರೋಗ್ಯದ ಮೇಲೆಯೂ ಗಂಭೀರ ಪರಿಣಾಮ ಬೀರುತ್ತಿದೆ.

ಕೋವಿಡ್ ಕಾಣಿಸಿಕೊಳ್ಳುವವರೆಗೆ ಮಕ್ಕಳ ಮೊಬೈಲ್ ಬಳಕೆ ಒಂದು ಮಿತಿಯೊಳಗೇ ಇತ್ತು. ಕೋವಿಡ್ ಸಂದರ್ಭದಲ್ಲಿ ಆನ್‌ಲೈನ್ ಪಾಠದ ಕಾರಣಕ್ಕೆ ಪ್ರತಿಯೊಬ್ಬ ವಿದ್ಯಾರ್ಥಿಯೂ ಸ್ಮಾರ್ಟ್‌ಫೋನ್ ಬಳಸುವುದು ಅನಿವಾರ್ಯವಾಯಿತು. ಹಾಗೆ ಮೊಬೈಲ್ ಫೋನ್‌ಗೆ ಅಂಟಿಕೊಂಡ ಮಕ್ಕಳು, ನಂತರವೂ ಅದನ್ನು ಮುಂದುವರಿಸಿದ್ದಾರೆ. ಪಾಠ ಕೇಳಲು, ಆಟ ಆಡಲು, ಊಟ ಮಾಡುವಾಗಲೂ ಮೊಬೈಲ್ ಬೇಕು ಎನ್ನುವಂತಾಗಿದೆ.

ವಿಶ್ವ ಆರೋಗ್ಯ ಸಂಸ್ಥೆಯು (ಡಬ್ಲ್ಯುಎಚ್‌ಒ) 5ರಿಂದ 17 ವರ್ಷದ ನಡುವಿನ ಮಕ್ಕಳ ಆರೋಗ್ಯಕರ ಬೆಳವಣಿಗೆಗೆ ದಿನಕ್ಕೆ ಕನಿಷ್ಠ 60 ನಿಮಿಷ ಮತ್ತು ವಾರಕ್ಕೆ ಕನಿಷ್ಠ ಮೂರು ದಿನ ಆಟ, ಓಟ, ಸೈಕಲ್ ತುಳಿಯುವಿಕೆ ಮುಂತಾದ ದೈಹಿಕ ಚಟುವಟಿಕೆ ಅಗತ್ಯ ಎಂದು ಹೇಳಿದೆ. ಆದರೆ, ಭಾರತದಲ್ಲಿ (ವಿಶ್ವದಲ್ಲೂ) ಇಂದು ಟಿ.ವಿ. ಮತ್ತು ಮೊಬೈಲ್ ಬಳಕೆ ಹೆಚ್ಚಿದ್ದು, ಕನಿಷ್ಠ ಪ್ರಮಾಣದ ದೈಹಿಕ ಚಟುವಟಿಕೆಗಳಿಂದಲೂ ಮಕ್ಕಳು ಹೊರಗುಳಿಯುತ್ತಿದ್ದಾರೆ. ಕುಟುಂಬದ ಮತ್ತು ಸುತ್ತಲಿನ ಸಮಾಜ/ಪ್ರಪಂಚದ ಜತೆಗೆ ಮಕ್ಕಳಿಗೆ ಸಂಬಂಧ/ಸಂವಹನ ಕಡಿಮೆ ಆಗುತ್ತಿದೆ. ಬಾಲಕ, ಬಾಲಕಿಯರಿಗೆ ಮೊಬೈಲ್ ಮನರಂಜನೆ ಮತ್ತು ಸಾಮಾಜಿಕ ಸಂವಹನದ ಮಾಧ್ಯಮವೂ ಆಗಿದೆ.

ಭಾರತದಲ್ಲಿ ನಿಷೇಧ, ನಿರ್ಬಂಧಗಳ ಕಾರಣಕ್ಕೆ ಮೊಬೈಲ್‌ಗಳನ್ನು ಶಾಲೆಗೆ ತರುವ ಮಕ್ಕಳ ಸಂಖ್ಯೆ ಕಡಿಮೆ ಇದ್ದರೂ (ಶೇ 11) ಮನೆಯಲ್ಲಿ ಮತ್ತು ಹೊರಗೆ ಅದನ್ನು ಬಳಸುವವರ ಸಂಖ್ಯೆ ದೊಡ್ಡದಿದೆ. ವಯಸ್ಕರಂತೆ ಮಕ್ಕಳು ಕೂಡ ಸಾಮಾಜಿಕ ಜಾಲತಾಣಗಳ ಆಕರ್ಷಣೆಗೆ ಒಳಗಾಗಿದ್ದು, ಶೇ 42.9ರಷ್ಟು ಮಕ್ಕಳು ಸಾಮಾಜಿಕ ಜಾಲತಾಣಗಳಲ್ಲಿ ಖಾತೆಗಳನ್ನು ಹೊಂದಿದ್ದಾರೆ ಎಂದು ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ (ಎನ್‌ಸಿಪಿಸಿಆರ್) ಅಧ್ಯಯನವೊಂದು ಉಲ್ಲೇಖಿಸಿದೆ. ದೇಶದಲ್ಲಿ 10 ವರ್ಷದ ಮಕ್ಕಳಲ್ಲಿ ಶೇ 37.8ರಷ್ಟು ಮಂದಿ ಫೇಸ್‌ಬುಕ್ ಖಾತೆ ಹೊಂದಿದ್ದರೆ, ಶೇ 24.3ರಷ್ಟು ಮಂದಿ ಇನ್‌ಸ್ಟಾಗ್ರಾಂ ಖಾತೆ ಹೊಂದಿದ್ದಾರೆ (2021ರ ಮಾಹಿತಿ).

ತಮ್ಮ 9ರಿಂದ 17 ವರ್ಷದೊಳಗಿನ ಮಕ್ಕಳು ವಿಡಿಯೊ, ಗೇಮಿಂಗ್ ಮತ್ತು ಸಾಮಾಜಿಕ ಜಾಲತಾಣಗಳ ಚಟ ಹತ್ತಿಸಿಕೊಂಡಿದ್ದಾರೆ ಎಂದು ದೇಶದ ನಗರ ಪ್ರದೇಶಗಳ ಶೇ 40ರಷ್ಟು ಪೋಷಕರು ಹೇಳಿರುವುದಾಗಿ 2022ರಲ್ಲಿ ಲೋಕಲ್ ಸರ್ಕಲ್ ಎಂಬ ಆನ್‌ಲೈನ್ ಸಮುದಾಯ ವೇದಿಕೆ ನಡೆಸಿದ್ದ ಸಮೀಕ್ಷೆಯ ವರದಿ ತಿಳಿಸಿದೆ. ತಮ್ಮ ಮಕ್ಕಳು ದಿನಕ್ಕೆ ಮೂರುಗಂಟೆಗೂ ಹೆಚ್ಚು ಮೊಬೈಲ್ ಬಳಸುತ್ತಿದ್ದಾರೆ ಎಂದು ಇದೇ ಸಮೀಕ್ಷೆಯಲ್ಲಿ ಶೇ 62 ಪೋಷಕರು ಅಭಿಪ್ರಾಯಪಟ್ಟಿದ್ದಾರೆ.

ಅನೇಕ ಮಕ್ಕಳು ಟಿ.ವಿ ಮತ್ತು ಮೊಬೈಲ್‌ಗೆ ಅಂಟಿಕೊಂಡು, ನಾಲ್ಕು ಗೋಡೆಗಳ ನಡುವೆ ಸ್ವಯಂನಿರ್ಬಂಧಕ್ಕೆ ಒಳಗಾಗಿರುವುದರಿಂದ ಅವರ ಸಾಮಾಜಿಕ ಸಂಪರ್ಕಗಳಿಗೆ, ಅನುಭವಗಳಿಗೆ, ಕಲಿಕೆಗಳಿಗೆ ಪೆಟ್ಟು ಬೀಳುತ್ತಿದೆ. ಬಹುತೇಕ ಮಕ್ಕಳಿಗೆ ಮೊಬೈಲ್ ಎನ್ನುವುದು ಒಂದು ಗೀಳಾಗಿ ಪರಿವರ್ತನೆ ಆಗಿದ್ದು, ಅವರ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತಿದೆ.

ಹೆಚ್ಚು ಟಿ.ವಿ. ನೋಡುವ ಮತ್ತು ಮೊಬೈಲ್ ಬಳಸುವ ಮಕ್ಕಳ ಮಾನಸಿಕ ಸ್ಥಿತಿಯ ಬಗ್ಗೆ ಭೋಪಾಲ್‌ನ ಅಖಿಲ ಭಾರತೀಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಏಮ್ಸ್) ಅಧ್ಯಯನ ಮಾಡಿದೆ. ಈ ಮಕ್ಕಳು ಆತಂಕ, ಅಸಹನೆ, ನಿದ್ರಾಹೀನತೆ, ಉದ್ವಿಗ್ನತೆ ಮುಂತಾದ ಸಮಸ್ಯೆಗಳಿಂದ ಬಳಲುತ್ತಿರುತ್ತಾರೆ. ದೈಹಿಕ ಚಟುವಟಿಕೆಯ ಕೊರತೆಯಿಂದ ಮಕ್ಕಳಲ್ಲಿ ಬೊಜ್ಜು ಹೆಚ್ಚಾಗುತ್ತಿದ್ದು, ವಯಸ್ಸಿಗೆ ತಕ್ಕ ಬೆಳವಣಿಗೆ ಆಗದಿರುವುದು ವರದಿಯಾಗಿದೆ. ಟಿ.ವಿ. ಮತ್ತು ಮೊಬೈಲ್ ವೀಕ್ಷಣೆಯ ಗೀಳಿನಿಂದ ಮಕ್ಕಳನ್ನು ಪಾರು ಮಾಡಿ, ಅವರನ್ನು ಆರೋಗ್ಯವಂತ ಪ್ರಜೆಗಳನ್ನಾಗಿ ರೂಪಿಸುವುದು ಒಂದು ಸವಾಲಾಗಿ ಪರಿಣಮಿಸಿದೆ.

ಮಕ್ಕಳು ಮೊಬೈಲ್ ಬಳಸುವ ವಿಚಾರಕ್ಕೆ ಸಂಬಂಧಿಸಿದಂತೆ ದೇಶದಲ್ಲಿ ನಿರ್ದಿಷ್ಟವಾದ ಕಾನೂನುಗಳಿಲ್ಲ. 'ಡಿಜಿಟಲ್ ಸಾಕ್ಷರತೆಯು ಕಡ್ಡಾಯವಾಗಿರುವ ಈ ಹೊತ್ತಿನಲ್ಲಿ ಮೊಬೈಲ್ ಬಳಕೆ ಸಂಪೂರ್ಣ ನಿಷೇಧ ಸಾಧ್ಯವಿಲ್ಲದ ಮಾತು. ಆದರೆ, 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಮೊಬೈಲ್, ಇಂಟರ್‌ನೆಟ್, ಸಾಮಾಜಿಕ ಜಾಲತಾಣಗಳನ್ನು ಬಳಸುವುದನ್ನು ನಿಯಂತ್ರಿಸಲು ಕಠಿಣ ನಿಯಮಗಳ ಅಗತ್ಯವಿದೆ' ಎಂಬುದು ಬಹುತೇಕ ಪೋಷಕರ ಅಭಿಪ್ರಾಯ.

ಆಧಾರ: ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ವರದಿ–2021, ವಿಶ್ವ ಆರೋಗ್ಯ ಸಂಸ್ಥೆ, ಎಐಐಎಂಎಸ್ ಭೋಪಾಲ್ ವರದಿ, ಭಾರತೀಯ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್ ಮಾರ್ಗಸೂಚಿ

ಸ್ಕ್ರೀನ್ ಟೈಮ್

ಒಂದು ದಿನದಲ್ಲಿ ಮೊಬೈಲ್, ಟಿವಿ, ಕಂಪ್ಯೂಟರ್, ಟ್ಯಾಬ್ಲೆಟ್ ಸೇರಿದಂತೆ ಯಾವುದೇ ಎಲೆಕ್ಟ್ರಾನಿಕ್ಸ್ ಸಾಧನಗಳನ್ನು ಬಳಸುವ ಅವಧಿ

ಮಕ್ಕಳ ಫೋನ್ ಬಳಕೆ ಯಾವುದಕ್ಕೆ ಎಷ್ಟು? (ಶೇಕಡಾವಾರು)

ಶೇಕಡಾ	ಬಳಕೆ
94.80	ಆನ್‌ಲೈನ್ ಕ್ಲಾಸ್
31	ಶೈಕ್ಷಣಿಕ ಮಾಹಿತಿ ಹುಡುಕಾಟ
40	ವಾಟ್ಸ್‌ಆ್ಯಪ್‌ನಂತಹ ಮೆಸೇಜ್ ಆ್ಯಪ್ ಬಳಕೆ
31.30	ಸಂಗೀತ
20.80	ಗೇಮ್
9.50	ಇತರ ಉದ್ದೇಶ



'ಸ್ಕ್ರೀನ್ ಟೈಮ್' ಎಷ್ಟಿರಬೇಕು?

ದಿನಂಪ್ರತಿ ಮಕ್ಕಳ ಸ್ಕ್ರೀನ್‌ಟೈಮ್ ಎಷ್ಟಿರಬೇಕು ಎಂದು ಭಾರತೀಯ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್ (ಐಎಪಿ) ಹೇಳಿದೆ. ಅದರ ಪ್ರಕಾರ,

- 2 ವರ್ಷ ವಯಸ್ಸಿನವರೆಗೆ ಮಕ್ಕಳು ಯಾವುದೇ ಕಾರಣಕ್ಕೂ ಟಿವಿ, ಮೊಬೈಲ್, ಕಂಪ್ಯೂಟರ್, ಟ್ಯಾಬ್ಲೆಟ್ ಇನ್ನಿತರ ಸಾಧನಗಳನ್ನು ವೀಕ್ಷಿಸಬಾರದು. ಸಂಬಂಧಿಕರೊಂದಿಗೆ ಅಪರೂಪಕ್ಕೆ ವಿಡಿಯೊ ಕರೆ ಮಾಡುವುದಕ್ಕೆ ಅವಕಾಶ ಕಲ್ಪಿಸಬಹುದು
- 2ರಿಂದ 5 ವರ್ಷದೊಳಗಿನ ಮಕ್ಕಳ ದಿನದ ಸ್ಕ್ರೀನ್ ಟೈಮ್ ಒಂದು ಗಂಟೆ ದಾಟಬಾರದು. ಈ ಅವಧಿ ಕಡಿಮೆ ಇದ್ದಷ್ಟೂ ಒಳ್ಳೆಯದು
- 6 ವರ್ಷಕ್ಕಿಂತ ಹೆಚ್ಚು ವಯಸ್ಸಿನ ಮತ್ತು ಹದಿಹರೆಯದ ಮಕ್ಕಳು ಸ್ಕ್ರೀನ್ ಟೈಮ್ ಮತ್ತು ಇತರ ಚಟುವಟಿಕೆಗಳೊಂದಿಗೆ ಸಮತೋಲನ ಸಾಧಿಸುವುದು ಬಹಳ ಮುಖ್ಯ. ಪ್ರತಿ ದಿನ ಒಂದು ಗಂಟೆ ದೈಹಿಕ ಚಟುವಟಿಕೆ (ಆಟ), ಅಗತ್ಯ ಅವಧಿಯ ನಿದ್ದೆ (ನಿದ್ದೆಯ ಅವಧಿ ವಯಸ್ಸಿಗೆ ಸಂಬಂಧಿಸಿದಂತೆ ಬದಲಾಗುತ್ತದೆ. ಹದಿಹರೆಯದ ಮಕ್ಕಳು ದಿನಕ್ಕೆ ರಾತ್ರಿ ಹೊತ್ತು 8ರಿಂದ 9 ಗಂಟೆ ನಿದ್ದೆ ಮಾಡಬೇಕು), ಶಾಲಾ ಕೆಲಸ, ಊಟ, ತಮ್ಮ ಹವ್ಯಾಸಗಳು ಮತ್ತು ಕುಟುಂಬಕ್ಕೆ ಸಮಯ ಮೀಸಲಿಡಬೇಕು. ಸಾಕಷ್ಟು ನಿದ್ದೆಯ ಜೊತೆಗೆ ಉಳಿದ ಕೆಲಸಗಳನ್ನು ಮಾಡದೆ ಮೊಬೈಲ್, ಟಿವಿ, ಲ್ಯಾಪ್‌ಟಾಪ್ ನೋಡುತ್ತಾ ಕೂತರೆ, ಅದನ್ನು ಹೆಚ್ಚುವರಿ ಸ್ಕ್ರೀನ್‌ಟೈಮ್ ಎಂದು ಕರೆಯಲಾಗುತ್ತದೆ. ಈ ಅವಧಿಯನ್ನು ಕಡಿಮೆಗೊಳಿಸಬೇಕು

ವಿವಿಧೆಡೆ ನಿರ್ಬಂಧ

- ಯುನೆಸ್ಕೊ ಪ್ರಕಾರ, ಜಾಗತಿಕವಾಗಿ 79 ರಾಷ್ಟ್ರಗಳು ಶಾಲೆಗಳಲ್ಲಿ ಸ್ಮಾರ್ಟ್‌ಫೋನ್ ಬಳಕೆಯನ್ನು ನಿರ್ಬಂಧಿಸಿವೆ
- 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಸಾಮಾಜಿಕ ಜಾಲತಾಣ ಬಳಸುವುದರ ವಿರುದ್ಧ ಆಸ್ಟ್ರೇಲಿಯಾ ಕಾನೂನು ತಂದಿದೆ
- 13 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಸ್ಮಾರ್ಟ್‌ಫೋನ್/ಟ್ಯಾಬ್ಲೆಟ್ ಹೊಂದಿರಬಾರದು ಎಂದು ಡೆನ್ಮಾರ್ಕ್ ಸರ್ಕಾರದ ಆಯೋಗ ಶಿಫಾರಸು ಮಾಡಿದೆ
- ಮಕ್ಕಳು ಮೊಬೈಲ್ ಬಳಕೆ ಮಾಡುವುದರ ವಿರುದ್ಧ ಸ್ಪೇನ್ ಕೂಡ ಕಠಿಣ ನಿಯಮಗಳನ್ನು ಜಾರಿಗೆ ತಂದಿದೆ
- ಗುಜರಾತ್ ಸರ್ಕಾರ 16 ವರ್ಷದೊಳಗಿನ ಮಕ್ಕಳು ಮೊಬೈಲ್ ಬಳಸುವುದಕ್ಕೆ ನಿರ್ಬಂಧ ಹೇರಲು ಮುಂದಾಗಿದೆ
- ಕರ್ನಾಟಕದ ಶಾಲೆಗಳಲ್ಲಿಯೂ ಮೊಬೈಲ್ ಬಳಕೆಯನ್ನು ನಿಷೇಧಿಸಲಾಗಿದೆ

ಮಕ್ಕಳ ಆರೋಗ್ಯಕ್ಕೆ ಮಾರಕ



ಮಿತಿ ಮೀರಿದ ಮೊಬೈಲ್ ಬಳಕೆ ಮಕ್ಕಳ ದೈಹಿಕ, ಮಾನಸಿಕ ಆರೋಗ್ಯದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ ಎಂದು ದೇಶೀಯ ಮತ್ತು ಜಾಗತಿಕ ಮಟ್ಟದಲ್ಲಿ ನಡೆದಿರುವ ಹಲವು ಅಧ್ಯಯನಗಳು ದೃಢಪಡಿಸಿವೆ.

ಮೊಬೈಲ್/ಟ್ಯಾಬ್ಲೆಟ್/ಕಂಪ್ಯೂಟರ್/ಟಿವಿ ವೀಕ್ಷಣೆ ಅಥವಾ ಸ್ಕ್ರೀನ್ ಟೈಮ್ ಜಾಸ್ತಿಯಾದಷ್ಟು ಮಕ್ಕಳ ಏಕಾಗ್ರತೆ ಕುಸಿಯುತ್ತದೆ. ಸ್ಮಾರ್ಟ್‌ಫೋನ್‌ಗಳಲ್ಲಿ ಏಕಕಾಲಕ್ಕೆ ಇಂಟರ್‌ನೆಟ್ ಬ್ರೌಸಿಂಗ್, ಗೇಮಿಂಗ್ ಮುಂತಾದ ಹಲವು ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದು ಮಿದುಳಿನ ಕಾರ್ಯನಿರ್ವಹಣೆಯ ಮೇಲೆ ಒತ್ತಡ ಉಂಟು ಮಾಡುತ್ತವೆ. ಇದು ನೆನಪಿನ ಶಕ್ತಿಯನ್ನು ಕುಗ್ಗಿಸಬಹುದು.

ದಿನದ ಬಹತೇಕ ಸಮಯ ಮೊಬೈಲ್‌ನಲ್ಲೇ ಮುಳುಗುವುದರಿಂದ ಮಕ್ಕಳ ದೈಹಿಕ ಚಟುವಟಿಕೆಗಳು ಕಡಿಮೆಯಾಗುತ್ತವೆ. ನಿರಂತರವಾಗಿ ಪರದೆಯನ್ನು ವೀಕ್ಷಿಸುವುದರಿಂದ ಕಣ್ಣುಗಳು ಬಳಲಿ, ಕಣ್ಣಿಗೆ ಸಂಬಂಧಿಸಿದ ಸಮಸ್ಯೆಗಳು ಕಾಡಬಹುದು. ನಿರಂತರ ಮೊಬೈಲ್ ವೀಕ್ಷಣೆ ನಿದ್ರಾಹೀನತೆಯನ್ನು ತರಬಹುದು. ನಿದ್ದೆಯ ಕೊರತೆಯು ಕಲಿಕಾ ಸಾಮರ್ಥ್ಯ, ನೆನಪು ಶಕ್ತಿ, ಭಾವನೆಗಳ ನಿಯಂತ್ರಣದಂತಹ ಸಮಸ್ಯೆಗಳನ್ನು ತರಬಹುದು.

ಸಾಮಾಜಿಕ ಜಾಲತಾಣಗಳ ನಿರಂತರ ಬಳಕೆಯು ಮಕ್ಕಳಲ್ಲಿ ಮನಸ್ಸು, ಭಾವನೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಉಂಟುಮಾಡಬಹುದು. ಸೈಬರ್ ವಂಚಕರು ಮಕ್ಕಳ ಮಾಹಿತಿಗಳನ್ನು ದುರ್ಬಳಕೆ ಮಾಡಿಕೊಳ್ಳುವ ಅಪಾಯ ಒಂದೆಡೆಯಾದರೆ, ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾಗುವ ಸಂಗತಿಗಳು, ಸಿಗುವ ಮಾಹಿತಿಗಳು ಮಕ್ಕಳ ಮಾನಸಿಕ ಸ್ಥಿತಿಯ ಮೇಲೆ ಪ್ರಭಾವ ಬೀರಬಹುದು. ಇವುಗಳು ಅವರಲ್ಲಿ ಕೋಪ, ಆಕ್ರಮಣಶೀಲ ಸ್ವಭಾವದ ಬೆಳವಣಿಗೆಗೂ ಕಾರಣವಾಗಬಹುದು. ಇದರಿಂದ ಅವರ ಶೈಕ್ಷಣಿಕ ಸೇರಿದಂತೆ ಒಟ್ಟಾರೆ ಬೆಳವಣಿಗೆಯನ್ನು ಕುಂಠಿತಗೊಳ್ಳಬಹುದು.

ಶಿವರಾಜ್‌ಕುಮಾರ್, ಬುಚ್ಚಿ ಬಾಬು ಸನಾ

ಶೂಟಿಂಗ್‌ಗೆ ಮರಳಿದ ಶಿವರಾಜ್‌ಕುಮಾರ್

ಅಮೆರಿಕದಲ್ಲಿ ಮೂತ್ರಕೋಶ ಕ್ಯಾನ್ಸರ್ ಶಸ್ತ್ರಚಿಕಿತ್ಸೆಗೆ ಒಳಗಾಗಿ ಮರಳಿರುವ ನಟ ಶಿವರಾಜ್‌ಕುಮಾರ್ ಸುಮಾರು ಎರಡೂವರೆ ತಿಂಗಳ ಬಳಿಕ ಶೂಟಿಂಗ್‌ಗೆ ಮರಳಿದ್ದಾರೆ.

ಕಾರ್ತಿಕ್ ಅದ್ವೈತ್ ಆ್ಯಕ್ಷನ್ ಕಟ್ ಹೇಳುತ್ತಿರುವ '#131' ಸಿನಿಮಾದ ಮೊದಲ ಹಂತದ ಚಿತ್ರೀಕರಣದ ಬಳಿಕ ಡಿಸೆಂಬರ್‌ನಲ್ಲಿ ಶಿವರಾಜ್‌ಕುಮಾರ್ ಶಸ್ತ್ರಚಿಕಿತ್ಸೆಗೆ ತೆರಳಿದ್ದರು. ಇದೀಗ ಈ ಸಿನಿಮಾದ ಎರಡನೇ ಹಂತದ ಚಿತ್ರೀಕರಣ ಪುನರಾರಂಭವಾಗಿದ್ದು, ಶಿವರಾಜ್‌ಕುಮಾರ್ ಶೂಟಿಂಗ್‌ನಲ್ಲಿ ತೊಡಗಿಸಿಕೊಂಡಿದ್ದಾರೆ. ಸೆಂಚುರಿ ಸ್ಟಾರ್ 131ನೇ ಸಿನಿಮಾ ಇದಾಗಿದ್ದು, ನವೀನ್ ಶಂಕರ್ ಅವರೂ ಬಣ್ಣಹಚ್ಚುತ್ತಿದ್ದಾರೆ. ಈ ಸಿನಿಮಾದ ಜೊತೆಗೆ ನಟ ರಾಮ್‌ಚರಣ್ ನಟನೆಯ 16ನೇ ಸಿನಿಮಾದಲ್ಲೂ ಶಿವರಾಜ್‌ಕುಮಾರ್ ಪ್ರಮುಖ ಪಾತ್ರವೊಂದನ್ನು ನಿರ್ವಹಿಸಲಿದ್ದು, ಇತ್ತೀಚೆಗೆ ತಮ್ಮ ಪಾತ್ರದ ಲುಕ್ ಟೆಸ್ಟ್ ನೀಡಿ ಬಂದಿದ್ದಾರೆ. ಇದು ರಾಮ್‌ಚರಣ್ ಹಾಗೂ ಶಿವರಾಜ್‌ಕುಮಾರ್ ಜೊತೆಯಾಗಿ ನಟಿಸುತ್ತಿರುವ ಮೊದಲ ಸಿನಿಮಾವಾಗಿದೆ. ಶೀಘ್ರದಲ್ಲೇ ಅವರು ಚಿತ್ರೀಕರಣದಲ್ಲಿ ಭಾಗವಹಿಸಲಿದ್ದಾರೆ ಎಂದು ಚಿತ್ರತಂಡ ತಿಳಿಸಿದೆ. ಈ ಚಿತ್ರವನ್ನು ಬುಚ್ಚಿ ಬಾಬು ಸನಾ ನಿರ್ದೇಶಿಸುತ್ತಿದ್ದು, ಜಾಹ್ನವಿ ಕಪೂರ್ ನಾಯಕಿಯಾಗಿ ನಟಿಸುತ್ತಿದ್ದಾರೆ. ❖

'ವೈಲ್ಡ್ ಟೈಗರ್ ಸಫಾರಿ'ಯಲ್ಲಿ ನಿಮಿಕಾ

'ಕ್ರಾಂತಿ' ಚಿತ್ರದ ಶೇಕ್ ಇಟ್ ಪುಷ್ಪವತಿ ಹಾಡಿನ ಮೂಲಕ ಗುರುತಿಸಿಕೊಂಡಿದ್ದ ನಿಮಿಕಾ ರತ್ನಾಕರ್ 'ವೈಲ್ಡ್ ಟೈಗರ್ ಸಫಾರಿ' ಚಿತ್ರದ ನಾಯಕಿಯಾಗಿ ಆಯ್ಕೆಗೊಂಡಿದ್ದಾರೆ. 'ಕೆಜಿಎಫ್' ತಂಡದಲ್ಲಿ ಕೆಲಸ ಮಾಡಿದ್ದ ಚಂದ್ರಮೌಳಿ ನಿರ್ದೇಶನ ಈ ಚಿತ್ರ ಇಂದು(ಮಾ.7) ಸೆಟ್ಟೇರಲಿದೆ.

'ಓಂಪ್ರಕಾಶ್ ರಾವ್ ನಿರ್ದೇಶನದ 'ತ್ರಿಶೂಲಂ' ಚಿತ್ರದಲ್ಲಿ ಉಪೇಂದ್ರ ಜೊತೆ ಕಾಣಿಸಿಕೊಂಡಿದ್ದು, ಚಿತ್ರೀಕರಣವೀಗ ಅಂತಿಮ ಹಂತದಲ್ಲಿದೆ. 'ಫ್ಲರ್ಟ್', 'ಫೀನಿಕ್ಸ್' ಚಿತ್ರಗಳಲ್ಲಿ ನಟಿಸುತ್ತಿರುವೆ. ಮಹಿಳಾ ಪ್ರಧಾನ ಸಿನಿಮಾಗಳಲ್ಲಿಯೇ ಅವಕಾಶ ಸಿಗುತ್ತಿರುವುದು ಖುಷಿಯ ವಿಷಯ' ಎನ್ನುತ್ತಾರೆ ನಿಮಿಕಾ.

ಶಿಥಿಲ್ ಪೂಜಾರಿ ಚಿತ್ರದ ನಾಯಕ. ಬಾಲಿವುಡ್‌ನ ಜನಪ್ರಿಯ ಡಾನ್ಸರ್‌ಗಳಾದ ಧರ್ಮೇಶ್ ಹಾಗೂ ಸುಶಾಂತ್ ಪೂಜಾರಿ ಈ ಚಿತ್ರದಲ್ಲಿ ಬಹುಮುಖ್ಯವಾದ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಎ.ಜೆ ಶೆಟ್ಟಿ ಛಾಯಾಚಿತ್ರಗ್ರಹಣವಿದೆ. ❖

ನಿಮಿಕಾ ರತ್ನಾಕರ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಸಂಸಾರವೆಂಬ ಸರ್ಕಾರ

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

147

ಒಮ್ಮೆ ಚಾಕ್ ಪೀಸ್ ಬ್ಲ್ಯಾಕ್ ಬೋರ್ಡ್‌ಗೆ ಹೇಳಿತಂತೆ, 'ನೀನು ಬಹಳ ಕಪ್ಪು. ನಾನು ಬೆಳ್ಳಗಿದ್ದೇನೆ' ಅಂತ. ಅದಕ್ಕೆ ಬ್ಲ್ಯಾಕ್ ಬೋರ್ಡ್ 'ನಾವು ಕಪ್ಪಗೆ ಇರೋದರಿಂದಲೇ ನಿಮಗೆ ಬೆಲೆ. ನಮ್ಮ ಮೇಲೆ ಬರೆದಿದ್ದು ಕಾಣುವುದು' ಎಂದು ಉತ್ತರಿಸಿತಂತೆ. ಕಪ್ಪಗಿದ್ದ ರೈತರು ಹೊಲದಲ್ಲಿ ದುಡಿದಿದ್ದರಿಂದಲೇ ಕಚೇರಿಯಲ್ಲಿ ಕುಳಿತ ಆಫೀಸರ್‌ಗಳಿಗೆ ಬೆಲೆ ಎಂಬೋದನ್ನು ತಿಳಕೋಬೇಕು. ಕಪ್ಪು ಬಿಳಿಪು ಇಬ್ಬರೂ ಒಟ್ಟಿಗೆ ಇದ್ದರೆ ಮಾತ್ರ ವಿದ್ಯೆ. ಆ ಮೂಲಕವೇ ಜಗತ್ತಿಗೆ ಜ್ಞಾನ ಸಿಗತೈತಿ ಅನ್ನೋದು ನೆನಪಿನಲ್ಲಿರಬೇಕು. ಈ ಜಗತ್ತಿನಲ್ಲಿ ಯಾವುದೂ ಶ್ರೇಷ್ಠ ಅಲ್ಲ. ಯಾವುದೂ ಕನಿಷ್ಠ ಅಲ್ಲ. ಹೂವು ಬೇರಿಗೆ 'ನೀವು ಎಷ್ಟು ಹೊಲಸು ಇದ್ದೀರಿ ನೋಡಿ. ನಾವು ನೋಡಿ ಎಷ್ಟು ಬೆಳ್ಳಗಿದ್ದೀವಿ' ಅಂತ ಹೇಳಿತು. ಅದಕ್ಕೆ ಬೇರು 'ಆಯ್ತು ಇವತ್ತಿನಿಂದಲೇ ಹೊಲಸನ್ನು ಹೀರುವುದನ್ನು ನಿಲ್ಲಿಸುತ್ತೇನೆ. ನನ್ನ ಮೈ ಹೊಲಸು ಮಾಡಿಕೊಳ್ಳುವುದಿಲ್ಲ' ಎಂದು ಹೇಳಿ ನೀರು ಗೊಬ್ಬರ ಎಲ್ಲವನ್ನೂ ತೆಗೆದುಕೊಳ್ಳುವುದನ್ನು ನಿಲ್ಲಿಸಿತು. ಆಗ ಹೂವು ಬಾಡಲು ಆರಂಭಿಸಿತು. ಆಗ ಬೇರು ಹೂವಿಗೆ 'ನಾವು ಹೊಲಸು ಹಚ್ಚಿಕೊಂಡಿದ್ದಕ್ಕೆ ನೀವು ಬೆಳ್ಳಗಾಗಿ ದೇವರ ತಲೆ ಮೇಲೆ ಕುಳಿತಿದ್ದೀರಿ. ಹಣ್ಣಾಗಿ ವಿದೇಶಕ್ಕೆ ರಫ್ತಾಗಿದ್ದೀರಿ' ಎಂದು ಹೇಳಿತು. ಹಾಗೆಯೇ ತಂದೆ ತಾಯಿ ಎಂದರೆ ಹೊಲಸು ಹಚ್ಚಿಕೊಂಡ ಬೇರುಗಳಿದ್ದ ಹಾಗೆ. ಹೊಲದಲ್ಲಿ ದುಡಿಯುತ್ತಿರುತ್ತಾರೆ. ಹಣ್ಣು, ಹೂವಿನಂತೆ ಮಕ್ಕಳು ವಿದೇಶಕ್ಕೆ ಹಾರುತ್ತಾರೆ. ಮಕ್ಕಳು ವಿದೇಶಕ್ಕೆ ಹೋದರೂ ತಂದೆ ತಾಯಿ ಹೊಲದಲ್ಲಿ ದುಡಿಯುವುದನ್ನು ಬಿಟ್ಟಿಲ್ಲ. ಯಾವುದನ್ನೂ ಹೊಲಸು ಎನ್ನಲಾಗದು. ಎರಡೂ ಬೇಕಾಗುತ್ತದೆ.

ಚೀನಾದ ಗಾದೆಯೊಂದಿದೆ; 'ನಮ್ಮ ವೈರಿಗಳು ನಮ್ಮ ಮೇಲೆ ಕಲ್ಲು ಒಗೆದರೆ ಆ ಕಲ್ಲುಗಳನ್ನು ತೆಗೆದುಕೊಂಡೇ ನಮ್ಮ ಮನೆ ಕಟ್ಟಿಕೊಳ್ಳಬೇಕು' ಅಂತ. ಜಗತ್ತಿನಲ್ಲಿ ನೀವು ಹೇಗಿದ್ದರೂ ಜನ ಟೀಕೆ ಮಾಡುತ್ತಾರೆ. ಅದಕ್ಕೆ ಹಳ್ಳಿಕಡೆ 'ಗಡಿಗೆ ಬಾಯಿ ಮುಚ್ಚಬಹುದು, ಇವರ ಬಾಯಿ ಮುಚ್ಚಲಾಗದು' ಎಂದು ಹೇಳುತ್ತಾರೆ. ಜಗತ್ತಿನಲ್ಲಿ ಯಾವುದಕ್ಕೂ ಸಮಾಧಾನ ಇಲ್ಲ. ಜಗತ್ತು ಅಂದ ಮೇಲೆ ಒಂದು ಮಾತು ಬರುತ್ತದೆ. ಹೋಗುತ್ತದೆ. ತಿಳಕೊಂಡು ಬದುಕಬೇಕು. ಹೊಂದಿಕೊಂಡು ಹೋಗುವುದನ್ನು ಕಲಿಯಬೇಕು.

ಒಂದು ಕುಟುಂಬ ನಡೆಸುವುದು ಎಂದರೆ ಅಷ್ಟು ಹಗುರ ಅಲ್ಲ. ಅದೂ ಸರ್ಕಾರ ನಡೆಸಿದಂತೆಯೆ. ನಮ್ಮ ಮನೆಯಲ್ಲಿಯೇ ಸರ್ಕಾರ ಇದೆ. ನೀವು ಅಡುಗೆ ಮನೆಗೆ ಹೋದರೆ ಆಹಾರ ಸಚಿವರಾಗುತ್ತೀರಿ. ದೇವರ ಕೋಣೆಗೆ ಹೋದರೆ ಮುಜರಾಯಿ ಸಚಿವರಾಗುತ್ತೀರಿ. ಕೋಣೆಯಲ್ಲಿ ಮಲಗಿದರೆ ವಸತಿ ಖಾತೆ ಸಚಿವರಾಗುತ್ತೀರಿ. ಟಿವಿ ನೋಡುತ್ತಾ ಕುಳಿತರೆ ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವರಾಗುತ್ತೀರಿ. ಮಕ್ಕಳ ಪಾಲಿಗೆ ಶಿಕ್ಷಣ ಸಚಿವರಾಗುತ್ತೀರಿ. ಸಂಬಂಧಿಕರಿಗೆ ಮುಯ್ಯಿ ಅದು ಇದು ಅಂತ ಮಾಡಿದರೆ ಸಮಾಜ ಕಲ್ಯಾಣ ಸಚಿವರಾಗುತ್ತೀರಿ. ನೀವು ಆರ್ಥಿಕ ಸಚಿವರೂ ಹೌದು. ಕೆಲವರು ಅಬಕಾರಿ ಸಚಿವರೂ ಆಗ್ತಾರೆ. ಕುಟುಂಬ ಕಲ್ಯಾಣ ಸಚಿವರೂ ಹೌದು. ಹಿಂದೆ ಯಾರಿಗಾದರು ಪತ್ನಿಯನ್ನು ಪರಿಚಯ ಮಾಡಿಸುವಾಗ 'ಇವರು ನಮ್ಮ ಕುಟುಂಬ' ಎನ್ನುತ್ತಿದ್ದರು. ಮನೆಯಲ್ಲಿ ದುಡಿಯುವವರು ಯಾರೇ ಆದರೂ ಮನೆಯನ್ನು ಸರಿಯಾಗಿ ನೋಡಿಕೊಂಡು ಹೋಗುವವರು ಮಹಿಳೆಯರೇ ಆಗಿದ್ದರಿಂದ ಅವರಿಗೆ ಕುಟುಂಬ ಎನ್ನುತ್ತಿದ್ದರು. ಇದನ್ನು ತಿಳಿದುಕೊಂಡು ಬದುಕಬೇಕು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಶುಕ್ರವಾರ ಮಾರ್ಚ್ 7, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ಅಷ್ಟಮಿ ಗಂ. 09-19 ನಕ್ಷತ್ರ: ಮೃಗಶಿರ ಗಂ. 23-32 ಯೋಗ: ಪ್ರೀತಿ ಗಂ. 18-15 ಕರಣ: ಬವ ಗಂ. 09-19, ಕುಂಭ ಮಾಸದ 23 ನೇ ದಿನ, ಮಳೆನಕ್ಷತ್ರ: ಪೂರ್ವಾಭಾದ್ರ 1.
ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 06-46 ಸೂರ್ಯಾಸ್ತ : 06-37
ಮುಸ್ಲಿಂ ದಿನಾಂಕ : 06 ರಂಜಾನ್
ಅದೃಷ್ಟ ಸಂಖ್ಯೆ : 7, 4

ಮೇಷ: ಸಂಚಾರಶೀಲರಾಗಿರುವ ನೀವು ಪ್ರಯಾಣದಲ್ಲಿ ತುಸು ಜಾಗ್ರತೆ ವಹಿಸುವುದು ಅಗತ್ಯ. ರೋಗಬಾಧೆಯಿಂದಾಗಿ ಕಷ್ಟ ಅನುಭವಿಸುವಿರಿ. ಶೀತ ದೂರವಾಗುವುದು.

ವೃಷಭ: ಯಾವುದೇ ರೀತಿಯ ಹಣ ಹೂಡಿಕೆ ವಿಚಾರದಲ್ಲಿ ಯೋಚಿಸಿ ನಿರ್ಧಾರ ಕೈಗೊಳ್ಳುವುದು ಉತ್ತಮ. ಸಂಬಂಧಿಕರ ವಲಯದಲ್ಲಿ ಅಭಿಪ್ರಾಯಗಳು ದೂರಾಗುವುದು. ಶುಭ ಸುದ್ದಿ ಬರಲಿದೆ.

ಮಿಥುನ: ಕಾಫಿ ಹಾಗೂ ಏಲಕ್ಕಿ ಬೆಳೆಗಾರರು ಉತ್ತಮ ಫಸಲು ಎದುರು ನೋಡಬಹುದು. ವಿನಾಕಾರಣ ದ್ವೇಷವನ್ನು ಬೆಳೆಸಿಕೊಳ್ಳಬೇಡಿ. ಸ್ವಂತ ಉದ್ಯೋಗಿಗಳಿಗೆ ಅಧಿಕ ಲಾಭ.

ಕರ್ಕಾಟಕ: ಸಾಮರ್ಥ್ಯ, ದಕ್ಷತೆ ಹಾಗೂ ಸೇವಾ ಮನೋಭಾವಗಳಿಂದಾಗಿ ಸಂಸ್ಥೆಯಲ್ಲಿ ಜವಾಬ್ದಾರಿಯುತ ಹುದ್ದೆ ನಿಮ್ಮದಾಗಿಸಿಕೊಳ್ಳುವಿರಿ. ಬಾಲ್ಯದ ಸ್ನೇಹಿತರ ಆಶ್ಚರ್ಯಕರ ಭೇಟಿ ಸಂತೋಷವನ್ನು ಉಂಟು ಮಾಡಲಿದೆ.

ಸಿಂಹ: ಮನಸ್ಥಿತಿಗೆ, ಆಲೋಚನೆಗಳಿಗೆ ಸರಿಯಾದ ವಾತಾವರಣ ದೊರಕುವ ಲಕ್ಷಣಗಳಿವೆ. ಶ್ವಾಸಕೋಶಕ್ಕೆ ಸಂಬಂಧಪಟ್ಟ ಕಾಯಿಲೆಗಳ ಬಗ್ಗೆ ನಿಗಾ ಇರಲಿ. ದೇವತಾ ಕಾರ್ಯಗಳನ್ನು ನಡೆಸುವುರಿಂದ ಶುಭವಾಗಲಿದೆ.

ಕನ್ಯಾ: ಆಧ್ಯಾತ್ಮಿಕ ವಿಷಯಗಳಲ್ಲಿ ಆಸಕ್ತಿ ಹೆಚ್ಚಿ ಗ್ರಂಥ ಸಂಪಾದನೆ, ಪ್ರಕಟಣೆ ಕಾರ್ಯಗಳಲ್ಲಿ ತೊಡಗುವಿರಿ. ವೃತ್ತಿಯಲ್ಲಿ ಅನುಭವ ಹೊಂದಿದವರಿಂದ ಬೈಗುಳ ಕೇಳಬೇಕಾಗುವುದು. ಗೃಹ ನಿರ್ಮಾಣದ ಯೋಜನೆಗೆ ಯೋಚಿಸಬಹುದು.

ತುಲಾ: ವ್ಯಾಪಾರ ವ್ಯವಹಾರಗಳಲ್ಲಿ ನವೀನ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದರಿಂದ ಅಭಿವೃದ್ಧಿ ನೋಡಬಹುದು. ಇಂದಿನ ಕೆಲಸಕ್ಕೆ ಸಹೋದ್ಯೋಗಿಗಳನ್ನು ಹುರಿದುಂಬಿಸುವ ಕೆಲಸವನ್ನು ಮಾಡಿ.

ವೃಶ್ಚಿಕ: ಕಷ್ಟಗಳಿಗೆ ನೆರವಾಗಿ ಸಮಯ ವ್ಯರ್ಥವಾಗಲಿದೆ. ಆದರೆ ವ್ಯರ್ಥವೆಂದು ಭಾವಿಸಬೇಡಿ. ರಕ್ತದೊತ್ತಡ ವ್ಯತ್ಯಾಸವಾಗುವ ಸಾಧ್ಯತೆ ಇರುವುದರಿಂದ ಜಾಗ್ರತರಾಗಿರಿ. ವಾಗ್ವಾದಕ್ಕೆ ಇಳಿಯಬೇಡಿ.

ಧನು: ವೈರಾಗ್ಯ ಹೊಂದಿರುವ ನೀವು ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಂಡು ಪರಿಶ್ರಮದಿಂದ ದುಡಿದರೆ ಪ್ರಗತಿ ಹಾದಿಯನ್ನು ಕಾಣಬಹುದು. ಸುಗಂಧ ವಸ್ತುಗಳ ಮಾರಾಟದಲ್ಲಿ ಹೆಚ್ಚಳ ಹಾಗೆಯೇ ಲಾಭವೂ ಇರುವುದು.

ಮಕರ: ಹಣಕಾಸಿನ ವಿಚಾರದಲ್ಲಿ ವ್ಯತ್ಯಾಸಗಳಾಗಿ ಉದ್ಯೋಗದಲ್ಲಿ ಛೀಮಾರಿ ಪ್ರಸಂಗ ಇದ್ದೀತು. ಕುಟುಂಬದವರೊಡನೆ ಮನರಂಜನೆಗಾಗಿ ಅಲ್ಪ ಕಾಲ ಮೀಸಲಿಡಲು ಪ್ರಯತ್ನಿಸಿ. ಕೃಷಿ ಕಾರ್ಯಗಳು ಬಿಡುವಿಲ್ಲದೆ ನಡೆಯುವುದು.

ಕುಂಭ: ಗೃಹೋಪಕರಣ ವಸ್ತುಗಳ ಖರೀದಿಯಲ್ಲಿ ಹಾಗೂ ಕೆಲವಾರು ಯೋಜನೆಗಳಲ್ಲಿ ಎಡವಿದ ಅನುಭವ ಆಗಬಹುದು. ಶ್ರಮದಿಂದಾಗಿ ಆರ್ಥಿಕವಾಗಿ ಸಾಲ ತೀರಿದ ನೆಮ್ಮದಿಯನ್ನು ಹೊಂದಬಹುದು.

ಮೀನ: ವಿವಿಧ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಮನಸ್ಸಿಗೆ ನೆಮ್ಮದಿ ಇರುವುದು. ಮಡದಿಯ ಭಾವನೆಗಳಿಗೆ ಬೆಲೆ ಕೊಡುವುದನ್ನು ಅಭ್ಯಾಸ ಮಾಡಿಕೊಳ್ಳಿ.

ಪದಬಂಧ 5974

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಆಮೇಲೆ ಕಾಣಿಸಿದ ಕೂರ್ಮ! (2)
3.ಸಂಪೂರ್ಣ ಹಾನಿಯಿದು (4)
5.ಮಯನ ಬಳಿ ಕಳೆದ ಕಾಲ (3)
6.ವನದಲ್ಲಿ ತಿಳಿಸಿರುವ ಸುದ್ದಿ (4)
8.ನರಕಾಧಿಪತಿ ಹೊತ್ತಿರುವ ಅಧಿಕ ಒಜ್ಜೆ (4)
12.ಭೂಮಿಗೂ ಆಕಾಶಕ್ಕೂ ನಡುವಣ ಪ್ರದೇಶ (4)
14.ಒಪ್ಪವಾಗಿ ರಾಗದೊಡನೆ ಮೂಡಿದ ಪ್ರೀತಿ (4)
15.ಉತ್ತರದವರು ಪಡೆದುಕೊಂಡಿರುವ ಸಂಬಳ (3)
16.ಸಭೆಯನ್ನು ವಿಸರ್ಜಿಸುವುದು (4)
17.ಜಾಗರಣೆ ಮಾಡಿದ ಬುದ್ಧಿವಂತೆ (2)

ಮೇಲಿಂದ ಕೆಳಕ್ಕೆ
1.ಒಳ್ಳೆಯ ನಡತೆಯಿಲ್ಲದಿರುವಿಕೆ (5)
2.ಆದಾಯ ಮತ್ತು ಖರ್ಚು (4)
3.ವರ ನೋಡುತ್ತಿರುವ ಕೊಳ (4)
4.ರೋಗ ಮೊದಲಾದವನ್ನು ಗುಣಪಡಿಸುವಿಕೆ (3)
7.ತಪ್ಪನ್ನು ಮನ್ನಿಸುವುದು (2)
9.ಒಜ್ಜೆಯಾಗಿರುವ ನಮ್ಮ ದೇಶ (3)
10.ಕೆಲಸಕ್ಕೆ ಬಾರದ ಮಾತಿದು (5)
11.ನೊಣ ಸಂಗ್ರಹಿಸಿರುವ ಮಧು (2)
12.ಅಂಗಾಗಗಳಿಗೆಲ್ಲಾ ಸುಗಂಧ ಲೇಪನ (4)
13.ಕ್ಷಮೆಯನ್ನು ಯಾಚಿಸುವುದು (4)
14.ಆಗಸದತ್ತ ನೋಡುತ್ತಿರುವ ಮಡಿವಾಳ (3)



5973ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
4.ನವಸಾಗರ 5.ಮುದುಕ
7.ಸಮರಸ 9.ರಣಾಂಗಣ
10.ಮಾವುತ 11.ಅಂತರಂಗ
13.ಮನೋರಥ
15.ಪ್ರಾಕಾರ 16.ರಜತೋತ್ಸವ

ಮೇಲಿಂದ ಕೆಳಕ್ಕೆ:
1.ನವಸುಮ 2.ಭಾರ
3.ಚದುರಂಗ 6.ತರತಮ
8.ಸಮಾಗಮ 12.ತರಕಾರಿ
14.ರಥೋತ್ಸವ 16.ರವಿ

ಸುಡೊಕು 6359

	2			3		4		
4		1	5		2		8	
				4			5	1
	9				4	6		
6		2		8				5
		4	2			3		
				2				9
	1	3	8		5			
	4		6		3	8		2

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6358 ಸುಡೊಕು

5	3	1	4	8	6	2	9	7
7	8	4	2	3	9	1	5	6
2	9	6	1	5	7	8	4	3
8	1	7	5	4	2	3	6	9
3	6	2	9	7	1	5	8	4
9	4	5	8	6	3	7	1	2
1	7	8	3	9	4	6	2	5
4	2	3	6	1	5	9	7	8
6	5	9	7	2	8	4	3	1

'ಬ್ರ್ಯಾಂಡ್ ಬೆಂಗಳೂರು' ಭವಿಷ್ಯದ ನಗರ ನಿರ್ಮಾಣ

ಬೆಂಗಳೂರು ನಗರವು ಮೂಲತಃ 872 ಹಳ್ಳಿಗಳ ಒಂದು ಜಾಲ. ಕೆಂಪೇಗೌಡರು ಬೆಂಗಳೂರಿನ ಗಡಿಗಳಾಗಿ ನಾಲ್ಕು ದಿಕ್ಕುಗಳಲ್ಲೂ ಗಡಿಗೋಪುರಗಳನ್ನು ಸ್ಥಾಪಿಸಿದ್ದರು. ಆದರೆ, ಅವುಗಳ ಆಚೆಗೂ ಬೆಂಗಳೂರು ನಗರವು ನಿರಂತರವಾಗಿ ಬೆಳೆಯುತ್ತಲೇ ಇದೆ. ಈಗಂತೂ ಬೆಂಗಳೂರು ನಗರವು ನಾಲ್ಕು ದಿಕ್ಕುಗಳಲ್ಲೂ ಅಗಾಧವಾಗಿ ಬೆಳೆದಿದ್ದು, ಹಿಂದಿನ ಗಡಿಗೋಪುರಗಳು ಈಗ ನಗರದ ಮಧ್ಯಭಾಗಕ್ಕೆ ಬಂದುಬಿಟ್ಟಿವೆ. ಏತನ್ಮಧ್ಯೆ ಬೆಂಗಳೂರು ನಗರವು `ಪಿಂಚಣಿದಾರರ ಸ್ವರ್ಗ', `ಉದ್ಯಾನ ನಗರಿ', `ಹವಾನಿಯಂತ್ರಿತ ನಗರ', `ಪಬ್ ಸಿಟಿ' ಹೀಗೆ ಬೇರೆಬೇರೆ ವಿಶೇಷಣಗಳಿಂದ ಗುರುತಿಸಲ್ಪಟ್ಟಿದ್ದು, ಇತ್ತೀಚೆಗೆ `ಐಟಿ ಸಿಟಿ' ಎಂದು ಕರೆಸಿಕೊಳ್ಳುತ್ತಿದೆ. ಇತ್ತೀಚೆಗಂತೂ ಬೆಂಗಳೂರು ನಗರವು ಜ್ಞಾನಾಧಾರಿತ ಉದ್ಯಮಗಳ ಅಚ್ಚುಮೆಚ್ಚಿನ ತಾಣವಾಗಿದೆ.

ಮಾಹಿತಿ ತಂತ್ರಜ್ಞಾನ ವಲಯವು ಇಲ್ಲಿ ಉಬ್ಬರದ ಬೆಳವಣಿಗೆಯನ್ನು ಕಾಣತೊಡಗಿದ ಮೇಲಂತೂ ನಮ್ಮ ಬೆಂಗಳೂರು, ಇಡೀ ವಿಶ್ವದಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಒಂದಾಗಿದೆ. ಇದರೊಂದಿಗೆ, ನಾಗರಿಕ ಸೌಲಭ್ಯಗಳ ಕೊರತೆಯೂ ಉದ್ಭವಿಸಿದ್ದು, ಬೆಳೆದಿರುವ ನಗರದ ಬೇಡಿಕೆಗೆ ಇದು ಸಾಕಾಗುತ್ತಿಲ್ಲ. ಹೊರವರ್ತುಲ ರಸ್ತೆ, ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು ಮೆಟ್ರೋ ರೈಲು ಮುಂತಾದ ಕೆಲವು ಯೋಜನೆಗಳು ಒಂದಿಷ್ಟು ಪರಿಹಾರದಂತೆ ಕಾಣುತ್ತಿವೆ, ನಿಜ. ಆದರೆ, ನಾವು ಈ ನಾಗರಿಕ ಸೌಲಭ್ಯಗಳ ಕೊರತೆಯನ್ನು ಬಗೆಹರಿಸಿ, ಬೆಂಗಳೂರು ಎಂದರೆ ದಕ್ಷ ಮತ್ತು ಅನುಕೂಲಕರ ನಗರವೆಂಬ ಹೆಗ್ಗುರುತು ಮೂಡಿಸಲು ನಮಗೊಂದು ಸಮಗ್ರ ದೃಷ್ಟಿಕೋನದ ಜರೂರಿದೆ.

ರಸ್ತೆ ಅಗಲೀಕರಣಕ್ಕೆ ಪರ್ಯಾಯ ಸುರಂಗ ರಸ್ತೆ ನಿರ್ಮಾಣ

''ಹಾಲಿ ಇರುವ ರಸ್ತೆಗಳ ವಿಸ್ತರಣೆಯು ಅಸಾಧ್ಯವಾಗಿರುವುದರಿಂದ ಬೆಂಗಳೂರಿನ ಭವಿಷ್ಯದ ದೃಷ್ಟಿಯಿಂದ ಸುರಂಗ ರಸ್ತೆಗಳನ್ನು ನಿರ್ಮಿಸುವುದು ಅತ್ಯವಶ್ಯಕ" ಎಂದು ಪ್ರತಿಪಾದಿಸುತ್ತಿದ್ದಾರೆ. ರಸ್ತೆ ಅಗಲೀಕರಣ ಯೋಜನೆಯನ್ನು ಕೈಗೆತ್ತಿಕೊಂಡರೆ ಅಗಾಧ ಪ್ರಮಾಣದಲ್ಲಿ ಹಣ ವೆಚ್ಚ ಮಾಡಬೇಕಾಗುತ್ತದೆ. ಭೂಮಿ ಖರೀದಿಗಾಗಿಯೇ ₹ 3 ಲಕ್ಷ ಕೋಟಿ ಆರ್ಥಿಕ ಸಂಪನ್ಮೂಲ ಕ್ರೋಡೀಕರಿಸಬೇಕಾಗುತ್ತದೆ ಎಂಬ ಬಗ್ಗೆ ಗಮನ ಸೆಳೆದಿದ್ದಾರೆ.. "ನಾವು ಕೇವಲ ಅರಮನೆ ಮೈದಾನದ ಸುತ್ತಮುತ್ತ ರಸ್ತೆ ವಿಸ್ತರಣೆ ಮಾಡಬೇಕೆಂದರೂ ಭೂಸ್ವಾಧೀನಕ್ಕೆ 3 ಸಾವಿರ ಕೋಟಿ ರೂಪಾಯಿ ಬೇಕಾಗುತ್ತದೆ. ಹೀಗಿರುವಾಗ, ಸುರಂಗ ರಸ್ತೆಯಂತಹ ಬೃಹತ್ ಮೂಲಸೌಕರ್ಯ ಯೋಜನೆಗಳನ್ನು ಮಾಡಲ ಎಷ್ಟು ಹಣ ಬೇಕಾಗುತ್ತದೆ ಎಂಬುದನ್ನು ಊಹಿಸಿಕೊಳ್ಳಬಹುದು," ಎಂದೂ ಅವರು ಹೇಳಿದ್ದಾರೆ. ರಸ್ತೆಗಳ ಅಗಲೀಕರಣಕ್ಕೆ ಪರ್ಯಾಯವಾಗಿ ಸುರಂಗ ರಸ್ತೆಗಳ ನಿರ್ಮಾಣವೇ ಪ್ರಮುಖ ಪರಿಹಾರ ಎಂಬುದು ಅವರ ದೃಢ ನಿಲುವಾಗಿದೆ.

–ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ

₹40,000 ಕೋಟಿ
ಸುರಂಗ ರಸ್ತೆ: (ಹೆಬ್ಬಾಳದಿಂದ ಸರ್ಜಾಪುರ ಹಾಗೂ ಕೆ.ಆರ್.ಪುರಂನಿಂದ ನಾಯಂಡಹಳ್ಳಿ)

₹15,000 ಕೋಟಿ
ಎಲೆವೇಟೆಡ್ ಕಾರಿಡಾರುಗಳು: ಡಬಲ್ ಡೆಕ್ಕರ್ (ಮೆಟ್ರೊ ಹಾಗೂ ರಸ್ತೆ ಮೇಲ್ಸೇತುವೆ) 'ನಮ್ಮ ಮೆಟ್ರೊ' ಹಾಗೂ ಬಿಬಿಎಂಪಿ ವೆಚ್ಚ ಹಂಚಿಕೆ

₹3,000 ಕೋಟಿ
'ಸಂಚಾರ ಯುಕ್ತ' (ರಾಜಕಾಲುವೆ ಗುಂಟ ಬಫರ್ ವಲಯದಲ್ಲಿ ರಸ್ತೆ ನಿರ್ಮಾಣ)

₹1,000 ಕೋಟಿ
ಸ್ಕೈಡೆಕ್ (ಪ್ರವಾಸೋದ್ಯಮ ಆಕರ್ಷಣೆಯಾಗಿ 250 ಮೀಟರ್ ಎತ್ತರದ ನಿರ್ಮಿತಿ)

₹12,500 ಕೋಟಿ
ಮೆಜೆಸ್ಟಿಕ್ ಹಾಗೂ ಕೆಂಗೇರಿ ನಡುವಿನ ನಾಡಪ್ರಭು ಕೆಂಪೇಗೌಡ ಬಡಾವಣೆ ಮೂಲಕ ರೈಲು- ರಸ್ತೆ ಯೋಜನೆಗೆ ಬಿಬಿಎಂಪಿ ಪಾಲು

₹6,000 ಕೋಟಿ
ರಸ್ತೆಗಳ ವೈಟ್-ಟಾಪಿಂಗ್

ಬ್ರ್ಯಾಂಡ್ ಬೆಂಗಳೂರು: ಮೂಲಸೌಕರ್ಯಗಳ ಮಹಾಪೂರ

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಮೆಚ್ಚಿನ ಯೋಜನೆಯಾಗಿರುವ `ಬ್ರ್ಯಾಂಡ್ ಬೆಂಗಳೂರು', ಮುಖ್ಯವಾಗಿ ನಗರದ ಮೂಲಸೌಕರ್ಯಗಳ ವಿಚಾರದಲ್ಲಿ ಎದುರಾಗಿರುವ ಕೊರತೆಗಳನ್ನು ಬಗೆಹರಿಸುವ ದೃಷ್ಟಿಯನ್ನು ಹೊಂದಿದೆ. ಅಂದರೆ, ನಾಗರಿಕರಿಗೆ ಇದು ನೆಮ್ಮದಿಯ ನಗರವೂ ಆಗಿರಬೇಕು, ವಾಣಿಜ್ಯ ವಹಿವಾಟು ಮತ್ತು ವ್ಯಾಪಾರೋದ್ಯಮಕ್ಕೆ ಸಮರ್ಥವಾದ ನಗರವೂ ಆಗಿರಬೇಕು ಎನ್ನುವುದು ಇಲ್ಲಿರುವ ಗುರಿ. ಶಿವಕುಮಾರ್ ಅವರಿಗೆ ಈ ವಿಚಾರದಲ್ಲಿ ಹೆಗಲಿಗೆ ಹೆಗಲು ಕೊಟ್ಟು ದುಡಿಯುತ್ತಿರುವವರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಆಯುಕ್ತರಾದ ತುಷಾರ್ ಗಿರಿನಾಥ್ ರವರು. ಅಂದಂತೆ, ಇವರು ತಮ್ಮ ಹುದ್ದೆಯಲ್ಲಿ ಈಗಾಗಲೇ ಮೂರು ವರ್ಷಗಳನ್ನು ಪೂರೈಸಿದ್ದಾರೆ.

ಒಬ್ಬ ಅಧಿಕಾರಿಯು ಬಿಬಿಎಂಪಿ ಆಯುಕ್ತರ ಹುದ್ದೆಯಲ್ಲಿ ಇಷ್ಟು ದೀರ್ಘಕಾಲ ಇದ್ದ ಉದಾಹರಣೆಯೇ ಇಲ್ಲ. ಹೀಗಾಗಿ, ಇದೊಂದು ದಾಖಲೆಯಾಗಿದ್ದು, ನಗರದ ನಾಗರಿಕ ಅಗತ್ಯಗಳೇನೇನು ಎಂಬುದನ್ನು ಅವರು ತುಂಬಾ ಚೆನ್ನಾಗಿ ಮನವರಿಕೆ ಮಾಡಿಕೊಂಡಿದ್ದಾರೆ. ಒಂದೇ ಮಾತಿನಲ್ಲಿ ಹೇಳುವುದಾದರೆ, ಶಿವಕುಮಾರ್ ಅವರ ಕನಸನ್ನು ಇವರು ಕಾರ್ಯಗತಗೊಳಿಸುವಲ್ಲಿ ಮುಂದಡಿ ಇರಿಸುತ್ತಿದ್ದಾರೆ.

ಸಂಚಾರ ಸೌಲಭ್ಯ

ಬೆಂಗಳೂರು ನಗರದಲ್ಲಿ ಸಮರ್ಪಕ ಮತ್ತು ಸುಗಮ ಸಂಚಾರ ಸೌಲಭ್ಯವನ್ನು ಅಭಿವೃದ್ಧಿ ಪಡಿಸಬೇಕೆನ್ನುವುದು ನಮ್ಮ ಉಪಕ್ರಮಗಳಲ್ಲಿ ಅತ್ಯಂತ ಪ್ರಮುಖವಾಗಿದೆ. ಪಾದಚಾರಿಗಳ ಸುರಕ್ಷತೆಯನ್ನು ಖಾತರಿ ಪಡಿಸುವಂತಹ ಮತ್ತು ಸೈಕಲ್ ಸವಾರರಿಗೆ ಆದ್ಯತೆ ಕೊಡುವಂತಹ ಒಳ್ಳೆಯ ರಸ್ತೆಗಳನ್ನು ಅಭಿವೃದ್ಧಿ ಪಡಿಸಬೇಕು ಎನ್ನುವುದು `ಬ್ರ್ಯಾಂಡ್ ಬೆಂಗಳೂರು' ಯೋಜನೆಯ ಗುರಿಗಳಲ್ಲೊಂದಾಗಿದೆ. ಸಮರ್ಥವಾದ ಸಾರಿಗೆ ವ್ಯವಸ್ಥೆ ಮತ್ತು ಸುಗಮ ಸಂಚಾರ ನಿರ್ವಹಣಾ ವ್ಯವಸ್ಥೆ ಎರಡೂ ಇದ್ದರೆ ಜನರು ಸುಗಮವಾಗಿಯೂ ಕ್ಷಿಪ್ರವಾಗಿಯೂ ಒಂದೆಡೆಯಿಂದ ಇನ್ನೊಂದೆಡೆಗೆ ಸಂಚರಿಸಬಲ್ಲರು. `ಬ್ರ್ಯಾಂಡ್ ಬೆಂಗಳೂರು' ಪರಿಕಲ್ಪನೆಯ ಅಡಿಯಲ್ಲಿ ಸಮಗ್ರ ಸಾರ್ವಜನಿಕ ಸಾರಿಗೆ ವ್ಯವಸ್ಥೆ ಮತ್ತು ಉನ್ನತ ಗುಣಮಟ್ಟದ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಮೂಲಕ ಪರಿಣಾಮಕಾರಿ ಸಂಚಾರ ವ್ಯವಸ್ಥೆಯನ್ನು ಸಾಕಾರಗೊಳಿಸಲಾಗುವುದು.

ಶಿವಕುಮಾರ್ ಅವರು ಈ ಯೋಜನೆಯಲ್ಲಿ ಸಾರಿಗೆ ಮತ್ತು ಸಂಚಾರ ವ್ಯವಸ್ಥೆಗಳಿಗೆ ತುಂಬಾ ಒತ್ತು ಕೊಟ್ಟಿದ್ದಾರೆ. ಜನರಿಗೆ ಅನುಕೂಲವನ್ನು ಹೆಚ್ಚುಹೆಚ್ಚಾಗಿ ಒದಗಿಸಬೇಕೆಂದರೆ ಮತ್ತು ಆರ್ಥಿಕ ಪ್ರಗತಿಗೆ ಇಂಬು ನೀಡಬೇಕೆಂದರೆ, ಸಂಪರ್ಕ ವ್ಯವಸ್ಥೆ ಚೆನ್ನಾಗಿರಬೇಕೆಂದು ಉಪಮುಖ್ಯಮಂತ್ರಿಗಳು ಸದಾ ಹೇಳುತ್ತಿರುತ್ತಾರೆ.

ಬೆಂಗಳೂರಿನ ಜನನಿಬಿಡ ಜಂಕ್ಷನ್‌ಗಳಲ್ಲಿ ಸುಮಾರು 100 ಕಿ.ಮೀ.ಗಳ ಎಲಿವೇಟೆಡ್ ಕಾರಿಡಾರ್ ನಿರ್ಮಾಣ ಯೋಜನೆ ರೂಪಿಸಲಾಗಿದೆ.

ಸುರಂಗ ರಸ್ತೆಗಳ ನಿರ್ಮಾಣ

`ಬ್ರ್ಯಾಂಡ್ ಬೆಂಗಳೂರು' ಅಡಿಯಲ್ಲಿ ನಾವು ಈ ದೃಷ್ಟಿಯಿಂದ ತೆಗೆದುಕೊಂಡಿರುವ ಗಮನಾರ್ಹ ಯೋಜನೆಯೆಂದರೆ, ಸುರಂಗ ರಸ್ತೆಗಳ ನಿರ್ಮಾಣ. ಇದನ್ನಂತೂ ಇದುವರೆಗೂ ಯಾರೂ ಚಿಂತಿಸಿಲ್ಲ. ಈ ದೃಷ್ಟಿಯಿಂದ ಉತ್ತರ-ದಕ್ಷಿಣ ಮಾರ್ಗವಾಗಿ (ಎಸ್ಟೀಮ್ ಮಾಲ್-ಮೇಖ್ರಿ ವೃತ್ತ- ಚಾಲುಕ್ಯ ವೃತ್ತ- ಲಾಲ್ ಬಾಗ್- ಸಿಲ್ಕ್ ಬೋರ್ಡ್ ಜಂಕ್ಷನ್) 24.50 ಕಿ.ಮೀ. ಮತ್ತು ಪೂರ್ವ-ಪಶ್ಚಿಮವಾಗಿ (ಕೆ ಆರ್ ಪುರಂ- ಹಳೇ ಮದ್ರಾಸ್ ರಸ್ತೆ- ಹಲಸೂರು- ರಿಚ್ಮಂಡ್ ಸರ್ಕಲ್- ಬಿಬಿಎಂಪಿ ಕೇಂದ್ರ ಕಚೇರಿ- ಟೌನ್ ಹಾಲ್- ಗಾಳಿ ಆಂಜನೇಯ ದೇವಸ್ಥಾನ- ಮೈಸೂರು ರಸ್ತೆ) 30 ಕಿ.ಮೀ. ಸುರಂಗ ರಸ್ತೆಗಳನ್ನು ನಿರ್ಮಿಸಲಾಗುವುದು. ಇದಕ್ಕೆ ಒಟ್ಟು 32,700 ಕೋಟಿ ರೂ.ಗಳನ್ನು ವಿನಿಯೋಗಿಸಲಾಗುತ್ತಿದೆ.

ಎಲಿವೇಟೆಡ್ ಕಾರಿಡಾರ್

ಎತ್ತರಿಸಿದ ಕಾರಿಡಾರುಗಳ ನಿರ್ಮಾಣವು ಮತ್ತೊಂದು ಪ್ರಮುಖ ಹೆಜ್ಜೆಯಾಗಿದೆ. ಇದರಂತೆ, ಬೆಂಗಳೂರು ನಗರದ ಜನನಿಬಿಡ ತಾಣಗಳುದ್ದಕ್ಕೂ 11,940 ಕೋಟಿ ರೂ. ವೆಚ್ಚದಲ್ಲಿ 100 ಕಿ.ಮೀ. ಉದ್ದದ `ಎಲಿವೇಟೆಡ್ ಕಾರಿಡಾರ್' ನಿರ್ಮಿಸಲಾಗುವುದು.

ಹಾಗೆಯೇ, ನಗರದ ಮಧ್ಯಭಾಗದಿಂದ 40 ಕಿ.ಮೀ. ಆಚೆಯಲ್ಲಿ ಪೆರಿಫೆರಲ್ ರಿಂಗ್ ರಸ್ತೆಯನ್ನು ವಾಣಿಜ್ಯ ವಹಿವಾಟುಗಳ ಕಾರಿಡಾರ್ ಆಗಿ ಅಭಿವೃದ್ಧಿ ಪಡಿಸಲಾಗುವುದು. ನಗರವು ಈಗ ಹೊಂದಿರುವ ಗಡಿಗಳಿಂದ ಆಚೆಗೆ 40 ಕಿಲೋಮೀಟರ್ ಬೆಳೆಯಲಿದೆ ಎನ್ನುವ ನಿರೀಕ್ಷೆ ಇದೆ. ಪೆರಿಫೆರಲ್ ರಿಂಗ್ ರಸ್ತೆಯು ಭಾರೀ ಸರಕು ಸಾಗಣೆ ವಾಹನಗಳು ನಗರದ ಹೃದಯ ಭಾಗಕ್ಕೆ ಬರುವುದನ್ನು ತಪ್ಪಿಸಲಿದೆ. ಇದರಿಂದಾಗಿ, ನಗರದೊಳಗೆ ಸಂಚಾರ ದಟ್ಟಣೆ ಕಡಿಮೆಯಾಗಲಿದೆ. ಪೆರಿಫೆರಲ್ ರಿಂಗ್ ರಸ್ತೆಯಲ್ಲಿ ಗೋದಾಮುಗಳು, ವಾಹನಗಳ ಓಡಾಟಕ್ಕೆ ಬೇಕಾದ ಟರ್ಮಿನಲ್ ಇತ್ಯಾದಿ ಮೂಲಸೌಕರ್ಯಗಳ ಅಭಿವೃದ್ಧಿಗೂ ಅವಕಾಶವಿರಲಿದ್ದು, ಈ ಯೋಜನೆಗೆ ತಗುಲುವ ಸಂಪೂರ್ಣ ವೆಚ್ಚವನ್ನು `ಹುಡ್ಕೋ' ಕೊಡಲಿದ್ದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ರೂ 27,000 ಕೋಟಿ ವೆಚ್ಚದಲ್ಲಿ ಯೋಜನೆಯನ್ನು ಜಾರಿಗೆ ತರಲಿದೆ. ಈ ರಸ್ತೆಯು ಅತ್ಯುತ್ತಮ ಗುಣಮಟ್ಟವನ್ನು ಹೊಂದಿರಲಿದೆ.

ಡಬ್ಬಲ್ ಡೆಕ್ಕರ್ ರಸ್ತೆಗಳ ನಿರ್ಮಾಣ

ಬೆಂಗಳೂರಿನಲ್ಲಿ ಈಗ ಮೆಟ್ರೋ ರೈಲು ಯೋಜನೆಯು ಪ್ರಗತಿಯಲ್ಲಿದೆ. ಹೀಗಾಗಿ ಬ್ರ್ಯಾಂಡ್ ಬೆಂಗಳೂರು ಯೋಜನೆಯಡಿ ನಾವು ಮೆಟ್ರೋ ರೈಲು ನಿಗಮ ನಿಯಮಿತದ ಜತೆಗೂಡಿ ಡಬ್ಬಲ್ ಡೆಕ್ಕರ್ ರಸ್ತೆಗಳನ್ನು ನಿರ್ಮಿಸಲಿದ್ದೇವೆ. ಮೆಟ್ರೋ ರೈಲು ಮಾರ್ಗದ ಆಚೀಚೆ ಹಾದು ಹೋಗುವ ಪ್ರದೇಶಗಳಲ್ಲಿ ನಾವು ಕಟ್ಟಕಡೆಯ ಬಡಾವಣೆಗಳಿಗೂ ಸಾರಿಗೆ ಸೌಲಭ್ಯ ಸಿಗುವಂತೆ ಮಾಡುತ್ತೇವೆ. ಅತ್ಯಂತ ವೇಗವನ್ನು ಹೊಂದಿರುವ ಈ `ಕ್ಷಿಪ್ರಗತಿಯ ಸಾರಿಗೆ ವ್ಯವಸ್ಥೆ'ಯಿಂದಾಗಿ ನಗರದ ನಾಗರಿಕರು ತಮ್ಮ ಸ್ವಂತ ವಾಹನವನ್ನು ಅವಲಂಬಿಸಬೇಕಾದುದು ಕಡಿಮೆಯಾಗಲಿದ್ದು, ಸುಗಮ ಸಂಚಾರ ಸಾಧ್ಯವಾಗಲಿದೆ.

ಒಟ್ಟಾರೆಯಾಗಿ, ಬ್ರ್ಯಾಂಡ್ ಬೆಂಗಳೂರು ಅಡಿಯಲ್ಲಿ ನಗರದಾದ್ಯಂತ 300 ಕಿ.ಮೀ. ರಸ್ತೆಗಳನ್ನು ನಿರ್ಮಿಸಲಾಗುವುದು. ಈ ಮೂಲಕ ನಗರದೊಳಗೆ ಸಂಚಾರ ದಟ್ಟಣೆ ಕಡಿಮೆಯಾಗುವುದಲ್ಲದೆ, ದೀರ್ಘವಧಿ ಸಾರಿಗೆ ಸೌಲಭ್ಯ ಕಲ್ಪಿಸಲಾಗುವುದು.

ನೀರು ನಿರ್ವಹಣೆ

ಬೆಂಗಳೂರು ನಗರದಲ್ಲಿ ಕುಡಿಯುವ ನೀರಿಗಂತೂ ಒಂದೇ ಸಮನೆ ಬೇಡಿಕೆ ಹೆಚ್ಚುತ್ತಿದೆ. ಅದರಲ್ಲೂ ಸುತ್ತಮುತ್ತಲಿನ 110 ಹಳ್ಳಿಗಳನ್ನು ಬೆಂಗಳೂರು ನಗರದ ವ್ಯಾಪ್ತಿಗೆ ಸೇರಿಸಿದ ಮೇಲೆ, ಇದು ಇನ್ನಷ್ಟು ತೀವ್ರಗೊಂಡಿದೆ. ಹೀಗಾಗಿ, ನೀರು ಪೂರೈಕೆಯಲ್ಲಿ ಕಾವೇರಿ 5ನೇ ಹಂತದಿಂದ ನಗರದ ಕೆಲವು ಭಾಗಗಳಿಗೆ ನೀರು ಪೂರೈಸುವ ಯೋಜನೆಯೂ ಸೇರಿದ್ದು, ಇತ್ತೀಚೆಗೆ ಇದಕ್ಕೆ ಚಾಲನೆ ನೀಡಲಾಗಿದೆ. ನಗರದಲ್ಲಿ ನೀರಿನ ನಿರ್ವಹಣೆ ಉತ್ತಮವಾಗಿರಬೇಕೆಂದು ಶಿವಕುಮಾರ್ ಅವರು ಮೊದಲಿನಿಂದಲೂ ಹೇಳುತ್ತಿದ್ದು, 'ಬ್ರ್ಯಾಂಡ್ ಬೆಂಗಳೂರು' ಯೋಜನೆಯಲ್ಲಿ ಇದನ್ನು ಪ್ರಮುಖ ಆದ್ಯತೆಗಳಲ್ಲಿ ಒಂದನ್ನಾಗಿ ಇರಿಸಿಕೊಂಡಿದ್ದಾರೆ.

2024ರ ಅಕ್ಟೋಬರ್ ತಿಂಗಳಲ್ಲಿ ತೊರೆಕಾಡನಹಳ್ಳಿಯಲ್ಲಿ ಕಾವೇರಿ 5ನೇ ಹಂತದ ನೀರು ಪೂರೈಕೆ ಯೋಜನೆಗೆ ಚಾಲನೆ ನೀಡಿದ ಅವರು, ಮುಂದಿನ 10 ವರ್ಷಗಳ ಕಾಲ ಬೆಂಗಳೂರು ನಗರದಲ್ಲಿ ಕುಡಿಯುವ ನೀರಿಗೆ ಯಾವುದೇ ಸಮಸ್ಯೆ ಎದುರಾಗುವುದಿಲ್ಲವೆಂದು ಹೇಳಿದ್ದಾರೆ. ಒಟ್ಟು ರೂ 5,000 ಕೋಟಿ ರೂ. ಮೊತ್ತದ ಈ ಯೋಜನೆಯು ನಗರದ 50 ಲಕ್ಷ ಜನರಿಗೆ ನೀರು ಪೂರೈಸಲಿದೆ.

ಸದ್ಯಕ್ಕೆ ಮಳೆಗಾಲ ಬಂತೆಂದರೆ, ನಗರದ ತಗ್ಗು ಪ್ರದೇಶಗಳಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿ ಸಂಕಷ್ಟ ಎದುರಾಗುತ್ತದೆ. ಆದರೆ, ಇನ್ನುಮುಂದೆ ಇದು ಶಾಶ್ವತವಾಗಿ ಬಗೆಹರಿಯಲಿದೆ. ಇದಕ್ಕೆಂದೇ, 'ಬ್ರ್ಯಾಂಡ್ ಬೆಂಗಳೂರು' ಯೋಜನೆಯಲ್ಲಿ ಮಳೆನೀರು ಹರಿವು ನಿರ್ವಹಣೆಗೆಂದೇ ಪರಿಣಾಮಕಾರಿ ವ್ಯವಸ್ಥೆ ಬರಲಿದೆ. ಇದಕ್ಕಾಗಿ ಸಮರ್ಪಕ ಚರಂಡಿ ಮತ್ತು ನೀರು ಹರಿವಿನ ನಿರ್ವಹಣಾ ವಿಧಾನಗಳನ್ನು ಅನುಸರಿಸಲಾಗುವುದು. ಈ ಮೂಲಕ, ನಗರದಲ್ಲಿ ಎಷ್ಟೇ ಮಳೆ ಸುರಿದರೂ ಯಾವುದೇ ಅನಾಹುತವಾಗದಂತೆ, ಪರಿಣಾಮಕಾರಿಯಾಗಿ ನಿರ್ವಹಿಸಲಾಗುವುದು.

ಮಕ್ಕಳ-ಸ್ನೇಹಿ ಬೆಂಗಳೂರು

'ಬ್ರ್ಯಾಂಡ್ ಬೆಂಗಳೂರು' ಪರಿಕಲ್ಪನೆಯ ಅಡಿಯಲ್ಲಿ, ಮಕ್ಕಳ ಸಮಗ್ರ ಬೆಳವಣಿಗೆಗೆ ಬೇಕಾದ ಮೂಲಸೌಕರ್ಯಗಳನ್ನು ಒದಗಿಸುವ ಗುರಿ ಇಟ್ಟುಕೊಳ್ಳಲಾಗಿದೆ. ಇದರಂತೆ, ಮಕ್ಕಳ ದೈಹಿಕ, ಶೈಕ್ಷಣಿಕ ಮತ್ತು ಭಾವನಾತ್ಮಕ ಬೆಳವಣಿಗೆಗೆ ಬೇಕಾಗುವ ಉದ್ಯಾನಗಳು, ಆಟದ ಮೈದಾನಗಳು ಮತ್ತು ಶಿಕ್ಷಣ ಸಂಸ್ಥೆಗಳನ್ನು ಅಭಿವೃದ್ಧಿ ಪಡಿಸಲಾಗುವುದು. ಮಕ್ಕಳ ಪಾಲಿಗೆ ಸುರಕ್ಷಿತವಾಗಿರುವಂತಹ, ಅವರ ಸಾಮಾಜಿಕ ಒಡನಾಟವನ್ನು ಉತ್ತೇಜಿಸುವಂತಹ ಮತ್ತು ಕಲಿಕೆಯನ್ನು ಪ್ರೋತ್ಸಾಹಿಸುವಂತಹ ಪರಿಸರವನ್ನು ಸೃಷ್ಟಿಸುವುದು ಇದರ ಗುರಿಯಾಗಿದೆ.

ಮಾಹಿತಿ ತಂತ್ರಜ್ಞಾನಕ್ಕೆ ಒತ್ತು

ಬೆಂಗಳೂರು ಮಾಹಿತಿ ತಂತ್ರಜ್ಞಾನದ ತೊಟ್ಟಿಲಾಗಿದ್ದು (ಐಟಿ ಹಬ್), ಉದ್ಯೋಗಾಕಾಂಕ್ಷಿಗಳನ್ನೂ ಉದ್ಯೋಗದಾತರನ್ನೂ ತನ್ನತ್ತ ಆಕರ್ಷಿಸುತ್ತಿದೆ. ಇಲ್ಲಿನ ಐ.ಟಿ. ವಲಯವು ಪೂರಕ ಉದ್ದಿಮೆಗಳ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಇಂಬು ನೀಡಿದೆ. ಇಲ್ಲಿ ನೆಲೆಯೂರಿರುವ ಜ್ಞಾನಾಧಾರಿತ ಉದ್ಯಮಗಳಂತೂ ದೇಶದಾದ್ಯಂತದ ಜನರಿಗೆ ಆಕರ್ಷಕ ಉದ್ಯೋಗ ಮಾರುಕಟ್ಟೆಯಾಗಿದೆ. ಬ್ರ್ಯಾಂಡ್ ಬೆಂಗಳೂರು ಯೋಜನೆಯಡಿಯಲ್ಲಿ ಈ ಉದ್ದಿಮೆಗಳೆಲ್ಲವೂ ಮತ್ತಷ್ಟು ಉಜ್ವಲವಾಗಿ ಬೆಳೆಯಲು ಅಗತ್ಯವಿರುವ ತಕ್ಕ ವಾತಾವರಣ ನಿರ್ಮಿಸಲಾಗುವುದು. ಈ ಮೂಲಕ ನವೋದ್ಯಮಗಳಿಗೆ ಮತ್ತು ನಾವೀನ್ಯತೆಗೆ ಪ್ರೋತ್ಸಾಹ ಕೊಡಲಾಗುವುದು. ಈ ಉಪಕ್ರಮವು ಐ.ಟಿ. ಉದ್ದಿಮೆಗಳ ಮುಂದಿನ ಹಂತದ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಬೇಕಾದ ಬುನಾದಿಯನ್ನು ಒದಗಿಸಲಿದೆ. ಇತ್ತೀಚೆಗೆ ನಡೆದ, ಮೂರು ದಿನಗಳ `ಜಾಗತಿಕ ಹೂಡಿಕೆದಾರರ ಸಮಾವೇಶ'ದಲ್ಲಿ (ಇನ್ವೆಸ್ಟ್ ಕರ್ನಾಟಕ-2025) ಮಾತನಾಡಿದ ಶಿವಕುಮಾರ್ ಅವರು, `ನಾನು ಸುಲಲಿತ ವಾಣಿಜ್ಯ ಸಂಸ್ಕೃತಿಯ ಬಗ್ಗೆ ಬರೀ ಮಾತನಾಡುವುದಿಲ್ಲ. ಇದನ್ನು ನಿಜವಾಗಿಯೂ ಮಾಡಿ ತೋರಿಸುತ್ತೇನೆ,' ಎಂದಿರುವುದನ್ನು ಇಲ್ಲಿ ನೆನೆಯಬಹುದು.

ಗ್ಲೋಬಲ್ ಸಿಟಿ (ಜಾಗತಿಕ ನಗರಿ)

ಬೆಂಗಳೂರು ನಗರದಲ್ಲಿ ವಾಣಿಜ್ಯ ವಹಿವಾಟು ಸೀಮೋಲ್ಲಂಘನವನ್ನು ಮಾಡಿ, ಮುನ್ನುಗ್ಗಬೇಕು. ಅದರಲ್ಲೂ ಈ ವಿಚಾರದಲ್ಲಿ ಬೆಂಗಳೂರು ನಗರವು ಜಾಗತಿಕ ಮಟ್ಟದಲ್ಲಿ ನಾಯಕನಾಗಿ ವಿರಾಜಿಸಬೇಕು ಎನ್ನುವುದು 'ಬ್ರ್ಯಾಂಡ್ ಬೆಂಗಳೂರು' ಯೋಜನೆಯ ಗುರಿಗಳಲ್ಲೊಂದಾಗಿದೆ. ಹೀಗಾಗಿ, ಜಗತ್ತಿನ ಮೂಲೆಮೂಲೆಗಳಲ್ಲಿನ ಬಹುರಾಷ್ಟ್ರೀಯ ಕಂಪನಿಗಳೊಂದಿಗೆ ಹೆಚ್ಚುಹೆಚ್ಚು ಸಹಭಾಗಿತ್ವಕ್ಕೆ ಪ್ರೋತ್ಸಾಹ ಕೊಡಲಾಗುವುದು. ಈ ಮೂಲಕ ಆರ್ಥಿಕ ಬೆಳವಣಿಗೆ ಮತ್ತು ಹೂಡಿಕೆಯ ಆಕರ್ಷಣೆ ಎರಡಕ್ಕೂ ವೇಗ ಸಿಕ್ಕಲಿದೆ. ಬೆಂಗಳೂರಿನ ನಾಗರಿಕರು ಜಾಗತಿಕ ಮಟ್ಟದ ದೃಷ್ಟಿಕೋನವನ್ನು ಹೊಂದಿದ್ದು, ಇಲ್ಲಿ ವೈವಿಧ್ಯಮಯ ಸಂಸ್ಕೃತಿ ಗಳಿಗೆ ಸೇರಿದ ನಾನಾ ಭಾಗಗಳ ಜನರು ವಾಸಿಸುತ್ತಿದ್ದಾರೆ.

ನವೋದ್ಯಮಗಳಿಗೆ ಮತ್ತು ನಾವೀನ್ಯತೆಯ ಪರಿಕಲ್ಪನೆಗಳಿಗೆ ಇಲ್ಲಿ ವಿಶೇಷ ಗಮನವಿರಲಿದೆ. ಇದರ ಜೊತೆಗೆ ಉದ್ಯಮ ಪರಿಪೋಷಣಾ ಕೇಂದ್ರಗಳು ಮತ್ತು ಉಪಯುಕ್ತ ನೀತಿಗಳ ಬೆಂಬಲವೂ ಇರಲಿದೆ. ಇವೆಲ್ಲವನ್ನೂ ನಾವು ವಾಣಿಜ್ಯ ವಹಿವಾಟಿನ ಸದವಕಾಶಗಳನ್ನಾಗಿ ಪರಿವರ್ತಿಸಲಿದ್ದೇವೆ.

ಬ್ರ್ಯಾಂಡ್ ಬೆಂಗಳೂರು'ಎನ್ನುವುದು ಉಪಮುಖ್ಯಮಂತ್ರಿ, ಡಿ.ಕೆ. ಶಿವಕುಮಾರ್ ಅವರ ದೂರದೃಷ್ಟಿ. ಬೆಂಗಳೂರು ನಗರವನ್ನು ದಕ್ಷತೆ ಮತ್ತು ಸಾಮರ್ಥ್ಯಗಳ ತಾಣವನ್ನಾಗಿ ಮಾಡುವ ಮೂಲಕ ಇದನ್ನು ಪ್ರತಿಭೆಗಳು ಅಭ್ಯುದಯಗೊಳ್ಳುವಂತಹ ಹಾಗೂ ಅವಕಾಶಗಳು ಮೇಳೈಸುವಂತಹ ನಗರವನ್ನಾಗಿ ಅಭಿವೃದ್ಧಿ ಪಡಿಸಬೇಕೆನ್ನುವುದು ಬ್ರ್ಯಾಂಡ್ ಬೆಂಗಳೂರು' ಯೋಜನೆಯ ಗುರಿಯಾಗಿದೆ. ಡಿ.ಕೆ ಶಿವಕುಮಾರ್ ಅವರ ಕನಸಿನ ಭವಿಷ್ಯದ ನಗರವನ್ನು ನಿರ್ಮಾಣ ಮಾಡುವ ಕುರಿತು ಬಿ ಎಸ್ ಮನುರಾವ್ ಅವರು ಪ್ರಸ್ತುತಪಡಿಸಿರುವ ಪಕ್ಷಿನೋಟವಿದು.

ಪ್ರವಾಸೋದ್ಯಮಕ್ಕೆ ಉತ್ತೇಜನ

ಸ್ಕೈಡೆಕ್ ನಿರ್ಮಾಣ ಕೂಡ ಬ್ರ್ಯಾಂಡ್ ಬೆಂಗಳೂರು ಉಪಕ್ರಮದ ಭಾಗವಾಗಿದ್ದು, ಇದು ಪ್ರವಾಸೋದ್ಯಮಕ್ಕೆ ಗಮನಾರ್ಹ ಉತ್ತೇಜನ ಕೊಡಲಿದೆ. ದಕ್ಷಿಣ ಏಷ್ಯಾದಲ್ಲೇ ಅತ್ಯಂತ ಎತ್ತರದ, 250 ಮೀಟರುಗಳು ಸ್ಕೈಡೆಕ್, ಇಡೀ ನಗರದ 360 ಡಿಗ್ರಿ ನೋಟವನ್ನು ಒದಗಿಸಲಿದೆ. ರೂ 500 ಕೋಟಿ ಅಂದಾಜು ವೆಚ್ಚದ ಸ್ಕೈಡೆಕ್, ನಗರದ ಹೊರವಲಯದಲ್ಲಿ ತಲೆ ಎತ್ತಲಿದೆ. ಇಲ್ಲಿಗೆ ಮೆಟ್ರೋ ರೈಲು ಸಂಪರ್ಕ ಒದಗಿಸುವ ಮೂಲಕ ಜನರಿಗೆ ಸೌಲಭ್ಯ ಕಲ್ಪಿಸಲಾಗುವುದು. ಇಲ್ಲಿ ಪ್ರವಾಸಿಗರಿಗೆ ಅನೇಕ ಸೌಲಭ್ಯಗಳು ಇರಲಿವೆ.

ಹಿಂದೆ ಬೆಂಗಳೂರು `ಉದ್ಯಾನ ನಗರಿ'ಯಾಗಿತ್ತು, ಈಗ `ವೈಬ್ರೆಂಟ್ ಬೆಂಗಳೂರು' ಉಪಕ್ರಮದ ಮೂಲಕ ನಗರದ 150 ಜಂಕ್ಷನ್ನುಗಳ ಸೌಂದರ್ಯೀಕರಣವನ್ನು ಕೈಗೆತ್ತಿಕೊಳ್ಳಲಾಗುವುದು. ಇದರ ಭಾಗವಾಗಿ ಗಿಡಮರಗಳು, ಕಾರಂಜಿ/ಕೊಳಗಳು ಮತ್ತು ಪ್ರತಿಮೆಗಳು ಇರುವಂತೆ ನೋಡಿಕೊಳ್ಳಲಾಗುವುದು. ಇದರಲ್ಲಿ ಪ್ರವಾಸೋದ್ಯಮದ ಆಯಾಮವೂ ಇದೆ.

ಜನಸ್ನೇಹಿ ಉಪಕ್ರಮಗಳು

`ನಿಮ್ಮ ಮನೆ ಬಾಗಿಲಿಗೇ ಆಡಳಿತ' ಎನ್ನುವುದು ಡಿ.ಕೆ. ಶಿವಕುಮಾರ್ ಅವರ ಹೊಂಗನಸಾಗಿದ್ದು, ಇದು ನಗರದ ನಾಗರಿಕರಿಗೆ ವರವಾಗಲಿದೆ. ಏಕೆಂದರೆ, ನಾಗರಿಕರಿಗೆ ತಮ್ಮ ಕೆಲಸಗಳಿಗಾಗಿ ಹತ್ತಾರು ಕಚೇರಿಗಳನ್ನು ಅಲೆಯುವುದು ಇದರಿಂದ ತಪ್ಪಲಿದೆ. ಇದರ ಭಾಗವಾಗಿ ನಗರದ ಎಂಟು ವಲಯಗಳಲ್ಲೂ ತಲಾ ಒಬ್ಬ ಐಎಎಸ್ ಅಧಿಕಾರಿಗಳು ಮ್ಯಾನೇಜರುಗಳಾಗಿ ಇರಲಿದ್ದು, ಸಾರ್ವಜನಿಕರ ಕುಂದುಕೊರತೆಗಳನ್ನು ಮತ್ತು ಅಗತ್ಯಗಳನ್ನು ಆಲಿಸಲು ನಿಯಮಿತವಾಗಿ ಸಭೆಗಳನ್ನು ನಡೆಸಲಿದ್ದಾರೆ. ಇಂತಹ ಸಭೆಗಳಲ್ಲಿ ಸಂಬಂಧಿಸಿದ ಎಲ್ಲ ಇಲಾಖೆಗಳ ಪ್ರತಿನಿಧಿಗಳೂ ಹಾಜರಿದ್ದು, ಅಗತ್ಯ ಸಮನ್ವಯದ ಮೂಲಕ ಜನರ ಕೆಲಸಗಳು ಸುಗಮವಾಗಿ ಆಗುವಂತೆ ನೋಡಿಕೊಳ್ಳಲಿದ್ದಾರೆ. ಇದರ ಅನ್ವಯ ಜನರಿಗೆ ತಮ್ಮ ಆಸ್ತಿಪಾಸ್ತಿಗಳ ಖಾತೆಯೇ ಇರಲಿ, ಬೇರಾವುದೇ ಸಮಸ್ಯೆಗೆ ಪರಿಹಾರವಿರಲಿ, ಎಲ್ಲವೂ ಒಂದೇ ಕಡೆ ಬಗೆಹರಿಯುತ್ತದೆ.

ಬೆಂಗಳೂರಿನಲ್ಲಿ ನೈರ್ಮಲ್ಯವನ್ನು ಸಾಧಿಸುವ ಉದ್ದೇಶದಿಂದ ಘನ ತ್ಯಾಜ್ಯ ನಿರ್ವಹಣೆಯನ್ನು ಹೊರಗುತ್ತಿಗೆಯಾಗಿ ಕೊಡುವ ಚಿಂತನೆ ನಡೆದಿದೆ. ಬೆಂಗಳೂರಿನಲ್ಲಿ ಸದ್ಯಕ್ಕೆ ದಿನವೊಂದಕ್ಕೆ 3,500 ಟನ್ ಘನ ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಪ್ರಸ್ತುತ ಬಿಬಿಎಂಪಿ ಸಿಬ್ಬಂದಿ ಮನೆ ಬಾಗಿಲಿಗೆ ಬಂದು ಸಂಗ್ರಹಿಸಿಕೊಂಡು ಹೋಗುತ್ತಿದ್ದಾರೆ. ಯಾರು ಎಷ್ಟು ತ್ಯಾಜ್ಯ ಸಂಗ್ರಹಿಸಿದ್ದಾರೆ ಮತ್ತು ಅದನ್ನು ವಿಲೇವಾರಿ ಮಾಡಿದ್ದಾರೆ ಎನ್ನುವುದನ್ನು ಆಧರಿಸಿ, ಇವರಿಗೆ ಬಟವಾಡೆ ಮಾಡಲಾಗುವ ಕ್ರಮ ಅನುಸರಿಸಲಾಗುತ್ತಿದೆ.

ಸ್ಫೂರ್ತಿದಾಯಕ ಅಧಿಕಾರಿಗಳು

ಉಪಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರ ಈ ಯೋಜನೆಯು ನಿಜಕ್ಕೂ ಉತ್ತಮವಾದುದು. ಆದರೆ , ಇದನ್ನು ವಾಸ್ತವದಲ್ಲಿ ಕಾರ್ಯಗತಗೊಳಿಸುವವರು ಪ್ರೇರಣಾದಾಯಿ ಅಧಿಕಾರಿಗಳು. ಇದರಂತೆ ತುಷಾರ್ ಗಿರಿನಾಥ್ ಅವರ ಪಾತ್ರ ಇಲ್ಲಿ ಮಹತ್ತರವಾಗಿದೆ. ಈ ನಿಟ್ಟಿನಲ್ಲಿ ಅವರು ತಮ್ಮ ಇಚ್ಛಾಶಕ್ತಿಯನ್ನು ಈಗಾಗಲೇ ಪ್ರದರ್ಶಿಸಿದ್ದಾರೆ. ಒಟ್ಟಿನಲ್ಲಿ, ಬೆಂಗಳೂರು ನಗರಕ್ಕೆ ನವನವೀನ ಚಹರೆಗಳನ್ನು ತಂದುಕೊಡಲಿರುವ ಈ ಮಹತ್ವಾಕಾಂಕ್ಷಿ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿ ಅವರು ಮುಂಚೂಣಿಯಲ್ಲಿ ಇರಲಿದ್ದಾರೆ.

ಟೆಕ್ ಬೆಂಗಳೂರು: ಬಿಬಿಎಂಪಿ ಯಿಂದ ತಂತ್ರಜ್ಞಾನದ ಸಮರ್ಥ ಬಳಕೆ

ಬಿಬಿಎಂಪಿ, ನಾಗರಿಕ ಸೌಲಭ್ಯಗಳನ್ನು ಪರಿಣಾಮಕಾರಿಯಾಗಿ ತಲುಪಿಸಲು ಹಾಗೂ ನಗರಾಡಳಿದ ದಕ್ಷತೆ ಹೆಚ್ಚಿಸಲು ಕಳೆದ ಕೆಲವು ವರ್ಷಗಳಿಂದ ತಂತ್ರಜ್ಞಾನದ ಬಳಕೆಯನ್ನು ಸಮರ್ಥವಾಗಿ ಬಳಸಿಕೊಳ್ಳುತ್ತಿದೆ. ಇ-ಖಾತಾ ದತ್ತಾಂಶ ಸಂರಕ್ಷಣೆಗಾಗಿ ಬ್ಲಾಕ್ ಚೈನ್ ತಾಂತ್ರಿಕತೆ ಉಪಯೋಗಿಸುವುದರಿಂದ ಹಿಡಿದು ಪೊಲೀಸರಿಗೆ ಕ್ಯಾಮೆರಾ ತುಣುಕುಗಳನ್ನು ವಿಶ್ಲೇಷಿಸಲು ಕೃತಕ ಬುದ್ಧಿಮತ್ತೆ (ಎಐ) ಬಳಸುವವರಿಗೆ ಇದರ ವ್ಯಾಪ್ತಿ ವಿಸ್ತರಿಸಿದೆ. ನಗರಾಡಳಿತದಲ್ಲಿ ದಕ್ಷತೆ, ಪಾರದರ್ಶಕತೆಯ ಜೊತೆಗೆ ಸಾರ್ವಜನಿಕರ ಪಾಲ್ಗೊಳ್ಳುವಿಕೆ ಸುಧಾರಿಸಲು ಇದು ಅನುವು ಮಾಡಿಕೊಟ್ಟಿದೆ.

ಬಿಬಿಎಂಪಿ, 2020ರ ಫೆಬ್ರುವರಿಯಲ್ಲಿ ಅಹವಾಲು ಆಲಿಸಲು ಸಹಾಯ 2.0 ಆಪ್ ಅನಾವರಣಗೊಳಿಸಿತು. ನಾಗರಿಕ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಪಾರದರ್ಶಕತೆ ತರುವುದು ಇದರ ಪ್ರಮುಖ ಉದ್ದೇಶವಾಗಿತ್ತು. ಈ ವೇದಿಕೆಯು, ನಾಗರಿಕರಿಗೆ ಅಹವಾಲುಗಳನ್ನು ದಾಖಲಿಸಲು, ಸೇವೆಗಳನ್ನು ಕೋರಲು ಹಾಗೂ ತಮ್ಮ ಅರ್ಜಿಗಳ ಸ್ಥಿತಿಯನ್ನು ಆನ್ ಲೈನ್ ಮೂಲಕ ತಿಳಿಯಲು ಅವಕಾಶ ಮಾಡಿಕೊಡುತ್ತದೆ. ಆರಂಭದಲ್ಲಿ ಈ ಆಪ್ ಬಗ್ಗೆ ಮಿಶ್ರ ಪ್ರತಿಕ್ರಿಯೆಗಳು ಕೇಳಿಬಂದವು. ನಂತರ, ಅದರಲ್ಲಿನ ಒಂದಷ್ಟು ಲೋಪಗಳನ್ನು ಗಮನಿಸಿದ ಬಿಬಿಎಂಪಿ, ಅದನ್ನು ನಿವಾರಿಸಲು ಕ್ರಮ ತೆಗೆದುಕೊಂಡಿತು. 2024ರ ಫೆಬ್ರುವರಿಯಲ್ಲಿ ಆಪ್ ಗೆ ಹೊಸ ಸೌಲಭ್ಯ ಅಡಕಗೊಳಿಸಿ, ಪರಿಹಾರ ಕಾಣದ ದೂರುಗಳ ಬಗ್ಗೆ ನಾಗರಿಕರಿಗೆ ಎರಡನೇ ಬಾರಿಗೆ ದೂರು ಸಲ್ಲಿಸಿ ಗಮನ ಸೆಳೆಯಲು ವ್ಯವಸ್ಥೆ ಕಲ್ಪಿಸಿತು. 'ಪ್ರಜಾವಾಣಿ' ವರದಿಗಳ ಪ್ರಕಾರ, ಪ್ರತಿದಿನ ಈ ಆಪ್ ಮೂಲಕ 300 ದೂರುಗಳು ಸಲ್ಲಿಕೆಯಾಗುತ್ತಿವೆ.



"ಕಳೆದ ಕೆಲವು ವರ್ಷಗಳಲ್ಲಿ ಹಲವು ಆಪ್ ಗಳನ್ನು ಬಿಬಿಎಂಪಿ ಬಳಕೆಗೆ ಬಿಟ್ಟಿದ್ದರೂ ಅವು ಸಮರ್ಪಕ ನಿರ್ವಹಣೆಯಿಲ್ಲದೆ ನಿಷ್ಪ್ರಯೋಜಕವಾಗಿದ್ದವು. ಆದರೆ ಇದೀಗ, ಬಿಬಿಎಂಪಿ, ತನ್ನ ಐಟಿ ಶಾಖೆಯ ನೆರವಿನಿಂದ ಈ ಆಪ್ ನಲ್ಲಿ ಎಲ್ಲವನ್ನೂ ಸಮರ್ಪಕವಾಗಿ ಸಂಯೋಜನೆಗೊಳಿಸಿದೆ. ಮುಂಬರುವ ವರ್ಷದಲ್ಲಿ ಹೆಚ್ಚೆಚ್ಚು ಸೇವೆಗಳನ್ನು ಮೊಬೈಲ್ ಅಪ್ಲಿಕೇಷನ್ ಗಳಿಗೆ ಅಳವಡಿಸುವ ಯೋಜನೆ ಇದೆ"

– ತುಷಾರ್ ಗಿರಿನಾಥ್

ಉತ್ತಮ ಆಡಳಿತ ಸಾಕಾರಗೊಳ್ಳಲು ಇ-ಆಡಳಿತ ಅತ್ಯಂತ ಮುಖ್ಯವಾದುದು ಎನ್ನುವುದು ಬಿಬಿಎಂಪಿ ಮುಖ್ಯ ಆಯುಕ್ತರಾದ ತುಷಾರ್ ಗಿರಿನಾಥ್ ಅವರ ಸ್ಪಷ್ಟ ಅಭಿಪ್ರಾಯವಾಗಿದೆ. "ಕಳೆದ ಕೆಲವು ವರ್ಷಗಳಲ್ಲಿ ಹಲವು ಆಪ್ ಗಳನ್ನು ಬಿಬಿಎಂಪಿ ಬಳಕೆಗೆ ಬಿಟ್ಟಿದ್ದರೂ ಅವು ಸಮರ್ಪಕ ನಿರ್ವಹಣೆಯಿಲ್ಲದೆ ನಿಷ್ಪ್ರಯೋಜಕವಾಗಿದ್ದವು. ಆದರೆ ಇದೀಗ, ಬಿಬಿಎಂಪಿ, ತನ್ನ ಐಟಿ ಶಾಖೆಯ ನೆರವಿನಿಂದ ಈ ಆಪ್ ನಲ್ಲಿ ಎಲ್ಲವನ್ನೂ ಸಮರ್ಪಕವಾಗಿ ಸಂಯೋಜನೆಗೊಳಿಸಿದೆ. ಮುಂಬರುವ ವರ್ಷದಲ್ಲಿ ಹೆಚ್ಚೆಚ್ಚು ಸೇವೆಗಳನ್ನು ಮೊಬೈಲ್ ಅಪ್ಲಿಕೇಷನ್ ಗಳಿಗೆ ಅಳವಡಿಸುವ ಯೋಜನೆ ಇದೆ" ಎಂದು ತುಷಾರ್ ಸ್ಪಷ್ಟಪಡಿಸುತ್ತಾರೆ.

ಕಳೆದ ವರ್ಷ, ಸ್ವತ್ತುಗಳ ಮಾಲೀಕರಿಗೆ ಇ-ಖಾತಾ ಡೌನ್ ಲೋಡ್ ಮಾಡಿಕೊಳ್ಳುವ ವ್ಯವಸ್ಥೆಯನ್ನು ಪಾಲಿಕೆ ಜಾರಿಗೊಳಿಸಿತು. ಇದು ಬ್ಲಾಕ್ ಚೈನ್ ತಾಂತ್ರಿಕತೆ ಆಧರಿಸಿದ ವ್ಯವಸ್ಥೆಯಾಗಿದ್ದು, ಅನೇಕ ಅಕ್ರಮಗಳನ್ನು ತಡೆಯುವಲ್ಲಿ ಪ್ರಮುಖ ಕ್ರಮವಾಗಿದೆ. "ಈಗ ನಾಗರಿಕರು ತಮ್ಮ ಖಾತೆಯನ್ನು ಯಾವುದೇ ಸಮಯದಲ್ಲಿ ತಾವಿರುವಲ್ಲಿಂದಲೇ ಪರಿಶೀಲಿಸಬಹುದು. ಹೀಗಾಗಿ, ಇದು ಈಗ ಸಂಪೂರ್ಣ ಪಾರದರ್ಶಕವಾಗಿದೆ" ಎಂದೂ ತುಷಾರ್ ಗಮನ ಸೆಳೆಯುತ್ತಾರೆ.

ನಗರದ ರಸ್ತೆಗಳಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಪರಿಸರಸ್ನೇಹಿ ವಿಧಾನದಲ್ಲಿ ಪರಿಹರಿಸಿಕೊಳ್ಳುವ ಗುರಿಯೊಂದಿಗೆ 2024ರ ಡಿಸೆಂಬರ್ ನಲ್ಲಿ ಸೆಂಟ್ರಲ್ ರೋಡ್ ರೀಸರ್ಚ್ ಇನ್ ಸ್ಟಿಟ್ಯೂಟ್ ನೊಂದಿಗೆ ಬಿಬಿಎಂಪಿ ಪಾಲುದಾರಿಕೆ ಏರ್ಪಡಿಸಿಕೊಂಡಿದೆ. ಇದು, ರಸ್ತೆಗಳ ಗುಂಡಿಗಳನ್ನು ಮುಚ್ಚಲು ಸ್ಟೀಲ್ ಸ್ಲ್ಯಾಗ್ ಗಳನ್ನು ಬಳಸುವ ಎಕೊಫಿಕ್ಸ್ ತಾಂತ್ರಿಕತೆಯನ್ನು ಬಳಸಲು ಅನುವು ಮಾಡಿಕೊಡುತ್ತದೆ.

ಬೆಂಗಳೂರಿನಲ್ಲಿ ₹1 ಲಕ್ಷ ಕೋಟಿ ಮೌಲ್ಯದ ರಸ್ತೆ ಯೋಜನೆಗಳು

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅನಾವರಣ

ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ದಿನೇದಿನೇ ಸಂಚಾರ ದಟ್ಟಣೆ ಜಾಸ್ತಿಯಾಗುತ್ತಿದ್ದು, ಇದನ್ನು ತಡೆಗಟ್ಟಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿಬಿಎಂಪಿ) ಮಹತ್ವದ ಘೋಷಣೆ ಮಾಡಿದೆ. ಮುಂದಿನ ಒಂದು ದಶಕದಲ್ಲಿ ಬೆಂಗಳೂರಿನಲ್ಲಿ ಮಹತ್ವದ ಪರಿವರ್ತನೆಗೆ ಕಾರಣವಾಗುವ ₹1 ಲಕ್ಷ ಕೋಟಿ ಮೊತ್ತದ ಸರಣಿ ರಸ್ತೆ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳನ್ನು ಬಿಬಿಎಂಪಿ ಘೋಷಿಸಿದೆ.

ಸುರಂಗ ರಸ್ತೆಗಳು, ಎಲಿವೇಟೆಡ್ ಕಾರಿಡಾರ್‌ಗಳ ನಿರ್ಮಾಣ, ಡಬಲ್ ಡೆಕ್ಕರ್ ಮೇಲ್ಸೇತುವೆಗಳಂತಹ ಹೈಟೆಕ್ ಪರಿಹಾರಗಳು, ರಸ್ತೆಗಳ ವೈಟ್-ಟಾಪಿಂಗ್ ಸೇರಿ ಹಲವು ಯೋಜನೆಗಳ ಜಾರಿಗೆ ಮಹತ್ವದ ಯೋಜನೆ ರೂಪಿಸಲಾಗಿದೆ. ಬೃಹತ್ ಯೋಜನೆಗಳ ಜಾರಿಗೆ ಹಣಕಾಸು ಸಂಸ್ಥೆಗಳಿಂದ ದೀರ್ಘಾವಧಿ ಸಾಲ ಪಡೆಯುವ ಉದ್ದೇಶವನ್ನು ಬಿಬಿಎಂಪಿ ಹೊಂದಿದೆ.

ಬೆಂಗಳೂರಿನಲ್ಲಿರುವ ಅತಿಯಾದ ಸಂಚಾರ ದಟ್ಟಣೆ ನಿವಾರಣೆ ದೃಷ್ಟಿಯಿಂದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದ (ಜಿಐಎಂ) ಮುನ್ನವೇ ಈ ಬಗ್ಗೆ ಪ್ರಕಟಿಸಿದ್ದ-ರು. ಈ ಬೆಳವಣಿಗೆಗಳ ಭಾಗವಾಗಿಯೇ ಸರ್ಕಾರವು ಸಕಾಲಕ್ಕೆ ಯೋಜನೆಗಳನ್ನು ಕಾರ್ಯರೂಪಗೊಳಿಸಲು ವಿಶೇಷ ಸಾಂಸ್ಥಿಕ ಘಟಕ (ಎಸ್‌ಪಿವಿ) ರಚನೆಗೂ ಚಿಂತನೆ ನಡೆಸಿದೆ. ವಿಶೇಷ ಅಧಿಕಾರಿಗಳ ಮೇಲ್ವಿಚಾರಣೆಯಡಿ ನಿಗದಿತ ಕಾಲಮಿತಿಯೊಳಗೆ ಈ ಉಪಕ್ರಮಗಳ ಅನುಷ್ಠಾನವನ್ನು ಖಾತರಿಗೊಳಿಸುವುದು ಇದರ ಉದ್ದೇಶವಾಗಿರುತ್ತದೆ.

ಈ ಪ್ರಸ್ತಾವನೆಗಳನ್ನು ಆಯ್ಕೆ ಮಾಡಿದ್ದು ಹೇಗೆ?

ಡಿ.ಕೆ. ಶಿವಕುಮಾರ್ ಅವರು ಬೆಂಗಳೂರು ನಗರಾಭಿವೃದ್ಧಿ ಖಾತೆ ಸಚಿವರಾಗಿ ಅಧಿಕಾರ ವಹಿಸಿಕೊಂಡ ಬಳಿಕ ಅಗತ್ಯವಿರುವ ಪ್ರಮುಖ ಮೂಲಸೌಕರ್ಯ ಯೋಜನೆಗಳನ್ನು ಗುರುತಿಸಲಾಯಿತು. ಡಿ.ಕೆ. ಶಿವಕುಮಾರ್‌ರವರ ನಾಯಕತ್ವದಡಿ ಬಿಬಿಎಂಪಿಯು ಬೆಂಗಳೂರಿನ ಸಂಚಾರ ದಟ್ಟಣೆ ಸಮಸ್ಯೆ ಬಗೆಹರಿಸುವ ದಿಸೆಯಲ್ಲಿ ಅಧ್ಯಯನ ನಡೆಸಲು ಕನ್ಸಲ್ಟಿಂಗ್ ಕಂಪನಿಯನ್ನು ನಿಯೋಜಿಸಿದರು. ಅಲ್ಲದೆ, ಈ ಸಂಬಂಧ ಅಧ್ಯಯನದ ಹೊಣೆಯನ್ನು ಕನ್ಸಲ್ಟಿಂಗ್ ಕಂಪನಿಗೆ ವಹಿಸಿದ ಬಳಿಕ, ಕಂಪನಿಯು 628 ಪುಟಗಳ ವಿಸ್ತೃತ ಅಧ್ಯಯನ ವರದಿ ನೀಡಿ, ಹಲವಾರು ಪ್ರಾಜೆಕ್ಟ್ ಗಳ ಬಗ್ಗೆ ಪ್ರಸ್ತಾಪಿಸಿತು. ಒಟ್ಟು 12 ಎಲಿವೇಟೆಡ್ ಕಾರಿಡಾರ್‌ಗಳ ನಿರ್ಮಾಣ, 8 ಚಿಕ್ಕ ಮೇಲ್ಸೇತುವೆಗಳು (ಶಾರ್ಟ್ ಫ್ಲೈಓವರ್), ಎರಡು ಡಬಲ್ ಡೆಕ್ಕರ್ ಮೆಟ್ರೊ ಕಾರಿಡಾರುಗಳು ಹಾಗೂ ಎರಡು ಸುರಂಗ ರಸ್ತೆಗಳ ನಿರ್ಮಾಣದ ಶಿಫಾರಸನ್ನು ಈ ಅಧ್ಯಯನ ವರದಿ ಒಳಗೊಂಡಿತ್ತು. ಇದಾದ ಬಳಿಕ, ವರದಿ ಕುರಿತು ಸಾರ್ವಜನಿಕರು ಹಾಗೂ ಹಿತಾಸಕ್ತಿದಾರರಿಂದ ಪ್ರತಿಕ್ರಿಯೆ ಮತ್ತು ಸಲಹೆಗಳನ್ನು ಪಡೆಯಲು ವರದಿಯನ್ನು ಸಾರ್ವಜನಿಕ-ಗೊಳಿಸಲಾಯಿತು.

ಹೆಬ್ಬಾಳ ಮತ್ತು ಸೆಂಟ್ರಲ್ ಸಿಲ್ಕ್ ಬೋರ್ಡ್ (ಉತ್ತರ-ದಕ್ಷಿಣ) ಮಧ್ಯೆ ಹಾಗೂ ಕೆ.ಆರ್.ಪುರಂನಿಂದ ನಾಯಂಡಹಳ್ಳಿಗೆ (ಪೂರ್ವ-ಪಶ್ಚಿಮ) ಸಂಪರ್ಕ ಕಲ್ಪಿಸುವ ದಿಸೆಯಲ್ಲಿ ಎರಡು ಪ್ರಮುಖ ಸುರಂಗ ರಸ್ತೆಗಳ ನಿರ್ಮಾಣಕ್ಕಾಗಿ ವಿಸ್ತೃತ ಯೋಜನಾ ವರದಿಗಳನ್ನು (ಡಿಪಿಆರ್ ಗಳು) ಸಿದ್ಧಪಡಿಸಲು 2024ರ ಮಧ್ಯಭಾಗದಲ್ಲಿ ಬಿಬಿಎಂಪಿ ಟೆಂಡರ್ ಕರೆಯಿತು. ಹೆಬ್ಬಾಳ-ಸೆಂಟ್ರಲ್ ಸಿಲ್ಕ್ ಬೋರ್ಡ್ ಸುರಂಗ ನಿರ್ಮಾಣಕ್ಕೆ ನವೆಂಬರ್‌ನಲ್ಲಿ ಡಿಪಿಆರ್ ಸಲ್ಲಿಸಲಾಯಿತು. ಇದಾದ ಬಳಿಕ ನಗರವನ್ನು ಕಾಡುತ್ತಿರುವ ಸಂಚಾರ ದಟ್ಟಣೆ ನಿವಾರಿಸುವ ಬದ್ಧತೆಯೊಂದಿಗೆ ಯೋಜನೆಯನ್ನು ಮುಂದಿನ ಹಂತಕ್ಕೆ ಕೊಂಡೊಯ್ಯಲಾಯಿತು.

ಈ ಮಹತ್ವಾಕಾಂಕ್ಷಿ ಪ್ರಾಜೆಕ್ಟ್ ಗಳನ್ನು ಕಾರ್ಯಗತಗೊಳಿಸ-ಲು ಬಿಬಿಎಂಪಿ ಸುಮಾರು 8 ಸಾವಿರ ಕೋಟಿ ರೂಪಾಯಿ ಸಾಲ ಪಡೆಯಲು ಹಣಕಾಸು ಸಂಸ್ಥೆಗಳನ್ನು ಸಂಪರ್ಕಿಸಿದ್ದು, ಮೂರು ಬ್ಯಾಂಕ್ ಗಳು ಸಾಲ ನೀಡಲು ಈಗಾಗಲೇ ಆಸಕ್ತಿ ತೋರಿವೆ. ರಸ್ತೆ ಯೋಜನೆಗಳಿಗೆ ದೃಢ ಸಂಕಲ್ಪದೊಂದಿಗೆ ಒತ್ತಾಸೆಯಾಗಿ ನಿಲ್ಲುವ ದಿಸೆಯಲ್ಲಿ ರಾಜ್ಯ ಸರ್ಕಾರವು ಪಡೆಯಲಿರುವ ಸಾಲಕ್ಕೆ ಬಾಧ್ಯಸ್ಥನಾಗಿರಲು ಮುಂದಾಗಿದೆ.

ರಾಜಕಾಲುವೆ ಸುತ್ತಲಿನ ಬಫರ್ ವಲಯದಲ್ಲಿ ರಸ್ತೆ ನಿರ್ಮಾಣದ ಗುರಿ

ರಾಜಕಾಲುವೆ ಸುತ್ತಲಿನ ಬಫರ್ ವಲಯನಲ್ಲಿ ರಸ್ತೆಗಳನ್ನು ರಸ್ತೆಗಳ ನಿರ್ಮಾಣದ ಜತೆಗೆ ರಾಜಕಾಲುವೆ (ಮಳೆ ನೀರು ಹರಿಯುವ ಬೃಹತ್ ಕಾಲುವೆ)ಗೆ ಹೊಂದಿಕೊಂಡ ಮೀಸಲು (ಬಫರ್) ವಲಯಗಳಲ್ಲಿ (ಐತಿಹಾಸಿಕವಾಗಿ ಇವುಗಳನ್ನು ಅಭಿವೃದ್ಧಿರಹಿತ ವಲಯ ಎಂದು ಗುರುತಿಸಲಾಗಿದೆ) ರಸ್ತೆ ನಿರ್ಮಾಣಕ್ಕೂ ಯೋಜನೆ ರೂಪಿಸುತ್ತಿದೆ. ಈ ರಸ್ತೆಗಳ ನಿರ್ಮಾಣದಿಂದ ಹಾಲಿ ಇರುವ ಪ್ರಮುಖ ರಸ್ತೆಗಳ ಮೇಲಿನ ಸಂಚಾರ ದಟ್ಟಣೆ ಕಡಿಮೆಗೊಳಿಸಬೇಕು ಹಾಗೂ ಈಗಿರುವ ಮೂಲಸೌಕರ್ಯಗಳ ಮೇಲಿನ ಒತ್ತಡವನ್ನು ತಗ್ಗಿಸಬೇಕು ಎಂಬುದು ಬಿಬಿಎಂಪಿ ಉದ್ದೇಶವಾಗಿದೆ.. ಮೊದಲ ಹಂತದಲ್ಲಿ ಹೆಬ್ಬಾಳ ಮತ್ತು ಹೆಣ್ಣೂರು ನಡುವಿನ ರಾಜಕಾಲುವೆ ಸುತ್ತಲಿನ ಬಫರ್ ವಲಯನಲ್ಲಿ ರಸ್ತೆಗಳನ್ನು ನಿರ್ಮಿಸುವ ಮೂಲಕ ಪರ್ಯಾಯ ಮಾರ್ಗ ಕಲ್ಪಿಸಿ ವಾಹನಗಳ ದಟ್ಟಣೆ ಇಳಿಸಬೇಕು ಎಂಬ ಗುರಿಯೂ ಇದರ ಹಿಂದಿದೆ.

ಇದೇ ಮೊದಲ ಬಾರಿಗೆ ಬಿಬಿಎಂಪಿಯು ರಸ್ತೆಗಳು ಹಾಗೂ ಪಾದಚಾರಿ ಮಾರ್ಗಗಳ ವಿನ್ಯಾಸ, ಅವುಗಳ ನಿರ್ಮಾಣಕ್ಕೆ ಅಗತ್ಯವಿರುವ ಸಾಮಗ್ರಿಗಳಿಗೆ ಸಂಬಂಧಿಸಿದಂತೆ ಆಯಾ ಕ್ಷೇತ್ರಗಳ ತಜ್ಞರಿಂದ ಮಹತ್ವದ ಸಲಹೆ-ಸೂಚನೆಗಳನ್ನು ಪಡೆದು, “ನಮ್ಮ ರಸ್ತೆ” ಎಂಬ ಪರಿಕಲ್ಪನೆಯನ್ನು ಕೂಡ ಪರಿಚಯಿಸಿದೆ.



ರಸ್ತೆಗಳು ಮತ್ತು ಪಾದಚಾರಿ ಮಾರ್ಗಗಳನ್ನು ಹೇಗೆ ವಿನ್ಯಾಸಗೊಳಿಸಬೇಕು ಮತ್ತು ಬಳಸಬೇಕಾದ ವಸ್ತುಗಳ ಪ್ರಕಾರದ ಬಗ್ಗೆ ಬಿಬಿಎಂಪಿ ಪ್ರಥಮ ಬಾರಿಗೆ ಹೊರತಂದಿರುವ ‘ನಮ್ಮ ರಸ್ತೆ’ ಕೈಪಿಡಿಯನ್ನು ಡಿಸಿಎಂ ಡಿ.ಕೆ. ಶಿವಕುಮಾರ್ ಬಿಡುಗಡೆ ಮಾಡಿದರು.

ಕೆರೆಗಳ ನಿರ್ವಹಣೆಗೆ ₹35 ಕೋಟಿ ಮೀಸಲು

ಬಿಬಿಎಂಪಿ ವ್ಯಾಪ್ತಿಯ ಎಲ್ಲ ಕೆರೆಗಳ ನಿರ್ವಹಣೆಗಾಗಿ, ಬಿಬಿಎಂಪಿ ತನ್ನ 2024-25ರ ಬಜೆಟ್‌ನಲ್ಲಿ, 35 ಕೋಟಿ ರೂಪಾಯಿಗಳನ್ನು ಮೀಸಲಿರಿಸಿದೆ. ಇದು, ಜಲಮೂಲಗಳ ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮಗಳ ಅಡಿಯಲ್ಲಿ ರಾಜ್ಯ ಸರ್ಕಾರದಿಂದ ಪಡೆಯುವ ಅನುದಾನಗಳನ್ನು ಹೊರತುಪಡಿಸಿದ ಹಣವಾಗಿದೆ. ಕಳೆದ ವರ್ಷದ ಬಿರು ಬೇಸಿಗೆ ಅನುಭವದ ಹಿನ್ನೆಲೆಯಲ್ಲಿ ಮಳೆನೀರು ಸಂಗ್ರಹ ಹಾಗೂ ಅಂತರ್ಜಲ ಮರುಪೂರಣವನ್ನು ಉತ್ತೇಜಿಸಲು ಪಾಲಿಕೆಯು ಹಲವು ಉದ್ಯಾನಗಳಲ್ಲಿ ಇಂಗುಗುಂಡಿಗಳನ್ನೂ ನಿರ್ಮಿಸಿದೆ.

ಹವಾಮಾನ ಕ್ರಿಯಾ ಘಟಕ ಸ್ಥಾಪನೆ: ಸುಸ್ಥಿರತೆಯೆಡೆಗೆ ಬೆಂಗಳೂರು ಪರಿವರ್ತಕ ಹೆಜ್ಜೆ

2050ರ ವೇಳೆಗೆ ಇಂಗಾಲ ಹೊರಸೂಸುವಿಕೆ ಶೂನ್ಯಗೊಳಿಸುವ ಗುರಿಯೊಂದಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ (ಬಿಬಿಎಂಪಿ) ಹವಾಮಾನ ಕ್ರಿಯಾ ಘಟಕಕ್ಕೆ ಚಾಲನೆ ನೀಡಿದ ಶ್ರೇಯವು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಸಲ್ಲುತ್ತದೆ. ನಗರ ಮಟ್ಟದ ಹವಾಮಾನ್ಯ ಕ್ರಿಯಾ ಯೋಜನೆ (ಬಿ.ಸಿಎಪಿ) ರೂಪಿಸುವಲ್ಲಿ ಬೆಂಗಳೂರು ದೇಶದಲ್ಲಿ ಮುಂಬೈ ನಂತರದ ಎರಡನೇ ನಗರವಾಗಿದೆ. ಹಸಿರುಮನೆ ಅನಿಲಗಳ (GHG) ಹೊರಸೂಸುವಿಕೆಯನ್ನು ಕಡಿಮೆಗೊಳಿಸಲು ಮತ್ತು ಆರೋಗ್ಯಕರ, ಸಮಾನ ಅವಕಾಶಗಳಿರುವ ಕ್ಷಮತೆಯಿಂದ ಕೂಡಿದ ಸಮುದಾಯಗಳನ್ನು ಸೃಷ್ಟಿಸಲು ಇದು ಗಮನ ಕೇಂದ್ರೀಕರಿಸುತ್ತದೆ.

ಬೆಂಗಳೂರಿನ ಸಿ40 ನಗರಗಳ ಬದ್ಧತೆಯ ಭಾಗವಾಗಿ, ಡಬ್ಲ್ಯು.ಆರ್.ಐ. ಇಂಡಿಯಾದೊಂದಿಗಿನ ಜ್ಞಾನಾಧಾರಿತ ಪಾಲುದಾರಿಕೆಯಲ್ಲಿ, ದತ್ತಾಂಶ ಚಾಲಿತ, ಎಲ್ಲರನ್ನೂ ಒಳಗೊಳ್ಳುವಂತಹ ಹಾಗೂ ಸಹಭಾಗಿತ್ವದ ಹವಾಮಾನ ಕ್ರಿಯಾ ಯೋಜನೆಯನ್ನು ಬಿಬಿಎಂಪಿ ಸಿದ್ಧಪಡಿಸುತ್ತಿದೆ.

ಬೆಂಗಳೂರು ನಗರವನ್ನು ಕೇಂದ್ರೀಕರಿಸಿಕೊಂಡು ಕಾರ್ಯತ್ಮಕ ಹವಾಮಾನ ಕ್ರಿಯಾ ಯೋಜನೆ ರೂಪಿಸುವ ಪ್ರಾಮುಖ್ಯ ಪ್ರಸ್ತಾಪಿಸಿದ ಡಿ.ಕೆ.ಶಿವಕುಮಾರ್ ಅವರು “ಹವಾಮಾನ ಕ್ರಿಯಾ ಮಾರ್ಗಸೂಚಿಯು ಕರ್ನಾಟಕ ರಾಜ್ಯದ ದೃಷ್ಟಿಯಿಂದ ಮಹತ್ವದ ಕಾರ್ಯತಂತ್ರದ ನಡೆ” ಎಂದು ಅಭಿಪ್ರಾಯಪಟ್ಟಿದ್ದಾರೆ. ಹೀಗಾಗಿ, ಮುಂಬರುವ ಕೆಲವು ವರ್ಷಗಳ ಅವಧಿಯಲ್ಲಿ, ಬಿ.ಸಿಎಪಿ ಯನ್ನು ಬಹು ವಲಯಗಳ ಸಹಭಾಗಿತ್ವದ ಕಾರ್ಯಕ್ರಮವನ್ನಾಗಿ ಅನುಷ್ಠಾನಗೊಳಿಸಲಾಗುವುದು. ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳು, ನಾಗರಿಕ ಸಮಾಜ ಮತ್ತು ಖಾಸಗಿ ವಲಯಗಳನ್ನು ಇದರಲ್ಲಿ ಒಳಗೊಳ್ಳಿಸಿಕೊಳ್ಳಲಾಗುವುದು” ಎಂದೂ ಶಿವಕುಮಾರ್ ಹೇಳಿದ್ದಾರೆ.

ಬಿಬಿಎಂಪಿ ಯು ‘ನೀಲಿಹಸಿರು’ (#BluGreenUru) ಉಪಕ್ರಮವನ್ನು ಕೂಡ ರೂಪಿಸಿದ್ದು, ಇದು ನೀಲಿ, (ಅಂದರೆ ಕೆರೆಗಳು, ನದಿಗಳು, ತೊರೆಗಳು ಮತ್ತು ಇತರ ನೈಸರ್ಗಿಕ ಹಾಗೂ ನಿರ್ಮಿತ ಚರಂಡಿಗಳು) ಹಾಗೂ ಹಸಿರು (ಅಂದರೆ ಉದ್ಯಾನಗಳು, ನಗರ ಅರಣ್ಯಗಳು, ಹಸರು ಹೊದಿಕೆ ಪ್ರದೇಶಗಳು) ಮೂಲಸೌಕರ್ಯಗಳ ಸಂಯೋಜನೆಯನ್ನು ಪ್ರಸ್ತಾಪಿಸುತ್ತದೆ. ಈ ನೀಲಿ-ಹಸಿರು ಮೂಲಸೌಕರ್ಯವು, ಶಾಖದ ಒತ್ತಡಗಳನ್ನು ಕಡಿಮೆಗೊಳಿಸಿ, ಮೇಲ್ಮೈ ನೀರಿನ ಹರಿವು ಹೀರಿಕೊಂಡು, ಪ್ರವಾಹದ ಅಪಾಯವನ್ನು ತಗ್ಗಿಸಿ ಹವಾಮಾನ ಬದಲಾವಣೆಯ ಆಘಾತಗಳ ವಿರುದ್ಧ ರಕ್ಷಾ ಕವಚದಂತೆ ಕಾರ್ಯಾಚರಿಸುತ್ತಿದೆ.

ಕೆರೆಗಳ ಸಂರಕ್ಷಣೆಯಲ್ಲಿ ನಾಗರಿಕ ಸಮೂಹಗಳಿಗೂ ಪಾಲಿಕೆ ಜೊತೆ ಕೈಜೋಡಿಸಲು ಸಾಧ್ಯವಾಗುವಂತೆ ಬಿಬಿಎಂಪಿ ನೀತಿಯನ್ನು ರೂಪಿಸಿದ್ದು, ಇದು ಹೈಕೋರ್ಟ್‌ನ ಅನುಮೋದನೆಯ ನಿರೀಕ್ಷೆಯಲ್ಲಿದೆ. ಇನ್ನು, ಹೊಸ ಉಪಕ್ರಮವೊಂದರಲ್ಲಿ, ಬಿಬಿಎಂಪಿಯು ತನ್ನ ಆಸುಪಾಸಿನಲ್ಲಿ ಗಿಡಗಳನ್ನು ನೆಡಲು ಹಾಗೂ ಮರಗಳನ್ನು ಸಂರಕ್ಷಿಸಲು ಶಾಲೆಗಳೊಂದಿಗೆ ಪಾಲುದಾರಿಕೆಯನ್ನೂ ಮಾಡಿಕೊಂಡಿದೆ.



ಹೊಸ ತ್ಯಾಜ್ಯ ನಿರ್ವಹಣಾ ಉಪಕ್ರಮ: ಸ್ವಚ್ಛ ಬೆಂಗಳೂರು ಗುರಿ

ಕಟ್ಟಡ ನಿರ್ಮಾಣ ಹಾಗೂ ಕಟ್ಟಡ ನೆಲಸಮಗೊಳಿಸಿದ ನಂತರ ಅವಶೇಷಗಳನ್ನು ನಿರ್ವಹಿಸುವಲ್ಲಿ ಬೆಂಗಳೂರು ನಗರವು ದಶಕಗಳಿಂದಲೂ ಗಂಭೀರ ಸವಾಲುಗಳನ್ನು ಎದುರಿಸುತ್ತಿದೆ. ಇಂತಹ ತ್ಯಾಜ್ಯವನ್ನು, ರಸ್ತೆ ಬದಿಯಲ್ಲಿ, ಖಾಲಿ ನಿವೇಶನಗಳಲ್ಲಿ ಹಾಗೂ ಕೆಲವು ಸಂದರ್ಭಗಳಲ್ಲಿ ಕೆರೆಗಳಲ್ಲಿ ಸುರಿಯುವುದು ಇಲ್ಲಿನ ರೂಢಿಯಾಗಿತ್ತು. ಆದರೆ, ಇದೀಗ, ನಗರದ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯನ್ನು ಸುಧಾರಿಸುವ ದಿಸೆಯಲ್ಲಿ ಪ್ರಮುಖ ಕ್ರಮವಾಗಿ ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ನಿಯಮಿತವು (ಬಿ.ಎಸ್.ಡಬ್ಲ್ಯು.ಎಂ.ಎಲ್) ಕಟ್ಟಡ ನಿರ್ಮಾಣ ಅವಶೇಷಗಳ ವಿಲೇವಾರಿಗೆ ಹೆಚ್ಚು ವ್ಯವಸ್ಥಿತ ಹಾಗೂ ವೈಜ್ಞಾನಿಕ ವಿಧಾನದ ಪ್ರಸ್ತಾವ ಸಲ್ಲಿಸಿದೆ

ನಿಯೋಜಿತ ಸೇವಾ ಪೂರೈಕೆದಾರರೊಂದಿಗೆ ಪಾಲುದಾರಿಕೆ ಮಾಡಿಕೊಳ್ಳುವ ಮೂಲಕ ಕಟ್ಟಡ ನಿರ್ಮಾಣ ತ್ಯಾಜ್ಯ ಸಂಗ್ರಹಣೆ, ಸಂಸ್ಕರಣೆ ಹಾಗೂ ಮರುಬಳಕೆಯನ್ನು ವ್ಯವಸ್ಥಿತಗೊಳಿಸುವುದು ಈ ಹೊಸ ಉಪಕ್ರಮದ ಉದ್ದೇಶವಾಗಿದೆ. ನಾಗರಿಕರು ಈ ಸೇವೆಯನ್ನು ಆನ್ಲೈನ್ ಮೂಲಕ ಸುಲಭವಾಗಿ ಕಾಯ್ದಿರಿಸಬಹುದಾಗಿದ್ದು, ನಿರ್ಮಾಣ ಅವಶೇಷಗಳು ನಿಯಂತ್ರಿತ ವಿಧಾನದಲ್ಲಿ ಪರಿಣಾಮಕಾರಿಯಾಗಿ ವಿಲೇವಾರಿ ಆಗುವುದನ್ನು ಖಾತರಿಪಡಿಸಿಕೊಳ್ಳಬಹುದು.

ಈ ಹಿಂದೆ, ಅನಧಿಕೃತ ವ್ಯಕ್ತಿಗಳು ಹಣ ಪಡೆದು ಕಟ್ಟಡದ ಅವಶೇಷಗಳನ್ನು ಸಂಗ್ರಹಿಸುತ್ತಿದ್ದರು. ಆದರೆ, ಅಂತಿಮವಾಗಿ ಆ ತ್ಯಾಜ್ಯವನ್ನು ಎಲ್ಲಿ ಹಾಕಲಾಗುತ್ತದೆ ಎಂಬುದನ್ನು ಕೇಳುವ ವ್ಯವಸ್ಥೆಯೇ ಇರಲಿಲ್ಲ. ಬಹುಮಟ್ಟಿಗೆ ಈ ತ್ಯಾಜ್ಯವನ್ನು ಕ್ವಾರಿಗಳು, ಕೆರೆ ಅಂಗಳಗಳು, ರಸ್ತೆ ಬದಿಗಳು ಹಾಗೂ ಇತರ ಸಾರ್ವಜನಿಕ ಪ್ರದೇಶಗಳಲ್ಲಿ ಸುರಿಯಲಾಗುತ್ತಿತ್ತು. ಇದು, ಬೆಂಗಳೂರಿನ ತ್ಯಾಜ್ಯ ನಿರ್ವಹಣಾ ಸಮಸ್ಯೆಗಳನ್ನು ಇನ್ನಷ್ಟು ತೀವ್ರಗೊಳಿಸುತ್ತಿತ್ತು. ಈಗ ಹೊಸ ವ್ಯವಸ್ಥೆಯ ಅನುಷ್ಠಾನದಿಂದಾಗಿ, ಅನುಮೋದಿತ ಮಾರಾಟಗಾರರಿಗೆ ಮಾತ್ರ ನಿರ್ಮಾಣ ತ್ಯಾಜ್ಯಗಳನ್ನು ನಿರ್ವಹಿಸಲು ಅನುಮತಿ ನೀಡಲಾಗುತ್ತದೆ.

ತ್ಯಾಜ್ಯ ವಿಲೇವಾರಿಗೆ ಹೊಸ ವ್ಯವಸ್ಥೆ

ನಿರ್ಮಾಣ ಅವಶೇಷಗಳ ನಿರ್ವಹಣಾ ವ್ಯವಸ್ಥೆಯನ್ನು ಸುಧಾರಿಸುವುದರ ಜೊತೆಗೆ, ಹಸಿ, ಒಣ ಹಾಗೂ ಸ್ಯಾನಿಟರಿ (ನೈರ್ಮಲ್ಯ) ತ್ಯಾಜ್ಯಗಳ ಸಮಗ್ರ ತ್ಯಾಜ್ಯ ನಿರ್ವಹಣೆ ರೂಪಿಸುವ ಬಗ್ಗೆಯೂ ಬಿ.ಎಸ್.ಡಬ್ಲ್ಯು.ಎಂ.ಎಲ್. ಕ್ರಮ ವಹಿಸುತ್ತಿದೆ. ಚೆನ್ನೈ, ಹೈದರಾಬಾದ್ ಹಾಗೂ ಇಂದೋರ್ ನಗರಗಳಲ್ಲಿನ ತ್ಯಾಜ್ಯ ನಿರ್ವಹಣಾ ಕ್ರಮವನ್ನು ಹೋಲುವ ಈ ವ್ಯವಸ್ಥೆಯು, ಬೆಂಗಳೂರಿನಲ್ಲಿ ಪ್ರತಿದಿನ ಸಂಗ್ರಹವಾಗುತ್ತಿರುವ 6000 ಟನ್ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಗ್ರಹಿಸಿ, ಸಾಗಿಸಿ, ಸಮರ್ಪಕವಾಗಿ ವಿಲೇವಾರಿಗೊಳಿಸಲು ಗಮನ ಕೇಂದ್ರೀಕರಿಸುತ್ತದೆ. ಈ ಉಪಕ್ರಮದ ಭಾಗವಾಗಿ ಗೊಬ್ಬರ ತಯಾರಿಕಾ ಘಟಕ ಹಾಗೂ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕ ಸೇರಿದಂತೆ , ವಿವಿಧ ತ್ಯಾಜ್ಯ ಸಂಸ್ಕರಣಾ ಸೌಲಭ್ಯಗಳನ್ನು ಸ್ಥಾಪಿಸಲು ಬಿ.ಎಸ್.ಡಬ್ಲ್ಯು.ಎಂ.ಎಲ್. ವಿಶಾಲ ಜಾಗದ ಹುಡುಕಾಟದಲ್ಲಿದೆ.

ನಗರದ ತ್ಯಾಜ್ಯ ನಿರ್ವಹಣಾ ಸಾಮರ್ಥ್ಯವನ್ನು ಇನ್ನಷ್ಟು ಹೆಚ್ಚಿಸಲು ಬಿ.ಎಸ್.ಡಬ್ಲ್ಯು.ಎಂ.ಎಲ್. ಈಜಿಪುರ ಹಾಗೂ ಚಾಮರಾಜಪೇಟೆಗಳಲ್ಲಿ ಈಗಾಗಲೇ ತ್ಯಾಜ್ಯ ವರ್ಗಾವಣಾ ಕೇಂದ್ರಗಳನ್ನು ಸ್ಥಾಪಿಸಿ ಹೊಸ ಹೆಜ್ಜೆ ಇರಿಸಿದೆ. ಈ ಕ್ರಮದಿಂದಾಗಿ, ಸಾರ್ವಜನಿಕ ರಸ್ತೆಗಳಲ್ಲಿ ಕಸವನ್ನು ಆಟೊ ಟಿಪ್ಪರ್ ಗಳಿಂದ ಕಾಂಪ್ಯಾಕ್ಟರ್ ಗಳಿಗೆ ವರ್ಗಾಯಿಸುವ ಪದ್ಧತಿಯನ್ನು ನಿವಾರಣೆಗೊಳಿಸಿ, ಸ್ವಚ್ಛ ಹಾಗೂ ಹೆಚ್ಚು ಸಂಘಟಿತ ವಿಧಾನದ ತ್ಯಾಜ್ಯ ನಿರ್ವಹಣೆಯನ್ನು ಖಾತರಿಗೊಳಿಸಿದೆ.

ಇನ್ನಷ್ಟು ಹೊಸ ಟೆಂಡರುಗಳನ್ನು ಕರೆದು, ತ್ಯಾಜ್ಯ ಸಂಗ್ರಹಣೆ ಹಾಗೂ ಸಾಗಣೆ ವ್ಯವಸ್ಥೆಯನ್ನು ಮರುಚಾಲನೆಗೊಳಿಸುವುದಕ್ಕೂ ಬಿ.ಎಸ್.ಡಬ್ಲ್ಯು.ಎಂ.ಎಲ್. ಯೋಜನೆ ರೂಪಿಸುತ್ತಿದೆ.

‘ಬ್ರ್ಯಾಂಡ್ ಬೆಂಗಳೂರು’ ಅಡಿ ಸಮಗ್ರ ಜಲ ಭದ್ರತಾ ಯೋಜನೆ

ತ್ವರಿತವಾಗಿ ಬೆಳೆಯುತ್ತಿರುವ ಐಟಿ ಸೇವೆಗಳ ವಲಯವೆಂದು ಗುರುತಿಸಿಕೊಂಡಿರುವ ಕರ್ನಾಟಕದ ರಾಜಧಾನಿಗೆ ನೀರಿನ ಭದ್ರತೆ ಖಾತರಿಗೊಳಿಸುವುದು ‘ಬ್ರ್ಯಾಂಡ್ ಬೆಂಗಳೂರು’ ಕಾರ್ಯಯೋಜನೆಯ ಪ್ರಮುಖ ಅಂಶಗಳಲ್ಲಿ ಒಂದಾಗಿದೆ. ಕೆಲವು ವರ್ಷಗಳ ಹಿಂದೆ ಕೆರೆಗಳಿಗೆ ಹೆಸರಾದ ನಗರ ಇದಾಗಿತ್ತು.

ಬ್ರ್ಯಾಂಡ್ ಬೆಂಗಳೂರು ಉಪಕ್ರಮದ ವಿಸ್ತೃತ ಯೋಜನೆಯಡಿ ನೀರಿನ ಸಂರಕ್ಷಣೆ ಸೇರಿದಂತೆ ಜಲ-ಭದ್ರತೆಗಾಗಿ ಹತ್ತಾರು ಉಪಕ್ರಮಗಳನ್ನು ರೂಪಿಸಲಾಗಿದೆ. ಇದಕ್ಕಾಗಿ, ದಕ್ಷತೆಯಿಂದ ಕೂಡಿದ ಜಲ ಸಂರಕ್ಷಣಾ ಕ್ರಮಗಳ ಅನುಸರಣೆ, ಭೂಮಿಯಿಂದ ಅಧಿಕ ನೀರು ಸೆಳೆಯುವಿಕೆಗೆ ನಿಯಂತ್ರಣ ವಿಧಿಸುವ ಮೂಲಕ ಅಂತರ್ಜಲ ಹೆಚ್ಚಿಸಲು ಉತ್ತೇಜನ,, ಸಮುದಾಯ-ಆಧರಿತ ಸಮರ್ಪಕ ನೀರಿನ ಬಳಕೆಗೆ ಪ್ರೋತ್ಸಾಹ, ಪ್ರವಾಹ ಸನ್ನದ್ಧತೆ ವೃದ್ಧಿ ಹಾಗೂ ನೀರು ಇಂಗುಗುಂಡಿಗಳ ವ್ಯವಸ್ಥೆ ಮೂಲಕ ಸಮಗ್ರ ಅಂತರ್ಜಲ ಮರುಪೂರಣ ಸೇರಿ ಹಲವು ಕ್ರಮಗಳನ್ನು ಅಳವಡಿಸಲಾಗುತ್ತದೆ.

ಸಂಸ್ಕರಿತ ತ್ಯಾಜ್ಯ ನೀರಿನ ಸಮರ್ಪಕ ಬಳಕೆ

ಜಲ ಸಂರಕ್ಷಣೆಯ ಭಾಗವಾಗಿ ಯೋಜನೆಯಡಿ ಗೃಹ ಬಳಕೆಗೆ ಒಮ್ಮೆ ಬಳಸಿದ ತ್ಯಾಜ್ಯ ನೀರನ್ನೇ ಸಂಸ್ಕರಿಸಿ ಕಟ್ಟಡ ನಿರ್ಮಾಣ ಚಟುವಟಿಕೆಗಳಿಗೆ ಬಳಸುವ ಗುರಿಯನ್ನು ಈ ಕಾರ್ಯಯೋಜನೆ ಹೊಂದಿದೆ. ಅಲ್ಲದೇ, ಸಂಸ್ಕರಿಸಿದ ತ್ಯಾಜ್ಯ ನೀರನ್ನು ಮೆಟ್ರೊ ರೈಲುಗಳು, ಕೆಎಸ್ ಆರ್ ಟಿಸಿ, ಬಿಎಂಟಿಸಿ ಬಸ್ ಗಳು ಸೇರಿ ಸಾರ್ವಜನಿಕ ಸಾರಿಗೆ ವಾಹನಗಳ ಸ್ವಚ್ಛತೆಗೆ ಬಳಸಲು ಕ್ರಮ ತೆಗೆದುಕೊಳ್ಳಲಾಗುತ್ತದೆ. ಈ ಉಪಕ್ರಮದ ಜಾರಿಗಾಗಿ ನಗರದ ಪ್ರತಿಯೊಂದು ಹೊಸ ಬಡಾವಣೆಯಲ್ಲಿ ತ್ಯಾಜ್ಯ ನೀರು ಸಂಗ್ರಹಣಾ ಘಟಕಗಳನ್ನು ಸ್ಥಾಪಿಸಲಾಗುತ್ತದೆ. ಈ ಮೂಲಕ, ಪ್ರತಿಯೊಂದು ಹನಿ ನೀರಿನ ಪರಿಣಾಮಕಾರಿ ಸದ್ಬಳಕೆಯನ್ನು ಖಾತರಿಗೊಳಿಸಲಾಗುತ್ತದೆ.

ಮಳೆ ನೀರು ಸಂಗ್ರಹ

ಮಳೆ ನೀರು ಸಂಗ್ರಹ ಯೋಜನೆಯನ್ನು ವಿಸ್ತೃತ ರೀತಿಯಲ್ಲಿ ದಕ್ಷತೆಯಿಂದ ಅನುಷ್ಠಾನಗೊಳಿಸುವ ಮೂಲಕ ಅಂತರ್ಜಲದ ಮರುಪೂರಣಕ್ಕೆ ಒತ್ತು ನೀಡಲಾಗುತ್ತದೆ. ಈ ಗುರಿಯ ಸಾಧನೆಗಾಗಿ ಪೂರಕ ಅಂತರ್ಜಲ ವೃದ್ಧಿ ಮೂಲಗಳನ್ನು ಗುರುತಿಸಲು ನಗರಾಡಳಿತ ಸಂಸ್ಥೆಗಳು ಗಮನ ಕೇಂದ್ರೀಕರಿಸುತ್ತವೆ. ತಾರಸಿ ಮಳೆ ನೀರು ಸಂಗ್ರಹದ ಮೂಲಕ ಶೇಖರಿಸಿದ ನೀರನ್ನು ಕುಡಿಯಲು ಹೊರತುಪಡಿಸಿ ಬೇರೆ ಉದ್ದೇಶಗಳಿಗೆ ಬಳಸುವುದು, ಮೆಟ್ರೊ ಕಾರಿಡಾರ್ ಗಳ ಗುಂಟ ಮಳೆ ನೀರು ಸಂಗ್ರಹ ವ್ಯವಸ್ಥೆ ಅಳವಡಿಸಿ, ಅದನ್ನು ಮರುಪೂರಣ ವ್ಯವಸ್ಥೆಗೆ ಸಂಪರ್ಕಿಸುವುದು. ಜೊತೆಗೆ, ನಗರದಾದ್ಯಂತ ದೇವಾಲಯಗಳು, ಉದ್ಯಾನಗಳು ಹಾಗೂ ಸಾರ್ವಜನಿಕ ಕಟ್ಟಡಗಳ ಆವರಣಗಳಲ್ಲಿ ಇಂಗು ಗುಂಡಿಗಳನ್ನು ನಿರ್ಮಿಸುವುದು ಇದರಲ್ಲಿ ಸೇರಿರುತ್ತದೆ.

ಇದರ ಭಾಗವಾಗಿ ಇನ್ನೂ ಹಲವು ಪ್ರಮುಖ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ. ಅದರಲ್ಲೂ, ಮುಖ್ಯವಾಗಿ ಎಲ್ಲ ಈಜುಕೊಳಗಳಲ್ಲಿ ಮಳೆ ನೀರು ಸಂಗ್ರಹಣಾ ವ್ಯವಸ್ಥೆ ಅಳವಡಿಸಿ, ಆ ಮೂಲಕ ಹಿಡಿದಿಟ್ಟ ನೀರಿನ ಮರುಬಳಕೆಯನ್ನು ಕಡ್ಡಾಯಗೊಳಿಸಲಾಗುತ್ತದೆ. ಹಾಗೆಯೇ, ಯೋಜನೆಯಡಿ ಬೆಂಗಳೂರಿನಲ್ಲಿರುವ 1,300 ಉದ್ಯಾನಗಳಲ್ಲಿ ಇಂಗುಗುಂಡಿಗಳನ್ನು ನಿರ್ಮಿಸುವ ಮೂಲಕ 3,250 ದಶಲಕ್ಷ ಲೀಟರ್ ನೀರು ಉಳಿಸುವುದು ಪ್ರಮುಖ ಗುರಿಯಾಗಿದೆ. ಇದರ ಜತೆಗೆ, ಸಾರ್ವಜನಿಕ ಜಲ ಶುದ್ಧೀಕರಣ ಘಟಕಗಳಲ್ಲಿ ಗರಿಷ್ಠ ಮಟ್ಟದಲ್ಲಿ ನೀರಿನ ಸಮರ್ಥ ಬಳಕೆಯ ಗುರಿಯನ್ನೂ ಇದು ಹೊಂದಿದೆ.

ಕೆರೆಗಳ ಪುನರುಜ್ಜೀವನ

ನೀರಿನ ಭದ್ರತೆಯ ಭಾಗವಾಗಿ ನಗರದಲ್ಲಿರುವ ಕೆರೆಗಳನ್ನು ಪುನರುಜ್ಜೀವಗೊಳಿಸಿ ಅಭಿವೃದ್ಧಿಪಡಿಸಲಾಗುತ್ತದೆ. ಕೆರೆಗಳ ಮೇಲ್ವಿಚಾರಣೆ ಮೂಲಕ ಅವುಗಳ ಗುಣಮಟ್ಟ ಖಾತರಿಗೊಳಿಸಲು ಸರ್ಕಾರಿ ಅಧಿಕಾರಿಗಳು ಹಾಗೂ ಜನಸಾಮಾನ್ಯರನ್ನು ಒಳಗೊಂಡ ಸಮಿತಿಗಳನ್ನು ರಚಿಸುವ ಯೋಜನೆಯೂ ಸರ್ಕಾರಕ್ಕಿದೆ. ತಾರಸಿಯಲ್ಲಿ ಸಂಗ್ರಹಿಸಿದ ಮಳೆ ನೀರನ್ನು ಕುಡಿಯುವ ಬಳಕೆಗೆ ಹೊರತಾಗಿ ನಗರದಾದ್ಯಂತ ಬೇರೆ ಉದ್ದೇಶಗಳಿಗೆ ಪರಿಣಾಮಕಾರಿಯಾಗಿ ಸದ್ಬಳಕೆ ಮಾಡಿಕೊಳ್ಳುವ ಸಾಧ್ಯತೆಗಳನ್ನು ಶೋಧಿಸುವುದು ಕೂಡ ಯೋಜನೆಯಲ್ಲಿ ಸೇರಿದೆ.

ಹಾಗೆಯೇ, ನಗರದಲ್ಲಿರುವ ಬಿಡಿ ಮನೆಗಳಲ್ಲಿ(ಇಂಡಿಪೆಂಡೆಂಟ್ ಹೌಸಸ್) ಸ್ವಂತ ಬೋರ್ ವೆಲ್ ಗಳ ಮೂಲಕ ಅತಿ ಹೆಚ್ಚು ನೀರು ಬಳಸುವುದರ ಮೇಲೆ ನಿಗಾ ಇರಿಸಲಾಗುತ್ತದೆ. ಸೂಕ್ತ ಅನುಮತಿ ಇಲ್ಲದೆ ಬೋರ್ ವೆಲ್ ಗಳನ್ನು ಕೊರೆಸಿದವರಿಗೆ ದಂಡ ವಿಧಿಸುವ ಪ್ರಸ್ತಾವವೂ ಇದರಲ್ಲಿದೆ. ಈ ಮೂಲಕ, ಸುಸ್ಥಿರವಲ್ಲದ ನೀರಿನ ಬಳಕೆ ವಿಧಾನಕ್ಕೆ ಕಡಿವಾಣ ಹಾಕುವ ಉದ್ದೇಶವನ್ನು ಇದು ಹೊಂದಿದೆ.

ಸವಾಲುಗಳನ್ನು ಮೀರಿ ಸಮರ್ಪಕ ವ್ಯವಸ್ಥೆ: ಇಂತಹ ಹಲವು ಕ್ರಮಗಳ ಮೂಲಕ ನೀರಿನ ಭದ್ರತೆ ಸಾಧಿಸುವಲ್ಲಿ ಹಲವು ಸವಾಲುಗಳಿವೆ. ಪ್ರವಾಹ-ನೀರು ಕಾಲುವೆಗಳ ನೀರು ಮಳೆ ನೀರು ಚರಂಡಿಗಳಿಗೆ ಹರಿಯದಂತೆ ತಡೆಯುವುದು, ನಗರದ ಕೆರೆಗಳ ನಡುವೆ ಸಂಪರ್ಕ ಕಲ್ಪಿಸಿ ಪ್ರವಾಹ ತಡೆಯುವುದು, ಪ್ರವಾಹ ತಡೆಗಾಗಿ ಸುರಂಗ ಕಾಲುವೆಗಳ ನಿರ್ಮಾಣ, ಪ್ರವಾಹಕ್ಕೆ ಕಾರಣವಾಗುವ ನೀರನ್ನು ಲಿಫ್ಟ್ ಚಾನೆಲಿಂಗ್ ವ್ಯವಸ್ಥೆಯಿಂದ ಸಮೀಪದ ನದಿಗಳಿಗೆ ಹರಿಸುವುದು ಇವು ಇಂತಹ ಸವಾಲುಗಳಲ್ಲಿ ಸೇರಿವೆ. ಆದರೆ, ಈ ಸವಾಲುಗಳಿಗೆ ಸಮರ್ಥ ಪರಿಹಾರಗಳನ್ನು ಕಂಡುಕೊಳ್ಳುವ ದಿಸೆಯಲ್ಲಿ ಸಮಗ್ರ ಜಲ ಭದ್ರತಾ ಯೋಜನೆ ರೂಪಿಸಲು ‘ಬ್ರ್ಯಾಂಡ್ ಬೆಂಗಳೂರು’ ಕಾರ್ಯಯೋಜನೆ ಕೆಲಸ ಮಾಡಲಿದೆ.

ಆರೋಗ್ಯ ಸುಧಾರಣೆಗೆ ಬಿಬಿಎಂಪಿ ‘ಒನ್ ಹೆಲ್ತ್’ ಪರಿಹಾರ

ಪ್ರಾಣಿಗಳ ಆರೋಗ್ಯ, ಸುತ್ತಮುತ್ತಲಿನ ಪರಿಸರವು ಸಾರ್ವಜನಿಕರ ಆರೋಗ್ಯದ ಜತೆ ಪರಸ್ಪರ ಸಂಬಂಧ ಹೊಂದಿದೆ ಎಂಬುದನ್ನು ಬಿಬಿಎಂಪಿ ಮನಗಂಡಿದೆ. ಹೀಗಾಗಿ, ಬೆಂಗಳೂರಿನಲ್ಲಿಆರೋಗ್ಯಕ್ಕೆ ಸಂಬಂಧಿಸಿದಂತೆ ಎದುರಾಗುತ್ತಿರುವ ಹಲವು ಆತಂಕಗಳ ನಿವಾರಣೆಗಾಗಿ ಸಮಗ್ರ ಆರೋಗ್ಯ ಸುಧಾರಣೆ ಯೋಜನೆ ‘ಒನ್ ಹೆಲ್ತ್’ ರೂಪಿಸಿದೆ.

ಬಿಬಿಎಂಪಿಯು 2022ರ ಡಿಸೆಂಬರ್‌ನಲ್ಲಿ ‘ಒನ್ ಹೆಲ್ತ್ ಸೆಲ್’ ಆರಂಭಿಸಿದ್ದು, ಅದೇ ವರ್ಷದ ಆರಂಭದಿಂದಲೇ ಅದಕ್ಕಾಗಿ ಕಾರ್ಯಪ್ರವೃ-ತ್ತವಾಗಿತ್ತು. ಸೊಳ್ಳೆಗಳು ಸೇರಿದಂತೆ ಹಲವು ಕೀಟಜನ್ಯ ಹಾಗೂ ಪ್ರಾಣಿಜನ್ಯ ರೋಗಗಳನ್ನು ತಡೆಯುವುದು ಮತ್ತು ಮನುಷ್ಯರು, ಪ್ರಾಣಿಗಳು ಹಾಗೂ ಪರಿಸರದ ಪರಸ್ಪರ ನಿಕಟ ಸಂಬಂಧದಿಂದಾಗಿ ಹರಡುವ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವ ದಿಸೆಯಲ್ಲಿ ಹಲವು ಸಂಘಟನೆಗಳು ಹಾಗೂ ಸಂಸ್ಥೆಗಳನ್ನು ಸೆಳೆಯುವುದು ಇದರ ಉದ್ದೇಶವಾಗಿತ್ತು. ಕೊರೊನಾ ಸಾಂಕ್ರಾಮಿಕ ಬಿಕ್ಕಟ್ಟಿನ ವೇಳೆ ಮನುಷ್ಯನ ಆರೋಗ್ಯವನ್ನು ಪ್ರತ್ಯೇಕವಾಗಿ ಪರಿಶೀಲಿಸಲು ಹಾಗೂ ಚಿಕಿತ್ಸೆ ನೀಡಲು ಸಾಧ್ಯವಿಲ್ಲ ಎಂಬುದನ್ನು ಅರಿತ ಹಿನ್ನೆಲೆಯಲ್ಲಿ, ಸಮಗ್ರ ದೃಷ್ಟಿಕೋನದೊಂದಿಗೆ ಆರೋಗ್ಯ ಸಂಬಂಧಿ ಆತಂಕಗಳನ್ನು ನಿವಾರಿಸಲು ಹೊಸ ಯೋಜನೆ ಜಾರಿಗೊಳಿಸಲಾಯಿತು.

ಈ ಸಹಭಾಗಿತ್ವದ ಪ್ರಮುಖ ಪಾಲುದಾರನಾದ ಬಿಬಿಎಂಪಿಯು ಇದಕ್ಕಾಗಿ ಸುಮಾರು 25 ಸಂಸ್ಥೆಗಳನ್ನು ಒಗ್ಗೂಡಿಸಿದೆ. ಭಾರತ ಸರ್ಕಾರದ (ಜಿಐಐ) ಪ್ರಧಾನ ವೈಜ್ಞಾನಿಕ ಸಲಹೆಗಾರರ ಕಚೇರಿಯ (ಒಪಿಎಸ್ಎ) ಉಪಕ್ರಮವಾದ ಬೆಂಗಳೂರು ಸೈನ್ಸ್ ಆ್ಯಂಡ್ ಟೆಕ್ನಾಲಜಿ ಕ್ಲಸ್ಟರ್ (ಬಿಇಎಸ್‌ಟಿ) ಜತೆಗೆ ಇಂಡಿಯನ್ ಇನ್ ಸ್ಟಿಟ್ಯೂಟ್ ಆಫ್ ಸೈನ್ಸ್ (ಐಐಎಸ್‌ಸಿ), ಟಾಟಾ ಇನ್ ಸ್ಟಿಟ್ಯೂಟ್ ಫಾರ್ ಜೆನೆಟಿಕ್ಸ್ ಆ್ಯಂಡ್ ಸೊಸೈಟಿ (ಟಿಐಜಿಎಸ್), ನ್ಯಾಷನಲ್ ಸೆಂಟರ್ ಫಾರ್ ಬಯಾಲಜಿಕಲ್ ಸೈನ್ಸಸ್ (ಎನ್‌ಸಿಬಿಎಸ್)ನಂತಹ ಪ್ರಮುಖ ಸಂಸ್ಥೆಗಳು ಕೂಡ ಇದರ ಭಾಗವಾಗಿವೆ.

ಒನ್ ಹೆಲ್ತ್ ಸೆಲ್ ಸ್ಥಾಪ-ನೆಯಾಗುತ್ತಲೇ ರೋಗಗಳ ಮೇಲೆ ಕಣ್ಗಾವಲಿಗಾಗಿ ಅತ್ಯಾಧುನಿಕ ತಂತ್ರಜ್ಞಾನ ಹಾಗೂ ಸಿಬ್ಬಂದಿ ವರ್ಗವನ್ನು ಅಭಿವೃದ್ಧಿಪಡಿಸಲಾಯಿತು. ಅದರಲ್ಲೂ, ಸಾಂಕ್ರಾಮಿಕ ರೋಗಗಳಾದ ಡೆಂಗ್ಯೂ, ಲೆಪ್ಟೊಸ್ಪಿರೋಸಿಸ್, ರೇಬಿಸ್, ಚಿಕೂನ್‌ಗುನ್ಯಾ, ಮಲೇರಿಯಾ ಸೇರಿ ಹಲವು ರೋಗಗಳನ್ನು ಕ್ಷಿಪ್ರವಾಗಿ ಪತ್ತೆಹಚ್ಚಲು ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಲಾಗುತ್ತಿದೆ.

ಜನಸಂಖ್ಯೆ ದೃಷ್ಟಿಯಿಂದ ಕ್ಷಿಪ್ರವಾಗಿ ಬೆಳವಣಿಗೆ ಕಾಣುತ್ತಿರುವ ಬೆಂಗಳೂರಿನಂತಹ ನಗರದಲ್ಲಿ ರೋಗಗಳ ಬಗೆಗಿನ ಮುಂಜಾಗ್ರತೆಯು ಪ್ರಮುಖವಾಗುತ್ತದೆ. ಬಿಬಿಎಂಪಿಯು ಹಲವು ಸಂಘ-ಸಂಸ್ಥೆಗಳ ಸಹಯೋಗ ಸಾಧಿಸಿದ ಬಳಿಕ ಬೆಂಗಳೂರಿನಲ್ಲಿ ಈ ಹಿಂದೆ ಕಾಡಿದ್ದ ಮಾರಕ ಸಾಂಕ್ರಾಮಿಕ ರೋಗಗಳ ದತ್ತಾಂಶವನ್ನು ಸಂಯೋಜಿಸಲು ಸಾಧ್ಯವಾಯಿತು. ಇದರಿಂದ ವರ್ತಮಾನದಲ್ಲಿ ಸರಿಯಾದ ಸಮಯಕ್ಕೆ ರೋಗಗಳ ಪತ್ತೆ ಜೊತೆಗೆ ಮನುಷ್ಯನ ಆರೋಗ್ಯದ ದೃಷ್ಟಿಯಿಂದ ಸ್ವಚ್ಛತೆ ಸೇರಿ ಹಲವು ಕ್ರಮಗಳನ್ನು ತೆಗೆದುಕೊಳ್ಳಲು ಸಾಧ್ಯವಾಯಿತು.

ಸೂಕ್ಷ್ಮಾಣು ಜೀವಿಗಳಿಂದ ಹರಡುವ ರೋಗಗಳ ವಿರುದ್ಧ ನಿರೋಧಕ ಶಕ್ತಿ (ಎಎಂಆರ್) ವೃದ್ಧಿಸಿಕೊಳ್ಳಲು ಕಾಳಜಿ ವಹಿಸಲು ಸಾರ್ವಜನಿಕರಿಗೆ ಮಾಹಿತಿ ನೀಡುವ ಮೂಲಕ ಜಾಗೃತಿ ಮೂಡಿಸುವುದು ಒನ್ ಹೆಲ್ತ್ ಯೋಜನೆಯ ಪ್ರಮುಖ ಗುರಿಗಳಲ್ಲಿ ಒಂದಾಗಿದೆ. ಅಷ್ಟೇ ಅಲ್ಲ, ಮನುಷ್ಯರು ಹಾಗೂ ಪ್ರಾಣಿಗಳಲ್ಲಿ ಆಯಾ ಕಾಲಮಾನಕ್ಕೆ ತಕ್ಕಂತೆ ತಗುಲುವ ಸೋಂಕುಗಳು, ಆವರಿಸುವ ಕಾಯಿಲೆಗಳನ್ನು ನಿಯಂತ್ರಿಸಲು, ಸಾಂಕ್ರಾಮಿಕಗಳನ್ನು ತಡೆಗಟ್ಟಿ ಸಾವಿನ ಪ್ರಮಾಣವನ್ನು ತಗ್ಗಿಸಲು ಕೂಡ ಬಿಬಿಎಂಪಿಗೆ ಇದರಿಂದ ಅನುಕೂಲ-ವಾಗುತ್ತಿದೆ.

ಬಿಬಿಎಂಪಿ ಕೈಗೊಂಡ ಈ ಬಹು ಆಯಾಮಗಳ ಯೋಜನೆಯು ಪಾಲಿಕೆ ಜತೆಗೆ ಹಲವು ಹಿತಾಸಕ್ತಿದಾರರಿಗೆ ಸಂಪೂರ್ಣ ದತ್ತಾಂಶ ಸಂಗ್ರಹಿಸಿ, ಆಳವಾದ ಅಧ್ಯಯನದ ಮೂಲಕ ರೋಗಗಳ ಹರಡುವಿಕೆಯನ್ನು ತಡೆಯಲು ಸಹಾಯ-ವಾಗುತ್ತದೆ. ಜೊತೆಗೆ, ಪರಿಸರದ ಸವಾಲುಗಳನ್ನು ಎದುರಿಸಿ ಕಾಯಿಲೆ ಹರಡುವ ಹಾಟ್ ಸ್ಪಾಟ್ ಗಳು ಹಾಗೂ ಅಪಾಯ ಹೆಚ್ಚಿರುವ ಪ್ರದೇಶಗಳನ್ನು ಪತ್ತೆಹಚ್ಚಿ ಕ್ಷಿಪ್ರವಾಗಿ ನಿಯಂತ್ರಿಸಲು ಸಾಧ್ಯವಾಗುತ್ತಿದೆ.

‘ನಮ್ಮ ಕ್ಲಿನಿಕ್’ಗಳ ಜತೆಗೆ ಮನೆ ಮನೆಗೆ ತೆರಳಿ ರೋಗಗಳ ಮೇಲೆ ನಿಗಾ ಇರಿಸಲು ಹಾಗೂ ಚಿಕಿತ್ಸೆ ನೀಡಲು ಕೂಡ ಇದು ಸಹಕಾರಿಯಾಗುತ್ತಿದೆ. ಇದರಿಂದ ಬೆಂಗಳೂರನ್ನು ಆರೋಗ್ಯಪೂರ್ಣ ನಗರಿಯನ್ನಾಗಿ ಮಾಡಲು ಸಾಧ್ಯವಾಗುತ್ತಿದೆ.

ಶಾಲೆ, ಕಾಲೇಜುಗಳಲ್ಲಿ ಉತ್ಕೃಷ್ಟ ಬೋಧನಾ ಗುಣಮಟ್ಟ ಖಾತರಿ ಬಿಬಿಎಂಪಿ ಮಹತ್ವದ ಕ್ರಮಗಳು

ತನ್ನ ವ್ಯಾಪ್ತಿಯಲ್ಲಿ ಬರುವ 142 ಶಾಲೆಗಳು ಹಾಗೂ 17 ಕಾಲೇಜುಗಳಲ್ಲಿ ಅಭ್ಯಸಿಸುತ್ತಿರುವ 24,108 ವಿದ್ಯಾರ್ಥಿಗಳಿಗೆ ಉತ್ಕೃಷ್ಟ ಗುಣಮಟ್ಟದ ಶಿಕ್ಷಣ ಲಭ್ಯವಾಗಿಸಲು ಬಿಬಿಎಂಪಿ ಶಿಕ್ಷಣ ಇಲಾಖೆ ಹಲವಾರು ಹೆಚ್ಚುವರಿ ಕ್ರಮಗಳನ್ನು ಕೈಗೊಂಡಿದೆ.

ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲಕರವಾದ ಕಲಿಕಾ ವಾತಾವರಣ ಒದಗಿಸಲು ಶಾಲಾ ಕಾಲೇಜುಗಳ ದುರಸ್ತಿ ಹಾಗೂ ನವೀಕರಣ ಕಾರ್ಯಗಳಿಗಾಗಿ ರೂ 18ಕೋಟಿಯನ್ನು ಬಿಬಿಎಂಪಿ ಮಂಜೂರು ಮಾಡಿದೆ. ಈ ಹಣವನ್ನು ಶೌಚಾಲಯಗಳು ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಸುಧಾರಿಸಲು, ಮಳೆನೀರು ಸಂಗ್ರಹ ವ್ಯವಸ್ಥೆ ಅಳವಡಿಸಲು, ಹತ್ತು ಹೊಸ ಆಟದ ಮೈದಾನಗಳನ್ನು ಅಭಿವೃದ್ಧಿ ಪಡಿಸಲು ಮತ್ತು ನರ್ಸರಿ ಶಾಲೆಗಳ ಸಿವಿಲ್ ದುರಸ್ತಿಯೊಂದಿಗೆ ನವೀಕರಣ ಕೆಲಸಗಳಿಗೆ ಬಳಸಿಕೊಳ್ಳಲಾಗುವುದು.

ಕರ್ನಾಟಕದಲ್ಲಿರುವ ಐತಿಹಾಸಿಕ, ಸಾಂಸ್ಕೃತಿಕ ಹಾಗೂ ಪರಿಸರ ಪ್ರವಾಸೋದ್ಯಮ ತಾಣಗಳಿಗೆ ಶೈಕ್ಷಣಿಕ ಪ್ರವಾಸಗಳನ್ನು ಆಯೋಜಿಸಲು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (ಕೆ.ಎಸ್.ಟಿ.ಡಿ.ಸಿ.)ದೊಂದಿಗೆ ಬಿಬಿಎಂಪಿ ಪಾಲುದಾರಿಕೆ ಮಾಡಿಕೊಂಡಿದೆ. ಇಂತಹ ಶೈಕ್ಷಣಿಕ ಪ್ರವಾಸಗಳು ವಿದ್ಯಾರ್ಥಿಗಳಿಗೆ ತರಗತಿಗಳಿಂದಾಚೆಗೆ ಅತ್ಯುತ್ತಮ ಕಲಿಕಾ ಅನುಭವಗಳನ್ನು ಲಭ್ಯವಾಗಿಸುತ್ತವೆ. ಜೊತೆಗೆ, ರಾಜ್ಯದ ಪರಂಪರೆ ಹಾಗೂ ಪರಿಸರದೊಂದಿಗೆ ಬೆಸೆದುಕೊಳ್ಳಲು ಸಹಕಾರಿಯಾಗುತ್ತವೆ.

ಶೈಕ್ಷಣಿಕ ಉತ್ಕೃಷ್ಟತೆ ಉತ್ತೇಜಿಸಲು 2023-24ನೇ ಸಾಲಿನಲ್ಲಿ ಅತ್ಯುತ್ತಮ ಸಾಧನೆ ತೋರಿದ 306 ವಿದ್ಯಾರ್ಥಿಗಳಿಗೆ ಒಟ್ಟು ರೂ 1,00,70,000 ಮೊತ್ತದ ನಗದು ಬಹುಮಾನಗಳನ್ನು ಬಿಬಿಎಂಪಿ ಪ್ರದಾನ ಮಾಡಿದೆ. ಈ ಪೈಕಿ, 73 ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ತಲಾ ರೂ 25 ಸಾವಿರ ಹಾಗೂ 227 ಪಿಯುಸಿ ವಿದ್ಯಾರ್ಥಿಗಳು ತಲಾ ರೂ 35 ಸಾವಿರ ನಗದು ಬಹುಮಾನ ಪಡೆದಿದ್ದಾರೆ. ಅಲ್ಲದೆ, ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ಅಂತಿಮ ವರ್ಷದ ಆರು ಪದವಿ ವಿದ್ಯಾರ್ಥಿಗಳಿಗೆ ತಲಾ ರೂ 50 ಸಾವಿರ ನೀಡಲಾಗಿದೆ.

ಬಿಬಿಎಂಪಿ, ತನ್ನ ವ್ಯಾಪ್ತಿಯ ಶಾಲೆಗಳು ಹಾಗೂ ಕಾಲೇಜುಗಳಲ್ಲಿ ಉತ್ಕೃಷ್ಟ ಬೋಧನಾ ಗುಣಮಟ್ಟ ಖಾತರಿಪಡಿಸಲು ಮಹತ್ವದ ಕ್ರಮಗಳನ್ನು ಕೈಗೊಳ್ಳುತ್ತಿದೆ. ವಿಷಯ ಪರಿವೀಕ್ಷಕರನ್ನು (ಸಬ್ಜೆಕ್ಟ್ ಇನ್‌ಸ್ಪೆಕ್ಟರ್) ನಿಯೋಜಿಸಲಾಗಿದ್ದು, ಅವರು ಪ್ರತಿದಿನವೂ ಶಾಲೆಗೆ ಭೇಟಿ ನೀಡಿ ಶಿಕ್ಷಕರು ಪರಿಣಾಮಕಾರಿಯಾಗಿ ಬೋಧನೆಯಲ್ಲಿ ತೊಡಗಿರುವುದನ್ನು ಖಚಿತಪಡಿಸಿಕೊಳ್ಳುತ್ತಾರೆ. ಶಾಲೆಯ ಆಡಳಿತವನ್ನು ಸುಧಾರಿಸಲು ಶಾಲಾ ಮುಖ್ಯಸ್ಥರಿಗೆ ನಿಯಮಿತವಾಗಿ ಆಡಳಿತಾತ್ಮಕ ಹಾಗೂ ಆರ್ಥಿಕ ಜವಾಬ್ದಾರಿಗಳ ಬಗ್ಗೆ ತರಬೇತಿ ಹಾಗೂ ಮಾರ್ಗದರ್ಶನ ನೀಡಲಾಗುತ್ತದೆ. ಕಾಯಂ ಹಾಗೂ ತಾತ್ಕಾಲಿಕ ಸೇರಿದಂತೆ ಎಲ್ಲಾ ಶಿಕ್ಷಕರಲ್ಲಿ ಶಿಸ್ತು ಮತ್ತು ಉತ್ತರದಾಯಿತ್ವ ಹೆಚ್ಚಿಸಲು ಬಯೊಮೆಟ್ರಿಕ್ ಫೇಸ್ ಐಡೆಂಟಿಫಿಕೇಶನ್ ಹಾಗೂ ಜಿಯೊ ಫೆನ್ಸ್ಡ್ ಹಾಜರಾತಿ ವ್ಯವಸ್ಥೆಯನ್ನು ಬಿಬಿಎಂಪಿ ಅಳವಡಿಸಿದೆ.

‘ನಮ್ಮ ರಸ್ತೆ’ ಕಾರ್ಯಕ್ರಮದ ಸಂದರ್ಭದಲ್ಲಿ ಬಿಬಿಎಂಪಿ ಹವಾಮಾನ ಕ್ರಿಯಾ ಘಟಕವು “ಶಾಲೆಗಳಿಗೆ ಸುರಕ್ಷಿತ ಪ್ರವೇಶ” ಕಾರ್ಯಕ್ರಮವನ್ನು ಚಾಲನೆಗೊಳಿಸಿತು. ಶಿಕ್ಷಣ ಸಂಸ್ಥೆಗಳಿಗೆ ಅಡೆತಡೆರಹಿತ ಪ್ರವೇಶ ಕಲ್ಪಿಸುವ ಗುರಿ ಹೊಂದಿರುವ ಈ ಉಪಕ್ರಮವು ನಿಸರ್ಗ-ಆಧರಿತ ಪರಿಹಾರಗಳನ್ನು ಸಂಯೋಜನೆಗೊಳಿಸಿ ಹೆಚ್ಚು ಸುರಕ್ಷಿತ ಹಾಗೂ ಎಲ್ಲರನ್ನೂ ಒಳಗೊಳ್ಳುವಂತಹ ಶಾಲಾ ವಾತಾವರಣ ಸೃಷ್ಟಿಸುವತ್ತ ಗಮನ ಕೇಂದ್ರೀಕರಿಸುತ್ತದೆ.

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಲು ಹಾಗೂ ಅವರನ್ನು ಶಾಲೆಗೆ ದಾಖಲಿಸಲು ಮನೆಮನೆ ಸಮೀಕ್ಷೆಯನ್ನು ಬಿಬಿಎಂಪಿ ನಡೆಸುತ್ತದೆ. ಕರ್ನಾಟಕ ಸರ್ಕಾರದ ಆಪ್ ಸ್ಟೋರ್‌ನಲ್ಲಿರುವ ಕರ್ನಾಟಕ ಎಚ್ 2 ಎಚ್ (H2H) ಮಕ್ಕಳ ಸಮೀಕ್ಷೆ ಆಪ್ ಸಹಾಯದೊಂದಿಗೆ ಈ ಸರ್ವೆಯನ್ನು ನೈಜ ಕ್ಷಣದಲ್ಲಿ ನಡೆಸಲಾಗುತ್ತದೆ.

ಉಪ ಮುಖ್ಯಮಂತ್ರಿಯವರ ಮಹತ್ವಾಕಾಂಕ್ಷೆಯ "ಬ್ರ್ಯಾಂಡ್ ಬೆಂಗಳೂರು" ನಿರ್ಮಾಣ ಸಾಕಾರಗೊಳಿಸಲು ಬಿಬಿಎಂಪಿ ಮುಖ್ಯ ಆಯುಕ್ತರಾದ ತುಷಾರ ಗಿರಿನಾಥ್ ಅವರೊಂದಿಗೆ ಪಾಲಿಕೆಯ ಆಡಳಿತಾಧಿಕಾರಿ ಎಸ್ ಆರ್ ಉಮಾಶಂಕರ್ (ಐಎಎಸ್) ಅವರು ನಿಕಟವಾಗಿ ಕಾರ್ಯ ನಿರತರಾಗಿದ್ದಾರೆ.

ಎರಡು ಭಾಗಗಳಲ್ಲಿ ಬರುತ್ತಾನೆ ‘ರಾಕ್ಷಸ’

ಪ್ರಜ್ವಲ್ ದೇವರಾಜ್ ನಟನೆಯ ‘ರಾಕ್ಷಸ’ ಚಿತ್ರ ಇಂದು (ಮಾ.7) ತೆರೆ ಕಾಣುತ್ತಿದೆ. ಪೊಲೀಸ್ ಅಧಿಕಾರಿಯೊಬ್ಬ ರಾಕ್ಷಸನ ರೂಪ ತಾಳುವ ಕಥೆಯುಳ್ಳ ಚಿತ್ರದ ಕುರಿತು ಪ್ರಜ್ವಲ್ ಮಾತನಾಡಿದ್ದಾರೆ.

ಪ್ರಜ್ವಲ್ ದೇವರಾಜ್

ವಿನಾಯಕ ಕೆ.ಎಸ್

• ಸಿನಿಮಾ ಮತ್ತು ನಿಮ್ಮ ಪಾತ್ರದ ಕುರಿತು ಹೇಳಿ.

‘ರಾಕ್ಷಸ’ ಈ ಹಿಂದೆ ತೆರೆಕಂಡಿದ್ದ ನನ್ನದೇ ‘ಜಂಟಲ್ ಮನ್’ ಚಿತ್ರದೊಂದಿಗೆ ನಂಟು ಹೊಂದಿರುವ ಪಾತ್ರ. ಇಲ್ಲಿ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದೇನೆ. ಇಲಾಖೆಯಲ್ಲಿ ಆತನಿಗೆ ರಾಕ್ಷಸ ಎಂಬ ಹೆಸರು ಇರುತ್ತದೆ. ಕೆಲಸದಲ್ಲಿ ಬಹಳ ನಿಷ್ಠಾವಂತ ಅಧಿಕಾರಿ. ಈ ಚಿತ್ರ ಎರಡು ಭಾಗಗಳಲ್ಲಿ ಬರುತ್ತಿದೆ. ಈಗ ತೆರೆಗೆ ಬರುತ್ತಿರುವುದು ಸೀಕ್ವೆಲ್ ಕಥೆ. ಇದರ ಹಿಂದಿನ ಕಥೆ ನಂತರ ಬರುತ್ತದೆ. ಆತ ಯಾಕೆ ರಾಕ್ಷಸನಾದ, ಅದಕ್ಕೆ ಕಾರಣ ಏನು ಎಂಬುದು ಆ ಭಾಗದ ಕಥೆಯಲ್ಲಿದೆ.

• ಇದು ಅಪ್ಪ–ಮಗಳಿಗೆ ಸಂಬಂಧಿಸಿದ ಕಥೆಯೇ?

ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುವವರ ಬದುಕಿನ ಕಥೆ. ಕೆಲಸದಲ್ಲಿ ಕಳೆದು ಹೋಗುವ ಅಪ್ಪನಿಗೆ ಮಗಳು, ಕುಟುಂಬದ ಜೊತೆ ಸಮಯ ಕಳೆಯಲು ಸಾಧ್ಯವಾಗುವುದಿಲ್ಲ. ಅದರಿಂದ ಏನೆಲ್ಲ ಆಗುತ್ತದೆ ಎಂಬ ಭಾವನಾತ್ಮಕ ಎಳೆಯೊಂದು ಚಿತ್ರದಲ್ಲಿದೆ. ಇನ್ನೊಂದೆಡೆ ಆತನ ಮೇಲೆ ಬ್ರಹ್ಮರಾಕ್ಷಸನ ದಾಳಿಯಾಗುತ್ತದೆ. ಅದರಿಂದ ಹೇಗೆ ತಪ್ಪಿಸಿಕೊಳ್ಳುತ್ತಾನೆ? ಅದಕ್ಕೆ ಕಾರಣವೇನು? ಎಂಬಿತ್ಯಾದಿ ಅಂಶಗಳು ಇನ್ನೊಂದು ಟ್ರ್ಯಾಕ್‌ನಲ್ಲಿ ಬರುತ್ತದೆ. ಒಟ್ಟಾರೆಯಾಗಿ ಇಡೀ ಕುಟುಂಬ ಕುಳಿತು ನೋಡಬಹುದಾದ ಮನರಂಜನಾತ್ಮಕ ಚಿತ್ರವಿದು.

• ಬಿಡುಗಡೆ ಪೂರ್ವ ಮಾರಾಟವಾಗದೆ ಇರುವುದರಿಂದ ನಿಮ್ಮ ಚಿತ್ರಗಳ ಬಿಡುಗಡೆ ವಿಳಂಬವಾಗುತ್ತಿದೆಯಾ?

ಸಿನಿಮಾ ಪ್ರಾರಂಭಿಸಿ ಅಂದುಕೊಂಡಂತೆ ಮುಗಿಸಿದರೆ ಬಿಡುಗಡೆಯೂ ತಕ್ಷಣ ಆಗುತ್ತದೆ. ‘ಚೀತಾ’, ‘ಮಾಫಿಯಾ’ ಕಾರಣಾಂತರಗಳಿಂದ ಸಿನಿಮಾ ಪೂರ್ಣಗೊಳ್ಳುವುದೇ ವಿಳಂಬವಾಗಿದೆ. ಬಿಸಿನೆಸ್ ಆಗದೆ ಸಿನಿಮಾ ಬಿಡುಗಡೆಯಾಗುತ್ತಿಲ್ಲ ಎಂಬುದೆಲ್ಲ ಸುಳ್ಳು. ‘ರಾಕ್ಷಸ’ ಚಿತ್ರದ ವಿತರಣೆ ಹಕ್ಕುಗಳು ಈಗಾಗಲೇ ಮಾರಾಟಗೊಂಡಿವೆ. ಉಳಿದ ವಹಿವಾಟು ಬಿಡುಗಡೆಗೆ ಮೊದಲೇ ಮುಗಿದಿದೆ. ಈಗೀಗ ನನಗೆ ಇಡೀ ಸಿನಿಮಾದಲ್ಲಿ ಭಾಗಿಯಾಗದಿದ್ದರೆ ಕಷ್ಟ ಎಂಬುದು ಅರ್ಥವಾಗಿದೆ. ಹೀಗಾಗಿ ಕೇವಲ ನಟನೆಗೆ ಸೀಮಿತವಾಗಿ ಉಳಿಯದೆ ಈ ವಿಷಯಗಳಲ್ಲಿಯೂ ಭಾಗಿಯಾಗುತ್ತಿದ್ದೇನೆ.

• ಹೀರೋಯಿಸಂ ಹೊಂದಿರುವ ಸಿದ್ಧಸೂತ್ರದ ಚಿತ್ರಗಳಿಗೆ ಜನ ಮನ್ನಣೆ ಸಿಗುತ್ತಿಲ್ಲವೇ?

ಹಾಗೇನಿಲ್ಲ, ಕಳೆದ ವರ್ಷ ಹಿಟ್ ಆದ ನಾಲ್ಕು ಸಿನಿಮಾಗಳು ಹೀರೊಗಳದ್ದೆ. ಸಿನಿಮಾ ಚೆನ್ನಾಗಿದ್ದು, ಪ್ರಚಾರ ಸರಿಯಾಗಿದ್ದರೆ ಜನ ಬಂದೇ ಬರುತ್ತಾರೆ. ನಾವಾದರೂ ಸುಮ್ಮನೆ ಮನೆಯಲ್ಲಿ ಕುಳಿತಾಗ ಯಾವ ಒಳ್ಳೆಯ ಚಿತ್ರ ಬಂದಿದೆ ಎಂದು ನೋಡುತ್ತೇವೆ. ಜನಕ್ಕೆ ಮನರಂಜನೆ ಯಾವಾಗಲೂ ಬೇಕು. ಚಿತ್ರದ ಕುರಿತು ಒಳ್ಳೆಯ ಮಾತುಗಳು ಕೇಳಿ ಬಂದಾಗ ಜನ ಬರುತ್ತಾರೆ. ನನ್ನ ಹಿಂದಿನ ‘ಗಣ’ ಚಿತ್ರ ಪ್ರಚಾರವಿಲ್ಲದೆ ತೆರೆಗೆ ಬಂತು. ಚಿತ್ರ ಬಂದಿದ್ದು ಯಾರಿಗೂ ಗೊತ್ತಾಗಲಿಲ್ಲ. ಜನ ಬರಬೇಕಿದ್ದರೆ ಪ್ರಚಾರವೂ ಬಹಳ ಮುಖ್ಯ. ಚಿತ್ರ ಬರುತ್ತಿರುವ ವಿಷಯ ಅವರಿಗೆ ತಲುಪಬೇಕು.

• ಈಗ ಸಿನಿಪಯಣ ಸವಾಲು ಎನ್ನಿಸುತ್ತಿದೆಯಾ?

ನಾನು ಯಾವಾಗಲೂ ಬಹಳ ಕೂಲ್ ಆಗಿರುವ ವ್ಯಕ್ತಿ. ಎಲ್ಲಿಯೂ ವಿವಾದಗಳಿಗೆ ಸಿಲುಕಿಕೊಳ್ಳುವುದಿಲ್ಲ. ಯಾರ ತಂಟೆಗೂ ಹೋಗುವುವವನಲ್ಲ. ಹೀಗಾಗಿ ಬಹಳ ಕೂಲ್ ಆಗಿಯೇ ನಡೆಯುತ್ತಿದೆ. 18ನೇ ವಯಸ್ಸಿನಲ್ಲಿಯೇ ‘ಸಿಕ್ಸರ್’ ಹೊಡೆದು, ಈ ಪಯಣ 40 ಸಿನಿಮಾಗಳ ಸನಿಹಕ್ಕೆ ಬಂದು ನಿಂತಿರುವುದು ಖುಷಿಯ ಸಂಗತಿ. ನನ್ನ ಚಿತ್ರಗಳಿಗೆ ಬಂಡವಾಳ ಹಾಕಿದವರಿಗೆ ಮೋಸವಾಗುವುದಿಲ್ಲ. ಒಂದಷ್ಟು ಮರಳಿ ಬರುವಷ್ಟು ಮಾರ್ಕೆಟ್ ಉಳಿಸಿಕೊಂಡಿರುವೆ ಎಂಬ ಖುಷಿಯಿದೆ.

• ನಿಮ್ಮ ಮುಂದಿನ ಸಿನಿಮಾಗಳು...

ಈ ಚಿತ್ರದ ನಿರ್ದೇಶಕ ಲೋಹಿತ್ ನಿರ್ದೇಶನದಲ್ಲಿಯೇ ಮಾಡಿದ ಮತ್ತೊಂದು ಚಿತ್ರ ‘ಮಾಫಿಯಾ’ ಬಿಡುಗಡೆಗೆ ಸಿದ್ಧವಿದೆ. ರಾಜಕಲ್ಯೆ ಕುಮಾರ್ ನಿರ್ದೇಶನದ ‘ಚೀತಾ’ ಬಹುತೇಕ ಚಿತ್ರೀಕರಣ ಮುಗಿದಿದೆ. ಒಂದು ಹಾಡಿನ ಚಿತ್ರೀಕರಣ ಮಾತ್ರ ಬಾಕಿಯಿದೆ. ‘ಕರಾವಳಿ’ ಒಂದು ಭಿನ್ನ ಕಥೆಯ ಚಿತ್ರ. ಚಿತ್ರೀಕರಣದ ಹಂತದಲ್ಲಿದೆ. ಇದಕ್ಕೆ ಗೆಟಪ್ ಬದಲಿಸಬೇಕು. ದೇಹದ ಗಾತ್ರದಲ್ಲಿ ಬದಲಾವಣೆಯಿದೆ. ಹೀಗಾಗಿ ಅದಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದ್ದೇನೆ. ಇದಾದ ಬಳಿಕ ಯಾವುದೇ ಸಿನಿಮಾ ಒಪ್ಪಿಕೊಂಡಿಲ್ಲ.

ಅಪೂರ್ವ

ಕನ್ನಡಿಯೇ ನಟನೆಯ ಗುರು

ಅಭಿಮನ್ಯು ಕಾಶಿನಾಥ್, ಅಪೂರ್ವ ಜೋಡಿಯಾಗಿ ನಟಿಸಿರುವ ‘ಸೂರಿ ಲವ್ಸ್ ಸಂಧ್ಯಾ’ ಚಿತ್ರ ಇಂದು ತೆರೆ ಕಾಣುತ್ತಿದೆ. ಈ ಸಂದರ್ಭದಲ್ಲಿ ನಾಯಕಿ ಅಪೂರ್ವ ‘ಸಿನಿಮಾ ಪುರವಣಿ’ಯೊಂದಿಗೆ ಮಾತನಾಡಿದ್ದಾರೆ.

‘ಚಿಕ್ಕಮಗಳೂರು ಜಿಲ್ಲೆಯ ಕಡೂರಿನವಳು. ಸಿನಿಮಾ ಅಥವಾ ನಟನೆ ಹಿನ್ನೆಲೆಯಿಂದ ಬಂದವಳಲ್ಲ. ರವಿಚಂದ್ರನ್ ಅವರ ‘ಅಪೂರ್ವ’ ಚಿತ್ರದ ಆಡಿಷನ್ಸ್‌ನಲ್ಲಿ ಆಯ್ಕೆಯಾದೆ. ಆ ಬಳಿಕ ನಟನೆ ಕಲಿಯಲು ಪ್ರಾರಂಭಿಸಿದೆ. ಕನ್ನಡಿ ಮುಂದೆ ನಿಂತು ನಟಿಸುತ್ತಿದ್ದೆ. ಅಲ್ಲೇ ಬಹುತೇಕ ನಟನೆ ಕಲಿತೆ. ಅದೇ ನನಗೆ ಗುರು. ಹಾಗಂತ ನಟನೆಯಲ್ಲಿ ಪರಿಪೂರ್ಣಳಾಗಿಲ್ಲ. ಈಗಲೂ ಕಲಿಯುತ್ತಿರುವೆ. ಹಳೆಯ ಸಿನಿಮಾಗಳನ್ನು ನೋಡುತ್ತೇನೆ. ನಟಿಯರ ಹಾವಭಾವಗಳನ್ನು ನೋಡಿ ಕಲಿಯುತ್ತಿದ್ದೇನೆ’ ಎಂದು ತಮ್ಮ ನಟನೆ ಪಯಣ ತೆರೆದಿಡುತ್ತಾರೆ.

ನಟಿಯಾಗಿ ಗುರುತಿಸಿಕೊಂಡಿರುವ ಇವರು ‘ಓ ನನ್ನ ಚೇತನ’ ಸಿನಿಮಾವನ್ನು ನಿರ್ದೇಶಿಸಿದ್ದಾರೆ. ಮಕ್ಕಳ ಮೇಲೆ ಮೊಬೈಲ್‌ನಿಂದ ಆಗುವ ಪರಿಣಾಮವನ್ನು ಕಥಾವಸ್ತುವನ್ನಾಗಿಟ್ಟುಕೊಂಡು ಈ ಸಿನಿಮಾ ಕೆಲ ತಿಂಗಳ ಹಿಂದೆ ತೆರೆಕಂಡಿತ್ತು. ಸಾಮಾಜಿಕ ಸಂದೇಶವುಳ್ಳ ಚಿತ್ರ ಕೆಲ ಚಿತ್ರೋತ್ಸವಗಳಲ್ಲಿ ಪ್ರಶಸ್ತಿಯನ್ನೂ ಗಳಿಸಿದೆ.

‘ಈ ಚಿತ್ರದಲ್ಲಿ ಸಂಧ್ಯಾ ಎಂಬ ಪಾತ್ರ ಮಾಡಿರುವೆ. ಶ್ರೀಮಂತ ಮನೆತನಕ್ಕೆ ಸೇರಿದ ಕಾಲೇಜು ಹುಡುಗಿ. ಅಪ್ಪ–ಅಮ್ಮ ಇರುವುದಿಲ್ಲ. ಈಕೆಗೆ ಒಂದು ಮಹದಾಸೆಯಿರುತ್ತದೆ. ಅದನ್ನು ಸೂರಿ ಪೂರ್ಣಗೊಳಿಸುತ್ತಾನೆ. ಇದೊಂದು ಟ್ರಾವೆಲಿಂಗ್ ಲವ್ ಸ್ಟೋರಿ. ಬೆಂಗಳೂರು, ಕೋಲಾರ ಮತ್ತು ಕಾಶಿಯಲ್ಲಿ ಚಿತ್ರೀಕರಣಗೊಂಡಿದೆ. ಗ್ಲಾಮರ್ ಇಲ್ಲದೆ ಸಹಜತೆಯಿಂದ ಕೂಡಿದ ಪಾತ್ರ. ಹೀಗಾಗಿ ಚಿತ್ರೀಕರಣ ಸವಾಲಾಗಿತ್ತು’ ಎಂದು ಪಾತ್ರದ ಬಗ್ಗೆ ವಿವರಿಸಿದರು.

ಚಂದನ್ ಶೆಟ್ಟಿ ಅವರ ‘ಸೂತ್ರಧಾರಿ’ ಚಿತ್ರದಲ್ಲಿಯೂ ನಟಿಸಿದ್ದಾರೆ. ರವಿಚಂದ್ರನ್‌ಗೆ ಜೋಡಿಯಾಗಿ ನಟಿಸಿರುವ ‘ಗೌರಿಶಂಕರ’ ಚಿತ್ರ ಬಿಡುಗಡೆಗೆ ಸಿದ್ಧವಿದೆ. ‘ಮಹಿಳಾ ಪ್ರಧಾನ ಚಿತ್ರದಲ್ಲಿ ನಟಿಸುತ್ತಿರುವೆ. ಇದಲ್ಲದೆ ಇನ್ನೊಂದು ಚಿತ್ರದ ಚಿತ್ರೀಕರಣ ಪ್ರಗತಿಯಲ್ಲಿದೆ. ನಿರ್ಮಾಣ ಸಂಸ್ಥೆಗಳೇ ಈ ಚಿತ್ರಗಳ ಬಗ್ಗೆ ಶೀಘ್ರದಲ್ಲಿ ಘೋಷಣೆ ಮಾಡಲಿವೆ’ ಎಂದು ತಮ್ಮ ಮುಂದಿನ ಚಿತ್ರಗಳ ಮಾಹಿತಿ ನೀಡಿದರು.

‘ಹೆಣ್ಣುಮಕ್ಕಳ ಸಾಕಷ್ಟು ಸಮಸ್ಯೆಗಳಿಗೆ ಪರಿಹಾರ ಸಿಗುವುದಿಲ್ಲ. ಚಿತ್ರದಲ್ಲಿ ನಾಯಕ ಜೊತೆಗೆ ನಿಲ್ಲುತ್ತಾನೆ. ಆದರೆ ನಿಜ ಜೀವನದಲ್ಲಿ ಎಷ್ಟೋ ಹೆಣ್ಣುಮಕ್ಕಳಿಗೆ ಯಾರೂ ಜೊತೆಗಿರುವುದಿಲ್ಲ. ದೇವರಾದರೂ ಅವರ ಜೊತೆಗೆ ನಿಲ್ಲಲಿ ಎಂಬುದೇ ನಮ್ಮ ಈ ಚಿತ್ರದ ಆಶಯ’ ಎಂದು ಮಾತಿಗೆ ವಿರಾಮವಿಟ್ಟರು.

ಸತೀಶ್ ನೀನಾಸಂ

ಮುಕ್ತಾಯ ಹಂತದಲ್ಲಿ ‘...ಅಶೋಕ’

ನಿರ್ದೇಶಕ ವಿನೋದ್ ದೋಂಡಾಳೆ ಅಕಾಲಿಕ ನಿಧನದಿಂದ ಅರ್ಧಕ್ಕೆ ನಿಂತಿದ್ದ ‘ದಿ ರೈಸ್ ಆಫ್ ಅಶೋಕ’ ಚಿತ್ರ ಮತ್ತೆ ಸೆಟ್ಟೇರಿದೆ. ಸತೀಶ್ ನೀನಾಸಂ ನಾಯಕನಾಗಿ ನಟಿಸುತ್ತಿರುವ ಚಿತ್ರದ ಚಿತ್ರೀಕರಣ ಚಾಮರಾಜನಗರದಲ್ಲಿ ಭರದಿಂದ ಸಾಗಿದೆ. ಚಿತ್ರದ ಸಂಕಲನಕಾರ ಮನು ಶೇಡ್ಗಾರ್ ನಿರ್ದೇಶಕನ ಕ್ಯಾಪ್ ತೊಟ್ಟು ಚಿತ್ರವನ್ನು ಪೂರ್ಣಗೊಳಿಸುವ ಹೊಣೆ ಹೊತ್ತುಕೊಂಡಿದ್ದಾರೆ. ‘ಚಾಮರಾಜನಗರದ ಕೊತ್ತಲವಾಡಿಯಲ್ಲಿ ಚಿತ್ರೀಕರಣ ಶುರುವಾಗಿದ್ದು, ಎರಡು ಫೈಟ್ ಹಾಗೂ ಮೂರು ಹಾಡುಗಳನ್ನು ಚಿತ್ರೀಕರಿಸುತ್ತಿದ್ದೇವೆ. ಇದು 70ರ ದಶಕದಲ್ಲಿ ನಡೆಯುವ ಕ್ರಾಂತಿಕಾರಿ ಯುವಕನ ಕಥೆ. ಕಾರ್ಮಿಕರ ಪರವಾಗಿ ನಿಲ್ಲುವ ಭಿನ್ನ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಈಗಾಗಲೇ ಶೇಕಡ 75ರಷ್ಟು ಚಿತ್ರೀಕರಣ ಮುಗಿದಿದೆ. ಕ್ಲೈಮ್ಯಾಕ್ಸ್ ಭಾಗ ಮಾತ್ರ ಬಾಕಿಯಿದೆ’ ಎಂದರು ಸತೀಶ್.

ಏಪ್ರಿಲ್ 15ರ ವೇಳೆ ಶೂಟಿಂಗ್ ಪೂರ್ಣಗೊಳಿಸುವ ಯೋಜನೆ ಚಿತ್ರತಂಡದ್ದು. ಚನ್ನಪಟ್ಟಣ, ನಂಜನಗೂಡು, ಶ್ರೀರಂಗಪಟ್ಟಣ ಸೇರಿದಂತೆ ಹಲವೆಡೆ ಚಿತ್ರೀಕರಣ ಮಾಡಲು ತಂಡ ಯೋಜನೆ ರೂಪಿಸಿದೆ. ಕನ್ನಡ ಸೇರಿದಂತೆ ತಮಿಳು ಹಾಗೂ ತೆಲುಗು ಭಾಷೆಗಳಲ್ಲಿ ಈ ಸಿನಿಮಾ ಬಿಡುಗಡೆಯಾಗಲಿದೆ.

‘ಒಟ್ಟು 30 ದಿನಗಳ ಚಿತ್ರೀಕರಣ ಬಾಕಿಯಿದೆ. ತನ್ನ ಜನರಿಗಾಗಿ ಅನ್ಯಾಯದ ವಿರುದ್ಧ ಹೋರಾಡುವ ಕಾರ್ಮಿಕನ ಬದುಕು ಹಾಗೂ ಸಂಘರ್ಷದ ಕುರಿತು ಚಿತ್ರ ಬೆಳಕು ಚೆಲ್ಲುತ್ತದೆ. ಈ ಚಿತ್ರಕ್ಕಾಗಿ ಕಳೆದ ಎರಡೂವರೆ ವರ್ಷಗಳಿಂದ ಇಡೀ ತಂಡ ಶ್ರಮಿಸಿದೆ. ಹೀಗಾಗಿ ಚಿತ್ರವನ್ನು ಪೂರ್ಣಗೊಳಿಸುವ ಹೊಣೆ ಹೊತ್ತಿದ್ದೇನೆ. ಏಪ್ರಿಲ್‌ನಲ್ಲಿ ಚಿತ್ರದ ಹಾಡು ಬಿಡುಗಡೆಗೊಳಿಸಿ ಪ್ರಚಾರ ಪ್ರಾರಂಭಿಸುವ ಯೋಜನೆಯಿದೆ’ ಎಂದು ಸತೀಶ್ ಮಾಹಿತಿ ನೀಡಿದರು.

ಅರ್ಜುನ್ ಸರ್ಜಾ ಸೀತಾ ಪಯಣ

ಖ್ಯಾತ ನಟ, ನಿರ್ದೇಶಕ ಅರ್ಜುನ್ ಸರ್ಜಾ ಮತ್ತೆ ನಿರ್ದೇಶನಕ್ಕಿಳಿದಿದ್ದಾರೆ. ತಮ್ಮ ಪುತ್ರಿಗಾಗಿ ‘ಸೀತಾ ಪಯಣ’ ಚಿತ್ರವನ್ನು ನಿರ್ದೇಶಿಸಿ, ನಿರ್ಮಾಣ ಮಾಡುತ್ತಿದ್ದಾರೆ.

ಉಪೇಂದ್ರನ ಅಣ್ಣನ ಮಗ ನಿರಂಜನ್‌ಗೆ ಐಶ್ವರ್ಯಾ ಜೋಡಿಯಾಗಿದ್ದಾರೆ. ಸರ್ಜಾ ಈ ಹಿಂದೆ ‘ಜೈ ಹಿಂದ್’ ಮತ್ತು ‘ಅಭಿಮನ್ಯು’, ‘ ಪ್ರೇಮಬರಹ’ ಸಿನಿಮಾಗಳಿಗೆ ಆ್ಯಕ್ಷನ್ ಕಟ್ ಹೇಳಿದ್ದರು.

‘ಶೀರ್ಷಿಕೆಯೇ ಸೂಚಿಸುವಂತೆ ಇದೊಂದು ಪಯಣ ಕುರಿತಾದ ಚಿತ್ರವಾಗಿದ್ದು, ಅಭಿ ಮತ್ತು ಸೀತಾ ಎಂಬ ಹದಿಹರೆಯದವರ ಭಾವನಾತ್ಮಕ ಪಯಣವಿದೆ. ಈಗಾಗಲೇ ಚಿತ್ರದ ಡಬ್ಬಿಂಗ್ ಮುಗಿದಿದ್ದು, ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ. ಏಪ್ರಿಲ್‌ನಲ್ಲಿ ಈ ಚಿತ್ರ ತೆರೆಗೆ ಬರುವ ಸಾಧ್ಯತೆ ಇದೆ’ ಎಂದಿದೆ ಚಿತ್ರತಂಡ.

ಪ್ರಕಾಶ್ ರಾಜ್, ಸತ್ಯರಾಜ್ ಮುಂತಾದವರು ನಟಿಸಿದ್ದಾರೆ. ಅರ್ಜುನ್ ಸರ್ಜಾ ಮುಖ್ಯ ಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದಾರೆ. ಅನುಪ್ ರುಬೆನ್ಸ್ ಸಂಗೀತ, ಬಾಲಮುರುಗನ್ ಛಾಯಾಚಿತ್ರಗ್ರಹಣವಿದೆ. ‘ದೃಶ್ಯಂ’ ಸಿನಿಮಾ ಖ್ಯಾತಿಯ ಸಂಕಲನಕಾರ ಆಯೂಬ್ ಖಾನ್ ಸಂಕಲನದ ಜವಾಬ್ದಾರಿ ಹೊತ್ತಿದ್ದಾರೆ. ಕನ್ನಡ, ತೆಲುಗು ಮತ್ತು ತಮಿಳಿನಲ್ಲಿ ಚಿತ್ರ ಸಿದ್ಧಗೊಳ್ಳುತ್ತಿದೆ.

ಐಶ್ವರ್ಯಾ, ನಿರಂಜನ್

ಏಳು ಚಿತ್ರಗಳು ತೆರೆಗೆ

ಆಪಲ್ ಕಟ್

ಖ್ಯಾತ ನಿರ್ದೇಶಕ ರಾಜ್‌ಕಿಶೋರ್ ಅವರ ಪುತ್ರಿ ಸಿಂಧುಗೌಡ ನಿರ್ದೇಶಿಸಿರುವ ಚಿತ್ರ ‘ಆಪಲ್ ಕಟ್’ ತೆರೆ ಕಾಣುತ್ತಿದೆ. ಸಾನ್ವಿ ಪ್ರೊಡಕ್ಷನ್ಸ್ ಲಾಂಛನದಲ್ಲಿ ಶಿಲ್ಪ ಪ್ರಸನ್ನ ಚಿತ್ರ ನಿರ್ಮಿಸಿದ್ದಾರೆ. ಮರ್ಡರ್ ಮಿಸ್ಟರಿ ಕಥಾಹಂದರ ಹೊಂದಿರುವ ಚಿತ್ರಕ್ಕೆ ಸೂರ್ಯಗೌಡ ನಾಯಕನಾಗಿದ್ದು, ಅಶ್ವಿನಿ ಪೋಲೆಪಲ್ಲಿ ನಾಯಕಿ. ಅಪ್ಪಣ್ಣ, ಅಭಿಜಿತ್, ಮೀನಾಕ್ಷಿ, ಬಲ ರಾಜವಾಡಿ ಈ ಚಿತ್ರದ ಮುಖ್ಯಪಾತ್ರದಲ್ಲಿದ್ದಾರೆ.

ವೀರ್ ಸಮರ್ಥ ಸಂಗೀತ ಸಂಯೋಜಿಸಿರುವ ಹಾಡುಗಳಿಗೆ ಯೋಗರಾಜ್ ಭಟ್, ಸತ್ಯಪ್ರಕಾಶ್ ಸಾಹಿತ್ಯವಿದೆ. ರಾಜೇಶ್ ಗೌಡ ಛಾಯಾಚಿತ್ರಗ್ರಹಣ ಹಾಗೂ ಸುಚೇಂದ್ರ ಎನ್ ಮೂರ್ತಿ ಸಂಕಲನ ಚಿತ್ರಕ್ಕಿದೆ.

ಮಿಥ್ಯ

ರಕ್ಷಿತ್ ಶೆಟ್ಟಿಯ ಪರಂವಃ ಸ್ಟುಡಿಯೊಸ್ ಮೂಲಕ ನಿರ್ಮಿಸಿ, ಸುಮಂತ್ ಭಟ್ ನಿರ್ದೇಶಿಸಿರುವ ಚಿತ್ರ ‘ಮಿಥ್ಯ’. ಈಗಾಗಲೇ ಸಾಕಷ್ಟು ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡು ಜನ ಮೆಚ್ಚುಗೆ ಗಳಿಸಿದೆ. ಈ ಹಿಂದೆ ‘ಏಕಂ’ ವೆಬ್ ಸಿರಿಸ್ ನಿರ್ದೇಶಿಸಿದ್ದ ಸುಮಂತ್ ಭಟ್ ಈ ಚಿತ್ರದೊಂದಿಗೆ ನಿರ್ದೇಶಕರಾಗಿದ್ದಾರೆ.

‘ತನ್ನ ಹನ್ನೊಂದನೆ ವಯಸ್ಸಿಗೆ ತಂದೆ–ತಾಯಿಯನ್ನು ಕಳೆದುಕೊಂಡ ಹುಡುಗ ಮಿಥುನ್ ಮುಂಬೈನಿಂದ ಉಡುಪಿಗೆ ಬಂದು ತನ್ನ ಚಿಕ್ಕಪ್ಪ, ಚಿಕ್ಕಮ್ಮನ ಆಶ್ರಯ ಪಡೆಯುತ್ತಾನೆ. ಆನಂತರ ಹೊಸ ಪ್ರಪಂಚದ ಹುಡುಕಾಟ, ಗೆಳೆತನ ಹುಡುಕುವ ಪಯಣಕ್ಕೆ ಮುಂದಾಗುತ್ತಾನೆ. ಇದೇ ಚಿತ್ರದ ಪ್ರಮುಖ ಕಥಾಹಂದರವಾಗಿದ್ದರೂ ಇದು ಮಕ್ಕಳ ಚಿತ್ರವಲ್ಲ’ ಎಂದಿದ್ದಾರೆ ನಿರ್ದೇಶಕ.

ಮಾಸ್ಟರ್ ಅತೀಶ್ ಎಸ್ ಶೆಟ್ಟಿ ಮಿಥುನ್ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಪ್ರಕಾಶ್ ತುಮ್ಮಿನಾಡು, ರೂಪ ವರ್ಕಾಡ್ ಮುಖ್ಯಭೂಮಿಕೆಯಲ್ಲಿದ್ದಾರೆ. ಉದಿತ್ ಕುರಾನ ಛಾಯಾಚಿತ್ರಗ್ರಹಣ, ಭುವನೇಶ್ ಮಣಿವಣ್ಣನ್ ಸಂಕಲನ ಹಾಗೂ ಮಿಥುನ್ ಮುಕುಂದನ್ ಸಂಗೀತ ನಿರ್ದೇಶನವಿದೆ.

ಕಪಟಿ

‘ಹಗ್ಗದ ಕೊನೆ’, ‘ಆ ಕಾರಾಳ ರಾತ್ರಿ’ ಸೇರಿದಂತೆ ಹಲವು ಚಿತ್ರಗಳನ್ನು ನಿರ್ಮಾಣ ಮಾಡಿರುವ ದಯಾಳ್ ಪದ್ಮನಾಭನ್ ಅವರು ಡಿ ಪಿಕ್ಚರ್ಸ್ ಲಾಂಛನದಲ್ಲಿ ನಿರ್ಮಿಸಿ, ರವಿಕಿರಣ್ - ಚೇತನ್ ಎಸ್ ಪಿ ನಿರ್ದೇಶಿಸಿರುವ ಚಿತ್ರ ‘ಕಪಟಿ’. ಸುಕೃತ ವಾಗ್ಲೆ, ದೇವ್ ದೇವಯ್ಯ, ಸಾತ್ವಿಕ್ ಕೃಷ್ಣನ್ ಪ್ರಮುಖ ಪಾತ್ರದಲ್ಲಿದ್ದಾರೆ. ‘ಸೈಕಲಾಜಿಕಲ್ ಥ್ರಿಲ್ಲರ್ ಕಥಾಹಂದರವಿದೆ. ಕನ್ನಡದಲ್ಲಿ ತೀರ ಅಪರೂಪ ಎನ್ನಬಹುದಾದ ಡಾರ್ಕ್ ವೆಬ್ ಜಾನರ್‌ನ ಚಿತ್ರವಿದು. ಸಾಮಾನ್ಯ ಜನರಿಗೆ ಮೊಬೈಲ್ ಮಾತ್ರ ಗೊತ್ತು. ಆದರೆ ಅದೇ ಮೊಬೈಲ್‌ನಿಂದ ನಾವು ಹೇಗೆ ಮೋಸ ಹೋಗುತ್ತೇವೆ ಎಂಬುದು ಚಿತ್ರದಲ್ಲಿದೆ. ಇದೊಂದು ಜನಸಾಮಾನ್ಯರ ಕಥೆ’ ಎಂದಿದ್ದಾರೆ ದಯಾಳ್.

ಸುಕೃತ ವಾಗ್ಲೆ

ಇಂಟರ್‌ವಲ್

ಮೂವರು ತುಂಟಾಟದ ಹುಡುಗರು ಹಾಗೂ ಯುವತಿಯರಿಬ್ಬರ ಸುತ್ತ ನಡೆಯುವ ಕಥೆಯಿದು. ಭರತ್ ನಿರ್ದೇಶನವಿದೆ.

‘ಪ್ರತಿಯೊಬ್ಬರ ಜೀವನದಲ್ಲಿಯೂ ಇಂಟರ್‌ವಲ್ ಬಂದೇ ಬರುತ್ತದೆ. ಅದೇ ರೀತಿ ನಾಯಕನ ಜೀವನದ ಇಂಟರ್‌ವಲ್ ಏನೇನೆಲ್ಲ ತಿರುವುಗಳಿಗೆ ಕಾರಣವಾಯಿತು, ಏನೆಲ್ಲ ಮಾಡಿತು ಎಂಬುದೇ ಚಿತ್ರಕಥೆ’ ಎಂದಿದೆ ಚಿತ್ರತಂಡ.

ಸುಖೇಶ್ ಹಾಗೂ ಭರತ್ ನಿರ್ಮಾಣವಿದೆ. ಶಶಿರಾಜ್ ಪ್ರಥಮ ಬಾರಿಗೆ ನಾಯಕನಾಗಿ ಕಾಣಿಸಿಕೊಂಡಿದ್ದಾರೆ. ಪ್ರಜ್ವಲ್ ಕುಮಾರ್ ಗೌಡ, ಸುಕಿ, ಚರಿತ್ರ ರಾವ್, ಸಹನ ಆರಾಧ್ಯ, ಸಮೀಕ್ಷ, ದಾನಂ ಮುಂತಾದವರು ಪ್ರಮುಖ ಪಾತ್ರದಲ್ಲಿದ್ದಾರೆ.

ವಿಕಾಸ್ ವಸಿಷ್ಠ ಸಂಗೀತ ಸಂಯೋಜನೆ, ರಾಜ್‌ಕಾಂತ್ ಛಾಯಾಚಿತ್ರಗ್ರಹಣವಿದೆ.

ಕನಸೊಂದು ಶುರುವಾಗಿದೆ

‘ಸಹರಾ’ ಸಿನಿಮಾ ಮೂಲಕ ಚಂದವನಕ್ಕೆ ಕಾಲಿಟ್ಟಿದ್ದ ಮಂಜೇಶ್ ನಿರ್ದೇಶನದ ಚಿತ್ರವಿದು. ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರಕ್ಕೆ ಡಾರ್ಲಿಂಗ್ ಕೃಷ್ಣ, ಲೂಸ್ ಮಾದ ಯೋಗಿ ಬೆಂಬಲಕ್ಕೆ ನಿಂತಿದ್ದಾರೆ.

ಲಕ್ಷ್ಮೀಕಾಂತ್ ರೆಡ್ಡಿ ಬಂಡವಾಳ ಹೂಡಿದ್ದಾರೆ. ಸಂತೋಷ್ ಬಿಲ್ಲವಗೆ ಸಾತ್ವಿಕಾ ಜೋಡಿಯಾಗಿದ್ದಾರೆ. ಥ್ರಿಲ್ಲರ್ ಮಂಜು, ಕುರಿ ಸುನಿಲ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಲೋಕೇಂದ್ರ ಸೂರ್ಯ ಛಾಯಾಚಿತ್ರಗ್ರಹಣ, ಸೂರಜ್ ಜೋಯಿಸ್ ಸಂಗೀತ, ದೀಪಕ್ ಸಿಎಸ್ ಗೌಡ ಸಂಕಲನವಿದೆ. ಪ್ರಜ್ವಲ್ ದೇವರಾಜ್ ನಟನೆಯ ‘ರಾಕ್ಷಸ’, ಅಭಿಮನ್ಯು ಕಾಶಿನಾಥ್ ಅಭಿನಯದ ‘ಸೂರಿ ಲವ್ಸ್ ಸಂಧ್ಯಾ’ ಸೇರಿ ಒಟ್ಟು ಏಳು ಚಿತ್ರಗಳು ತೆರೆಯಲ್ಲಿವೆ.

ಎಸ್‌ಡಿಪಿಐ ವಿರುದ್ಧ ಪ್ರಕರಣ: ಹಲವೆಡೆ ಇ.ಡಿ ಶೋಧ

ನವದೆಹಲಿ (ಪಿಟಿಐ): ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆಯ ರಾಜಕೀಯ ವಿಭಾಗವಾದ ಎಸ್‌ಡಿಪಿಐ ವಿರುದ್ಧ ನಡೆದಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆಯ ಭಾಗವಾಗಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ದೇಶದ ಹಲವೆಡೆ ಗುರುವಾರ ಶೋಧ ನಡೆಸಿದ್ದಾರೆ.

ಎಸ್‌ಡಿಪಿಐ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಂ.ಕೆ. ಫೈಜಿ ಅವರನ್ನು ದೆಹಲಿ ವಿಮಾನ ನಿಲ್ದಾಣದಲ್ಲಿ ಮಾರ್ಚ್ 3ರಂದು ಬಂಧಿಸಿದ ನಂತರ ಈ ಶೋಧ ನಡೆದಿದೆ. ಫೈಜಿ ಅವರು ಈಗ ಇ.ಡಿ ವಶದಲ್ಲಿದ್ದಾರೆ.

ದೆಹಲಿಯ ಎರಡು ಕಡೆಗಳಲ್ಲಿ, ಕೇರಳದ ತಿರುವನಂತಪುರ ಮತ್ತು ಮಲಪ್ಪುರದಲ್ಲಿ ಶೋಧ ನಡೆದಿದೆ. ಪಕ್ಷದ ಪ್ರಧಾನ ಕಚೇರಿಯಲ್ಲಿಯೂ ಶೋಧ ನಡೆದಿದೆ. ಬೆಂಗಳೂರು, ಚೆನ್ನೈ, ಕೋಲ್ಕತ್ತ, ಲಖನೌ, ಜೈಪುರದಲ್ಲೂ ಶೋಧ ನಡೆಸಲಾಗಿದೆ ಎಂದು ಮೂಲಗಳು ಹೇಳಿವೆ.

ಪಿಎಫ್‌ಐ ಮತ್ತು ಎಸ್‌ಡಿಪಿಐ ನಡುವೆ 'ಸಾವಯವ' ಸಂಬಂಧವಿದೆ. ಪಿಎಫ್‌ಐ ತನ್ನ ಕ್ರಿಮಿನಲ್ ಕೃತ್ಯಗಳನ್ನು ಎಸ್‌ಡಿಪಿಐ ಮೂಲಕ ನಡೆಸುತ್ತಿತ್ತು ಎಂದು ಇ.ಡಿ ಅಧಿಕಾರಿಗಳು ಹೇಳಿದ್ದಾರೆ.

ಉನ್ನತ ಮಟ್ಟದಲ್ಲಿನ ಭ್ರಷ್ಟಾಚಾರದ ಬಗ್ಗೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ಕಳವಳ

'ಭ್ರಷ್ಟಾಚಾರವೇ ಬಹುದೊಡ್ಡ ಅಪಾಯ'

ಪ್ರಜಾವಾಣಿ ವಾರ್ತೆ

ನವದೆಹಲಿ: ಅಭಿವೃದ್ಧಿ ಹೊಂದುತ್ತಿರುವ ದೇಶಕ್ಕೆ ಬಾಧಿಸುವ ಹಂತಕರ ಸೃಷ್ಟಿಸುವ ಅಪಾಯಕಾರಿ ಅಂಶಗಳಲ್ಲಿ, ಸರ್ಕಾರ ಹಾಗೂ ರಾಜಕೀಯ ಪಕ್ಷಗಳಲ್ಲಿನ ಉನ್ನತ ಮಟ್ಟದಲ್ಲಿ ಇರುವವರ ಭ್ರಷ್ಟಾಚಾರ ಹೆಚ್ಚು ಅಪಾಯಕಾರಿ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನಿರೀಕ್ಷಣಾ ಜಾಮೀನು ನಿರಾಕರಿಸಿದ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ಕ್ರಮವನ್ನು ಪ್ರಶ್ನಿಸಿ ದೇವಿಂದರ್ ಕುಮಾರ್ ಬನ್ಸಲ್ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಆರ್. ಮಹಾದೇವನ್ ಅವರು ಇದ್ದ ವಿಭಾಗೀಯ ಪೀಠವು ಈ ಮಾತು ಹೇಳಿದೆ.

'ಆರೋಪಿಯ ಹಿತ ಹಾಗೂ ಸಾರ್ವಜನಿಕ ಹಿತವನ್ನು ಸಮತೋಲನದಿಂದ ಕಾಣಬೇಕು. ಆರೋಪಿಯ ಸ್ವಾತಂತ್ರ್ಯದ ಬಗ್ಗೆ ಅತಿಯಾದ ಕಾಳಜಿ ತೋರುವುದು ಕೆಲವೊಮ್ಮೆ ಸಾರ್ವಜನಿಕ ಹಿತಕ್ಕೆ ಕೆಡುಕು ಉಂಟುಮಾಡಬಹುದು' ಎಂದು ಪೀಠವು ಮಾರ್ಚ್ 3ರಂದು ನೀಡಿರುವ ತೀರ್ಪಿನಲ್ಲಿ ಹೇಳಿದೆ.

ಲೆಕ್ಕ ತಪಾಸಣಾ ಅಧಿಕಾರಿಯಾಗಿರುವ ಬನ್ಸಲ್ ಅವರು ವಿಜಿಲೆನ್ಸ್ ಬ್ಯೂರೋದಲ್ಲಿ ಕೆಲಸ ಮಾಡುತ್ತಿದ್ದಾರೆ. ಲಂಚ ಕೇಳಿದ ಆರೋಪದ ಅಡಿಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಭ್ರಷ್ಟಾಚಾರ ಮುಕ್ತ ಸಮಾಜವನ್ನು ಖಾತರಿಪಡಿಸಲು ಆರೋಪಿಯೊಬ್ಬರಿಗೆ ಸ್ವಾತಂತ್ರ್ಯವನ್ನು ನಿರಾಕರಿಸಬೇಕು ಎಂದಾದರೆ, ಆ ಕೆಲಸ ಮಾಡಲು ನ್ಯಾಯಾಲಯಗಳು ಹಿಂದೇಟು ಹಾಕಬಾರದು ಎಂದು ಪೀಠವು ಹೇಳಿದೆ.

'ಅಜ್ಞಾನಿಗಳನ್ನು ಅಪರಾಧ ಪ್ರಕರಣದಲ್ಲಿ ತಪ್ಪಾಗಿ ಸಿಲುಕಿಸಲಾಗಿದೆ ಎಂದು ನ್ಯಾಯಾಲಯಕ್ಕೆ ಮೇಲ್ನೋಟಕ್ಕೆ ಅನ್ನಿಸಿದಾಗ, ಆರೋಪಗಳು ರಾಜಕೀಯ ಪ್ರೇರಿತವಾದಾಗ ಅಥವಾ ಆರೋಪಗಳಲ್ಲಿ ಹುರುಳಿಲ್ಲದಿದ್ದಾಗ, ಸಾಧಾರಣವಲ್ಲದ ಸಂದರ್ಭಗಳಲ್ಲಿ ಮಾತ್ರ ನಿರೀಕ್ಷಣಾ ಜಾಮೀನು ಮಂಜೂರು ಮಾಡಬಹುದು' ಎಂದು ವಿಭಾಗೀಯ ಪೀಠ ಹೇಳಿದೆ.

ಈ ಪ್ರಕರಣದಲ್ಲಿ ಸಾಧಾರಣವಲ್ಲದ ಸಂದರ್ಭ ಏನಿದೆ ಎಂಬುದನ್ನು ಮನವರಿಕೆ ಮಾಡಿಕೊಟ್ಟಿಲ್ಲ ಎಂದು ಹೇಳಿದೆ. 'ದುರಾಸೆ ಎಂಬುದು ಮನುಷ್ಯನಲ್ಲಿ ಬಹಳ ಸಾಮಾನ್ಯವಾಗಿ ಕಾಣುವ ದೌರ್ಬಲ್ಯ. ಆಮಿಷ ದೊಡ್ಡದಿದ್ದರೆ ಎಲ್ಲ ಮನುಷ್ಯರೂ ತಮ್ಮ ನೈತಿಕತೆಯನ್ನು ಬಿಟ್ಟುಕೊಡುತ್ತಾರೆ ಎಂದು ರಾಬರ್ಟ್ ವಾಲ್‌ಪೋಲ್ ಅವರು ಹೇಳಿದ ಮಾತಿನಲ್ಲಿ ಸಿನಿಕತೆ ಇದ್ದರೂ, ಅದು ಸತ್ಯಕ್ಕೆ ಬಹಳ ದೂರವಾಗಿಲ್ಲ' ಎಂದು ಪೀಠ ಹೇಳಿದೆ. ಎರಡು ಶತಮಾನಗಳಿಗೂ ಹಿಂದೆ ಬರ್ಕ್ ಅವರು, 'ಭ್ರಷ್ಟ ವ್ಯಕ್ತಿಗಳ ನಡುವೆ ಸ್ವಾತಂತ್ರ್ಯವು ಬಹುಕಾಲ ಉಳಿಯುವುದಿಲ್ಲ' ಎಂದು ಹೇಳಿದ್ದರು. ಭ್ರಷ್ಟಾಚಾರಕ್ಕೆ ಪ್ರತಿರೋಧ ಇಲ್ಲದಿದ್ದರೆ ಫ್ರಾನ್ಸ್‌ಗೆ ಕೆಡುಕನ್ನು ಉಂಟುಮಾಡಬಹುದು ಎಂದು ಈಚಿನ ಕಾಲಘಟ್ಟದಲ್ಲಿ ರೊಮೇನ್ ರೊಲ್ಯಾಂಡ್ ಅವರು ಹೇಳಿದ್ದಾರೆ ಎಂದೂ ಪೀಠವು ಹೇಳಿದೆ.

'ಭ್ರಷ್ಟಾಚಾರದ ಆಗಾಧತೆಯ ಬಗ್ಗೆ ಜನರಲ್ಲಿ ಇರುವ ಅಭಿಪ್ರಾಯದಲ್ಲಿ ಒಂದು ಉತ್ಪ್ರೇಕ್ಷೆಯು ಮತ್ತಷ್ಟು ಸತ್ಯವಿದೆ ಎನ್ನುವುದಾದರೂ, ಉನ್ನತ ಹುದ್ದೆಗಳಲ್ಲಿ ಇರುವ ವ್ಯಕ್ತಿಗಳು ಯಾವ ಭೀತಿಯೂ ಇಲ್ಲದೆ ಭ್ರಷ್ಟಾಚಾರದಲ್ಲಿ ತೊಡಗಿರುವುದು ಈ ದೇಶದಲ್ಲಿ ಆರ್ಥಿಕ ಅಶಾಂತಿಗೆ ಕಾರಣವಾಗಿದೆ ಎಂಬುದು ಸತ್ಯಕ್ಕೆ ದೂರವಾದ ಸಂಗತಿ' ಎಂದು ಪೀಠ ಕಟುವಾಗಿ ಹೇಳಿದೆ.

'ನಮ್ಮ ಸಮಾಜವು ಸಮೃದ್ಧಿಯ ಕಡೆ ಸಾಗುವುದನ್ನು ತಡೆಹಿಡಿದಿರುವ ಒಂದೇ ಒಂದು ಕಾರಣವನ್ನು ಹೇಳುವಂತೆ ಯಾರನ್ನಾದರೂ ಕೋರಿದರೆ, ಆ ಕಾರಣವು ಭ್ರಷ್ಟಾಚಾರವೇ ಆಗಿರುತ್ತದೆ ಎಂಬುದನ್ನು ನಿರಾಕರಿಸಲಾಗದು' ಎಂದು ಕೂಡ ಹೇಳಿದೆ.

ಕುಲಾಂತರಿ ಸಾಸಿವೆ: ವಿಚಾರಣೆ ಮುಂದಕ್ಕೆ

ನವದೆಹಲಿ (ಪಿಟಿಐ): ಕುಲಾಂತರಿ ಸಾಸಿವೆ ತಳಿಯನ್ನು ಮುಕ್ತ ಪರಿಸರದಲ್ಲಿ ಬಳಸಲು ಷರತ್ತುಬದ್ಧ ಅನುಮತಿ ನೀಡಿ ಕೇಂದ್ರ ಸರ್ಕಾರ 2022ರಲ್ಲಿ ತೆಗೆದುಕೊಂಡ ತೀರ್ಮಾನವನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಏಪ್ರಿಲ್ 15ಕ್ಕೆ ಮುಂದೂಡಿದೆ.

ಈ ಪ್ರಕರಣದಲ್ಲಿ ವಾದ ಮಂಡಿಸಲು ಕಾಲಾವಕಾಶ ಬೇಕು ಎಂದು ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರು ಹೇಳಿದ್ದನ್ನು ಪರಿಗಣಿಸಿ ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ, ಸುಧಾಂಶು ಧುಲಿಯಾ ಮತ್ತು ಉಜ್ಜಲ್ ಭುಯಾನ್ ಅವರು ಇರುವ ತ್ರಿಸದಸ್ಯ ಪೀಠವು ವಿಚಾರಣೆ ಮುಂದೂಡಿತು. ಸರ್ಕಾರದ ಅತ್ಯುನ್ನತ ಮಟ್ಟದಲ್ಲಿ ಈ ವಿಷಯದ ಕುರಿತಾಗಿ ಸರಣಿ ಚರ್ಚೆಗಳು ನಡೆಯುತ್ತಿವೆ ಎಂದು ವೆಂಕಟರಮಣಿ ಅವರು ತಿಳಿಸಿದರು.

ಉಪವಾಸ ಇರದ ಶಮಿ ಕ್ಷಮೆ ಕೇಳಲು ಮೌಲ್ವಿ ಆಗ್ರಹ

ಪ್ರಜಾವಾಣಿ ವಾರ್ತೆ

ಲಖನೌ: 'ಭಾರತ ಕ್ರಿಕೆಟ್ ತಂಡದ ಆಟಗಾರ ಮೊಹಮ್ಮದ್ ಶಮಿ ಅವರು ರಂಜಾನ್ ತಿಂಗಳಲ್ಲಿ ಸಂಪ್ರದಾಯದಂತೆ ರೋಜಾ (ಉಪವಾಸ) ಮಾಡುತ್ತಿಲ್ಲ' ಎಂದು ಮೌಲ್ವಿಯೊಬ್ಬರು ಟೀಕಿಸಿದ್ದಾರೆ.

'ರಂಜಾನ್ ಮಾಸದಲ್ಲಿ ಉಪವಾಸ ಇರುವುದು ಪವಿತ್ರವಾದ ಕಾರ್ಯ. ರೋಜಾ ಮಾಡದಿರುವುದು ಷರೀಯತ್ ನಿಯಮ ಪ್ರಕಾರ ತಪ್ಪು. ಇದಕ್ಕಾಗಿ ಶಮಿ 'ಅಲ್ಲಾಹ'ನ ಕ್ಷಮೆ ಕೋರಬೇಕು' ಎಂದು ಒತ್ತಾಯಿಸಿದ್ದಾರೆ.

ಮೊಹಮ್ಮದ್ ಶಮಿ

ಚಾಂಪಿಯನ್ಸ್ ಟ್ರೋಫಿ ಪಂದ್ಯಾವಳಿಯ ಭಾರತ–ಆಸ್ಟ್ರೇಲಿಯಾ ನಡುವಣ ಸೆಮಿಫೈನಲ್ ಪಂದ್ಯದ ವೇಳೆ ಶಮಿ ಅವರು ಪಾನೀಯ ಕುಡಿದ ಚಿತ್ರವು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗಿತ್ತು.

'ಇದರ ಬೆನ್ನಲ್ಲೇ, ಹಿರಿಯ ಮೌಲ್ವಿ ಮತ್ತು ಆಲ್ ಇಂಡಿಯಾ ಜಮಾತ್ ರಾಷ್ಟ್ರೀಯ ಅಧ್ಯಕ್ಷ ಮೌಲಾನಾ ಶಹಾಬುದ್ದೀನ್ ರಿಜ್ವಿ, 'ತಪ್ಪಿಗಾಗಿ ಅಲ್ಲಾಹನ ಕ್ಷಮೆ ಕೋರಬೇಕು' ಎಂದು ಗುರುವಾರ ಒತ್ತಾಯಿಸಿದ್ದಾರೆ. ಮೊಹಮ್ಮದ್ ಶಮಿ ಅವರು ತಮ್ಮ ಧಾರ್ಮಿಕ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿತ್ತು. ಧಾರ್ಮಿಕ ನಿಯಮಗಳನ್ನು ಪಾಲಿಸಬೇಕು ಮತ್ತು ಧರ್ಮಕ್ಕೆ ಬದ್ಧರಾಗಿರಬೇಕು ಎಂದು ನಾನು ಸಲಹೆ ಮಾಡಲು ಬಯಸುತ್ತೇನೆ ಎಂದು ಅವರು ಹೇಳಿದ್ದಾರೆ.

ಶಮಿ ಪಾನೀಯ ಕುಡಿಯುತ್ತಿರುವ ಚಿತ್ರ ಜಾಲತಾಣದಲ್ಲಿ ಪ್ರಕಟವಾದ ಬಳಿಕ ಹಲವರು ಪ್ರತಿಕ್ರಿಯಿಸಿದ್ದಾರೆ. ಕೆಲವರು 'ತಪ್ಪೇನೂ ಇಲ್ಲ' ಎಂದರೆ, ಇನ್ನು ಕೆಲವರು ಇದು 'ತಪ್ಪು' ಎಂದು ಪ್ರತಿಕ್ರಿಯಿಸಿದ್ದಾರೆ.

ಶಮಿ ನಡೆಯನ್ನು ಅಯೋಧ್ಯೆಯ ಸಂತರು ಶ್ಲಾಘಿಸಿದ್ದಾರೆ. 'ಧರ್ಮ ಒಳಗೊಂಡಂತೆ ಎಲ್ಲದಕ್ಕಿಂತಲೂ ಮೊದಲು ರಾಷ್ಟ್ರಕ್ಕೆ ಆದ್ಯತೆ ಸಿಗಬೇಕು' ಎಂದೂ ಹೇಳಿದ್ದರು.

ಆಸ್ಟ್ರೇಲಿಯಾ ವಿರುದ್ಧದ ಪಂದ್ಯದಲ್ಲಿ ಶಮಿ ಅವರು ತಮ್ಮ ನಿಗದಿತ ಹತ್ತು ಓವರುಗಳಲ್ಲಿ 48 ರನ್ ನೀಡಿ ಮೂರು ವಿಕೆಟ್ ಪಡೆದಿದ್ದರು.

ಲಂಡನ್‌ನಲ್ಲಿ ನಾಳೆ ಇಳೆಯರಾಜ 'ಸಿಂಫನಿ'

ಪ್ರಜಾವಾಣಿ ವಾರ್ತೆ

ಚೆನ್ನೈ: ಚಲನಚಿತ್ರ ಗೀತೆಗಳು ಸೇರಿದಂತೆ ವಿವಿಧ ಪ್ರಕಾರದ ಹಾಡುಗಳಿಗೆ ಸ್ವರ ಸಂಯೋಜನೆ ಮಾಡಿರುವ, ಸ್ವರ ಮಾಂತ್ರಿಕ ಇಳೆಯರಾಜ ಅವರು ಮಾರ್ಚ್ 8ರಂದು ಲಂಡನ್‌ನಲ್ಲಿ ನಡೆಯುವ 'ಸಿಂಫನಿ'ಯನ್ನು (ವಾದ್ಯಮೇಳ) ಮುನ್ನಡೆಸಲಿದ್ದಾರೆ.

ಲಂಡನ್‌ನ 'ಇವೆಂಟಿಮ್ ಅಪೋಲೊ' ಸಭಾಂಗಣದಲ್ಲಿ ನಡೆಯುವ ಸ್ವರಮೇಳದಲ್ಲಿ, ಇಳೆಯರಾಜ ಅವರ ಚೊಚ್ಚಲ ಸ್ವರ ಸಂಯೋಜನೆ 'ವ್ಯಾಲಿಯಂಟ್' ಅನಾವರಣಗೊಳ್ಳಲಿದೆ. ಪಾಶ್ಚಾತ್ಯ ಶಾಸ್ತ್ರೀಯ ವಾದ್ಯಮೇಳವನ್ನು ಬ್ರಿಟನ್‌ನಲ್ಲಿ ನಿರ್ವಹಿಸಿದ ಮೊದಲ ಭಾರತೀಯ ಕಲಾವಿದ ಎಂಬ ಗೌರವಕ್ಕೆ 81 ವರ್ಷದ ಇಳೆಯರಾಜ ಪಾತ್ರರಾಗಲಿದ್ದಾರೆ. ಈ ಮೂಲಕ, ಅವರು, ಸಂಗೀತ ಕ್ಷೇತ್ರದಲ್ಲಿನ ಸುದೀರ್ಘ ಪಯಣದಲ್ಲಿ ಹೊಸ ಮೈಲುಗಲ್ಲು ಸೃಷ್ಟಿಸಲಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಇಳೆಯರಾಜ, 'ಇದು ನನಗೆ ಮಾತ್ರ ಹೆಮ್ಮೆಯ ವಿಷಯವಲ್ಲ; ಇಂತಹ ಗೌರವ ಸಿಕ್ಕಿರುವುದು ಭಾರತದ ಪಾಲಿಗೂ ಹೆಮ್ಮೆಯ ವಿಚಾರ' ಎಂದಿದ್ದಾರೆ.

'ನಮ್ಮ ದೇಶ ಕುರಿತು ನಾವು 'ನಂಬಲಾಗದ ಭಾರತ' ಎಂದು ಹೇಳುತ್ತೇವೆ. ಅದೇ ರೀತಿ ನನ್ನ ಈ ಸಾಧನೆ ನೋಡಿದಾಗ 'ನಂಬಲಾಗದ ಇಳೆಯರಾಜ' ಎಂದೇ ಹೇಳಬೇಕೆನಿಸಿದೆ' ಎಂದು ಇಳೆಯರಾಜ ಪ್ರತಿಕ್ರಿಯಿಸಿದ್ದಾರೆ.

ಲಂಡನ್‌ಗೆ ತೆರಳುವ ಮುನ್ನ ಗುರುವಾರ ಇಲ್ಲಿ ವಿಮಾನನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಲಂಡನ್‌ನಲ್ಲಿ ನಡೆಯಲಿರುವ ನನ್ನ ಕಾರ್ಯಕ್ರಮ ಸಂಗೀತ ಪ್ರಿಯರಿಗೆ ರಸದೌತಣ ನೀಡಲಿದೆ ಎಂಬ ವಿಶ್ವಾಸ ಹೊಂದಿದ್ದೇನೆ' ಎಂದು ಹೇಳಿದರು.

ಕೇವಲ 35 ದಿನಗಳಲ್ಲಿ ಇಳೆಯರಾಜ ಅವರು ಈ ಸ್ವರಸಂಯೋಜನೆ ಮಾಡಿದ್ದು, ಖ್ಯಾತ ಸಂಗೀತಗಾರ ಮೈಕೆಲ್ ಟಾಮ್ಸ್ ಈ ವಾದ್ಯಗೋಷ್ಠಿ ನಿರ್ವಹಿಸುವರು.

ರಾಯಲ್ ಫಿಲ್‌ಹಾರ್ಮೋನಿಕ್ ಆರ್ಕೆಸ್ಟ್ರಾದ(ಆರ್‌ಪಿಒ) 85 ಸಂಗೀತಗಾರರು ಸಾಥ್ ನೀಡುವರು.

ಐಎಸ್‌ಐ ನಂಟು: ಉಗ್ರನ ಸೆರೆ

ಲಖನೌ (ಪಿಟಿಐ): ಪಾಕಿಸ್ತಾನದ ಐಎಸ್‌ಐ ಜೊತೆ ಸಂಪರ್ಕವಿದ್ದ, ಬಬ್ಬರ್ ಖಾಲ್ಸಾ ಇಂಟರ್ ನ್ಯಾಷನಲ್‌ನ 'ಸಕ್ರಿಯ ಉಗ್ರ'ನನ್ನು ಉತ್ತರ ಪ್ರದೇಶದ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಲಜರ್ ಮಾಸಿಹ್ ಎಂದು ಗುರುತಿಸಲಾಗಿರುವ ಈ ಉಗ್ರನನ್ನು ಉತ್ತರ ಪ್ರದೇಶದ ಎಸ್‌ಟಿಎಫ್ ಮತ್ತು ಪಂಜಾಬ್‌ನ ಪೊಲೀಸರು ಕೌಶಂಬಿ ಜಿಲ್ಲೆಯಲ್ಲಿ ಜಂಟಿ ಕಾರ್ಯಾಚರಣೆ ನಡೆಸಿ ಬಂಧಿಸಿದರು. 'ಮಹಾಕುಂಭಮೇಳ ಅವಧಿಯಲ್ಲಿ ದಾಳಿ ನಡೆಸಲೂ ಈತ ಸಂಚು ರೂಪಿಸಿದ್ದ. ಆದರೆ, ಬಿಗಿ ತಪಾಸಣೆ ಇದ್ದ ಕಾರಣ ಕೃತ್ಯ ಎಸಗುವುದು ಸಾಧ್ಯವಾಗಿರಲಿಲ್ಲ' ಎಂದು ಪೊಲೀಸರು ತಿಳಿಸಿದ್ದಾರೆ.

ಯೋಜನೆ ವಿಫಲವಾದ ಬೆನ್ನಲ್ಲೇ ನಕಲಿ ಪಾಸ್‌ಪೋರ್ಟ್ ಬಳಸಿ ಪೋರ್ಚುಗಲ್‌ಗೆ ಪರಾರಿ ಆಗಲು ಯತ್ನಿಸಿದ್ದ. ಈಗಾಗಲೇ ದುಬೈಗೆ ಪರಾರಿ ಆಗಿರುವ ಬಬ್ಬರ್ ಖಾಲ್ಸಾ ಸಂಘಟನೆಯ ಸದಸ್ಯನ ಜೊತೆಗೂ ಸಂಪರ್ಕ ಹೊಂದಿದ್ದ ಎಂದು ಡಿಜಿಪಿ ಪ್ರಶಾಂತ್ ಕುಮಾರ್ ಅವರು ಸುದ್ದಿಗೋಷ್ಠಿಯಲ್ಲಿ ವಿವರಿಸಿದ್ದಾರೆ.

ರಂಜಾನ್ ನಾಗ್ಪುರದ ಅಂಗಡಿಯೊಂದರಲ್ಲಿ ರಂಜಾನ್ ಅಂಗವಾಗಿ ತಯಾರಿಸಿದ ಶ್ಯಾವಿಗೆಯನ್ನು ಕಾರ್ಮಿಕರೊಬ್ಬರು ಒಪ್ಪವಾಗಿ ಜೋಡಿಸಿ ಇಡುತ್ತಿದ್ದುದು ಗುರುವಾರ ಕಂಡು ಬಂತು –ಪಿಟಿಐ ಚಿತ್ರ

ಭಾರತಕ್ಕೆ ಹಸ್ತಾಂತರ: 'ಸುಪ್ರೀಂ'ಗೆ ರಾಣಾ ಮೊರೆ

ನ್ಯೂಯಾರ್ಕ್ (ಪಿಟಿಐ): ಮುಂಬೈ ಮೇಲಿನ ಭಯೋತ್ಪಾದಕರ ದಾಳಿ ಪ್ರಕರಣದ ಆರೋಪಿ ತಹವ್ವುರ್ ರಾಣಾ, ತನ್ನನ್ನು ಭಾರತಕ್ಕೆ ಹಸ್ತಾಂತರ ಮಾಡಬಾರದು ಎಂಬ ಕೋರಿಕೆಯೊಂದಿಗೆ ಅಮೆರಿಕದ ಸುಪ್ರೀಂ ಕೋರ್ಟ್‌ಗೆ ತುರ್ತು ಅರ್ಜಿ ಸಲ್ಲಿಸಿದ್ದಾನೆ.

ತಾನು ಪಾಕಿಸ್ತಾನ ಮೂಲದ ಮುಸ್ಲಿಂ ಆಗಿರುವ ಕಾರಣಕ್ಕೆ ಭಾರತದಲ್ಲಿ ತನಗೆ ಹಿಂಸೆ ನೀಡಲಾಗುತ್ತದೆ. ಹೀಗಾಗಿ ತನ್ನನ್ನು ಭಾರತಕ್ಕೆ ಹಸ್ತಾಂತರ ಮಾಡಬಾರದು ಎಂದು ಆತ ಕೋರಿದ್ದಾನೆ.

ರಾಣಾ ಈಗ ಕೆನಡಾ ದೇಶದ ಪ್ರಜೆ. ಈತನನ್ನು ಈಗ ಲಾಸ್ ಏಂಜಲೀಸ್‌ನ ಜೈಲಿನಲ್ಲಿ ಇರಿಸಲಾಗಿದೆ. ಈತನನ್ನು ಭಾರತಕ್ಕೆ ಹಸ್ತಾಂತರ ಮಾಡಲಾಗುವುದು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಕಳೆದ ತಿಂಗಳು ಪ್ರಕಟಿಸಿದ್ದರು.

ರಾಣಾನ ಈಗಿನ ಆರೋಗ್ಯ ಸ್ಥಿತಿಯನ್ನು ಗಮನಿಸಿ ಹೇಳುವುದಾದರೆ, ಈತನನ್ನು ಈಗ ಭಾರತಕ್ಕೆ ಹಸ್ತಾಂತರ ಮಾಡಿದರೆ ಆತನಿಗೆ ಮರಣ ದಂಡನೆ ವಿಧಿಸಿದಂತೆ ಆಗುತ್ತದೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ. ಈತನಿಗೆ ಹಲವು ಬಾರಿ ಹೃದಯಾಘಾತ ಆಗಿದೆ, ಈತ ಹಲವು ಬಾರಿ ಕೋವಿಡ್‌ಗೆ ಒಳಗಾಗಿದ್ದಾನೆ, ಜೀವಕ್ಕೆ ಎರವಾಗಬಹುದಾದ ಆರೋಗ್ಯ ಸಮಸ್ಯೆಗಳು ಇವೆ ಎಂದು ವಿವರಿಸಲಾಗಿದೆ.

ಕೇಂಬ್ರಿಜ್‌ನಲ್ಲಿ ರಾಜೀವ್ ಗಾಂಧಿ ಅನುತ್ತೀರ್ಣರಾಗಿದ್ದರು: ಅಯ್ಯರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಶೈಕ್ಷಣಿಕ ಅರ್ಹತೆಯ ಬಗ್ಗೆ ಕಾಂಗ್ರೆಸ್ ಮುಖಂಡ ಮಣಿಶಂಕರ್ ಅಯ್ಯರ್ ಅವರು ಆಡಿರುವ ಕೆಲವು ಮಾತುಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹಂಚಿಕೊಳ್ಳಲಾಗಿದೆ.

ವಿಮಾನದ ಪೈಲಟ್ ಆಗಿದ್ದ ರಾಜೀವ್ ಅವರು ಪ್ರಧಾನಿ ಹೇಗಾದರು ಎಂದು ಹಲವರು ಅಂದುಕೊಂಡಿದ್ದರು ಎಂಬ ಧಾಟಿಯಲ್ಲಿ ಅಯ್ಯರ್ ಅವರು ಸಂದರ್ಶನವೊಂದರಲ್ಲಿ ಮಾತನಾಡಿದ್ದರು.

'ರಾಜೀವ್ ಅವರು ಪೈಲಟ್ ಆಗಿದ್ದವರು. ಕೇಂಬ್ರಿಜ್‌ನಲ್ಲಿ ಎರಡು ಬಾರಿ ಅನುತ್ತೀರ್ಣರಾಗಿದ್ದರು. ನಾನು ಅವರ ಜೊತೆ ಕೇಂಬ್ರಿಜ್‌ನಲ್ಲಿ ಓದಿದ್ದೆ. ಕೇಂಬ್ರಿಜ್‌ನಲ್ಲಿ ಅನುತ್ತೀರ್ಣ ಆಗುವುದು ಬಹಳ ಕಷ್ಟ. ಅಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣ ಆಗುವುದು ಸುಲಭ. ಏಕೆಂದರೆ ವಿಶ್ವ ವಿದ್ಯಾಲಯವು ಎಲ್ಲರೂ ಪಾಸಾಗಲಿ ಎಂದು ಯತ್ನಿಸುತ್ತದೆ. ಆದರೂ ರಾಜೀವ್ ಅನುತ್ತೀರ್ಣರಾದರು. ನಂತರ ಅವರು ಲಂಡನ್‌ನ ಇಂಪೀರಿಯಲ್ ಕಾಲೇಜಿನಲ್ಲಿಯೂ ಅನುತ್ತೀರ್ಣರಾದರು. ಇಂತಹ ವ್ಯಕ್ತಿ ಪ್ರಧಾನಿ ಏಕಾಗಬೇಕು ಎಂದು ನಾನೂ ಯೋಚಿಸಿದ್ದೆ' ಎಂದು ಅಯ್ಯರ್ ಅವರು ಸಂದರ್ಶನದಲ್ಲಿ ಹೇಳಿದ್ದಾರೆ.

ಈ ಸಂದರ್ಶನದ ತುಣುಕನ್ನು ಎಕ್ಸ್ ಖಾತೆಯ ಮೂಲಕ ಹಂಚಿಕೊಂಡಿರುವ ಬಿಜೆಪಿ ಐ.ಟಿ. ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಅವರು, 'ಪರದೆ ಸರಿಯಲಿ' ಎಂದು ಹೇಳಿದ್ದಾರೆ.

ಆದರೆ, ಮಾಳವೀಯ ಅವರು ಹಂಚಿಕೊಂಡಿರುವ ವಿಡಿಯೊ ತುಣುಕು ಸಂದರ್ಶನದಲ್ಲಿ ಅಯ್ಯರ್ ಅವರು ಆಡಿರುವ ಮಾತುಗಳನ್ನು ಪೂರ್ತಿಯಾಗಿ ತೋರಿಸುವುದಿಲ್ಲ. ಆ ಸಂದರ್ಶನದಲ್ಲಿ ಅಯ್ಯರ್ ಅವರು, 'ರಾಜೀವ್ ಅವರು ಅತ್ಯಂತ ಶ್ರೇಷ್ಠ ಪ್ರಧಾನಿಯಾಗಿದ್ದರು' ಎಂದು ಕೂಡ ಹೇಳಿದ್ದಾರೆ ಎಂದು ಎನ್‌ಡಿಟಿವಿ ವರದಿ ಹೇಳಿದೆ.

ಇಂದಿರಾ ಗಾಂಧಿ ಅವರನ್ನು ಆರಂಭದಲ್ಲಿ 'ಮೂಕ ಗೊಂಬೆ' ಎಂದು ಕೆಲವರು ಕರೆದಿದ್ದರು. ಆದರೆ ನಂತರದಲ್ಲಿ ಅವರು ರಾಜಕೀಯ ಶಕ್ತಿಯಾಗಿ ಬೆಳೆದರು. ರಾಜೀವ್ ಅವರ ಬಗ್ಗೆ ಆರಂಭದಲ್ಲಿ ಕೆಲವರು ಆಶ್ಚರ್ಯ ವ್ಯಕ್ತಪಡಿಸಿದ್ದರೂ ನಂತರ 'ಅವರು ಅತ್ಯಂತ ಶ್ರೇಷ್ಠ ಪ್ರಧಾನಿಯಾಗಿದ್ದರು ಎಂದು ನಾನು ಈಗ ಹೇಳುತ್ತೇನೆ' ಎಂದೂ ಅಯ್ಯರ್ ಅವರು ಹೇಳಿರುವುದಾಗಿ ಎನ್‌ಡಿಟಿವಿ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಸುರಂಗ ಕುಸಿದ ಪ್ರಕರಣ: ಶೋಧಕ್ಕೆ ಶ್ವಾನದಳ ನೆರವು

ನಾಗರ್‌ಕರ್ನೂಲ್/ತಿರುವನಂತಪುರ (ಪಿಟಿಐ): ತೆಲಂಗಾಣದ ನಾಗರ್‌ಕರ್ನೂಲ್‌ನಲ್ಲಿ ಸುರಂಗವು ಭಾಗಶಃ ಕುಸಿದು ಸಿಲುಕಿರುವ ಕಾರ್ಮಿಕರ ರಕ್ಷಣೆ ಕಾರ್ಯಕ್ಕೆ ನೆರವಾಗಲು ಕೇರಳದಿಂದ ಶ್ವಾನದಳವನ್ನು ಕರೆಸಲಾಗಿದೆ. ಫೆ.22ರಂದು ಸುರಂಗ ಭಾಗಶಃ ಕುಸಿದಿದ್ದು, 8 ಮಂದಿ ಕಾರ್ಮಿಕರು ಸಿಲುಕಿದ್ದಾರೆ. ಶ್ವಾನಗಳ ಜೊತೆಗೆ, ಅವುಗಳನ್ನು ನಿರ್ವಹಣೆ ಮಾಡುವ ಸಿಬ್ಬಂದಿ ವಿಮಾನದಲ್ಲಿ ತಿರುವನಂತಪುರದಿಂದ ಹೈದರಾಬಾದ್‌ಗೆ ನಿರ್ಗಮಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಚೇರಿ (ಬೆಂಗಳೂರು ದಕ್ಷಿಣ ಕ್ಷೇತ್ರ), ಕೆರೆಗಳ ವಿಭಾಗ, ಕೊಠಡಿ ನಂ. 309, 3ನೇ ಮಹಡಿ, ಹೊಸ ಕಟ್ಟಡ, ಬಿಬಿಎಂಪಿ, ಎನ್.ಆರ್. ಚೌಕ, ಬೆಂಗಳೂರು–02.

ಸಂಖ್ಯೆ: ಕಾಪಾಅ–ಬಿಎಸ್‌ಸಿ(ಕೆರೆಗಳು)/ಟಿಎನ್–12/2024–25 ದಿನಾಂಕ: 06.03.2025

ತಿದ್ದುಪಡಿ – 1

(ಜಿಓಕೆ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಸಂಖ್ಯೆ: ಕಾಪಾಅ–ಬಿಎಸ್‌ಸಿ(ಕೆರೆಗಳು)/ಟಿಎನ್–12/2024–25, ದಿನಾಂಕ: 03.03.2025ರಂತೆ ಕರೆಯಲಾಗಿದ್ದ ಟೆಂಡರ್ ಪ್ರಕಟಣೆಯಲ್ಲಿ ತಾಂತ್ರಿಕ ಕಾರಣಗಳಿಂದಾಗಿ ದಿನಾಂಕಗಳನ್ನು ಪರಿಷ್ಕರಿಸಲಾಗಿದ್ದು, ಪರಿಷ್ಕೃತ ದಿನಾಂಕಗಳು ಈ ಕೆಳಗಿನಂತಿವೆ.

ಪರಿಷ್ಕೃತ ಟೆಂಡರ್ ದಿನಾಂಕಗಳು : (1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ https://kppp.karnataka.gov.inನಿಂದ ದಿನಾಂಕ: 10.03.2025ರ ಸಂಜೆ 4.00 ಗಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವ ಬಿಡ್ ಸಭೆಯ ದಿನಾಂಕ: 24.03.2025ರ ಮಧ್ಯಾಹ್ನ 3.00 ಗಂಟೆಗೆ – ಮುಖ್ಯ ಅಭಿಯಂತರರು (ಎಫ್‌ಇಸಿಸಿ)ರವರ ಕಚೇರಿ, ಕೊಠಡಿ ನಂ. 307, 3ನೇ ಮಹಡಿ, ಅನೆಕ್ಸ್–2 ಕಟ್ಟಡ, ಬಿಬಿಎಂಪಿ, ಎನ್.ಆರ್.ಚೌಕ, ಬೆಂಗಳೂರು–02. (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 07.04.2025ರ ಸಂಜೆ 4.00 ಗಂಟೆವರೆಗೆ. (4) ತಾಂತ್ರಿಕ ಬಿಡ್ ದಾಖಲೆಗಳನ್ನು ತೆರೆಯುವ ದಿನಾಂಕ: 09.04.2025ರ ಸಂಜೆ 4.30 ಗಂಟೆಗೆ.

ಉಳಿದಂತೆ ಟೆಂಡರ್‌ನ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು
ಬೆಂಗಳೂರು ದಕ್ಷಿಣ ಕ್ಷೇತ್ರ, ಕೆರೆಗಳ ವಿಭಾಗ, ಬಿಬಿಎಂಪಿ

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ, ಇಲಾಖೆ ವಿಭಾಗ ಕೊಪ್ಪಳ

ದೂ:08539–220054. www.eemidnkst@rediffmail.com.

ಸಂ: ಕಾನಿಇಂ/ಸನೀಮತ್ತು ಅ.ಅ.ವಿ/ಕೊಪ್ಪಳ/ತಾಶಾ/2024–25/675 ದಿ:05.03.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ ಪೋರ್ಟಲ್ ಮುಖಾಂತರ)

ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಯ ಟೆಂಡರ ಕಾಮಗಾರಿಗಾಗಿ ಗಿರಿಜನ ಉಪಯೋಜನೆ & ವಿಶೇಷ ಘಟಕ ಯೋಜನೆ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 06 ಕಾಮಗಾರಿಗಳ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರಗಿಟ್ಟ ಕನಿಷ್ಟ ಮೊತ್ತ ರೂ.13.92 ಲಕ್ಷಗಳಿಂದ ಗರಿಷ್ಟ ಮೊತ್ತ ರೂ.72.00 ಲಕ್ಷಗಳಿರುತ್ತದೆ. ಟೆಂಡರಗಳನ್ನು ದಿನಾಂಕ: 07–03–2025 ರಿಂದ ದಿನಾಂಕ: 15–03–2025 ಸಂಜೆ. 4.30 ಗಂಟೆಯವರೆಗೆ ಸಲ್ಲಿಸಬಹುದು. ಪೂರ್ವಭಾವಿ ಸಭೆ ದಿನಾಂಕ: 13–03–2025 ರಂದು ಬೆಳ್ಳಿಗ್ಗೆ 11.00 ಗಂಟೆಗೆ ಈ ಕಛೇರಿಯಲ್ಲಿ ಜರುಗುವುದು. ತಾಂತ್ರಿಕ ಬಿಡ್ಡನ್ನು ದಿನಾಂಕ: 17–03–2025 ರಂದು ಬೆಳ್ಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು, ಆರ್ಥಿಕ ಬಿಡ್ಡನ್ನು ದಿನಾಂಕ:19–03–2025 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹೆಚ್ಚಿನ ಮಾಹಿತಿಗಳನ್ನು "ಕೆ.ಪಿ.ಪಿ ಪೋರ್ಟಲ್" ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ದಿ ವಿಭಾಗ. ಕೊಪ್ಪಳ.

ಡಿಐಪಿಆರ್/ಕೊಪ್ಪಳ/826/ಕೆಎಸ್‌ಎಂಸಿಎ/2024–25

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ಇಲಾಖೆ.
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ವಿಭಾಗ, ಬೀದರ.

ನಂ: ಇಇ/ಎಂಐಡಿ/ಬೀದರ/ತಾ.ಶಾ–1,2&3/ಟೆಂಡರ್/2024–25/463 ದಿನಾಂಕ: 03–03–2025

ಕೆಪಿಪಿ–ಪ್ರೋಕ್ಯೂರಮೆಂಟ ಟೆಂಡರ್ ಪ್ರಕಟಣೆ ಕರೆ–2

1) ಕಾಮಗಾರಿಗಳ ವಿವರ. : KPP -Portalನಲ್ಲಿ ನಮೂದಿಸಿದಂತೆ. 2) ಕಾಮಗಾರಿಗಳ ಅಂದಾಜು ಮೊತ್ತ. : KPP -Portalನಲ್ಲಿ ನಮೂದಿಸಿದಂತೆ. 3) ಗುತ್ತಿಗೆದಾರರ ಅರ್ಹತೆ ವಿವರ.: KPP -Portalನಲ್ಲಿ ನಮೂದಿಸಿದಂತೆ 4) ಕಾಮಗಾರಿಗಳ ಟೆಂಡರ ಮೊತ್ತದ ವಿವರ. : KPP -Portalನಲ್ಲಿ ನಮೂದಿಸಿದಂತೆ, 5) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ.: KPP -Portalನಲ್ಲಿ ನಮೂದಿಸಿದಂತೆ. 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ: ಕೆ.ಡಬ್ಲ್ಯೂ –4 ಮಾತ್ರ : 10–03–2025 ರಂದು 17.00 ಗಂಟೆವರೆಗೆ 7) ಪ್ರೀಬಿಡ್ಡ್ ಮಿಟಿಂಗ ಸ್ಥಳ ದಿನಾಂಕ ಮತ್ತು ಸಮಯ. ಕೆ.ಡಬ್ಲ್ಯೂ –4 ಮಾತ್ರ ಕಾರ್ಯನಿರ್ವಾಹಕ ಇಂಜೀನೀಯರರು,, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ, ಪ್ರತಾಪನಗರ ನೌಬಾದ, ಬೀದರ. 07–03–2025 ರಂದು 11.00 ಗಂಟೆಗೆ. 8) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ ಕೆ.ಡಬ್ಲ್ಯೂ –4 ಮಾತ್ರ : 12–03–2025 ರಂದು 16.00 ಗಂಟೆ ವರೆಗೆ, 9) ಟೆಂಡರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲ್ಯೂ –4 ಮಾತ್ರ : 14–03–2025 ರಂದು 11.00 ಗಂಟೆಗೆ ಸಾಧ್ಯವಾದಲ್ಲಿ 10) ಟೆಂಡರ ಆರ್ಥಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲ್ಯೂ –4 ಮಾತ್ರ: 17–03–2025 ರಂದು 11.00 ಗಂಟೆಗೆ ಸಾಧ್ಯವಾದಲಿ, 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ ವಿಳಾಸ, ದೂರವಾಣಿ ಸಂಖ್ಯೆ : ಕಾರ್ಯನಿರ್ವಾಹಕ ಇಂಜೀನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ಇಲಾಖೆ.ವಿಭಾಗ, ಬೀದರ. ದೂರವಾಣಿ ಸಂ: 08482 232080, 12) ಅಂತರ್ಜಾಲ ತಾಣದ ವಿಳಾಸ. : KPP portal https://kppp.kamataka.gov.in

ಸಹಿ/– ಕಾರ್ಯ ನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ವಿಭಾಗ, ಬೀದರ.

ವಾ.ಸಾ.ಸಂ.ಇ/ಬೀದರ/434/ಕೆ.ಎಸ್.ಎಂ.ಸಿ.&ಎ/2024–25

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.

ಸಂಖ್ಯೆ: ಕಾಇಂ:ಲೋವಿಚಿ:ಜೆಇ–1:ಎಇ–2:ಟೆಂಡರ್–36:2024–25 ದಿನಾಂಕ: 05.03.2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಅರ್ಹ ಗುತ್ತಿಗೆದಾರರು ವೆಬ್‌ಸೈಟ್ kppp.karnataka.gov.in ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು. **ಕಾಮಗಾರಿಗಳ ವಿವರ:– ಕೆಪಿಪಿ ಪೋರ್ಟಲ್ ಮೂಲಕ– ದ್ವಿ ಲಕೋಟೆ ಪದ್ಧತಿ:–ಲೆಕ್ಕ ಶೀರ್ಷಿಕೆ: 5054–03–337–0–17–154 ರಾಜ್ಯ ಹೆದ್ದಾರಿ ಸುಧಾರಣೆ:–** (1) ಚಳ್ಳಕೆರೆ ತಾಲ್ಲೂಕು ಕುಮುಟಾ ಕಡಮಡಗಿ ರಸ್ತೆ (ರಾಜ್ಯ ಹೆದ್ದಾರಿ–48) ಕಿ.ಮೀ 330.10 ರ ಕೂಡು (ಲೂಪ್ ರೋಡ್) ರಸ್ತೆ ಅಗಲೀಕರಣ ಮತ್ತು ಅಭಿವೃದ್ಧಿ ಕಾಮಗಾರಿ (ವ.ಇಂ. 19979) **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):–230.00** (2) ಚಳ್ಳಕೆರೆ ತಾಲ್ಲೂಕು ಚಳ್ಳಕೆರೆ (ಎನ್.ಹೆಚ್ 150ಎ) ಯಿಂದ ವಿಶ್ವನಾಥನಹಳ್ಳಿ ರಸ್ತೆ. (ರಾಜ್ಯ ಹೆದ್ದಾರಿ–243) ಕಿ.ಮೀ.76.10 ರಿಂದ 76.485 ವರೆಗೆ ರಸ್ತೆ ಅಗಲೀಕರಣ ಮತ್ತು ಅಭಿವೃದ್ಧಿ ಕಾಮಗಾರಿ (ವ.ಇಂ. 19980) **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):–370.00** (3) ಚಿತ್ರದುರ್ಗ ತಾಲ್ಲೂಕು ಚಿತ್ರದುರ್ಗ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕುಮುಟಾ ಕಡಮಡಗಿ ರಾಜ್ಯ ಹೆದ್ದಾರಿ ರಸ್ತೆ ಸರಪಳಿ 254.00 ರಿಂದ 255.00 ಕಿ.ಮೀ ರವರೆಗೆ ಆಯ್ದಭಾಗಗಳಲ್ಲಿ ರಸ್ತೆ ಅಭಿವೃದ್ಧಿ ಹಾಗೂ ಡಾಂಬರೀಕರಣ (ವ.ಇಂ. 19760)/2ನೇ ಕರೆ **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):–100.00 ಲೆಕ್ಕ ಶೀರ್ಷಿಕೆ: 8443 ಠೇವಣಿ ವಂತಿಕೆ – ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ :–** (4) ಮೊಳಕಾಲ್ಮೂರು ತಾಲ್ಲೂಕಿನ ರಾಜ್ಯ ಹೆದ್ದಾರಿ–ಸಿ2 ಚಿತ್ರದುರ್ಗ ದಿಂದ ಮಾಚೇನಹಳ್ಳಿ (ಆಂಧ್ರಗಡಿ) ಮಾರ್ಗ ಗೋನೂರು, ಬೆಳಗಟ್ಟ, ಹಾಯ್ಕಲ್, ನಾಯಕನಹಳ್ಳಿ, ಮುಸ್ಟಲಗುಮ್ಮಿ, ಸೂರಮ್ಮನಹಳ್ಳಿ, ಚಿಕ್ಕೋಬನಹಳ್ಳಿ, ಚಿಕ್ಕಂತಿ, ಸಿದ್ದಯ್ಯನಕೋಟೆ, ಯರೇಹಳ್ಳಿ, ರಾಯಾಪುರ, ಸೂಲೇನಹಳ್ಳಿ, ಮೊಳಕಾಲ್ಮೂರು, ಪೂಜಾರಹಟ್ಟಿ, ಕೊಮ್ಮನಘಟ್ಟಿ, ಮೇಗಳಹಟ್ಟಿ, ಕಾಟನಾಯಕನಹಳ್ಳಿ ಬೈರಾಪುರ, ನಾಗಸಮುದ್ರ, ಸಿದ್ದಾಪುರ, ಹೊಸೂರು ರಸ್ತೆ ಕಿ.ಮೀ. 70.40 ರಿಂದ 74.40 ರವರೆಗೆ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ (ವ.ಇಂ. 20078) **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):–200.00**

ಕ್ರ.ಸಂ. 1 ಮತ್ತು 2 ರ ಕಾಮಗಾರಿಗಳ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ. ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ 18–03–2025 ಸಮಯ 17–30 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ 19–03–2025 ಸಮಯ 16–00 ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 20–03–2025 ಸಮಯ 16–15 ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 24–03–2025 ಸಮಯ 11–00 **ಕ್ರ.ಸಂ. 3 & 4 ಕಾಮಗಾರಿಗಳ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ:–** ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ 12–03–2025 ಸಮಯ 17–30 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ 13–03–2025 ಸಮಯ 16–00 ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 14–03–2025 ಸಮಯ 16–15 ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 17–03–2025 ಸಮಯ 11–00 ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 080 25501216 ಮತ್ತು 080 25501227 ರಿಂದ ಮಾಹಿತಿ ಪಡೆಯಬಹುದು.

DIPR/CTA/KSMCA/664/2024-25 ಸಹಿ/– ಕಾರ್ಯಪಾಲಕ ಅಭಿಯಂತರರು, ಪಿ.ಡಬ್ಲ್ಯೂ.ಡಿ, ಚಿತ್ರದುರ್ಗ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಕಾಮಗಾರಿ ವಿಭಾಗ, ಬೆಂಗಳೂರು

ಸಂ:ಕರಾಸಾ/ಕಾನಿಅ/ಬೆಂ/ಕಿಅ/560/2024–25 ದಿನಾಂಕ:06.03.2025

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಪದ್ದತಿಯಲ್ಲಿ)

ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಕೆ.ಪಿ.ಡಬ್ಲ್ಯೂ.ಡಿ / ಸಿ.ಪಿ.ಡಬ್ಲ್ಯೂ.ಡಿ / ಎಂಇಎಸ್ ನಲ್ಲಿ ನೋಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಕೆಳಗಿನ ಕಾಮಗಾರಿ ಕೆಲಸಗಳಿಗೆ ಐಟಂವಾರು ಟೆಂಡರನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರುಗಳು ಇ–ಆಡಳಿತರವರೊಡನೆ ತಮ್ಮ ಹೆಸರನ್ನು ನೋಮದಾಯಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸಲು ಕೋರಲಾಗಿದೆ.

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂ	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗೆಳಲ್ಲಿ)	ಮುಂಗಡ ಠೇವಣಿ ಹಣ ರೂ.ಗಳಲ್ಲಿ	ಕಾಲಾವಧಿ ತಿಂಗಳಲ್ಲಿ (ಮಳೆಗಾಲ ಸೇರಿ)
1	19	ಚಿಕ್ಕಬಳ್ಳಾಪುರ ಪಾ.ಸಾ.ಅ. ಕಛೇರಿ ವ್ಯಾಪ್ತಿಯಲ್ಲಿ ಸ್ವಯಂಚಾಲಿತ ಪರೀಕ್ಷಾ ಪಥವನ್ನು ನಿರ್ಮಿಸುವ ಕಾಮಗಾರಿ.	450.67	6,76,000/-	11 ತಿಂಗಳು
2	20	ದೇವನಹಳ್ಳಿ ಸ.ಪಾ.ಸಾ.ಅ. ಕಛೇರಿ ವ್ಯಾಪ್ತಿಯಲ್ಲಿ ಸೀಜಿಂಗ್ ಯಾರ್ಡ್ ನಿರ್ಮಿಸುವ ಕಾಮಗಾರಿ ಕೆಲಸ.	268.88	4,03,500/-	9 ತಿಂಗಳು
3	21	ನೆಲಮಂಗಲ ಸ.ಪಾ.ಸಾ.ಅ. ಕಛೇರಿ ವ್ಯಾಪ್ತಿಯಲ್ಲಿ ಸ್ವಯಂಚಾಲಿತ ಪರೀಕ್ಷಾ ಪಥವನ್ನು ನಿರ್ಮಿಸುವ ಕಾಮಗಾರಿ.	492.00	7,38,000/-	11 ತಿಂಗಳು

ಹೆಚ್ಚಿನ ವಿವರಗಳನ್ನು ದಿನಾಂಕ 10.03.2025 ನಂತರ http://kppp.karnataka.gov.in ವೆಬ್‌ಸೈಟ್‌ಗೆ ಲಾಗ್ ಆನ್ ಮಾಡಿ ವಿವರಗಳನ್ನು ಪಡೆದುಕೊಳ್ಳಬಹುದು.

ಸಹಿ/–
ಕಾರ್ಯನಿರ್ವಾಹಕ ಅಭಿಯಂತರರು,
ಕ.ರಾ.ರ.ಸಾ.ನಿ, ಕಾಮಗಾರಿ ವಿಭಾಗ, ಬೆಂಗಳೂರು

ವಾಸಾಸಂಇ/ವಾಪ್ರ/ಜೆಎ/5509/2024–25

ಕರ್ನಾಟಕ ಗೃಹ ಮಂಡಳಿ

ಕರ್ನಾಟಕ ಗೃಹ ಮಂಡಳಿ – ಸಮುದಾಯದ ನಿರ್ಮಾಣದತ್ತ

ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009.

ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಮೈಸೂರು/2024–25 ದಿನಾಂಕ: 06–03–2025

ಬೇಡಿಕೆ ಸಮೀಕ್ಷೆ ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ಮೈಸೂರು ಜಿಲ್ಲೆ ಮೈಸೂರು ತಾಲ್ಲೂಕು ಜಯಪುರ ಹೋಬಳಿ ಕೆಂಚಲಗೂಡು ಗ್ರಾಮದಲ್ಲಿ ಈಗಾಗಲೆ ಅಭಿವೃದ್ಧಿಪಡಿಸಿರುವ ಬಡಾವಣೆಯಲ್ಲಿ ಗುಂಪು ಮನೆಗಳಿಗಾಗಿ ಕಾಯ್ದಿರಿಸಿರುವ ಜಾಗದಲ್ಲಿ ನಿರ್ಮಿಸಲು ಉದ್ದೇಶಿಸಿರುವ "ಹೆರಿಟೇಜ್ ಹೈಟ್ಸ್" ವಸತಿ ಸಮುಚ್ಛಯದಲ್ಲಿ ಎಲ್ಲಾ ಸೌಲಭ್ಯಗಳನ್ನು ಹೊಂದಿರುವ 2BHK ಮತ್ತು 3BHK ಫ್ಲಾಟ್‌ಗಳ ಹಂಚಿಕೆಗಾಗಿ ಬೇಡಿಕೆ ಸಮೀಕ್ಷೆಯಡಿ ಸಾರ್ವಜನಿಕರಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿ ಇರುವ ಸಾರ್ವಜನಿಕರು ದಿನಾಂಕ:07–03–2025 ರಿಂದ ಆರಂಭಿಕ ಠೇವಣಿಯನ್ನು e-payment ಮೂಲಕ ಪಾವತಿಸಿ ಆನ್‌ಲೈನ್ ಅರ್ಜಿ (Online Application) ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:02–04–2025.

ನೊಂದಣಿ ಶುಲ್ಕ/ಆರಂಭಿಕ ಠೇವಣಿ ವಿವರ ಕೆಳಕಂಡಂತಿದೆ.

ವರ್ಗ	ಉದ್ದೇಶಿತ ಫ್ಲಾಟ್‌ಗಳು	ಫ್ಲಾಟ್‌ನ ವಿಸ್ತೀರ್ಣ (ಅಂದಾಜು ಸೂಪರ್ ಬಿಲ್ಟಪ್ ಏರಿಯಾ)	ನೊಂದಣಿ ಶುಲ್ಕ (ರೂ.ಗಳಲ್ಲಿ)	ಆರಂಭಿಕ ಠೇವಣಿ (ರೂ.ಗಳಲ್ಲಿ)	ಪ್ರತಿ ಫ್ಲಾಟ್‌ನ ತಾತ್ಕಾಲಿಕ ಬೆಲೆ (ರೂ.ಲಕ್ಷಗಳಲ್ಲಿ)	ಫ್ಲಾಟ್‌ನ ತಾತ್ಕಾಲಿಕ ಬೆಲೆ (ಚದುರ ಅಡಿ, ಚದುರ ಮೀಟರ್ ಗಳಲ್ಲಿ)
2 BHK	160	76.90 ಚ.ಮೀ.	1000/–	2,00,000/–	49.46	ಪ್ರತಿ ಚದರ ಮೀಟರ್‌ಗೆ ರೂ. 64,314.80/– (ರೂ. 5975/– ಪ್ರತಿ ಚದರಡಿಗೆ)
3 BHK	32	98.09 ಚ.ಮೀ.	1500/–	3,00,000/–	63.09	

ವಸತಿ ಸಮುಚ್ಚಯದಲ್ಲಿ ಒದಗಿಸಲಾಗುವ ನಾಗರೀಕ ಸೌಲಭ್ಯಗಳು

1. ಕ್ಲಬ್ ಹೌಸ್, ಪಾರ್ಟಿ ಹಾಲ್, ಜಿಮ್, ಲೈಬ್ರರಿ, 2. ಒಳಾಂಗಣ ಕ್ರೀಡೆ ವ್ಯವಸ್ಥೆ/ಕಾರ್ ಪಾರ್ಕಿಂಗ್/ಹೊರಾಂಗಣ ಸೋಲಾರ್ ವ್ಯವಸ್ಥೆ, 3. ಈಜು ಕೊಳ, ಮಕ್ಕಳ ಆಟದ ಮೈದಾನ, ಉದ್ಯಾನವನ, ಕಾರ್ ಪಾರ್ಕಿಂಗ್, 4. ಕುಡಿಯುವ ನೀರಿನ ಸೌಲಭ್ಯ ಮತ್ತು ಮಳೆ ನೀರು ಕೊಯ್ಲು ಅಳವಡಿಕೆ, 24/7 ಭದ್ರತಾ ವ್ಯವಸ್ಥೆ

ನೋಂದಣಿ ಶುಲ್ಕ ಹಾಗೂ ಆರಂಭಿಕ ಠೇವಣಿ ಹಣ e-payment ಮೂಲಕ ಪಾವತಿಸಿ ಆನ್‌ಲೈನ್ ಅರ್ಜಿ ಸಲ್ಲಿಸಲು ಹಾಗೂ ನಿಯಮ ಮತ್ತು ಷರತ್ತುಗಳ ವಿವರಗಳಿಗಾಗಿ ಮಂಡಳಿಯ ವೆಬ್‌ಸೈಟ್ https://www.khb.karnataka.gov.in ಸಂಪರ್ಕಿಸುವುದು. ಹೆಚ್ಚಿನ ಮಾಹಿತಿಗಾಗಿ ಮೈಸೂರು ಜಿಲ್ಲಾ ಯೋಜನಾ ಕಛೇರಿಯ ಸಹಾಯಕ ಕಾರ್ಯಪಾಲಕ ಅಭಿಯಂತರರು, ಮೊಬೈಲ್ ಸಂಖ್ಯೆ: 9845500289, ಕಂದಾಯ ಅಧಿಕಾರಿ ಮೊಬೈಲ್ ಸಂಖ್ಯೆ:9916091128, ಸಹಾಯಕ ಕಂದಾಯ ಅಧಿಕಾರಿ ಮೊಬೈಲ್ ಸಂಖ್ಯೆ:7026164243, ಮತ್ತು ಕಾರ್ಯಪಾಲಕ ಅಭಿಯಂತರರು, ಮೈಸೂರು ಸಮನ್ವಯ ಕಛೇರಿ, ಮೊಬೈಲ್ ಸಂಖ್ಯೆ: 9886344619 ಹಾಗೂ ಕೇಂದ್ರ ಕಛೇರಿ ಹಂಚಿಕೆ ಶಾಖೆಯ ಕಂದಾಯ ಅಧಿಕಾರಿ ರವರ ದೂರವಾಣಿ ಸಂಖ್ಯೆ: 080–22273511 ext.309,310 ಸಂಪರ್ಕಿಸುವುದು.

ಸಹಿ/–
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.

DIPR/CP/5407/Zen/2024-25

ಷೇರುಪೇಟೆ ವಹಿವಾಟು 610



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,337
ಇಂದಿನ ಅಂತ್ಯ	22,544
▲	207
ದಿನದ ಗರಿಷ್ಠ	22,556

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹435
12 ಕ್ಕೆ	₹60
ಮೈಸೂರು	
100ಕ್ಕೆ	₹430

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹466-680
ದ್ವಿತಳಿ (ಬಿ.ವಿ)	₹374-870

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹189
ಆರ್‌ಎಸ್‌ಎಸ್-5	₹183
ಗುಡ್ ಲಾಟ್	₹178

(ಪ್ರತಿ ಕೆ.ಜಿಗೆ)

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹2,400-3,200
ಮಧ್ಯಮ	₹1,600-2,400
ಸಣ್ಣ	₹1,000-1,600

ಸಂಕ್ಷಿಪ್ತ ಸುದ್ದಿ

ಚಿನ್ನದ ದರ ಇಳಿಕೆ

ನವದೆಹಲಿ (ಪಿಟಿಐ): ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ಇಳಿಕೆಯಾಗಿದೆ. ಹಾಗಾಗಿ, ಇಲ್ಲಿನ ಚಿನಿವಾರ ಪೇಟೆಯಲ್ಲೂ ಗುರುವಾರ ನಡೆದ ವಹಿವಾಟಿನಲ್ಲಿ ಚಿನ್ನದ ಧಾರಣೆಯು ಅಲ್ಪ ಪ್ರಮಾಣದಲ್ಲಿ ಇಳಿಕೆಯಾಗಿದೆ. ಬೆಳ್ಳಿ ದರವು ಯಥಾಸ್ಥಿತಿಯಲ್ಲಿದೆ.

ಚಿನ್ನದ ದರವು 10 ಗ್ರಾಂಗೆ (ಶೇ 99.9 ಪರಿಶುದ್ಧತೆ) ₹200 ಇಳಿಕೆಯಾಗಿ, ₹89,100ರಂತೆ ಮಾರಾಟವಾಗಿದೆ. ಆಭರಣ ಚಿನ್ನವು (ಶೇ 99.5 ಪರಿಶುದ್ಧತೆ) ಇಷ್ಟೇ ಪ್ರಮಾಣದಲ್ಲಿ ಕಡಿಮೆಯಾಗಿ, ₹88,700 ಆಗಿದೆ. ಬೆಳ್ಳಿ ದರವು ಯಥಾಸ್ಥಿತಿಯಲ್ಲಿದ್ದು, ಕೆ.ಜಿ ಧಾರಣೆ ₹99 ಸಾವಿರ ಇದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಸೆನ್ಸೆಕ್ಸ್, ನಿಫ್ಟಿ ಏರಿಕೆ

ಮುಂಬೈ (ಪಿಟಿಐ): ಸತತ ಎರಡನೇ ದಿನವಾದ ಗುರುವಾರವೂ ದೇಶದ ಷೇರುಪೇಟೆಯಲ್ಲಿ ಗೂಳಿ ಓಟ ಮುಂದುವರಿಯಿತು. ರಿಲಯನ್ಸ್ ಇಂಡಸ್ಟ್ರೀಸ್ ಷೇರುಗಳ ಖರೀದಿ ಹೆಚ್ಚಳ ಹಾಗೂ ಕಚ್ಚಾ ತೈಲದ ಬೆಲೆಯಲ್ಲಿ ಇಳಿಕೆಯಾಗಿರುವುದು ಮಾರುಕಟ್ಟೆಯಲ್ಲಿ ಸಕಾರಾತ್ಮಕ ವಹಿವಾಟಿಗೆ ನೆರವಾಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 610 ಅಂಶ ಏರಿಕೆ ಕಂಡು, 74,340 ಅಂಶಗಳಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 207 ಅಂಶ ಹೆಚ್ಚಳ ಕಂಡು 22,544 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಏಷ್ಯನ್ ಪೇಂಟ್ಸ್, ಎನ್‌ಟಿಪಿಸಿ, ರಿಲಯನ್ಸ್ ಇಂಡಸ್ಟ್ರೀಸ್, ಟಾಟಾ ಸ್ಟೀಲ್, ಬಜಾಜ್ ಫಿನ್‌ಸರ್ವ್, ಎಚ್‌ಯುಎಲ್, ಸನ್ ಫಾರ್ಮಾ, ಅದಾನಿ ಪೋರ್ಟ್ಸ್, ಎಕ್ಸಿಸ್ ಬ್ಯಾಂಕ್, ಟಿಸಿಎಸ್, ಟೈಟನ್, ಬಜಾಜ್ ಫೈನಾನ್ಸ್ ಷೇರಿನ ಮೌಲ್ಯದಲ್ಲಿ ಹೆಚ್ಚಳವಾಗಿದೆ.

ಕಚ್ಚಾ ತೈಲ ದರ 6 ತಿಂಗಳ ಕನಿಷ್ಠ

ನವದೆಹಲಿ (ಪಿಟಿಐ): ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ದರವು ಗುರುವಾರ ಆರು ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿದಿದೆ.

ಪ್ರತೀ ಬ್ಯಾರೆಲ್‌ಗೆ 69.66 ಡಾಲರ್ ಆಗಿದೆ. ಪೆಟ್ರೋಲಿಯಂ ಉತ್ಪನ್ನಗಳನ್ನು ರಫ್ತು ಮಾಡುವ ದೇಶಗಳ ಸಂಘಟನೆಯು (ಒಪೆಕ್) ಏಪ್ರಿಲ್‌ನಿಂದ ತೈಲ ಉತ್ಪಾದನೆ ಹೆಚ್ಚಿಸುವುದಾಗಿ ಘೋಷಿಸಿದೆ. ಇದರಿಂದ ಮಾರುಕಟ್ಟೆಗೆ ಹೆಚ್ಚಿನ ಪ್ರಮಾಣದಲ್ಲಿ ತೈಲ ಪೂರೈಕೆಯಾಗುವ ನಿರೀಕ್ಷೆಯಿದ್ದು, ಬೆಲೆ ಇಳಿಕೆಯಾಗಿದೆ. ಇದು ಭಾರತೀಯ ತೈಲ ಸಂಸ್ಕರಣಾಗಾರರ ಲಾಭವನ್ನು ಹೆಚ್ಚಿಸಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮತ್ತೊಂದೆಡೆ ದರ ಇಳಿಕೆಯಿಂದಾಗಿ ತೈಲ ಉತ್ಪಾದನೆ ಕಂಪನಿಗಳ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ. ಡಾಲರ್ ಮೌಲ್ಯ ಇಳಿಕೆ ಹಾಗೂ ಚೀನಾದ ತಯಾರಿಕಾ ವಲಯದ ಪ್ರಗತಿಯು ತೈಲ ದರ ಇಳಿಕೆಗೆ ಸಹಕಾರಿಯಾಗಿದೆ ಎಂದು ಹೇಳಿದ್ದಾರೆ.

ಮಹಿಳಾ ಉದ್ಯೋಗಿಗಳಿಗೆ ಮುಟ್ಟಿನ ರಜೆ ಘೋಷಿಸಿದ ಎಲ್ ಆ್ಯಂಡ್ ಟಿ ಕಂಪನಿ

ಮುಂಬೈ (ಪಿಟಿಐ): ಕಾರ್ಪೊರೇಟ್ ವಲಯದಲ್ಲಿ ಮೊದಲ ಬಾರಿಗೆ ಎಲ್ ಆ್ಯಂಡ್ ಟಿ ಕಂಪನಿಯು ತನ್ನ ಮಹಿಳಾ ಉದ್ಯೋಗಿಗಳಿಗೆ ವೇತನಸಹಿತ ಒಂದು ದಿನದ ಮುಟ್ಟಿನ ರಜೆ ಘೋಷಿಸಿದೆ. ಇದರಿಂದ ಕಂಪನಿಯ 5 ಸಾವಿರಕ್ಕೂ ಹೆಚ್ಚು ಮಹಿಳೆಯರಿಗೆ ಅನುಕೂಲವಾಗಲಿದೆ ಎಂದು ಗುರುವಾರ ಮೂಲಗಳು ತಿಳಿಸಿವೆ.

ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಕಂಪನಿಯ ಮುಖ್ಯಸ್ಥ ಹಾಗೂ ವ್ಯವಸ್ಥಾಪಕ ನಿರ್ದೇಶಕ ಎಸ್.ಎನ್. ಸುಬ್ರಹ್ಮಣ್ಯನ್ ಅವರು, ಈ ಘೋಷಣೆ ಮಾಡಿದ್ದಾರೆ ಎಂದು ತಿಳಿಸಿವೆ. ಈ ರಜೆಯನ್ನು ಹೇಗೆ ಕಾರ್ಯಗತಗೊಳಿಸಬೇಕು ಎಂಬ ಬಗ್ಗೆ ಸ್ಪಷ್ಟ ವಿವರವನ್ನು ಕಂಪನಿಯ ಅಧಿಕಾರಿಗಳು ಶೀಘ್ರವೇ ರೂಪಿಸಲಿದ್ದಾರೆ ಎಂದು ಹೇಳಲಾಗಿದೆ. ರಜೆ ಸೌಲಭ್ಯವು ಎಲ್ ಆ್ಯಂಡ್ ಟಿ ಕಂಪನಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಮಹಿಳಾ ಉದ್ಯೋಗಿಗಳಿಗಷ್ಟೇ ಅನ್ವಯಿಸಲಿದೆ. ಇದರ ಅಂಗಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವವರಿಗೆ ಅನ್ವಯವಾಗುವುದಿಲ್ಲ ಎಂದು ಹೇಳಿವೆ.

ಎಲ್ ಆ್ಯಂಡ್ ಟಿ ಕಂಪನಿಯಲ್ಲಿ ಒಟ್ಟು 60 ಸಾವಿರ ಉದ್ಯೋಗಿಗಳಿದ್ದಾರೆ. ಈ ಪೈಕಿ ಮಹಿಳಾ ಉದ್ಯೋಗಿಗಳ ಸಂಖ್ಯೆ ಶೇ 5ರಷ್ಟಿದೆ.

ಲಂಡನ್: ಖಾಲಿಸ್ತಾನ ಪರ ಗುಂಪಿನಲ್ಲಿದ್ದವನಿಂದ ಕೃತ್ಯ

ಸಚಿವ ಜೈಶಂಕರ್ ಬೆಂಗಾವಲು ವಾಹನದತ್ತ ನುಗ್ಗಿದ ಉಗ್ರ

ಲಂಡನ್/ನವದೆಹಲಿ (ಪಿಟಿಐ): ಇಲ್ಲಿನ ಚಾಥಮ್ ಹೌಸ್ ಹೊರಗೆ ಪ್ರತಿಭಟಿಸುತ್ತಿದ್ದ ಖಾಲಿಸ್ತಾನ ಪರ ಗುಂಪಿನಲ್ಲಿದ್ದ ವ್ಯಕ್ತಿಯೊಬ್ಬ ಭದ್ರತಾ ವ್ಯವಸ್ಥೆ ಉಲ್ಲಂಘಿಸಿ, ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರ ಬೆಂಗಾವಲು ವಾಹನಗಳತ್ತ ನುಗ್ಗಲು ಬುಧವಾರ ರಾತ್ರಿ ಯತ್ನಿಸಿದ್ದಾನೆ.

ಆ ವ್ಯಕ್ತಿಯನ್ನು ಮೆಟ್ರೊಪಾಲಿಟನ್ ಪೊಲೀಸರು ತಕ್ಷಣವೇ ಬದಿಗೆ ಸರಿಸಿದ್ದಾರೆ. ಘಟನೆಗೆ ಸಂಬಂಧಿಸಿ ಈವರೆಗೆ ಯಾರನ್ನೂ ಬಂಧಿಸಿಲ್ಲ ಎಂದು ಮೂಲಗಳು ತಿಳಿಸಿವೆ.

'ಪ್ರತ್ಯೇಕತವಾದಿ ಮತ್ತು ಭಯೋತ್ಪಾದಕ'ರನ್ನು ಒಳಗೊಂಡ ಈ ಸಣ್ಣ ಗುಂಪಿನ ಕೃತ್ಯವನ್ನು ಭಾರತ ತೀವ್ರವಾಗಿ ಖಂಡಿಸಿದೆ.

'ಚಾಥಮ್ ಹೌಸ್', ಬ್ರಿಟನ್‌ನ ಚಿಂತಕರ ಚಾವಡಿಯಾಗಿದ್ದು, ಇಲ್ಲಿ ಅಂತರರಾಷ್ಟ್ರೀಯ ವ್ಯವಹಾರಗಳ ಕುರಿತು ಚರ್ಚೆ, ಸಂವಾದ ಹಮ್ಮಿಕೊಳ್ಳಲಾಗುತ್ತದೆ.

'ಚಾಥಮ್ ಹೌಸ್'ನಲ್ಲಿ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸಚಿವ ಜೈಶಂಕರ್ ಅವರು, ಸಂಸ್ಥೆಯಿಂದ ನಿರ್ಗಮಿಸುತ್ತಿದ್ದರು. ಇದೇ ವೇಳೆ, ಗುಂಪೊಂದು ಖಾಲಿಸ್ತಾನ ಪರ ಘೋಷಣೆಗಳನ್ನು ಕೂಗುತ್ತಾ, 'ಚಾಥಮ್ ಹೌಸ್' ಹೊರಗಡೆ ಪ್ರತಿಭಟಿಸುತ್ತಿತ್ತು.

ಗುಂಪಿನಲ್ಲಿದ್ದವ್ಯಕ್ತಿಯು, ತಡೆಗೋಡೆಯನ್ನು ಏರಿ, ಮುನ್ನುಗ್ಗಿದ್ದಲ್ಲದೇ, ಸಚಿವರಿದ್ದ ಕಾರಿಗೆ ಅಡ್ಡಿಪಡಿಸಲು ಹಾಗೂ ಕಾರಿಗೆ ಅಳವಡಿಸಿದ್ದ ಭಾರತದ ತ್ರಿವರ್ಣ ಧ್ವಜವನ್ನು ಎಳೆಯಲು ಯತ್ನಿಸಿದ್ದಾನೆ.

ಭದ್ರತೆಯನ್ನು ಉಲ್ಲಂಘಿಸಿದ ಘಟನೆಯನ್ನು ಖಂಡಿಸಿರುವ ವಿದೇಶಾಂಗ ಸಚಿವಾಲಯ, 'ಬ್ರಿಟನ್ ಸರ್ಕಾರ ರಾಜತಾಂತ್ರಿಕ ಕರ್ತವ್ಯಗಳನ್ನು ಪಾಲನೆ ಮಾಡಬೇಕು' ಎಂದು ಆಗ್ರಹಿಸಿದೆ.

ನವದೆಹಲಿಯಲ್ಲಿ ಪ್ರತಿಕ್ರಿಯಿಸಿರುವ ಸಚಿವಾಲಯ ವಕ್ತಾರರಣಧೀರ ಜೈಸ್ವಾಲ್, 'ವಿದೇಶಾಂಗ ಸಚಿವರು ಬ್ರಿಟನ್‌ಗೆ ಭೇಟಿ ನೀಡಿದ ವೇಳೆ ಉಂಟಾಗಿರುವ ಭದ್ರತಾ ಲೋಪಕ್ಕೆ ಸಂಬಂಧಿಸಿದ ವಿಡಿಯೊ ದೃಶ್ಯಗಳನ್ನು ನಾವು ನೋಡಿದ್ದೇವೆ' ಎಂದು ಹೇಳಿದ್ದಾರೆ.

'ಪ್ರತ್ಯೇಕತಾವಾದಿಗಳು ಮತ್ತು ಉಗ್ರರ ಸಣ್ಣ ಗುಂಪು ನಡೆಸುತ್ತಿರುವ ಪ್ರಚೋದನಕಾರಿ ಚಟುವಟಿಕೆಗಳನ್ನು ಭಾರತ ಖಂಡಿಸುತ್ತದೆ. ಇಂತಹ ವಿಚ್ಛಿದ್ರಕಾರಿ ಶಕ್ತಿಗಳು ಪ್ರಜಾತಾಂತ್ರಿಕ ಸ್ವಾತಂತ್ರ್ಯಗಳನ್ನು ದುರ್ಬಳಕೆ ಮಾಡಿಕೊಳ್ಳುವುದನ್ನು ಖಂಡಿಸುತ್ತೇವೆ' ಎಂದೂ ಜೈಸ್ವಾಲ್ ಹೇಳಿದ್ದಾರೆ.

ಖಂಡನೆ: ಈ ಘಟನೆಯನ್ನು ಭಾರತೀಯ ಬ್ರಿಟಿಷ್ ಸಮುದಾಯಗಳ ಸಂಘಟನೆ 'ಇನ್‌ಸೈಟ್ ಯುಕೆ' ಖಂಡಿಸಿದೆ. ವ್ಯಕ್ತಿಯೊಬ್ಬ ಭದ್ರತೆ ಉಲ್ಲಂಘಿಸಿ ಸಚಿವ ಜೈಶಂಕರ್ ಅವರ ಕಾರಿನತ್ತ ನುಗ್ಗಲು ಯತ್ನಿಸಿದ ದೃಶ್ಯಗಳಿರುವ ವಿಡಿಯೊವನ್ನು ಕೂಡ ಸಂಘಟನೆ ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದೆ.

ಭದ್ರತೆ ಉಲ್ಲಂಘನೆ ಒಪ್ಪಲಾಗದು: ಬ್ರಿಟನ್

ಲಂಡನ್: ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು 'ಚಾಥಮ್ ಹೌಸ್'ನಲ್ಲಿ ಕಾರ್ಯಕ್ರಮ ಮುಗಿಸಿ ತೆರಳುವಾಗ, ಖಾಲಿಸ್ತಾನ ಪರ ಉಗ್ರನೊಬ್ಬ ಅವರ ಬೆಂಗಾವಲು ವಾಹನಗಳತ್ತ ನುಗ್ಗಲು ಯತ್ನಿಸಿದ ವೇಳೆ ಆಗಿರುವ ಭದ್ರತಾ ಉಲ್ಲಂಘನೆಯನ್ನು ಬ್ರಿಟನ್ ಗುರುವಾರ ಬಲವಾಗಿ ಖಂಡಿಸಿದೆ.

'ಸಾರ್ವಜನಿಕ ಕಾರ್ಯಕ್ರಮಗಳಿಗೆ ಇಂತಹ ಪ್ರಯತ್ನಗಳ ಮೂಲಕ ಬೆದರಿಕೆ ಒಡ್ಡುವುದು ಅಥವಾ ಅಡ್ಡಿಪಡಿಸುವುದನ್ನು ಒಪ್ಪಲು ಸಾಧ್ಯವೇ ಇಲ್ಲ' ಎಂದು ವಿದೇಶ, ಕಾಮನ್‌ವೆಲ್ತ್ ಹಾಗೂ ಅಭಿವೃದ್ಧಿ ಕಚೇರಿ (ಎಫ್‌ಸಿಡಿಒ) ವಕ್ತಾರ ಹೇಳಿದ್ದಾರೆ.

ಸಿ.ಎಂ ದಾಖಲೆ ಬಜೆಟ್ ಇಂದು

ಒಂದನೇ ಪುಟದಿಂದ...

ಏರಿಕೆಯಾಗುತ್ತಲೇ ಇರುವ ಬದ್ಧ ವೆಚ್ಚ ಮತ್ತು ಚಾಲ್ತಿಯಲ್ಲಿರುವ ಯೋಜನೆಗಳಿಗೆ ಅನುದಾನ ಒದಗಿಸುವ ಜೊತೆಗೆ, ಹೊಸ ಘೋಷಣೆಗಳಿಗೆ ಹಣ ಹೊಂದಿಸಿ ಜನ ಮೆಚ್ಚುವ ಆಯವ್ಯಯವೆಂದು ಬಣ್ಣಿಸಿಕೊಳ್ಳುವ ಸವಾಲು ಮುಖ್ಯಮಂತ್ರಿಯವರ ಮುಂದಿದೆ. ಬಡವರು, ನಿರ್ಗತಿಕರು, ಹಿಂದುಳಿದವರು, ರೈತರ ಹೀಗೆ ವಿವಿಧ ವರ್ಗಗಳ ಉದ್ಧಾರ, ಕೈಗಾರಿಕೆಯೂ ಸೇರಿದಂತೆ ನಾನಾ ವಲಯಗಳ ಅಭಿವೃದ್ಧಿ, ಬೆಂಗಳೂರು ಅಭಿವೃದ್ಧಿಗೆ ಉತ್ತೇಜನ, ನೀರಾವರಿ ಯೋಜನೆಗಳಿಗೆ ಹಣ ನೀಡಿಕೆ ಘೋಷಣೆಯ ನಿರೀಕ್ಷೆಗಳಿವೆ.

ಬಹುತೇಕ ಸಚಿವರು ತಮ್ಮ ಇಲಾಖೆಗಳಿಗೆ ಹೆಚ್ಚು ಅನುದಾನದ ಜೊತೆಗೆ ಹೊಸ ಹೊಸ ಯೋಜನೆಗಳ ಪಟ್ಟಿಯನ್ನು ಬಜೆಟ್ ಪೂರ್ವಭಾವಿ ಸಭೆಗಳಲ್ಲಿ ಮುಖ್ಯಮಂತ್ರಿಯ ಮುಂದಿಟ್ಟಿದ್ದಾರೆ. ಜೊತೆಗೆ, ಕ್ಷೇತ್ರ ಅಭಿವೃದ್ಧಿಗಾಗಿ ಶಾಸಕರು ಪಕ್ಷಾತೀತವಾಗಿ ಅನುದಾನದ ಬೇಡಿಕೆ ಇಟ್ಟಿದ್ದಾರೆ. ಶಾಸಕರ ಬೇಡಿಕೆಯನ್ನು ಗಂಭೀರವಾಗಿ ಪರಿಗಣಿಸಿರುವ ಮುಖ್ಯಮಂತ್ರಿ, ವಿಶೇಷ ಅನುದಾನ ಘೋಷಿಸುವ ಬಗ್ಗೆಯೂ ಚಿಂತನೆ ನಡೆಸಿದ್ದಾರೆ ಎನ್ನಲಾಗಿದೆ.

'ಕಳೆದ ಕೆಲವು ದಿನಗಳಿಂದ ಸಂಪುಟದ ಸಚಿವರು, ವಿವಿಧ ಇಲಾಖೆಯ ಹಿರಿಯ ಅಧಿಕಾರಿಗಳು, ರೈತ, ಶೋಷಿತ, ಅಲ್ಪಸಂಖ್ಯಾತ, ಹಿಂದುಳಿದ ವರ್ಗಗಳ ಸಂಘಟನೆಗಳ ಮುಖಂಡರು ಹಾಗೂ ವಿವಿಧ ಧರ್ಮಗಳ ಗುರುಗಳೊಂದಿಗೆ ಸಭೆ ನಡೆಸಿ, ಪಕ್ಷಾತೀತವಾಗಿ ಸಮಾಜದ ಎಲ್ಲ ಜಾತಿ, ಜನಾಂಗ, ವರ್ಗದ ಜನರ ಆಶೋತ್ತರಗಳನ್ನು ಆಲಿಸಿ, ಅವುಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುವ ಪ್ರಯತ್ನವನ್ನು ಪ್ರಸಕ್ತ ಸಾಲಿನ ಬಜೆಟ್ ಮೂಲಕ ಮಾಡಿದ್ದೇನೆ' ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

'ಪಿಒಕೆ ಮರಳಿದಾಗ ಕಾಶ್ಮೀರ ವಿವಾದಕ್ಕೆ ತೆರೆ'

ಲಂಡನ್ (ಪಿಟಿಐ):'ಪಾಕಿಸ್ತಾನವು ಕಾಶ್ಮೀರದ ಒಂದು ಭಾಗವನ್ನು ಆಕ್ರಮಿಸಿಕೊಂಡಿದೆ. ಈ ಪ್ರದೇಶವನ್ನು ಅದು ಭಾರತಕ್ಕೆ ಮರಳಿಸಿದ ನಂತರ ಕಾಶ್ಮೀರ ವಿವಾದ ಬಗೆಹರಿಯಲಿದೆ' ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಹೇಳಿದ್ದಾರೆ.

ಲಂಡನ್‌ನ 'ಚಾಥಮ್ ಹೌಸ್'ನಲ್ಲಿ ನಡೆದ ಸಂವಾದದಲ್ಲಿ ಜೈಶಂಕರ್ ಈ ಮಾತು ಹೇಳಿದ್ದಾರೆ.

'ಜೈಶಂಕರ್ ಅವರ ಹೇಳಿಕೆ ಆಧಾರ ರಹಿತ' ಎಂದು ಪಾಕಿಸ್ತಾನ ಪ್ರತಿಕ್ರಿಯಿಸಿದೆ.ಸಂವಾದದ ವೇಳೆ, ಕಾಶ್ಮೀರಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಬಗೆಹರಿಸುವ ಕುರಿತಂತೆ ಸಭಿಕರೊಬ್ಬರು ಜೈಶಂಕರ್ ಅವರಿಗೆ ಪ್ರಶ್ನೆ ಕೇಳಿದ್ದಾರೆ. ಇದಕ್ಕೆ ಉತ್ತರಿಸಿದ ಜೈಶಂಕರ್,'ಕಾಶ್ಮೀರಕ್ಕೆ ಸಂಬಂಧಪಟ್ಟಂತೆ ನಾವು ಸಾಕಷ್ಟು ಕ್ರಮ ತೆಗೆದುಕೊಂಡಿದ್ದೇವೆ. ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಉತ್ತಮ ಕಾರ್ಯ ಮಾಡಿದ್ದೇವೆ ಎಂಬುದು ನನ್ನ ಭಾವನೆ' ಎಂದು ಹೇಳಿದ್ದಾರೆ.

'ಕಾಶ್ಮೀರದ ಒಂದು ಭಾಗವನ್ನು ಆಕ್ರಮಿಸಿಕೊಂಡಿರುವ ಪಾಕಿಸ್ತಾನ, ಈ ಪ್ರದೇಶವನ್ನು ಕಾನೂನುಬಾಹಿರವಾಗಿ ತನ್ನ ವಶದಲ್ಲಿಟ್ಟುಕೊಂಡಿದೆ. ಈ ಪ್ರದೇಶ ಮರಳಿ ಭಾರತದ ಸುಪರ್ದಿಗೆ ಬಂದಾಗ ಕಾಶ್ಮೀರದ ಸಮಸ್ಯೆ ಬಗೆಹರಿಯಲಿದೆ' ಎಂದಿದ್ದಾರೆ.

ಬಳ್ಳಾರಿಯಲ್ಲಿ ಗುರುವಾರ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯಿಂದ ಪ್ರತಿಭಟನೆ ನಡೆಯಿತು

'ಒಣಮೆಣಸಿನಕಾಯಿಗೆ ಬೆಂಬಲ ಬೆಲೆ ಘೋಷಿಸಿ'

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಒಣಮೆಣಸಿನಕಾಯಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಭಾಗಿತ್ವದಡಿ ಬೆಂಬಲ ಬೆಲೆ ಘೋಷಿಸಬೇಕು. ಬಳ್ಳಾರಿಯಲ್ಲಿ ಒಣಮೆಣಸಿನಕಾಯಿ ಮಾರುಕಟ್ಟೆ ಸ್ಥಾಪಿಸಬೇಕು ಎಂದು ಆಗ್ರಹಿಸಿ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಸಂಘಟನೆಯ ಸದಸ್ಯರು ನಗರದಲ್ಲಿ ಗುರುವಾರ ಬೃಹತ್ ಪ್ರತಿಭಟನೆ ನಡೆಸಿದರು.

ಇಲ್ಲಿನ ಅವ್ವಮ್ಮನಭಾವಿಯಿಂದ ಪ್ರತಿಭಟನಾ ಮೆರವಣಿಗೆ ಆರಂಭಿಸಿದ ಸದಸ್ಯರು, ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಧರಣಿ ನಡೆಸಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರ ತಕ್ಷಣವೇ ಆಂಧ್ರಪ್ರದೇಶದ ಮಾದರಿಯಲ್ಲಿ ಒಣಮೆಣಸಿನಕಾಯಿ ಖರೀದಿ ಪ್ರಕ್ರಿಯೆ ಆರಂಭಿಸಬೇಕು. ರೈತರ ಹೋರಾಟಕ್ಕೆ ಸ್ಪಂದಿಸಬೇಕು

ಕರೂರು ಮಾಧವ ರೆಡ್ಡಿ, ಅಧ್ಯಕ್ಷ, ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ

ಸಂಘಟನೆಯ ಅಧ್ಯಕ್ಷ ಕರೂರು ಮಾಧವ ರೆಡ್ಡಿ ಮಾತನಾಡಿ, 'ಬಳ್ಳಾರಿ ಸೇರಿ 10 ಜಿಲ್ಲೆಗಳಲ್ಲಿ ಮೆಣಸಿನಕಾಯಿ ಬೆಳೆಯಲಾಗುತ್ತಿದೆ. ಬಳ್ಳಾರಿ ಒಂದರಲ್ಲೇ ಒಂದೂವರೆ ಲಕ್ಷ ಟನ್‌ಗೂ ಹೆಚ್ಚು ಉತ್ಪಾದನೆ ಆಗುತ್ತದೆ. ಬೆಂಬಲ ಬೆಲೆ ನೀಡಲು ಕೋರಿ ಜಿಲ್ಲೆಯ ಐವರು ಶಾಸಕರು ಮತ್ತು ಸಂಸದರಿಗೂ ಮನವಿ ಪತ್ರ ಕೊಟ್ಟಿದ್ದೇವೆ. ಅವರಿಂದ ಭರವಸೆ ಹೊರತುಪಡಿಸಿ ಮತ್ತೇನೂ ಸಿಕ್ಕಿಲ್ಲ. ಎಲ್ಲರೂ ಸೇರಿ, ರೈತರನ್ನು ಬೀದಿಗೆ ತಂದಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಂಘಟನೆಯ ಗೌರವಾಧ್ಯಕ್ಷ ಸಾ. ರಘುನಾಥ ಮಾತನಾಡಿ, 'ಮಾರುಕಟ್ಟೆಯಲ್ಲಿ ಕಾರ್ಪೊರೇಟ್ ದೌರ್ಜನ್ಯ ಸ್ಥಗಿತಗೊಳ್ಳಬೇಕು. ರೈತರು ತಮ್ಮ ಬೆಳೆಗೆ ತಾವೇ ಬೆಲೆ ನಿಗದಿಪಡಿಸುವ ವ್ಯವಸ್ಥೆ ರೂಪಿಸಬೇಕು' ಎಂದು ಆಗ್ರಹಿಸಿದರು.

ಮುಂದುವರಿದ ತೊಗರಿ ಬೆಳೆಗಾರರ ಹೋರಾಟ

ಕಲಬುರಗಿ: ಅತಿವೃಷ್ಟಿ ಹಾಗೂ ನೆಟೆರೋಗದಿಂದ ಹಾನಿಯಾದ ತೊಗರಿ ಬೆಳೆಗೆ ಪರಿಹಾರ ನೀಡುವಂತೆ ಆಗ್ರಹಿಸಿ ನಗರದ ಜಿಲ್ಲಾಧಿಕಾರಿ ಕಚೇರಿ ಮುಂದೆ ಜಿಲ್ಲಾ ರೈತ ಹೋರಾಟ ಸಮಿತಿ ನೇತೃತ್ವದಲ್ಲಿ ನಡೆಯುತ್ತಿರುವ ಅಹೋರಾತ್ರಿ ಪ್ರತಿಭಟನೆ ಗುರುವಾರವೂ ಮುಂದುವರಿಯಿತು.

ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ರೈತರು ಭಜನೆ ಮಾಡುತ್ತ ಬುಧವಾರ ರಾತ್ರಿ ಕಳೆದಿದ್ದರು. ಕಚೇರಿ ಆವರಣ, ಮುಖ್ಯರಸ್ತೆ ಹಾಗೂ ಎತ್ತುಗಳ ಬಳಿ ರೈತರು ಮಲಗಿಕೊಂಡಿದ್ದರು.

ಜಿಲ್ಲಾಧಿಕಾರಿ ಕಚೇರಿಯ ಮುಂಭಾಗದ ರಸ್ತೆಗಳಲ್ಲಿ ಬಂಡಿಗಳನ್ನು ನಿಲ್ಲಿಸಿ, ಎತ್ತುಗಳನ್ನು ಕಟ್ಟಿ ಹಾಕಿದ್ದಾರೆ. ಹೀಗಾಗಿ ಈ ರಸ್ತೆಯಲ್ಲಿ ವಾಹನ ಸಂಚಾರ ಸಂಪೂರ್ಣ ಬಂದ್ ಆಗಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹೊಸತು	30000-38000
ಹಳತು	45200-49200
ಶಿವಮೊಗ್ಗ	
ಬೆಟ್ಟೆ	46410-56599
ಗೊರಬಲು	18199-30129
ರಾಶಿ	34109-51700
ಸರಕು	42159-94100
ಕುಮಟ	
ಚಾಲಿ	33669-37199
ಚಿಪ್ಪು	18099-28869
ಕೋಕ	5100-20789
ಹೊಸಚಾಲಿ	29100-35599
ಸಿದ್ದಾಪುರ	
ಬಿಳಿಗೋಟು	19199-25809
ಚಾಲಿ	32399-35299
ಕೋಕ	11009-24900
ಹೊಸಚಾಲಿ	28769-34639
ಕೆಂಪುಗೋಟು	18699-24700
ರಾಶಿ	42699-49299
ತಟ್ಟಿಬೆಟ್ಟೆ	29899-40099
ಶಿರಸಿ	
ಬೆಟ್ಟೆ	27299-37099
ಬಿಳಿಗೋಟು	14899-29299
ಚಾಲಿ	32189-36969
ಕೆಂಪುಗೋಟು	16099-24699
ರಾಶಿ	40018-45509

ಸೆಮಿಫೈನಲ್ ವೇಳಾಪಟ್ಟಿ: ಮಿಲ್ಲರ್ ಅಸಮಾಧಾನ

ನ್ಯೂಜಿಲೆಂಡ್ ತಂಡದ ವಿಲ್ ಯಂಗ್ ಮತ್ತು ದಕ್ಷಿಣ ಆಫ್ರಿಕಾದ ಡೇವಿಡ್ ಮಿಲ್ಲರ್ –ಪಿಟಿಐ ಚಿತ್ರ

ಲಾಹೋರ್ (ಪಿಟಿಐ): ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ನ್ಯೂಜಿಲೆಂಡ್ ಎದುರು ಅಜೇಯ ಶತಕ ಬಾರಿಸಿದ್ದ ದಕ್ಷಿಣ ಆಫ್ರಿಕಾದ ಡೇವಿಡ್ ಮಿಲ್ಲರ್ ಅವರು ಟೂರ್ನಿಯ ವೇಳಾಪಟ್ಟಿ ಕುರಿತು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಬುಧವಾರ ಇಲ್ಲಿ ನಡೆದ ನಾಲ್ಕರ ಘಟ್ಟದ ಪಂದ್ಯದಲ್ಲಿ ಕಿವೀಸ್ ಬಳಗದ ಎದುರು ತಮ್ಮ ತಂಡ ಸೋತ ನಂತರ ಮಿಲ್ಲರ್ ಸುದ್ದಿಗಾರರೊಂದಿಗೆ ಮಾತನಾಡಿದರು.

ಹೈಬ್ರಿಡ್ ಮಾದರಿಯಲ್ಲಿ ಟೂರ್ನಿ ನಡೆಯುತ್ತಿದೆ. ಆದ್ದರಿಂದ ಭಾರತ ತಂಡವು ಆಡುವ ಸೆಮಿಫೈನಲ್ ದುಬೈನಲ್ಲಿ ನಿಗದಿಯಾಗಿತ್ತು. ಎ ಗುಂಪಿನ ಕೊನೆಯ ಪಂದ್ಯದಲ್ಲಿ ಭಾರತ ಮತ್ತು ನ್ಯೂಜಿಲೆಂಡ್ ಆಡಿದ್ದವು. ಅದರಲ್ಲಿ ಗೆದ್ದವರು ಎ ಗುಂಪಿನಲ್ಲಿ ಅಗ್ರಸ್ಥಾನ ಪಡೆಯಬೇಕಿತ್ತು. ಬಿ ಗುಂಪಿನಲ್ಲಿ ದಕ್ಷಿಣ ಆಫ್ರಿಕಾ ಮತ್ತು ಆಸ್ಟ್ರೇಲಿಯಾ ಕ್ರಮವಾಗಿ ಮೊದಲ ಹಾಗೂ ಎರಡನೇ ಸ್ಥಾನ ಪಡೆದಿದ್ದವು.

ಎ ಗುಂಪಿನಲ್ಲಿ ಅಗ್ರಸ್ಥಾನ ಪಡೆದ ತಂಡವು ಆಸ್ಟ್ರೇಲಿಯಾ ಮತ್ತು ಎರಡನೇ ಸ್ಥಾನ ಪಡೆದ ತಂಡವು ದಕ್ಷಿಣ ಆಫ್ರಿಕಾವನ್ನು ಎದುರಿಸಬೇಕಿತ್ತು. ಅದರಿಂದಾಗಿ ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ತಂಡಗಳೆರಡನ್ನೂ ಭಾರತ –ನ್ಯೂಜಿಲೆಂಡ್ ಪಂದ್ಯದ ದಿನವೇ ದುಬೈಗೆ ಕರೆತರಲಾಗಿತ್ತು. ಎ ಗುಂಪಿನಲ್ಲಿ ಭಾರತ ಅಗ್ರಸ್ಥಾನ ಪಡೆದಿದ್ದರಿಂದ ಆಸ್ಟ್ರೇಲಿಯಾ ಅಲ್ಲಿಯೇ ಉಳಿದಿತ್ತು. ದಕ್ಷಿಣ ಆಫ್ರಿಕಾ ಮತ್ತು ನ್ಯೂಜಿಲೆಂಡ್ ಲಾಹೋರ್‌ನಲ್ಲಿ ಸೆಮಿಫೈನಲ್ ಆಡಲು ತೆರಳಿದವು. ಅದೇ ರಾತ್ರಿ ಮರಳಿ ಲಾಹೋರ್‌ಗೆ ಪ್ರಯಾಣಿಸಿದವು.

‘1 ಗಂಟೆ 40 ನಿಮಿಷಗಳ ಪ್ರಯಾಣವಷ್ಟೇ. ಆದರೆ ಅದನ್ನು ನಿರ್ವಹಿಸಬೇಕಲ್ಲವೇ? ಪಂದ್ಯ ಮುಗಿದ ಮರುದಿನ ಬೆಳಗಿನ ಜಾವ ಪ್ರಯಾಣಿಸಬೇಕು. ಪಂದ್ಯ ಮುಗಿದ ನಂತರ ಮರಳಿ ಪ್ರಯಾಣ. ಒಟ್ಟಾರೆ ಐದುತಾಸು ಪ್ರಯಾಣದ ನಂತರ ಸುಧಾರಿಸಿಕೊಳ್ಳಲು ಸಾಕಷ್ಟು ಸಮಯ ಇರಬೇಕಿತ್ತು. ಆದರೆ ಪರಿಸ್ಥಿತಿ ಹಾಗಿರಲಿಲ್ಲ’ ಎಂದು ಮಿಲ್ಲರ್ ಇಎಸ್‌ಪಿಎನ್ ಕ್ರಿಕ್‌ಇನ್ಫೋ ವೆಬ್‌ಸೈಟ್‌ಗೆ ಹೇಳಿಕೆ ನೀಡಿದ್ದಾರೆ.

ಭಾರತವು ದುಬೈನಲ್ಲಿ ಎಲ್ಲ ಪಂದ್ಯಗಳನ್ನು ಆಡುತ್ತಿದೆ. ಇದರಿಂದಾಗಿ ಭಾರತ ತಂಡಕ್ಕೆ ಹೆಚ್ಚು ಅನುಕೂಲವಾಗಿದೆ ಎಂದು ದಕ್ಷಿಣ ಆಫ್ರಿಕಾದ ಬ್ಯಾಟರ್ ವ್ಯಾನ್ ಡೆರ್ ಡಸೆ ಈಚೆಗೆ ಹೇಳಿದ್ದರು.

ಈ ಕುರಿತು ಪ್ರತಿಕ್ರಿಯಿಸಿದ ಮಿಲ್ಲರ್, ‘ಭಾರತ ಮತ್ತು ನ್ಯೂಜಿಲೆಂಡ್ ಎರಡೂ ಉತ್ತಮ ತಂಡಗಳು. ಹಲವು ವರ್ಷಗಳಿಂದ ಭಾರತ ತಂಡವು ತನ್ನ ಸಾಮರ್ಥ್ಯ ಏನು ಎಂಬುದನ್ನು ಜಗತ್ತಿಗೆ ತೋರಿಸಿದೆ. ನ್ಯೂಜಿಲೆಂಡ್ ತಂಡದ ಆಟಗಾರರು ಕೂಡ ಉತ್ತಮವಾಗಿದ್ದಾರೆ. ಒಂದು ರೋಚಕ ಪಂದ್ಯ ನಡೆಯುವುದು ಖಚಿತ’ ಎಂದರು.

ನ್ಯೂಜಿಲೆಂಡ್ ತಂಡವು ಟ್ರೋಫಿ ಜಯಿಸಬೇಕೆಂಬ ಇಂಗಿತವನ್ನೂ ಅವರು ವ್ಯಕ್ತಪಡಿಸಿದರು.

ಫೈನಲ್: ರೈಫೆಲ್, ಇಲಿಂಗ್‌ವರ್ಥ್ ಅಂಪೈರ್

ದುಬೈ (ಪಿಟಿಐ): ಆಸ್ಟ್ರೇಲಿಯಾದ ಪಾಲ್ ರೈಫೆಲ್ ಮತ್ತು ಇಂಗ್ಲೆಂಡ್‌ನ ರಿಚರ್ಡ್ ಇಲಿಂಗ್‌ವರ್ತ್ ಅವರು ಭಾನುವಾರ ನಡೆಯಲಿರುವ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಅಂಪೈರ್‌ಗಳಾಗಿ ಕಾರ್ಯನಿರ್ವಹಿಸುವರು.

ಪಾಲ್ ರೈಫೆಲ್

ಆಸ್ಟ್ರೇಲಿಯಾ ತಂಡದಲ್ಲಿ ವೇಗದ ಬೌಲರ್ ಆಗಿ ಆಡಿದವರು ರೈಫೆಲ್. ಅವರು ಟೆಸ್ಟ್ ಮತ್ತು ಏಕದಿನ ಕ್ರಿಕೆಟ್‌ನಲ್ಲಿ 200ಕ್ಕೂ ಹೆಚ್ಚು ವಿಕೆಟ್‌ಗಳನ್ನು ಗಳಿಸಿದ್ದಾರೆ.

58 ವರ್ಷದ ರೈಫೆಲ್ ಈಚೆಗೆ ಲಾಹೋರ್‌ನಲ್ಲಿ ನಡೆದ ಸೆಮಿಫೈನಲ್‌ನಲ್ಲಿ ಕಾರ್ಯನಿರ್ವಹಿಸಿದ್ದರು.

61 ವರ್ಷದ ಇಲಿಂಗ್‌ವರ್ಥ್ ಅವರು ಈಚೆಗೆ ದುಬೈನಲ್ಲಿ ನಡೆದಿದ್ದ ಭಾರತ–ಆಸ್ಟ್ರೇಲಿಯಾ ನಡುವಣ ಸೆಮಿಫೈನಲ್‌ನಲ್ಲಿ ಅಂಪೈರ್ ಆಗಿದ್ದರು. ಕೆಲವು ವರ್ಷಗಳ ಹಿಂದೆ ಅವರು ಇಂಗ್ಲೆಂಡ್ ತಂಡದಲ್ಲಿ ಎಡಗೈ ಸ್ಪಿನ್ನರ್ ಆಗಿ ಆಡಿದ್ದರು. 2023ರ ಏಕದಿನ ವಿಶ್ವಕಪ್ ಮತ್ತು 2024ರ ಟಿ20 ವಿಶ್ವಕಪ್ ಟೂರ್ನಿಗಳ ಫೈನಲ್‌ನಲ್ಲಿಯೂ ಅವರು ಕಾರ್ಯ ನಿರ್ವಹಿಸಿದ್ದರು. ಮೂರನೇ ಅಂಪೈರ್ ಆಗಿ ಜೋಯಲ್ ವಿಲ್ಸನ್, ನಾಲ್ಕನೇ ಅಂಪೈರ್ ಸ್ಥಾನದಲ್ಲಿ ಕುಮಾರ ಧರ್ಮಸೇನಾ ಮತ್ತು ಪಂದ್ಯ ರೆಫರಿಯಾಗಿ ರಂಜನ್ ಮದುಗಲೆ ಕಾರ್ಯನಿರ್ವಹಿಸುವರು.

ನ್ಯೂಜಿಲೆಂಡ್ ಬ್ಯಾಟರ್ ಕೇನ್ ವಿಲಿಯಮ್ಸನ್

ದುಬೈನಲ್ಲಿ ಭಾರತಕ್ಕೆ ಸ್ಪಷ್ಟತೆ ಇದೆ

ರಚಿನ್ ರವೀಂದ್ರ (ಎಡ) ಮತ್ತು ಕೇನ್ ವಿಲಿಯಮ್ಸನ್ –ಎಎಫ್‌ಪಿ ಚಿತ್ರ

ಲಾಹೋರ್ (ಪಿಟಿಐ): ‘ದುಬೈನಲ್ಲಿ ಆಡುವ ಕುರಿತು ಭಾರತ ತಂಡಕ್ಕೆ ಸ್ಪಷ್ಟತೆ ಇದೆ. ನಾವು ಕೂಡ ಚಾಂಪಿಯನ್ಸ್ ಟ್ರೋಫಿಗೂ ಮುನ್ನ ಲಾಹೋರ್‌ನಲ್ಲಿ ನಡೆದಿದ್ದ ತ್ರಿಕೋನ ಸರಣಿಯಲ್ಲಿ ಆಡಿದ್ದೆವು. ಆದ್ದರಿಂದ ನಮಗೂ ಇಲ್ಲಿಯ ವಾತಾವಾರಣ ಮತ್ತು ಸ್ಥಿತಿಗತಿಗಳಿಗೆ ಹೊಂದಿಕೊಳ್ಳುವುದು ಅನುಕೂಲವಾಯಿತು’ ಎಂದು ನ್ಯೂಜಿಲೆಂಡ್ ಬ್ಯಾಟರ್ ಕೇನ್ ವಿಲಿಯಮ್ಸನ್ ಹೇಳಿದರು.

ಬುಧವಾರ ದಕ್ಷಿಣ ಆಫ್ರಿಕಾ ಎದುರು ನಡೆದ ಸೆಮಿಫೈನಲ್‌ನಲ್ಲಿ ಕೇನ್ ಶತಕ ಗಳಿಸಿದ್ದರು. ಪಂದ್ಯದಲ್ಲಿ ತಂಡವು ಜಯಿಸಿದ ನಂತರ ಅವರು ಮಾಧ್ಯಮದೊಂದಿಗೆ ಮಾತನಾಡಿದರು.

‘ನಾನು ಕೂಡ ಅಲ್ಲಿ (ದುಬೈ) ಕೆಲವು ಪಂದ್ಯಗಳನ್ನು ಆಡಿದ್ದೇನೆ. ಆದರೂ ಅವರು ಹೇಗೆ ಆಡಲಿದ್ದಾರೆ ಎಂಬ ಸ್ಪಷ್ಟತೆ ಇಲ್ಲ. ನಮ್ಮ ಗಮನ ಏನಿದ್ದರೂ ಪಂದ್ಯದ ಮೇಲಷ್ಟೇ. ಸ್ಥಳ ಮತ್ತು ತಂಡಗಳು ಅದರ ಪ್ರಮುಖ ಅಂಶಗಳಷ್ಟೇ’ ಎಂದರು.

‘ಫೈನಲ್ ಪಂದ್ಯವೆಂದರೆ ರೋಚಕವಾಗಿರುತ್ತದೆ. ನಮ್ಮ ಆಟಗಾರರೂ ಭಾರತಕ್ಕೆ ದಿಟ್ಟ ಉತ್ತರ ನೀಡಲು ಸಿದ್ಧರಾಗಿದ್ದಾರೆ. ರಚಿನ್ ರವೀಂದ್ರ ಕಳೆದ 3 ಪಂದ್ಯಗಳಿಂದ 2 ಶತಕ ದಾಖಲಿಸಿದ್ದಾರೆ. ಅವರಲ್ಲಿ ಅಪಾರ ಪ್ರತಿಭೆ ಇದೆ’ ಎಂದು ಹೇಳಿದರು.

ಪಿಚ್‌ಗೆ ಹೊಂದಿಕೊಳ್ಳಬೇಕು: ‘ದುಬೈನಲ್ಲಿರುವ ಪಿಚ್ ಬಗ್ಗೆ ನಮಗೆ ಹೆಚ್ಚು ಗೊತ್ತಿಲ್ಲ. ಗುಂಪು ಹಂತದ ಪಂದ್ಯವನ್ನು ಅಲ್ಲಿ ಆಡಿದ್ದೆವು. ಆಗ ಪಿಚ್‌ನಲ್ಲಿ ಚೆಂಡು ಒಂದಷ್ಟು ತಿರುವು ಪಡೆಯುವುದನ್ನು ಗಮನಿಸಿದ್ದೆ. ಪರಿಸ್ಥಿತಿಗೆ ತಕ್ಕಂತೆ ಹೊಂದಿಕೊಂಡು ಆಡುವುದಕ್ಕೆ ನಮ್ಮ ಆದ್ಯತೆ’ ಎಂದು ನ್ಯೂಜಿಲೆಂಡ್ ಆಟಗಾರ ರಚಿನ್ ರವೀಂದ್ರ ಹೇಳಿದರು.

ಗುಂಪು ಹಂತದ ಪಂದ್ಯದಲ್ಲಿ ರಚಿನ್ ಕೇವಲ 6 ರನ್ ಗಳಿಸಿ ಔಟಾಗಿದ್ದರು.

‘ಫೈನಲ್‌ನಲ್ಲಿ ನಾನು ದೀರ್ಘ ಇನಿಂಗ್ಸ್ ಆಡುವ ಪ್ರಯತ್ನ ಮಾಡುತ್ತೇನೆ. ನಾವು ಮಾಡಿಕೊಂಡಿರುವ ಸಿದ್ಧತೆಗಳು ತೃಪ್ತಿಕರವಾಗಿವೆ. ಫೈನಲ್ ಪಂದ್ಯ ನಮಗೆ ಹೊಸ ಸವಾಲು. ಅದನ್ನು ಎದುರಿಸಲು ಹಾಗೂ ಸ್ಥಿತಿ–ಗತಿಗೆ ಹೊಂದಿಕೊಳ್ಳುತ್ತೇವೆ’ ಎಂದರು.

ಅಮೆಲಿಯಾಗೆ ಐದು ವಿಕೆಟ್ ಗೊಂಚಲು • ಹೇಲಿ ಮ್ಯಾಥ್ಯೂಸ್ ಅರ್ಧಶತಕ

ಮುಂಬೈಗೆ ಮಣಿದ ವಾರಿಯರ್ಸ್



ಮುಂಬೈ ಇಂಡಿಯನ್ಸ್ ತಂಡದ ಅಮೆಲಿಯಾ ಕೆರ್ –ಪ್ರಜಾವಾಣಿ ಸಂಗ್ರಹ ಚಿತ್ರ

ಮಹಿಳಾ ಪ್ರೀಮಿಯರ್ ಲೀಗ್

ಲಖನೌ (ಪಿಟಿಐ): ಅಮೆಲಿಯಾ ಕೆರ್ (38ಕ್ಕೆ5) ಪರಿಣಾಮಕಾರಿ ಬೌಲಿಂಗ್ ಬಳಿಕ ಹೇಲಿ ಮ್ಯಾಥ್ಯೂಸ್ (68;46ಎ) ಅವರ ಅರ್ಧಶತಕದ ಬಲದಿಂದ ಮುಂಬೈ ಇಂಡಿಯನ್ಸ್ ತಂಡವು ಮಹಿಳಾ ಪ್ರೀಮಿಯರ್ ಲೀಗ್‌ನ ಪಂದ್ಯದಲ್ಲಿ 6 ವಿಕೆಟ್‌ಗಳಿಂದ ಯು.ಪಿ. ವಾರಿಯರ್ಸ್ ತಂಡವನ್ನು ಮಣಿಸಿತು.

ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಮುಂಬೈ ತಂಡವು ಹ್ಯಾಟ್ರಿಕ್ ಗೆಲುವಿನೊಂದಿಗೆ ಪಾಯಿಂಟ್ಸ್ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೆ ಬಡ್ತಿ ಪಡೆಯಿತು. ಜೊತೆಗೆ ಪ್ಲೇ ಆಫ್ ಸ್ಥಾನಕ್ಕೆ ಮತ್ತಷ್ಟು ಹತ್ತಿರವಾಯಿತು. ಮತ್ತೊಂದೆಡೆ ಸತತ ಮೂರು ಪಂದ್ಯಗಳಲ್ಲಿ ಸೋತ ಆತಿಥೇಯ ವಾರಿಯರ್ಸ್ ತಂಡವು ಪ್ಲೇ ಆಫ್ ರೇಸ್‌ನಿಂದ ಹೊರಬಿತ್ತು.

ಏಕನಾ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ವಾರಿಯರ್ಸ್ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 150 ರನ್ ಗಳಿಸಿತ್ತು. ಈ ಗುರಿಯನ್ನು ಬೆನ್ನತ್ತಿದ ಮುಂಬೈ ತಂಡವು 9 ಎಸೆತ ಬಾಕಿ ಇರುವಂತೆ 4 ವಿಕೆಟ್‌ಗೆ 153 ರನ್ ಗಳಿಸಿ ಗೆಲುವು ಸಾಧಿಸಿತು.

ಆರಂಭಿಕ ಬ್ಯಾಟರ್ ಅಮೆಲಿಯಾ (10) ನಿರಾಸೆ ಮೂಡಿಸಿದರೂ ಹೇಲಿ ಮತ್ತು ನಾಟ್ ಶಿವರ್ ಬ್ರಂಟ್ (37;23ಎ) ಎರಡನೇ ವಿಕೆಟ್ ಜೊತೆಯಾಟದಲ್ಲಿ 92 ರನ್ ಸೇರಿಸಿ ತಂಡವನ್ನು ಗೆಲುವಿನತ್ತ ಕೊಂಡೊಯ್ದರು. ಕೊನೆಯಲ್ಲಿ ಅಮನ್‌ಜೋತ್ ಕೌರ್ (ಔಟಾಗದೇ 12) ಮತ್ತು ಯಸ್ತಿಕಾ ಭಾಟಿಯಾ (ಔಟಾಗದೇ 10) ತಂಡವನ್ನು ಗೆಲುವಿನ ದಡ ಸೇರಿಸಿದರು.

ಇದಕ್ಕೂ ಮೊದಲು ಟಾಸ್ ಗೆದ್ದ ಮುಂಬೈ ಇಂಡಿಯನ್ಸ್ ಫೀಲ್ಡಿಂಗ್ ಆಯ್ದುಕೊಂಡಿತು. ವಾರಿಯರ್ಸ್ ತಂಡಕ್ಕೆ ಗ್ರೇಸ್ ಹ್ಯಾರಿಸ್ (28; 25ಎ, 4X3, 6X1) ಮತ್ತು ಜಾರ್ಜಿಯಾ ವೋಲ್ (55; 33ಎ, 4X12) ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 74 ರನ್ ಸೇರಿಸಿದರು. ಕೇವಲ 8 ಓವರ್‌ಗಳಲ್ಲಿ ಈ ಮೊತ್ತ ದಾಖಲಾಯಿತು. ಮ್ಯಾಥ್ಯೂಸ್ ಬೌಲಿಂಗ್‌ನಲ್ಲಿ ಹ್ಯಾರಿಸ್ ಔಟಾಗುವುದರೊಂದಿಗೆ ಜೊತೆಯಾಟ ಮುರಿಯಿತು.

ನಂತರದ ಆಟದಲ್ಲಿ ಅಮೆಲಿಯಾ ಅವರದ್ದೇ ಪಾರುಪತ್ಯ. ಕಿರಣ್ ನವಗಿರೆ, ನಾಯಕಿ ದೀಪ್ತಿ ಶರ್ಮಾ, ವೃಂದಾ ದಿನೇಶ್ ಮತ್ತು ಷಿನೆಲಿ ಹೆನ್ರಿ ಅವರ ವಿಕೆಟ್‌ಗಳನ್ನು ಕಬಳಿಸಿದರು. ಕೊನೆಯಲ್ಲಿ ಮಿಂಚುತ್ತಿದ್ದ ಸೋಫಿ ಎಕ್ಲೆಸ್ಟೊನ್ ಅವರಿಗೂ ಅಮೆಲಿಯಾ ಪೆವಿಲಿಯನ್ ದಾರಿ ತೋರಿಸಿದರು.

ಸಂಕ್ಷಿಪ್ತ ಸ್ಕೋರು: ಯು.ಪಿ ವಾರಿಯರ್ಸ್: 20 ಓವರ್‌ಗಳಲ್ಲಿ 9ಕ್ಕೆ150 (ಗ್ರೇಸ್ ಹ್ಯಾರಿಸ್ 28, ಜಾರ್ಜಿಯಾ ವೋಲ್ 55, ದೀಪ್ತಿ ಶರ್ಮಾ 27, ವೃಂದಾ ದಿನೇಶ್ 10, ಸೋಫಿ ಎಕ್ಲೆಸ್ಟೊನ್ 16, ಅಮೆಲಿಯಾ ಕೇರ್ 38ಕ್ಕೆ5, ಹೆಲಿ ಮ್ಯಾಥ್ಯೂಸ್ 25ಕ್ಕೆ2). ಮುಂಬೈ ಇಂಡಿಯನ್ಸ್: 18.3 ಓವರ್‌ಗಳಲ್ಲಿ 4ಕ್ಕೆ 153 (ಹೆಲಿ ಮ್ಯಾಥ್ಯೂಸ್ 68, ನಾಟ್ ಶಿವರ್ ಬ್ರಂಟ್ 37; ಗ್ರೇಸ್ ಹ್ಯಾರಿಸ್ 11ಕ್ಕೆ 2). ಪಂದ್ಯದ ಆಟಗಾರ್ತಿ: ಹೆಲಿ ಮ್ಯಾಥ್ಯೂಸ್.

ಪಾಯಿಂಟ್ಸ್ ಪಟ್ಟಿ

ತಂಡಗಳು	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ಡೆಲ್ಲಿ ಕ್ಯಾಪಿಟಲ್ಸ್	7	5	2	10	+0.482
ಮುಂಬೈ ಇಂಡಿಯನ್ಸ್	6	4	2	8	+0.267
ಗುಜರಾತ್ ಜೈಂಟ್ಸ್	6	3	3	6	+0.357
ರಾಯಲ್ ಚಾಲೆಂಜರ್ಸ್ ಬೆಂಗಳೂರು	6	2	4	4	-0.244
ಯು.ಪಿ ವಾರಿಯರ್ಸ್	7	2	5	4	-0.785

ಇಂದಿನ ಪಂದ್ಯ

ಡೆಲ್ಲಿ ಕ್ಯಾಪಿಟಲ್ಸ್ Vs ಗುಜರಾತ್ ಜೈಂಟ್ಸ್

ಪಂದ್ಯ ಆರಂಭ: ರಾತ್ರಿ 7.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಜಿಯೊ ಹಾಟ್‌ಸ್ಟಾರ್

ಚೆಸ್: ಅರವಿಂದ್ ಮತ್ತೆ ಅಗ್ರಸ್ಥಾನಕ್ಕೆ

ಪ್ರಾಗ್ (ಝೆಕ್ ರಿಪಬ್ಲಿಕ್), (ಪಿಟಿಐ): ಗ್ರ್ಯಾಂಡ್‌ಮಾಸ್ಟರ್ ಅರವಿಂದ್ ಚಿದಂಬರಮ್ ಅವರು ತಮಗಿಂತ ಅನುಭವಿ ಅನಿಶ್ ಗಿರಿ ಅವರ ರಕ್ಷಣಾವ್ಯೂಹ ಭೇದಿಸಿ 39 ನಡೆಗಳಲ್ಲಿ ಗೆಲುವು ಸಾಧಿಸಿ, ಪ್ರಾಗ್ ಮಾಸ್ಟರ್ಸ್ ಚೆಸ್ ಟೂರ್ನಿಯ ಏಳನೇ ಸುತ್ತಿನ ನಂತರ ಅಗ್ರಸ್ಥಾನಕ್ಕೇರಿದ್ದಾರೆ.

ಅರವಿಂದ್ ಅವರು ಐದು ಪಾಯಿಂಟ್ಸ್ ಗಳಿಸಿದ್ದಾರೆ. ಆರನೇ ಸುತ್ತಿನವರೆಗೆ ಅವರ ಜೊತೆ ಮುನ್ನಡೆ ಹಂಚಿಕೊಂಡಿದ್ದ ಭಾರತದ ಇನ್ನೊಬ್ಬ ಆಟಗಾರ ಪ್ರಜ್ಞಾನಂದ (4.5) ಎರಡನೇ ಸ್ಥಾನದಲ್ಲಿದ್ದಾರೆ. ಪ್ರಜ್ಞಾನಂದ ಗುರುವಾರ ಏಳನೇ ಸುತ್ತಿನಲ್ಲಿ ಅಗ್ರ ಶ್ರೇಯಾಂಕದ ವೀ ಯಿ (3.5) ಅವರ ಜೊತೆ 61 ನಡೆಗಳ ನಂತರ ಡ್ರಾ ಮಾಡಿಕೊಂಡರು.

ಇನ್ನು ಎರಡು ಸುತ್ತಿನ ಪಂದ್ಯಗಳು ಉಳಿದಿವೆ. ಇನ್ನೊಂದು ಪಂದ್ಯದಲ್ಲಿ ಅಮೆರಿಕದ ಸ್ಯಾಮ್ ಶಂಕ್ಲಾಂಡ್ ಅವರು ವಿಯೆಟ್ನಾಮಿನ ಕ್ವಾಂಗ್ ಲೀಮ್ ಲೆ (3) ಅವರನ್ನು ಮಣಿಸಿದರು. ಕುತೂಹಲದ ಸಂಗತಿ ಎಂದರೆ, ಕ್ವಾಂಗ್ ಮತ್ತು ಅನಿಶ್ ತಮ್ಮ ಮೊದಲ ಆರು ಪಂದ್ಯಗಳನ್ನು ಡ್ರಾ ಮಾಡಿಕೊಂಡಿದ್ದರು. ಏಳನೇ ಸುತ್ತಿನಲ್ಲಿ ಇಬ್ಬರಿಗೂ ಸೋಲು ಎದುರಾಯಿತು.

ಟರ್ಕಿಯ ಆಟಗಾರ, 16 ವರ್ಷ ವಯಸ್ಸಿನ ಗುರೆಲ್ ಎಡಿಝ್ (3.5) ಅವರು ನಿರ್ಣಾಯಕ ಫಲಿತಾಂಶ ಕಂಡ ಮತ್ತೊಂದು ಪಂದ್ಯದಲ್ಲಿ ಸ್ಥಳೀಯ ಆಟಗಾರ ಗುಯೆನ್ ಥಾಯ್ ದೈ ವಾನ್ (2.5) ಅವರನ್ನು ಸೋಲಿಸಿದರು.

ಮತ್ತೊಬ್ಬ ಸ್ಥಳೀಯ ಆಟಗಾರ ಡೇವಿಡ್ ನವಾರ, ಜರ್ಮನಿಯ ವಿನ್ಸೆಂಟ್ ಕೀಮರ್ ಜೊತೆ ಡ್ರಾ ಮಾಡಿಕೊಂಡರು.

ಕ್ರೀಡಾ ಫೆಡರೇಷನ್‌ಗಳಿಗೆ ಸಚಿವಾಲಯದ ಸುತ್ತೋಲೆ

‘ಪ್ರಮಾಣೀಕೃತ ಆಯ್ಕೆ ನೀತಿ, ಟ್ರಯಲ್ಸ್‌ನಲ್ಲಿ ಕಟ್ಟುನಿಟ್ಟು...’



ಸಚಿವ ಮನ್ಸುಖ್ ಮಾಂಡವೀಯ

ನವದೆಹಲಿ (ಪಿಟಿಐ): ಕ್ರೀಡಾ ಫೆಡರೇಷನ್‌ಗಳಿಗೆ ಉತ್ತರದಾಯಿತ್ವ ತರಲು ಕ್ರೀಡಾ ಸಚಿವಾಲಯವು ಅವುಗಳಿಗೆ ಪ್ರಮಾಣೀಕೃತ ಆಯ್ಕೆನೀತಿ, ಟ್ರಯಲ್ಸ್‌ಗೆ 15 ದಿನ ಮೊದಲೇ ಅಥ್ಲೀಟುಗಳಿಗೆ ಮಾಹಿತಿ ನೀಡುವುದನ್ನು ಕಡ್ಡಾಯಗೊಳಿಸಿದೆ.

ಇದರ ಜೊತೆಗೆ ತಮಗೆ ಅನ್ಯಾಯವಾಗಿದೆ ಎಂಬ ಭಾವನೆಯಿಂದ ಕ್ರೀಡಾಪಟುಗಳು ಸಲ್ಲಿಸುವ ದೂರುಗಳ ಸಂಖ್ಯೆ ಕಡಿಮೆಮಾಡಲು ಅಹವಾಲು ಆಲಿಸುವ ವ್ಯವಸ್ಥೆಯನ್ನು ರೂಪಿಸಬೇಕು ಎಂದೂ ಫೆಡರೇಷನ್‌ಗಳಿಗೆ ಸೂಚಿಸಲಾಗಿದೆ.

ಫೆಡರೇಷನ್‌ಗಳ ವಿರುದ್ಧ ಅಥ್ಲೀಟುಗಳು ಕಾನೂನು ಸಮರ ನಡೆಸುವುದನ್ನು ತಪ್ಪಿಸಲು ತಾವು ಬಯಸಿರುವುದಾಗಿ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಅವರು ಕ್ರೀಡಾ ಫೆಡರೇಷನ್‌ಗಳಿಗೆ ಇತ್ತೀಚೆಗೆ ಸ್ಪಷ್ಟಪಡಿಸಿದ್ದ ಬೆನ್ನಲ್ಲೇ ಆಯ್ಕೆ ಪ್ರಕ್ರಿಯೆಗೆ ಸಂಬಂಧಿಸಿದ ಈ ಸೂಚನೆ ನೀಡಲಾಗಿದೆ. ಕುಸ್ತಿ, ಶೂಟಿಂಗ್ ಮತ್ತು ಕೆಲವು ಚಳಿಗಾಲದ ಕ್ರೀಡೆಗಳಿಗೆ ಸಂಬಂಧಿಸಿದ ಅಥ್ಲೀಟುಗಳು ಇತ್ತೀಚಿನ ವರ್ಷಗಳಲ್ಲಿ ತಮಗೆ ನ್ಯಾಯ ಒದಗಿಸಬೇಕೆಂದು ಆಯಾ ಫೆಡರೇಷನ್‌ಗಳ ವಿರುದ್ಧ ನ್ಯಾಯಾಲಯದ ಮೊರೆ ಹೋಗಿದ್ದರು.

ಭಾರತ ಒಲಿಂಪಿಕ್ ಸಂಸ್ಥೆ (ಐಒಎ), ಭಾರತ ಕ್ರೀಡಾ ಪ್ರಾಧಿಕಾರ (ಸಾಯ್), ಮತ್ತು ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳಿಗೆ (ಎನ್‌ಎಸ್‌ಎಫ್) ಈ ಸುತ್ತೋಲೆಯನ್ನು ಕಳುಹಿಸಲಾಗಿದೆ.

ಫೆಡರೇಷನ್‌ಗಳು ತಮ್ಮ ವೆಬ್‌ಸೈಟ್‌ಗಳಲ್ಲಿ ಆಯ್ಕೆಗೆ ಸಂಬಂಧಿಸಿದ ನಿಯಮಾವಳಿಯನ್ನು ಅಪ್‌ಲೋಡ್ ಮಾಡುವುದನ್ನು ಕಡ್ಡಾಯಗೊಳಿಸಲಾಗಿದೆ. ತಿದ್ದುಪಡಿ ಅಗತ್ಯವಿದ್ದಲ್ಲಿ ಸ್ಪರ್ಧೆ ಆರಂಭಕ್ಕೆ ಮೂರು ತಿಂಗಳ ಮೊದಲೇ ಮಾಡಬೇಕಾಗುತ್ತದೆ. ಆಯ್ಕೆ ಟ್ರಯಲ್ಸ್ ಪ್ರಕ್ರಿಯೆಯ ಚಿತ್ರೀಕರಣ ಮಾಡುವುದನ್ನೂ ಕಡ್ಡಾಯಗೊಳಿಸಲಾಗಿದೆ.

‘ಹಣಕಾಸು ನೆರವು ಕೇಳುವಾಗ, ಆಯ್ಕೆ ಟ್ರಯಲ್ಸ್‌ನ ವಿಡಿಯೊ ರೆಕಾರ್ಡಿಂಗ್ ಜೊತೆಗೆ ಆಯ್ಕೆ ಸಮಿತಿ ಸದಸ್ಯರ ಟಿಪ್ಪಣಿಯನ್ನು ಸಹಿಯೊಡನೆ ಭಾರತ ಕ್ರೀಡಾ ಪ್ರಾಧಿಕಾರಕ್ಕೆ ಕಳುಹಿಸಬೇಕು’ ಎಂದು ಐದು ಪುಟಗಳ ಈ ಸುತ್ತೋಲೆಯಲ್ಲಿ ತಿಳಿಸಲಾಗಿದೆ. ಪ್ರತಿ ಸಲ ಟ್ರಯಲ್ಸ್ ನಡೆಸುವ ಮೊದಲು ಫೆಡರೇಷನ್‌ಗಳು ಸಚಿವಾಲಯಕ್ಕೆ ಮಾಹಿತಿ ನೀಡುವುದನ್ನೂ ಕಡ್ಡಾಯಗೊಳಿಸಲಾಗಿದೆ.

ಒಲಿಂಪಿಕ್ಸ್, ಪ್ಯಾರಾಲಿಂಪಿಕ್ಸ್, ಏಷ್ಯನ್ ಗೇಮ್ಸ್, ಪ್ಯಾರಾ ಏಷ್ಯನ್ ಗೇಮ್ಸ್ ಮತ್ತು ಕಾಮನ್‌ವೆಲ್ತ್ ಕ್ರೀಡೆಯಂತಹ ಮೆಗಾ ಕೂಟಗಳಿಗೆ ಕನಿಷ್ಠ ಎರಡು ವರ್ಷಗಳ ಮೊದಲು ಆಯ್ಕೆ ಮಾನದಂಡಗಳ ಬಗ್ಗೆ ಪ್ರಚಾರ ನೀಡಬೇಕು ಎಂದೂ ಸಚಿವಾಲಯ ಫೆಡರೇಷನ್‌ಗಳಿಗೆ ಸೂಚಿಸಿದೆ.

ಅಧ್ಯಕ್ಷರಿಗೆ ಅಧಿಕಾರ: ಈ ಹಿಂದಿನ ವ್ಯವಸ್ಥೆಯಲ್ಲಿ ಆಯ್ಕೆ ಸಮಿತಿ ರಚಿಸುವ ಅಧಿಕಾರ ಫೆಡರೇಷನ್‌ಗಳಿಗೆ ಇತ್ತು. ಆದರೆ ಹೊಸದಾಗಿ ಹೊರಡಿಸಿರುವ ನಿರ್ದೇಶನವು ಫೆಡರೇಷನ್‌ನ ಅಧ್ಯಕ್ಷರಿಗೆ ಈ ಪರಮಾಧಿಕಾರ ನೀಡಿದೆ. ಮಾದರಿ ಆಯ್ಕೆ ಸಮಿತಿ ಹೇಗಿರಬೇಕು ಎಂಬ ಬಗ್ಗೆ ಸಲಹೆಗಳನ್ನು ಹೊಂದಿರುವ ದೀರ್ಘ ಪಟ್ಟಿಯನ್ನು ಸಚಿವಾಲಯವು ರೂಪಿಸಿದೆ.

ನಿವೃತ್ತಿ ಕೈಬಿಟ್ಟ ಸುನಿಲ್ ಚೆಟ್ರಿ ಮತ್ತೆ ಕಣಕ್ಕೆ

ನವದೆಹಲಿ (ಪಿಟಿಐ): ಹಿನ್ನಡೆ ಕಾಣುತ್ತಿರುವ ಭಾರತದ ತಂಡಕ್ಕೆ ನೆರವಾಗಲು, ದಿಗ್ಗಜ ಆಟಗಾರ ಸುನಿಲ್ ಚೆಟ್ರಿ ಅವರು ಅಂತರ ರಾಷ್ಟ್ರೀಯ ಫುಟ್‌ಬಾಲ್‌ಗೆ ಘೋಷಿಸಿರುವ ನಿವೃತ್ತಿಯಿಂದ ಹೊರಬರಲು ನಿರ್ಧರಿಸಿದ್ದಾರೆ. ಅವರು ಫಿಫಾ ಸೌಹಾರ್ದ ಪಂದ್ಯಗಳಲ್ಲಿ ರಾಷ್ಟ್ರೀಯ ತಂಡಕ್ಕೆ ಆಡಲಿದ್ದಾರೆ ಎಂದು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಗುರುವಾರ ತಿಳಿಸಿದೆ.

‘ಚೆಟ್ರಿ ಮರಳಲಿದ್ದಾರೆ. ಈ ತಿಂಗಳ ಕೊನೆಯಲ್ಲಿ ನಡೆಯಲಿರುವ ಎರಡು ಅಂತರರಾಷ್ಟ್ರೀಯ ಪಂದ್ಯಗಳಿಗೆ ಕ್ಯಾಪ್ಟನ್, ಲೀಡರ್, ಲೆಜೆಂಡ್ ಆಟಗಾರ ಭಾರತ ರಾಷ್ಟ್ರೀಯ ತಂಡಕ್ಕೆ ಹಿಂತಿರುಗಲಿದ್ದಾರೆ’ ಎಂದು ಎಐಎಫ್‌ಎಫ್ ತನ್ನ ಅಧಿಕೃತ ‘ಎಕ್ಸ್’ ಖಾತೆಯಲ್ಲಿ ಬರೆದಿದೆ.

ವೈಭವಯುತ ಫುಟ್‌ಬಾಲ್ ಜೀವನಕ್ಕೆ ವಿದಾಯ ಹೇಳಿ ವರ್ಷದ ಒಳಗೇ, 40 ವರ್ಷ ವಯಸ್ಸಿನ ಚೆಟ್ರಿ ಅವರು ಈ ನಿರ್ಧಾರಕ್ಕೆ ಬಂದಿದ್ದಾರೆ. ಮೇಘಾಲಯದ ಶಿಲ್ಲಾಂಗ್‌ನ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ಭಾರತ ಸೀನಿಯರ್ ಪುರುಷರ ತಂಡವು, ಎರಡು ಪಂದ್ಯಗಳನ್ನು ಆಡಲಿದೆ.

ನಿದ್ದೆಗೆ ಜಾರಿದ ಶಕೀಲ್ ‘ಟೈಮ್ ಔಟ್’

ರಾವಲ್ಪಿಂಡಿ (ಪಿಟಿಐ): ಡ್ರೆಸ್ಸಿಂಗ್ ಕೋಣೆಯಲ್ಲಿ ನಿದ್ದೆಗೆ ಜಾರಿದ ಪಾಕಿಸ್ತಾನ ಕ್ರಿಕೆಟ್ ತಂಡದ ಆಟಗಾರ ಸೌದ್ ಶಕೀಲ್ ಅವರು ‘ಟೈಮ್ ಔಟ್’ ಆಗಿದ್ದಾರೆ.

ಇಲ್ಲಿ ನಡೆಯುತ್ತಿರುವ ಪ್ರೆಸಿಡೆಂಟ್ಸ್ ಕಪ್ ಪ್ರಥಮದರ್ಜೆ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಈ ಘಟನೆ ನಡೆದಿದೆ. ಮಂಗಳವಾರ ರಾತ್ರಿ ಸ್ಟೇಟ್ ಬ್ಯಾಂಕ್ ಮತ್ತು ಪಿಟಿವಿ ತಂಡಗಳ ನಡುವಣ ಫೈನಲ್ ಪಂದ್ಯ ನಡೆಯಿತು. ಶಕೀಲ್ ಅವರು ಸ್ಟೇಟ್ ಬ್ಯಾಂಕ್ ತಂಡವನ್ನು ಪ್ರತಿನಿಧಿಸಿದ್ದರು. ಈ ಪಂದ್ಯವು ರಾತ್ರಿ 7.30ರಿಂದ ತಡರಾತ್ರಿ 2.30ರವರೆಗೆ ಹೊನಲು ಬೆಳಕಿನಲ್ಲಿ ಆಯೋಜನೆಯಾಗಿತ್ತು.

ತಾವು ಕ್ರೀಸ್‌ಗೆ ತೆರಳುವ ಹೊತ್ತಿಗೆ ಶಕೀಲ್ ಅವರು ನಿದ್ದೆಗೆ ಜಾರಿದ್ದರು. ನಂತರ ಎಚ್ಚರಗೊಂಡು ಕ್ರೀಸ್ ತಲುಪುವಷ್ಟರಲ್ಲಿ ನಿಗದಿತ ಅವಧಿ ಮೀರಿತ್ತು.

‘ಒಬ್ಬ ಬ್ಯಾಟರ್ ಔಟಾಗಿ ನಿರ್ಗಮಿಸಿದ ನಂತರ ಹೊಸ ಬ್ಯಾಟರ್ ಕ್ರೀಸ್‌ಗೆ ಬರಲು 3 ನಿಮಿಷಗಳ ಸಮಯ ಇರುತ್ತದೆ. ಅದನ್ನು ಮೀರಿದರೆ ಟೈಮ್ ಔಟ್ ಎಂದು ಪರಿಗಣಿಸಲಾಗುತ್ತದೆ. ಶಕೀಲ್ ಕ್ರೀಸ್‌ಗೆ ಬಂದ 3 ನಿಮಿಷ ಮೀರಿಹೋಗಿತ್ತು’ ಎಂದು ಪಂದ್ಯದ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಎದುರಾಳಿ ಪಿಟಿವಿ ತಂಡದ ನಾಯಕ ಅಮ್ಮದ್ ಭಟ್ ಅವರು ಟೈಮ್ ಔಟ್ ನೀಡಲು ಮನವಿ ಸಲ್ಲಿಸಿದ್ದನ್ನು ಅಂಪೈರ್ ಪುರಸ್ಕರಿಸಿದರು.

ಸ್ಟೇಟ್ ಬ್ಯಾಂಕ್ ತಂಡವು ಬ್ಯಾಟಿಂಗ್ ಮಾಡುವಾಗ ಶಕೀಲ್ ಅವರು ಎರಡು ವಿಕೆಟ್ ಬಿದ್ದ ನಂತರ ಬ್ಯಾಟಿಂಗ್‌ಗೆ ತೆರಳಬೇಕಿತ್ತು. ಆದರೆ ಎರಡು ವಿಕೆಟ್‌ಗಳು ಸತತ ಎರಡು ಎಸೆತಗಳಲ್ಲಿ ಪತನವಾದವು. ಆಗ ಶಕೀಲ್ ಕ್ರೀಸ್‌ಗೆ ತೆರಳಲು ತಡ ಮಾಡಿದರು.

ಆರ್‌ಸಿಬಿ ತಂಡದ ಅನ್‌ಬಾಕ್ಸ್ ಟಿಕೆಟ್ ಸೋಲ್ಡ್‌ಔಟ್

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇದೇ 17ರಂದು ನಡೆಯಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ‘ಅನ್‌ಬಾಕ್ಸ್’ ಕಾರ್ಯಕ್ರಮದ ಟಿಕೆಟ್‌ಗಳು ಕೇವಲ ಒಂದು ತಾಸಿನಲ್ಲಿ ಬಿಕರಿಯಾಗಿವೆ.

₹ 800, ₹1000 ಮತ್ತು ₹ 5000 ಬೆಲೆಯ ಟಿಕೆಟ್‌ಗಳ ಮಾರಾಟವನ್ನು ಆನ್‌ಲೈನ್ ಮೂಲಕ ಮಾರಾಟ ಆರಂಭಿಸಲಾಯಿತು. ಒಟ್ಟು 15 ಸಾವಿರ ಟಿಕೆಟ್‌ಗಳು ಒಂದು ಗಂಟೆಯಲ್ಲಿ ಮಾರಾಟವಾಗಿವೆ ಎಂದು ತಂಡದ ಮೂಲಗಳು ತಿಳಿಸಿವೆ. ನೂತನ ನಾಯಕ ರಜತ್ ಪಾಟೀದಾರ್ ಅವರ ಮುಂದಾಳತ್ವದಲ್ಲಿ ತಂಡವು ಈ ಬಾರಿ ಕಣಕ್ಕಿಳಿಯಲಿದೆ. ಪ್ರತಿವರ್ಷದಂತೆ ಈ ಬಾರಿಯೂ ಟೂರ್ನಿ ಆರಂಭಕ್ಕೂ ಮುನ್ನ ಅನ್‌ಬಾಕ್ಸ್ ಆಯೋಜಿಸಲಾಗುತ್ತಿದೆ. ತಂಡದ ಅಭಿಮಾನಿಗಳು ತಮ್ಮ ನೆಚ್ಚಿನ ಆಟಗಾರರಿಗೆ ಶುಭ ಹಾರೈಸುವ ಕಾರ್ಯಕ್ರಮ ಇದಾಗಿದೆ.

‘ಆರ್‌ಸಿಬಿ ಅನ್‌ಬಾಕ್ಸ್ ನಮ್ಮ ಪ್ರತಿವರ್ಷದ ಕಾರ್ಯಕ್ರಮವಾಗಿ ರೂಪುಗೊಂಡಿದೆ. ಅಭಿಮಾನಿಗಳಿಗೆ ತಮ್ಮ ನೆಚ್ಚಿನ ಆಟಗಾರರನ್ನು ಕಣ್ತುಂಬಿಕೊಳ್ಳುವ ಅವಕಾಶ ಇದಾಗಿದೆ’ ಎಂದು ತಂಡದ ಸಿಒಒ ರಾಜೇಶ್ ಮೆನನ್ ಹೇಳಿದ್ದಾರೆ.

ಆರ್‌ಸಿಬಿ ತಂಡವು ಮಾರ್ಚ್ 22ರಂದು ಈಡನ್ ಗಾರ್ಡನ್‌ನಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಆಡುವ ಮೂಲಕ ಅಭಿಯಾನ ಆರಂಭಿಸಲಿದೆ.

ಸಂಕ್ಷಿಪ್ತ ಸುದ್ದಿ

ಮುಷ್ಫಿಕುರ್ ರಹೀಂ ವಿದಾಯ

ಢಾಕಾ (ಪಿಟಿಐ): ಬಾಂಗ್ಲಾದೇಶದ ಅನುಭವಿ ವಿಕೆಟ್ ಕೀಪರ್–ಬ್ಯಾಟರ್ ಮುಷ್ಫಿಕುರ್ ರಹೀಂ ಅವರು ಏಕದಿನ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದಾರೆ. ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಭಾಗವಹಿಸಿದ್ದ ಬಾಂಗ್ಲಾದೇಶ ತಂಡದಲ್ಲಿ 37 ವರ್ಷ ವಯಸ್ಸಿನ ರಹೀಂ ಆಡಿದ್ದರು. ತಂಡವು ಗುಂಪುಹಂತದಲ್ಲೇ ಹೊರಬಿದ್ದಿತ್ತು.

ರಹೀಂ ಸುಮಾರು 20 ವರ್ಷಗಳ ಹಿಂದೆ ತಂಡಕ್ಕೆ ಪದಾರ್ಪಣೆ ಮಾಡಿದ್ದು, 274 ಏಕದಿನ ಪಂದ್ಯಗಳನ್ನು ಆಡಿದ್ದಾರೆ. 36.42 ಸರಾಸರಿಯಲ್ಲಿ 7795 ರನ್ ಗಳಿಸಿದ್ದಾರೆ. ಬಾಂಗ್ಲಾ ಪರ ತಮೀಮ್ ಇಕ್ಬಾಲ್ (8357) ಮಾತ್ರ ಅವರಿಗಿಂತ ಹೆಚ್ಚು ರನ್ ಗಳಿಸಿದ್ದಾರೆ. ಮುಷ್ಫಿಕುರ್ 94 ಟೆಸ್ಟ್ ಪಂದ್ಯಗಳನ್ನು ಮತ್ತು 102 ಟಿ20 ಪಂದ್ಯಗಳನ್ನೂ ಆಡಿದ್ದಾರೆ. ಟಿ20 ಮಾದರಿಗೆ ಅವರು ಈ ಮೊದಲೇ ವಿದಾಯ ಹೇಳಿದ್ದಾರೆ.

ಶ್ರೀಲಂಕಾದಲ್ಲಿ ತ್ರಿಕೋನ ಮಹಿಳಾ ಕ್ರಿಕೆಟ್ ಸರಣಿ: ಭಾರತ ಸ್ಪರ್ಧೆ

ಕೊಲಂಬೊ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡವು ಏಪ್ರಿಲ್ 27ರಿಂದ ಮೇ 11ರವರೆಗೆ ಶ್ರೀಲಂಕಾದಲ್ಲಿ ನಡೆಯಲಿರುವ ಏಕದಿನ ಕ್ರಿಕೆಟ್ ತ್ರಿಕೋನ ಸರಣಿಯಲ್ಲಿ ಆಡಲಿದೆ.

ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಗೂ ಮುನ್ನ ಈ ಸರಣಿಯು ಅಭ್ಯಾಸಕ್ಕೆ ಪೂರ್ವ ವೇದಿಕೆಯಾಗಲಿದೆ. ಸರಣಿಯಲ್ಲಿ ಶ್ರೀಲಂಕಾ, ಭಾರತ ಮತ್ತು ದಕ್ಷಿಣ ಆಫ್ರಿಕಾ ಆಡಲಿವೆ.

‘ಸರಣಿಯಲ್ಲಿ ಪ್ರತಿ ತಂಡವೂ ತಲಾ 4 ಪಂದ್ಯಗಳನ್ನು ಆಡಲಿದೆ. ಅಂಕಪಟ್ಟಿಯಲ್ಲಿ ಅಗ್ರ ಎರಡು ಸ್ಥಾನ ಪಡೆದ ತಂಡಗಳು ಫೈನಲ್ ಆಡಲಿವೆ’ ಎಂದು ಶ್ರೀಲಂಕಾ ಕ್ರಿಕೆಟ್ ಮಂಡಳಿ (ಎಸ್‌ಎಲ್‌ಸಿ) ತಿಳಿಸಿದೆ.

ವೇಳಾಪಟ್ಟಿ: ಭಾರತ–ಶ್ರೀಲಂಕಾ (ಏ.27), ಭಾರತ–ದಕ್ಷಿಣ ಆಫ್ರಿಕಾ (ಏ.29), ಶ್ರೀಲಂಕಾ–ದಕ್ಷಿಣ ಆಫ್ರಿಕಾ (ಮೇ 1), ಭಾರತ–ಶ್ರೀಲಂಕಾ (ಮೇ 4), ಭಾರತ–ದಕ್ಷಿಣ ಆಫ್ರಿಕಾ (ಮೇ 6), ಶ್ರೀಲಂಕಾ–ದಕ್ಷಿಣ ಆಫ್ರಿಕಾ (ಮೇ 8) ಹಾಗೂ ಫೈನಲ್ (ಮೇ 11).

ಡಿವೈಇಎಸ್, ಬೀಗಲ್ಸ್‌ಗೆ ಜಯ

ಬೆಂಗಳೂರು: ಡಿವೈಇಎಸ್ ಮೈಸೂರು, ಬೀಗಲ್ಸ್ ಬಿ.ಸಿ, ಮೌಂಟ್ಸ್ ಕ್ಲಬ್ ಮತ್ತು ನೈರುತ್ಯ ರೈಲ್ವೆ ತಂಡಗಳು ಎಸ್.ಎಂ.ಎನ್ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ಮಾತ್ರ ಕಪ್ ಮಹಿಳೆಯರ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಸೂಪರ್ ಲೀಗ್ ಹಂತ ತಲುಪಿದವು.

ನಗರದ ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ಗುರುವಾರ ನಡೆದ ನಾಕೌಟ್ ಹಂತದ ಪಂದ್ಯಗಳಲ್ಲಿ ಡಿವೈಇಎಸ್ ಮೈಸೂರು ತಂಡವು 85–57ರಿಂದ ಡಿವೈಇಎಸ್ ವಿದ್ಯಾನಗರ ತಂಡವನ್ನು ಸೋಲಿಸಿತು.

ಇತರ ಪಂದ್ಯಗಳಲ್ಲಿ ಬೀಗಲ್ಸ್ ತಂಡವು 72–55ರಿಂದ ಕೆ.ಎಸ್. ಹೆಗ್ಡೆ ನಿಟ್ಟೆ ತಂಡವನ್ನು ಸೋಲಿಸಿತು. ಮೌಂಟ್ಸ್ ಕ್ಲಬ್ ತಂಡವು 66–50ರಿಂದ ರಾಜ್‌ಮಹಲ್ ವಿರುದ್ಧ ಗೆಲುವು ಸಾಧಿಸಿತು.

ಕಬಡ್ಡಿ: ಭಾರತ ತಂಡ ಸೆಮಿಗೆ

ಬೆಂಗಳೂರು: ಭಾರತ ತಂಡವು ಇರಾನ್‌ನ ಟೆಹರಾನ್‌ನಲ್ಲಿ ನಡೆಯುತ್ತಿರುವ ಏಷ್ಯನ್ ಮಹಿಳಾ ಕಬಡ್ಡಿ ಚಾಂಪಿಯನ್‌ಷಿಪ್‌ನಲ್ಲಿ ಸತತ ಎರಡು ಪಂದ್ಯಗಳನ್ನು ಗೆದ್ದು ಸೆಮಿಫೈನಲ್ ಪ್ರವೇಶಿಸಿತು.

ಎ ಗುಂಪಿನಲ್ಲಿರುವ ಭಾರತ ಗುರುವಾರ ನಡೆದ ಮೊದಲ ಪಂದ್ಯದಲ್ಲಿ 64–23ರಿಂದ ಬಾಂಗ್ಲಾದೇಶ ವಿರುದ್ಧ ಪಾರಮ್ಯ ಮೆರೆಯಿತು. ದಿನದ ಎರಡನೇ ಪಂದ್ಯದಲ್ಲಿ 76–21ರಿಂದ ಥಾಯ್ಲೆಂಡ್ ತಂಡವನ್ನು ಮಣಿಸಿತು. ಈ ಮೂಲಕ ನಾಲ್ಕು ತಂಡಗಳಿರುವ ಗುಂಪಿನಲ್ಲಿ ಅಗ್ರಸ್ಥಾನ ಪಡೆಯಿತು.

21ರಿಂದ ರಾಷ್ಟ್ರೀಯ ಬಾಕ್ಸಿಂಗ್

ನವದೆಹಲಿ (ಪಿಟಿಐ): ಗ್ರೇಟರ್ ನೋಯ್ಡಾದಲ್ಲಿ ಇದೇ 21ರಿಂದ 27ರವರೆಗೆ ನಡೆಯಲಿರುವ 8ನೇ ಎಲೀಟ್ ಮಹಿಳಾ ರಾಷ್ಟ್ರೀಯ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ 300ಕ್ಕೂ ಹೆಚ್ಚು ಬಾಕ್ಸರ್‌ಗಳು ಸ್ಪರ್ಧಿಸಲಿದ್ದಾರೆ.

ಮಾರ್ಚ್ 21ರಿಂದ 24 ರವರೆಗೆ ಆರಂಭಿಕ ಸುತ್ತುಗಳು ನಡೆಯುತ್ತದೆ. 25ರಂದು ಕ್ವಾರ್ಟರ್ ಫೈನಲ್ ಮತ್ತು 26ರಂದು ಸೆಮಿಫೈನಲ್ ಮತ್ತು 27ರಂದು ಫೈನಲ್ ಸ್ಪರ್ಧೆ ನಡೆಯಲಿದೆ.

ಸಸಿಹಿತ್ಲು ಬೀಚ್‌ನಲ್ಲಿ ಮೂರು ದಿನಗಳ ಸ್ಪರ್ಧೆ

ಭಾರತ ಪ್ಯಾಡಲ್ ಹಬ್ಬ ಇಂದಿನಿಂದ

ಪ್ರಜಾವಾಣಿ ವಾರ್ತೆ

ಸ್ಪೇನ್‌ನ ಎಸ್ಪೆರಾನ್ಜ ಬರೆರಾಸ್

ಮಂಗಳೂರು: ಕೇಂದ್ರ ಪ್ರವಾಸೋದ್ಯಮ ಸಚಿವಾಲಯದ ಆಶ್ರಯದಲ್ಲಿ ನಗರದ ಸರ್ಫಿಂಗ್ ಸ್ವಾಮಿ ಫೌಂಡೇಷನ್ ಮತ್ತು ಮಂತ್ರ ಸರ್ಫ್ ಕ್ಲಬ್ ಆಯೋಜಿಸಿರುವ ಅಂತರ ರಾಷ್ಟ್ರೀಯ ಸ್ಟ್ಯಾಂಡ್ ಅಪ್ ಪ್ಯಾಡಲ್ (ಎಸ್‌ಯುಪಿ) ಸ್ಪರ್ಧೆ ‘ಇಂಡಿಯಾ ಪ್ಯಾಡಲ್ ಫೆಸ್ಟಿವಲ್’ನ ಎರಡನೇ ಆವೃತ್ತಿ ಇದೇ 7ರಿಂದ 9ರ ವರೆಗೆ ನಡೆಯಲಿದೆ.

ವೃತ್ತಿಪರ ಪ್ಯಾಡಲ್ ಸರ್ಫರ್‌ಗಳ ವಿಶ್ವ ಟೂರ್ ಭಾಗವಾಗಿ ಸುರತ್ಕಲ್ ಸಮೀಪ ಮುಕ್ಕದ ಸಸಿಹಿತ್ಲು ಬೀಚ್‌ನಲ್ಲಿ ಶುಕ್ರವಾರ ಸಂಜೆ ‘ಹಬ್ಬ’ ಆರಂಭವಾಗಲಿದ್ದು ಮೊದಲ ದಿನ ಜೂನಿಯರ್ ವಿಭಾಗದ ಟೆಕ್ನಿಕಲ್ ಡಿಸ್ಟೆನ್ಸ್ ರೇಸ್ ಮಾತ್ರ ಇರುತ್ತದೆ. 3 ಗಂಟೆಗೆ ಉದ್ಘಾಟನೆಯ ನಂತರ 4.30ಕ್ಕೆ ಈ ಸ್ಪರ್ಧೆ ಆರಂಭವಾಗಲಿದೆ. ಶನಿವಾರ ಮಧ್ಯಾಹ್ನ 3ಕ್ಕೆ ಪುರುಷರ ಮತ್ತು ಮಹಿಳೆಯರ ಟೆಕ್ನಿಕಲ್ ಡಿಸ್ಟೆನ್ಸ್ ರೇಸ್ ನಡೆಯಲಿದೆ. ಭಾನುವಾರ ಬೆಳಿಗ್ಗೆ 10ಕ್ಕೆ ಕಮ್ಯುನಿಟಿ ರೇಸ್, 2 ಗಂಟೆಯಿಂದ ವಿವಿಧ ವಿಭಾಗಗಳ ಸ್ಪ್ರಿಂಟ್ ರೇಸ್ ಇರುತ್ತದೆ.

ಫೆಸ್ಟ್‌ನಲ್ಲಿ ಸ್ಪರ್ಧಿಸಲಿರುವ ಅಂತರ ರಾಷ್ಟ್ರೀಯ ಕ್ರೀಡಾಪಟುಗಳು ಮಂಗಳೂರು ತಲುಪಿದ್ದು ವಿಶ್ವದ ಎರಡನೇ ಕ್ರಮಾಂಕದ ಪ್ಯಾಡ್ಲರ್, ಡೆನ್ಮಾರ್ಕ್‌ನ ಕ್ರಿಶ್ಚಿಯನ್ ಆ್ಯಂಡರ್ಸನ್ ಪುರುಷರ ವಿಭಾಗದ ಪ್ರಮುಖ ಆಕರ್ಷಣೆ ಯಾಗಿದ್ದಾರೆ. ನಾಲ್ಕು ಬಾರಿಯ ವಿಶ್ವ ಚಾಂಪಿಯನ್ ಎಸ್ಪೆರಾನ್ಜ ಬರೆರಾಸ್ ಮಹಿಳಾ ವಿಭಾಗದಲ್ಲಿ ಮಿಂಚುವ ನಿರೀಕ್ಷೆ ಇದೆ. ಸ್ಪೇನ್‌ನ ಈ ಪ್ಯಾಡ್ಲರ್ ಹಾಲಿ ವಿಶ್ವ ಚಾಂಪಿಯನ್ ಕೂಡ. ಪುರುಷರ ವಿಭಾಗದ ಮಾಜಿ ವಿಶ್ವ ಚಾಂಪಿಯನ್ ಹಂಗರಿಯ ಡ್ಯಾನಿಯಲ್ ಹಸುಲ್ಯೊ ಕೂಡ ಗಮನ ಸೆಳೆಯಲು ಸಜ್ಜಾಗಿದ್ದಾರೆ.

25 ಬಾರಿ ರಾಷ್ಟ್ರೀಯ ಎಸ್‌ಯುಪಿ ಚಾಂಪಿಯನ್ ಆಗಿರುವ ತಮಿಳುನಾಡಿನ ಶೇಖರ್ ಪಚ್ಚೆ ಭಾರತದ ಭರವಸೆಯಾಗಿದ್ದು ಅವರೊಂದಿಗೆ ಉದಯೋನ್ಮುಖ ಪ್ಯಾಡ್ಲರ್ ಮಣಿಕಂಠನ್ ಕೂಡ ಕಣಕ್ಕೆ ಇಳಿಯಲಿದ್ದಾರೆ. ಥಾಯ್ಲೆಂಡ್, ಇಂಡೊನೇಷ್ಯಾ ಹಾಗೂ ಕೊರಿಯಾದ ಕ್ರೀಡಾಪಟುಗಳು ಕೂಡ ಪಾಲ್ಗೊಳ್ಳಲಿದ್ದಾರೆ.

ಸಾಹಸ ಕ್ರೀಡೆಗಳ ಸಾಕ್ಷ್ಯಚಿತ್ರ: ಹಬ್ಬದಲ್ಲಿ ಸಾಹಸ ಕ್ರೀಡೆಗಳ ಕುರಿತ ಸಾಕ್ಷ್ಯಚಿತ್ರಗಳ ತುಣುಕುಗಳ ಮಾಲೆಯ ಪ್ರದರ್ಶನವೂ ಇರುತ್ತದೆ. ಭಾರತದ ವಿವಿಧ ಭಾಗಗಳಲ್ಲಿ ಆಡುವ ವಿಭಿನ್ನ ಸಾಹಸ ಕ್ರೀಡೆಗಳನ್ನು ಪರಿಚಯಿಸುವ 5ರಿಂದ 40 ನಿಮಿಷಗಳ ಅವಧಿಯ ಸಾಕ್ಷ್ಯಚಿತ್ರಗಳು ಅಲ್ಟ್ರಾ ಮ್ಯಾರಥಾನ್ ಓಟ, ಬಂಡೆ ಹತ್ತುವುದು, ಸರ್ಫಿಂಗ್, ಸ್ಕೇಟ್ ಬೋರ್ಡಿಂಗ್ ಮತ್ತು ಸ್ನೋ ಬೋರ್ಡಿಂಗ್ ಮುಂತಾದವುಗಳನ್ನು ಪರಿಚಯಿಸಲಿವೆ.

ಮಹಿಳಾ ಕಯಾಕಿಂಗ್ ಪಟುಗಳ ವಿವರಣೆ ಇರುವ ಗಂಗಾ ಗರ್ಲ್ಸ್, ಟೆನ್ಸಿನ್ ಡೊಲ್ಮಾ ಅವರ ಕಥೆಯ ಲೈಫ್ ಅಪ್‌ಹಿಲ್ ಮುಂತಾದವು ಕೂಡ ಇರುತ್ತವೆ ಎಂದು ಸಂಘಟಕರು ತಿಳಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ
General
ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ತಕ್ಷಣಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ,TVSಗಳಿಗೆ, ಆಫೀಸ್‌ಗಳಿಗೆ, SSLC, PUC,Degree, ITIನವರುಗಳು. 18,100- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ವ್ಯಾಪಾರ
Business Offers
Distributors
MEN'S CLOTHING brand is looking for Distributors in Karnataka. Candidates to be fluent in English, Hindi, Kannada. Experience required. Call/WhatsApp +91 7840962967

ಪ್ರವಾಸ
Travel
20.3.2025 ರಿಂದ 9 ದಿನಗಳು ಅಂಡಮಾನ್ ಪ್ರವಾಸ ಹಡಗು ಮತ್ತು ವಿಮಾನದಲ್ಲಿ, ಜುಲೈ 1 ರಿಂದ 12 ದಿನಗಳು ಅಮರನಾಥ್, ವೈಶ್ನೋದೇವಿ ಅಮೃತಸರ, ಶ್ರೀನಗರ. ಶ್ರೀಗಂಗಾ ಟೂರಿಸ್ಟ್. 9480253807

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಹೆಸರು ಬದಲಾವಣೆ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@50/-* PER WORDS
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424 | +91 9901641752
+91 9731810277 | +91 9900428036
*Conditions apply

Elvis - 3str + Daybed
EMI Starts @ ₹ 25,098

Elvis - 1str
EMI Starts @ ₹ 11,089

Sale FLAT 50% OFF*

LIMITED PERIOD OFFER

Elvis - 2str
EMI Starts @ ₹ 18,267

Your Sofa, Your Way.

Choose from 28 different configurations and 72 colour options, customized and crafted with 100% Genuine 1.4 to 1.6 mm thick top-grain Italian tannage leather.

THE 5 STAR STANLEY ADVANTAGE

- ★ Widest range of modern designs, colours and options.
- ★ Customizable to your exact requirements.
- ★ Unmatched quality delivered by a 3 decade experienced manufacturing brand.
- ★ Peace of mind with industry best Warranty.
- ★ Unmatched after sales service available nationwide.

Elvis - Home Theatre
EMI Starts @ ₹ 25,433

Elvis - 3str
EMI Starts @ ₹ 24,067

SEAL OF ASSURANCE SEAL OF

Made & Warranted by an established
ISO 9001/14001/41001 - FSI Certified Manufacturer

Elvis - 3sa+Corner+3sa
EMI Starts @ ₹ 40,309

10 YEAR MANUFACTURER WARRANTY* | CUSTOMISABLE PRODUCTS* | ON TIME DELIVERY | EASY EMI OPTIONS | 100% GENUINE LEATHER

AVAIL INSTANT DISCOUNT UPTO ₹10,000* HDFC BANK EASY EMI BY pine labs

*T&C's Apply

VISIT OUR STORES @

sofasandmore.in stanleysofasandmore

AIRPORT ROAD 96067 10424	BANASHANKARI 96639 11477	BANASWADI 91487 63030	DICKENSON ROAD 96063 06420	ELECTRONIC CITY 91482 24120	INDIRANAGAR 87929 22311	JP NAGAR 91481 33170	MARATHAHALLI 77608 58990
MISSION ROAD 91482 23170	MYSORE ROAD 96064 00760	OLD MADRAS ROAD 78996 78300	SARJAPUR ROAD 96320 66733	WHITEFIELD 89519 94664	YESHWANTHPUR 91487 18080	YELAHANKA 91482 20870	MYSORE 76193 06777

Sofas & More is a registered trademark of Stanley Lifestyles Limited. Any unauthorized use, copying, reproduction, or distribution of this trademark is strictly prohibited. All rights reserved.